ಬುಧವಾರ, ಜೂನ್ 15, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಧಾರ್ಮಿಕ ಸಭೆ

ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಮಂಗಳವಾರ ನಡೆದ ಧಾರ್ಮಿಕ ಸಭೆಯಲ್ಲಿ ಟಿಬೆಟಿಯನ್ ಧರ್ಮಗುರು ದಲೈಲಾಮ ಪ್ರವಚನ ನೀಡಿದರು

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ ಸೂಚನೆ • ಶಾಲಾ ಆಡಳಿತ ಮಂಡಳಿ ಜತೆ ಅಧಿಕಾರಿಗಳ ಸಭೆ

ಕೋವಿಡ್ ಲಕ್ಷಣ ಕಂಡಲ್ಲಿ ವಿದ್ಯಾರ್ಥಿಗಳು ಮನೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್–19 ಲಕ್ಷಣಗಳು ಕಂಡುಬಂದರೆ ಅಂತಹ ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸುವಂತೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ ಸೂಚಿಸಿದೆ.

ಬೆಂಗಳೂರಿನಲ್ಲಿ ಕೆಲವು ದಿನಗಳಿಂದ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ಶಿಕ್ಷಣ ಇಲಾಖೆ ಅಧಿಕಾರಿಗಳು, ಖಾಸಗಿ ಶಾಲಾ ಆಡಳಿತ ಮಂಡಳಿ ಪದಾಧಿಕಾರಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಯಿತು.

ಶಾಲಾ ಮಕ್ಕಳಲ್ಲಿ ಶೀತ, ಕೆಮ್ಮು ಹಾಗೂ ಜ್ವರದ ಲಕ್ಷಣಗಳು ಕಂಡುಬಂದರೆ ಅಂತಹ ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸಲು ಶಿಕ್ಷಕರಿಗೆ ಸೂಚಿಸಲಾಗಿದೆ ಎಂದು ಶಿಕ್ಷಣ ಇಲಾಖೆ ಆಯುಕ್ತ ಡಾ.ಆರ್.ವಿಶಾಲ್ ತಿಳಿಸಿದರು.

ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿ ಕೋವಿಡ್ ಲಸಿಕೆ ಹಾಗೂ ಬೂಸ್ಟರ್ ಡೋಸ್ ತೆಗೆದುಕೊಂಡಿರುವುದನ್ನು ಶಾಲಾ ಮುಖ್ಯಸ್ಥರು ಖಚಿತ ಪಡಿಸಿಕೊಳ್ಳಬೇಕು ಎಂದು ಸೂಚಿಸಿದರು. ಖಾಸಗಿ ಶಾಲಾ ಆಡಳಿತ ಮಂಡಳಿಯವರು ಪೋಷಕರೊಂದಿಗೆ ಸಭೆ ನಡೆಸಿ ಜಾಗೃತಿ ಮೂಡಿಸಬೇಕು ಎಂದರು.

ಒಂದು ತಿಂಗಳ ಮಟ್ಟಿಗೆ ಶಾಲೆಗಳಲ್ಲಿ ಪ್ರಾರ್ಥನೆ, ಸಾಂಸ್ಕೃತಿಕ ಕಾರ್ಯಕ್ರಮ, ಕ್ರೀಡಾ ಚಟುವಟಿಕೆಗಳ ಮೇಲೆ ಮಿತಿ ಹೇರಬೇಕು ಎಂದು ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ಕೋರಿದರು.

ಈ ಮಧ್ಯೆ 'ಶಾಲೆಗಳನ್ನು ಮುಚ್ಚುವ ಅಗತ್ಯವಿಲ್ಲ' ಎಂದು ತಾಂತ್ರಿಕ ಸಲಹಾ ಸಮಿತಿ ತಿಳಿಸಿದೆ.

'ಸ್ಥಳೀಯಮಟ್ಟದಲ್ಲಿ ಪ್ರಕರಣ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಜನರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು' ಎಂದು ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ.ಸುದರ್ಶನ್ ಮನವಿ ಮಾಡಿದರು.

ದೃಢ ಪ್ರಮಾಣ ಶೇ 3.14ಕ್ಕೆ ಏರಿಕೆ: ರಾಜ್ಯದಲ್ಲಿ ಕೊರೊನಾ ಸೋಂಕು ದೃಢ ಪ್ರಮಾಣ ಶೇ 3.14ಕ್ಕೆ ಏರಿಕೆಯಾಗಿದ್ದು, 24 ಗಂಟೆಗಳ ಅವಧಿಯಲ್ಲಿ 594 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ.

ನಾಲ್ಕು ತಿಂಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇದು. ಮಾರ್ಚ್ ಮೊದಲ ವಾರದ ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿತ್ತು. ಏಪ್ರಿಲ್ ತಿಂಗಳಲ್ಲಿ ಈ ಸಂಖ್ಯೆ 50ರ ಆಸುಪಾಸಿನಲ್ಲಿತ್ತು. ಎರಡು ವಾರಗಳಿಂದ ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿದೆ. ಮಂಗಳವಾರ 9 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ದೃಢಪಟ್ಟಿದ್ದು, ಬೆಂಗಳೂರಿನಲ್ಲಿ 582 ಮಂದಿಗೆ ಸೋಂಕು ದೃಢಪಟ್ಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 3,882ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 3,738 ಸೋಂಕಿತರು ಇದ್ದಾರೆ. ಯಾದಗಿರಿ, ವಿಜಯಪುರ ಸೇರಿದಂತೆ 9 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳಿಲ್ಲ.

ಒಂದು ದಿನದಲ್ಲಿ 18,883 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.57 ಲಕ್ಷ ದಾಟಿದೆ. 39.13 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ.

31 ವಿದ್ಯಾರ್ಥಿಗಳಿಗೆ ಕೋವಿಡ್ ಎರಡು ಶಾಲೆಗಳಿಗೆ ರಜೆ

ಬಿಬಿಎಂಪಿ ದಾಸರಹಳ್ಳಿ ವಲಯದ ಎರಡು ಶಾಲೆಗಳ 31 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದ್ದು, ಶಾಲೆಗಳಿಗೆ ರಜೆ ನೀಡಲಾಗಿದೆ.

'ಎರಡು ಶಾಲೆಗಳಲ್ಲಿ ಕೋವಿಡ್ ಲಸಿಕೆ ಹಾಕುವಾಗ ರೋಗ ಲಕ್ಷಣ ಇದ್ದವರಿಗೆ ಆರ್‌ಎಟಿ(ರ್‍ಯಾಪಿಡ್ ಆ್ಯಂಟಿಜನ್ ಪರೀಕ್ಷೆ) ಮಾಡಲಾಗಿತ್ತು. ಆಗ ಒಂದು ಶಾಲೆಯ ಆರನೇ ತರಗತಿಯ 21 ವಿದ್ಯಾರ್ಥಿಗಳಿಗೆ ಮತ್ತು ಇನ್ನೊಂದು ಶಾಲೆಯ ಐದನೇ ತರಗತಿಯ 10 ಮಕ್ಕಳಿಗೆ ಕೋವಿಡ್ ಇರುವುದು ದೃಢಪಟ್ಟಿತ್ತು' ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಯೋಜನೆ) ಎನ್.ಬಿ. ರವೀಂದ್ರ ತಿಳಿಸಿದರು.

'ಎಲ್ಲಾ ಮಕ್ಕಳಿಗೂ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಾಗಿದ್ದು, ಅವರಲ್ಲಿ 21 ವಿದ್ಯಾರ್ಥಿಗಳ ಪರೀಕ್ಷಾ ವರದಿ ನೆಗೆಟಿವ್ ಬಂದಿದೆ. ಇನ್ನು 10 ವಿದ್ಯಾರ್ಥಿಗಳ ಪರೀಕ್ಷಾ ವರದಿ ಬಂದಿಲ್ಲ' ಎಂದು ಹೇಳಿದರು.

'ಮುನ್ನೆಚ್ಚರಿಕಾ ಕ್ರಮವಾಗಿ ಶಾಲೆಗಳಿಗೆ ರಜೆ ನೀಡಲಾಗಿದೆ. ಸೋಂಕು ಹರಡದಂತೆ ಶಾಲೆಯನ್ನು ಸ್ಯಾನಿಟೈಸ್ ಮಾಡಲಾಗಿದೆ. ಮಾಸ್ಕ್ ಧರಿಸುವುದು, ಅಂತರ ಕಾಯುವುದು ಸೇರಿದಂತೆ ಪ್ರಮಾಣಿತ ಕಾರ್ಯಾಚರಣೆ ವಿಧಾನ(ಎಸ್‌ಒಪಿ) ಪಾಲಿಸಲಾಗುತ್ತಿದೆ' ಎಂದು ವಿವರಿಸಿದರು.

ಮುನ್ನೆಚ್ಚರಿಕೆ ವಹಿಸಲು ಶಿಕ್ಷಣ ಸಂಸ್ಥೆಗಳಿಗೆ ಸೂಚನೆ

ಎರಡು ಶಾಲೆಯ 31 ಮಕ್ಕಳಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾದ ಬೆನ್ನಲ್ಲೇ ವಿದ್ಯಾ ಸಂಸ್ಥೆಗಳು ಮತ್ತು ಪೋಷಕರು ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳನ್ನು ಬಿಬಿಎಂಪಿ ಪಟ್ಟಿ ಮಾಡಿದೆ.

ಯಾವುದೇ ಊಹಾಪೋಹಗಳಿಗೆ ಕಿವಿಗೊಡದೆ, ಎಚ್ಚರ ವಹಿಸುವುದು ಸೂಕ್ತ ಎಂದು ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಬಾಲಸುಂದರ್ ತಿಳಿಸಿದ್ದಾರೆ.

'ಶಾಲೆಗೆ ಬರುವ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಆರೋಗ್ಯವನ್ನು ಪ್ರವೇಶ ದ್ವಾರದಲ್ಲೇ ಥರ್ಮಲ್ ಸ್ಕ್ರೀನಿಂಗ್ ಮೂಲಕ ಕಡ್ಡಾಯವಾಗಿ ಪರೀಕ್ಷೆ ಮಾಡಿಸಬೇಕು. ಸೋಂಕಿನ ಲಕ್ಷಣ ಕಂಡುಬಂದರೆ ಕೂಡಲೇ ಕೋವಿಡ್ ಪರೀಕ್ಷೆಗೆ ಒಳಪಡಿಸಿ ಪ್ರತ್ಯೇಕವಾಗಿ ಇರಿಸಬೇಕು' ಎಂದು ಸೂಚಿಸಿದ್ದಾರೆ.

'ಅಂತರ ಕಾಯ್ದುಕೊಳ್ಳುವ ಜತೆಗೆ ಎಲ್ಲರೂ ಮಾಸ್ಕ್ ಧರಿಸಿದ್ದಾರೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಶಾಲೆಯ ಆವರಣದಲ್ಲಿ ಸ್ವಚ್ಛತೆ ಕಾಪಾಡಿಕೊಂಡು ಮುಖ್ಯ ಸ್ಥಳಗಳಲ್ಲಿ ಸ್ಯಾನಿಟೈಸರ್ ಇರುವಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

'ಶಾಲೆಗಳ ಜತೆಗೆ ಪೋಷಕರು ಕೆಲವು ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು. ಮನೆಯಲ್ಲಿ ಎಲ್ಲರೂ ಲಸಿಕೆ ಪಡೆದಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಮನೆಯಲ್ಲಿ ಯಾರಿಗಾದರೂ ಸೋಂಕಿನ ಲಕ್ಷಣ ಕಾಣಿಸಿಕೊಂಡರೆ ತಕ್ಷಣ ಪರೀಕ್ಷೆ ಮಾಡಿಸಬೇಕು. ಮಕ್ಕಳಲ್ಲಿ ಲಕ್ಷಣ ಇದ್ದರೆ ಶಾಲೆಗೆ ಕಳುಹಿಸದೆ ಪ್ರತ್ಯೇಕವಾಗಿ ಇರಿಸಬೇಕು. ಎಲ್ಲಾ ಮಕ್ಕಳಿಗೂ ಲಸಿಕೆ ಕೊಡಿಸಬೇಕು' ಎಂದು ಸಲಹೆ ನೀಡಿದ್ದಾರೆ.

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಬುಲ್ಡೋಜರ್ ಅಸ್ತ್ರ ಪ್ರಯೋಗ ಇಲ್ಲ: ಆರಗ ಜ್ಞಾನೇಂದ್ರ

ಉಡುಪಿ: ಉತ್ತರ ಪ್ರದೇಶ ಮಾದರಿಯಲ್ಲಿ ಬುಲ್ಡೋಜರ್ ಅಸ್ತ್ರವನ್ನು ಪ್ರಯೋಗಿಸುವಂತಹ ಪರಿಸ್ಥಿತಿ ರಾಜ್ಯದಲ್ಲಿ ಇಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಮಂಗಳವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ,

'ಕರ್ನಾಟಕದಲ್ಲಿ ಸಂವಿಧಾನ ಹಾಗೂ ಕಾನೂನುಗಳ ಪಾಲನೆ ನಡೆಯುತ್ತಿದೆ. ಬುಲ್ಡೋಜರ್ ಅಸ್ತ್ರ ಪ್ರಯೋಗಿಸುವ ಅಗತ್ಯತೆ ಇಲ್ಲ' ಎಂದರು.

'ದೇಶದ ಕಾನೂನು ಎಲ್ಲರಿಗೂ ಒಂದೇ. ನ್ಯಾಯಾಲಯ ವಿಚಾರಣೆಗೆ ಕರೆದಾಗ ಹಾಜರಾಗಬೇಕು. ಅಪರಾಧಿಗಳಾಗಿದ್ದರೆ ಶಿಕ್ಷೆಯಾಗುತ್ತದೆ. ಆದರೆ, ಕಾಂಗ್ರೆಸ್ ನಾಯಕರು ನೆಲದ ಕಾನೂನುಗಳಿಗೆ ವಿರುದ್ಧವಾಗಿ ಪ್ರತಿಭಟನೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಅಡ್ಡಮಾರ್ಗ ಹಿಡಿದಿರುವ ಕಾರಣ ದೇಶದಿಂದಲೇ ನಾಪತ್ತೆಯಾಗುತ್ತಿದೆ' ಎಂದು ವ್ಯಂಗ್ಯವಾಡಿದರು.

ಪಠ್ಯಪುಸ್ತಕ: ಪ್ರತಿಭಟನೆಗೆ ದೇವೇಗೌಡರ ಬೆಂಬಲ

ಬೆಂಗಳೂರು: ರೋಹಿತ್ ಚಕ್ರತೀರ್ಥ ಸಮಿತಿಯು ಮರುಪರಿಷ್ಕರಿಸಿರುವ ಪಠ್ಯಪುಸ್ತಕ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿ ಇದೇ 18ರಂದು ನಡೆಯಲಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವುದಾಗಿ ರಾಜ್ಯಸಭೆಯ ಜೆಡಿಎಸ್ ಸದಸ್ಯ ಎಚ್.ಡಿ. ದೇವೇಗೌಡರು ಹೇಳಿದ್ದಾರೆ.

ಸರ್ಕಾರ ರಚಿಸಿದ್ದ ಚಕ್ರತೀರ್ಥ ಸಮಿತಿಯು ಪಠ್ಯವನ್ನು ತಿರುಚಿ, ನಾಡಿನ ದಾರ್ಶನಿಕರಿಗೆ ಅವಮಾನ ಮಾಡಿದೆ ಎಂದು ಆಪಾದಿಸಿ 'ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ'ಯು ವಿವಿಧ ಸಂಘಟನೆಗಳ ಸಹಭಾಗಿತ್ವದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ಸಮಿತಿ ಪರವಾಗಿ ದೇವೇಗೌಡರನ್ನು ಭೇಟಿಯಾದ ಕವಿ ಎಲ್.ಎನ್. ಮುಕುಂದರಾಜ್, ಸಾಮಾಜಿಕ ಕಾರ್ಯಕರ್ತ ಜಿ.ಬಿ. ಪಾಟೀಲ ಮೊದಲಾದವರು, 'ಪಠ್ಯ ಪರಿಷ್ಕರಣೆ ಸಮಯದಲ್ಲಿ ಬಸವಣ್ಣನವರು ಹಾಗೂ ಕುವೆಂಪು ಅವರಿಗೆ ಅವಮಾನ ಮಾಡಿರುವ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟಿಸಲಿರುವ ಪ್ರಜ್ಞಾವಂತರ ಹೋರಾಟದಲ್ಲಿ ಭಾಗವಹಿಸಿ' ಎಂದು ವಿನಂತಿಸಿಕೊಂಡರು.

'ಮೊಣಕಾಲಿನ ನೋವಿದ್ದರೂ ಪ್ರತಿಭಟನೆಯಲ್ಲಿ ಹೆಜ್ಜೆ ಹಾಕುತ್ತೇನೆ' ಎಂದು ಗೌಡರು ತಿಳಿಸಿದ್ದಾಗಿ ಸಮಿತಿ ಹೇಳಿದೆ.

ಬಳಿಕ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಗೌಡರು, 'ಪರಿಷ್ಕರಿಸಲಾಗಿರುವ ಪಠ್ಯ ಪುಸ್ತಕಗಳನ್ನು ಹಿಂಪಡೆಯಲು ಒತ್ತಾಯಿಸುವ ಪ್ರತಿಭಟನಾ ಜಾಥಾದಲ್ಲಿ ನಾನು ಖುದ್ದಾಗಿ ಭಾಗವಹಿಸುತ್ತೇನೆ ಹಾಗೂ ಸಮಿತಿಯ ಮುಂದಿನ ಹೋರಾಟಗಳಲ್ಲೂ ಸಂಪೂರ್ಣವಾಗಿ ಪಾಲ್ಗೊಳ್ಳುತ್ತೇನೆ' ಎಂದು ತಿಳಿಸಿದ್ದಾರೆ.

ಬಿಸಿಲಿನ ತಾಪಕ್ಕೆ ತಂಪೆರೆದ ಮಳೆ

ಬೆಂಗಳೂರು: ನಗರದಲ್ಲಿ ಕೆಲದಿನ ಬಿಡುವು ನೀಡಿದ್ದ ಮಳೆ ಮಂಗಳವಾರ ಸಂಜೆಯಿಂದ ರಾತ್ರಿಯವರೆಗೆ ಸುರಿದು ತಂಪೆರೆಯಿತು.

ಮಳೆಗಾಲ ಆರಂಭವಾದರೂ ಕೆಲ ದಿನಗಳಿಂದ ನಗರದಲ್ಲಿ ಬಿಸಿಲಿನ ತಾಪ ಹೆಚ್ಚಿತ್ತು. ಮಂಗಳವಾರ ಸುರಿದ ಮಳೆಯಿಂದಾಗಿ ಜನರು ಹರ್ಷಗೊಂಡರು.

ರಾಜರಾಜೇಶ್ವರಿನಗರ, ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಕಾಟನ್‌ಪೇಟೆ, ಮಲ್ಲೇಶ್ವರ, ಶೇಷಾದ್ರಿಪುರ, ನಂದಿನಿ ಲೇಔಟ್, ಯಶವಂತಪುರ, ಸದಾಶಿವನಗರ, ಗಿರಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಆಯಿತು.

ಶಿವಾಜಿನಗರ, ಎಂ.ಜಿ.ರಸ್ತೆ, ಅಶೋಕನಗರ, ವಿವೇಕನಗರ, ಕೋರಮಂಗಲ ಹಾಗೂ ಸುತ್ತಮುತ್ತ ಮಳೆ ಇತ್ತು.

ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಜನ, ಮಳೆಯಲ್ಲೇ ಸಂಚರಿಸಿದರು. ದ್ವಿಚಕ್ರ ವಾಹನ ಸವಾರರು ರಸ್ತೆ ಬದಿಗಳಲ್ಲಿ ಆಶ್ರಯ ಪಡೆದಿದ್ದರು. ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಕಂಡುಬಂತು.

'ಕೆಲದಿನ ಬಿಡುವು ನೀಡಿದ್ದ ಮಳೆ ಮತ್ತೆ ಶುರುವಾಗಿದೆ. ಮಂಗಳವಾರ ಬಹುತೇಕ ಕಡೆ ಉತ್ತಮ ಮಳೆಯಾಗಿದೆ. ಮಳೆಯಿಂದ ಸಮಸ್ಯೆಯಾದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಮುಖ್ಯಮಂತ್ರಿ ಸೂಚನೆ

ರಸ್ತೆ ಕಾಮಗಾರಿಗಳ ದಿಢೀರ್ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳ ದುರವಸ್ಥೆ ಬಗ್ಗೆ ಉದ್ಯಮಿಗಳಾದ ಕಿರಣ್ ಮಜುಂದಾರ್ ಷಾ ಮತ್ತು ಟಿ.ವಿ. ಮೋಹನ್‌ದಾಸ್ ಪೈ ಅವರು ಇತ್ತೀಚೆಗೆ ಟ್ವೀಟ್ ಮೂಲಕ ಸರ್ಕಾರವನ್ನು ತರಾಟೆ ತೆಗೆದುಕೊಂಡ ಬೆನ್ನಲ್ಲೇ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ದಿಢೀರನೆ ಹಲವು ರಸ್ತೆಗಳ ಕಾಮಗಾರಿಯನ್ನು ಪರಿಶೀಲಿಸಿದರು.

ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟ ಬಳಿಕ ಎಚ್‌ಎಎಲ್ ಸುತ್ತಮುತ್ತ, ಹೊರ ವರ್ತುಲ ರಸ್ತೆ ಮತ್ತು ಕೆಲವು ಪ್ರಮುಖ ರಸ್ತೆಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದರು.

ಎಚ್‌ಎಎಲ್ ವಿಮಾನ ನಿಲ್ದಾಣದಿಂದ ನೇರವಾಗಿ ಮಾರತ್‌ಹಳ್ಳಿಯ ಸೇತುವೆಗೆ ಭೇಟಿ ನೀಡಿದರು. ಅಲ್ಲಿಂದ ಕುಂದಲಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಅಂಡರ್‌ಪಾಸ್ ಕಾಮಗಾರಿಯನ್ನೂ ವೀಕ್ಷಿಸಿದರು. ಆ ಬಳಿಕ ಅಧಿಕಾರಿಗಳ ಜತೆ ಮಾತನಾಡಿ, 'ಬೆಂಗಳೂರು ಹೊರ ವರ್ತುಲ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ದಿನೇ ದಿನೇ ಹೆಚ್ಚಾಗುತ್ತಿದೆ. ಐಟಿ ಕಂಪನಿಗಳು ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಈಗ ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಎಲ್ಲರೂ ಕಚೇರಿಗೆ ಬಂದು ಕೆಲಸ ಮಾಡುತ್ತಿದ್ದಾರೆ. ಇದರಿಂದ ವಾಹನಗಳ ಸಂಚಾರ ಹೆಚ್ಚಾಗಿದೆ. ಆದ್ದರಿಂದ, ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು' ಎಂದು ಆದೇಶಿಸಿದರು.

ಅಲ್ಲಿಂದ ಬಿಬಿಎಂಪಿ ಮುಖ್ಯ ಆಯುಕ್ತರು ಮತ್ತು ಹಿರಿಯ ಅಧಿಕಾರಿಗಳ ಜತೆ ಸರ್ಜಾಪುರ, ಎಚ್‌ಎಸ್‌ಆರ್ ಬಡಾವಣೆಗಳಿಗೆ ತೆರಳಿ ಕಾಮಗಾರಿಗಳ ವಸ್ತುಸ್ಥಿತಿಯನ್ನು ಅರಿತು ಅಧಿಕಾರಿಗಳಿಗೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಪಣತ್ತೂರು ರೈಲ್ವೆ ಕೆಳಸೇತುವೆ ಬಳಿ ರಸ್ತೆ ವಿಸ್ತರಣೆ ಕಾಮಗಾರಿ, ಹೊಸದಾಗಿ ಆಸ್ಫಾಲ್ಟ್ ಮಾಡುತ್ತಿರುವ ವಿಎಸ್‌ಎಸ್ ರಸ್ತೆ, ಜಕ್ಕಸಂದ್ರ ರಸ್ತೆ ಸೇರಿ ಸಿಲ್ಕ್ ಬೋರ್ಡ್‌ವರೆಗಿನ ಹಲವು ರಸ್ತೆಗಳ ತಪಾಸಣೆ ನಡೆಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮತ್ತು ಬಿಬಿಎಂಪಿ ಹಿರಿಯ ಅಧಿಕಾರಿಗಳು ಇದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಸ್ತೆ ಕಾಮಗಾರಿ ತಪಾಸಣೆ ನಡೆಸಿದರು

ತೊಡಕು ನಿವಾರಣೆಗೆ ಸೂಚನೆ

ಐಟಿ ಉದ್ಯಮಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಭಾಗದಲ್ಲಿ ಸಂಚಾರ ದಟ್ಟಣೆ ನಿವಾರಣೆಗಾಗಿ ಕಾನೂನು ತೊಡಕುಗಳು ಅಥವಾ ಇನ್ಯಾವುದೇ ಸವಾಲುಗಳಿದ್ದರೆ ಅವುಗಳನ್ನು ಬಗೆಹರಿಸಬೇಕು ಎಂದು ಬೊಮ್ಮಾಯಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪ್ರಗತಿಯಲ್ಲಿರುವ ಎಲ್ಲ ಯೋಜನೆಗಳ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಜೋಡಿ ಹತ್ಯೆ ಪ್ರಕರಣ ಲಾರೆನ್ಸ್ ಗ್ಯಾಂಗ್‌ನ ಇಬ್ಬರು ವಶಕ್ಕೆ

ಗುರುಗ್ರಾಮ (ಪಿಟಿಐ): ಕುಖ್ಯಾತ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಇಬ್ಬರು ಶಾರ್ಪ್ ಶೂಟರ್‌ಗಳನ್ನು ಥಕ್ರಾನ್ ಸಹೋದರರ ಹತ್ಯೆ ಪ್ರಕರಣದಲ್ಲಿ ವಿಚಾರಣೆಗಾಗಿ ಮಂಗಳವಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಆರೋಪಿಗಳನ್ನು ಮನೀಶ್ ಅಲಿಯಾಸ್ ಸನ್ನಿ ಕಕ್ರಾನ್ ಮತ್ತು ಅತುಲ್ ಅಲಿಯಾಸ್ ಅತುಲ್ ಅಲಿಯಾಸ್ ಮೋಟಾ ಎಂದು ಗುರುತಿಸಲಾಗಿದ್ದು, ಇವರಿಬ್ಬರ ತಲೆಗೆ ಉತ್ತರಪ್ರದೇಶ ಪೊಲೀಸರು ತಲಾ ₹ 1 ಲಕ್ಷ ಬಹುಮಾನವನ್ನು ಘೋಷಿಸಿದ್ದಾರೆ.

ಲಾರೆನ್ಸ್ ವಶಕ್ಕೆ: ಗಾಯಕ ಸಿಧು ಮೂಸೆವಾಲಾ ಅವರ ಹತ್ಯೆ ಪ್ರಕರಣದ ಆರೋಪಿ ಲಾರೆನ್ಸ್ ಬಿಷ್ಣೋಯ್ ಅವರನ್ನು ದೆಹಲಿ ನ್ಯಾಯಾಲಯವು ಮಂಗಳವಾರ ಪಂಜಾಬ್ ಪೊಲೀಸರ ವಶಕ್ಕೆ ನೀಡಿದೆ.

ಕೆಎಸ್‌ಟಿಡಿಸಿ ಹೋಟೆಲ್ ಖಾಸಗಿಗೆ: ಪ್ರಸ್ತಾವನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ಲಲಿತ್ ಮಹಲ್ ಮತ್ತು ರಾಜ್ಯದ ವಿವಿಧೆಡೆಗಳಲ್ಲಿರುವ ಕೆಎಸ್‌ಟಿಡಿಸಿ ಹೋಟೆಲ್‌ಗಳನ್ನು ಖಾಸಗಿಯವರಿಗೆ ವಹಿಸುವ ಬಗ್ಗೆ ಪ್ರತ್ಯೇಕ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸಂಪುಟ ಉಪಸಮಿತಿ ಅಧಿಕಾರಿಗಳಿಗೆ ಸೂಚಿಸಿದೆ.

ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಉಪ ಸಮಿತಿ ಸಭೆಯಲ್ಲಿ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ ಎಂದು ಮೂಲಗಳು ಹೇಳಿವೆ.

ಮೈಸೂರಿನ ಲಲಿತ್ ಮಹಲ್ ಈಗ ಇರುವ ರೀತಿಯಲ್ಲೇ ನಡೆಸಿಕೊಂಡು ಹೋಗಬೇಕೆ ಅಥವಾ ಖಾಸಗಿಯವರಿಗೆ ನೀಡುವುದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆಯೇ? ಇನ್ನೂ ಉತ್ತಮಪಡಿಸುವ ಬಗ್ಗೆ ವಿಸ್ತೃತವಾದ ಪ್ರಸ್ತಾವನೆಯೊಂದನ್ನು ಸಲ್ಲಿಸಬೇಕು ಎಂದು ಆನಂದ್‌ಸಿಂಗ್ ತಿಳಿಸಿದರೆಂದು ಮೂಲಗಳು ಹೇಳಿವೆ.

ರಾಜ್ಯದಲ್ಲಿರುವ ಕೆಎಸ್‌ಟಿಡಿಸಿ ಮತ್ತು ಜಂಗಲ್ ಲಾಡ್ಜಸ್‌ಗಳಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತಿಲ್ಲ. ಅಲ್ಪ ಪ್ರಮಾಣದ ಲಾಭದಿಂದ ಏನೂ ಪ್ರಯೋಜನವಿಲ್ಲ. ಸರ್ಕಾರ ಹೆಚ್ಚಿನ ಆದಾಯ ಪಡೆಯಲು ಲೀಸ್ ಟೆಂಡರ್‌ಗಳಲ್ಲಿ ಇನ್ನೂ ಹೆಚ್ಚಿನವರು ಮತ್ತು ದೊಡ್ಡ ಸಮೂಹಗಳ ಹೋಟೆಲ್‌ಗಳವರೂ ಪಾಲ್ಗೊಳ್ಳುವಂತೆ ಆಗಬೇಕು, ತಾಜ್ ಮಾತ್ರ ಅಲ್ಲ, ಒಬೆರಾಯ್‌ನಂತಹವರೂ ಟೆಂಡರ್‌ನಲ್ಲಿ ಪಾಲ್ಗೊಳ್ಳುವಂತಾಗಬೇಕು ಎಂದು ಅವರು ಹೇಳಿದರು.

ವರ್ಷಕ್ಕೆ ₹1 ಕೋಟಿ ಆದಾಯ ಬರುವ ಕಡೆ ₹5 ಕೋಟಿಯಷ್ಟಾದರೂ ಬರಬೇಕು. ಇಲ್ಲವಾದರೆ ಹೋಟೆಲ್‌ಗಳನ್ನು ನಡೆಸುವುದು ಕಷ್ಟ. ಹೀಗಾಗಿ ಇದಕ್ಕೂ ಒಂದು ಪ್ರಸ್ತಾವನೆ ಸಲ್ಲಿಸಿ ಎಂದು ಸೂಚಿಸಿದರು. ಸಭೆಯಲ್ಲಿ ಕ್ರೀಡಾ ಸಚಿವ ನಾರಾಯಣಗೌಡ ಅವರೂ ಇದ್ದರು.

ಈ ಹಿಂದೆ ಸಿ.ಪಿ.ಯೋಗೇಶ್ವರ ಪ್ರವಾಸೋದ್ಯಮ ಸಚಿವರಾಗಿದ್ದಾಗಲೂ ಲಲಿತ್ ಮಹಲ್ ಹೋಟೆಲ್ ಖಾಸಗೀಕರಣ ವಿಚಾರ ಮುನ್ನೆಲೆಗೆ ಬಂದಿತ್ತು. ಮೈಸೂರು ಜನಪ್ರತಿನಿಧಿಗಳು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರಿಂದ ಆಗ ಪ್ರಸ್ತಾವನೆಯನ್ನು ಕೈಬಿಟ್ಟು, ಸಂಪುಟ ಉಪಸಮಿತಿ ರಚಿಸಲು ತೀರ್ಮಾನಿಸಲಾಗಿತ್ತು.

ಭಾರತೀಯರಿಗೆ ವೀಸಾ: ಚೀನಾ ನಿರ್ಧಾರ

ಬೀಜಿಂಗ್ (ಪಿಟಿಐ): ಭಾರತದ ವೃತ್ತಿಪರರು ಮತ್ತು ಅವರ ಕುಟುಂಬ ಸದಸ್ಯರಿಗೆ ವೀಸಾ ನೀಡುವ ನಿರ್ಧಾರವನ್ನು ಚೀನಾ ಪ್ರಕಟಿಸಿದೆ. ಕೋವಿಡ್ ನಿರ್ಬಂಧದ ಕಾರಣ ಎರಡು ವರ್ಷದಿಂದ ವೀಸಾ ನೀಡುವುದನ್ನು ಚೀನಾ ಸ್ಥಗಿತಗೊಳಿಸಿತ್ತು.

ಇನ್ನೊಂದೆಡೆ ಚೀನಾದ ವಿವಿಧ ಕಾಲೇಜು, ವಿಶ್ವವಿದ್ಯಾಲಯಗಳಿಗೆ ಮರುಸೇರ್ಪಡೆಗೆ ಆಸಕ್ತಿ ತೋರಿ ಸಾವಿರಾರು ಭಾರತೀಯ ವಿದ್ಯಾರ್ಥಿಗಳು ಸಲ್ಲಿಸಿರುವ ಮನವಿಯನ್ನು ಚೀನಾ ಪರಿಶೀಲಿಸುತ್ತಿದೆ ಎಂದು ವರದಿ ತಿಳಿಸಿದೆ. ಭಾರತದಲ್ಲಿನ ಚೀನಾ ರಾಯಭಾರಿ ಅವರು ವೀಸಾ ನೀಡುವುದಕ್ಕೆ ಸಂಬಂಧಿಸಿದ ಕೋವಿಡ್ ಮಾರ್ಗಸೂಚಿಯ ವಿವರ ಪ್ರಕಟಿಸಿದರು.

'ಬಾಳು ಬಾಳಲು ಬಿಡಿ...' ಪ್ರೀತಿಸಿ ಕೈಹಿಡಿದವಳ ಅಳಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ವಯಸ್ಕಳಿದ್ದೇನೆ, ಅವನನ್ನು ಮನಸಾರೆ ಪ್ರೀತಿಸಿ ಕೈ ಹಿಡಿದಿದ್ದೇನೆ. ಅವನೊಂದಿಗೇ ಬಾಳಲು ಬಯಸಿದ್ದೇನೆ. ದಯವಿಟ್ಟು, ಬಯಸಿದ ಬಾಳನ್ನು ಬಾಳಲು ಬಿಡಿ...!

'ನಮ್ಮ ಹುಡುಗಿಯನ್ನು ನಮ್ಮ ವಶಕ್ಕೆ ಕೊಡಿಸಬೇಕು' ಎಂದು ಹುಡುಗಿಯ ಪೋಷಕರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ, ಹುಡುಗಿಯ ಎದೆಯಾಳದ ದನಿಗೆ ಕಿವಿಯಾಯಿತು.

ಪೊಲೀಸರು ಹುಡುಗ–ಹುಡುಗಿ ಇಬ್ಬರನ್ನೂ ಪತ್ತೆಹಚ್ಚಿ ನ್ಯಾಯಪೀಠದ ಮುಂದೆ ಹಾಜರುಪಡಿಸಿದ್ದರು. ಹುಡುಗಿ ಮನದ ಮೂಲೆಯಲ್ಲಿ ಬೆಚ್ಚಗೆ ಅವಿತಿದ್ದ ಹುಡುಗನ ಮೇಲಿನ ಪ್ರೀತಿ, ಅವನೊಂದಿಗೆ ಬಾಳುವ ಬಯಕೆಯನ್ನು ಬಿಚ್ಚಿಟ್ಟಳು. 'ನಾವಿಬ್ಬರೂ ಕಾನೂನು ಉಲ್ಲಂಘಿಸಿಲ್ಲ' ಎಂಬುದನ್ನು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟಳು.

ಹುಡುಗ ಕೂಡಾ, 'ಆಕೆ ಎಂಜಿನಿಯರಿಂಗ್ ಪದವಿ ಓದುವ ಆಸೆಯನ್ನು ನಾನು ಪೂರೈಸುತ್ತೇನೆ. ಜೀವನದಲ್ಲಿ ಆಕೆ ಯಾವತ್ತೂ ನನ್ನಿಂದಾಗಿ ಕಣ್ಣೀರು ಹಾಕದಂತೆ ಕಾಪಿಟ್ಟು ಸಾಕುತ್ತೇನೆ' ಎಂಬ ಭರವಸೆ ಬೆರೆತ ಕೋರಿಕೆಯನ್ನು ನ್ಯಾಯಪೀಠಕ್ಕೆ ಅರ್ಪಿಸಿದ.

ತಾರುಣ್ಯದ ಕನಸುಗಳಿಗೆ ಬಣ್ಣತುಂಬುವ ಭರದಲ್ಲಿ ಸಂಕಟಕ್ಕೆ ಸಿಲುಕಿ ಕುದಿವ ಕುಲುಮೆಯಲ್ಲಿ ನಿಂತಂತ್ತಿದ್ದ ಜೋಡಿಯ ಪ್ರಾಂಜಲ ಮಾತುಗಳನ್ನು ಆಲಿಸಿದ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿತು. ಅಷ್ಟೇ ಅಲ್ಲ, ಇಬ್ಬರಿಗೂ ಕಿವಿಮಾತು ಹೇಳುವ ಮೂಲಕ, 'ಜನ್ಮ ನೀಡಿ ಬೆಳೆಸಿದ ತಂದೆ-ತಾಯಿಯ ಋಣ ತೀರಿಸಲು ಅಸಾಧ್ಯ. ಹೆತ್ತವರಿಗಿಂತ ದೊಡ್ಡ ದೇವರಿಲ್ಲ ಎಂಬುದನ್ನು ಸದಾ ನೆನಪಿಟ್ಟು ಬದುಕಿ' ಎಂದು ಶುಭ ಹಾರೈಸಿತು.

ಪ್ರಕರಣವೇನು?: ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ 19 ವರ್ಷದ ವಿದ್ಯಾರ್ಥಿನಿ ಕಾಲೇಜಿನ ವ್ಯಾನ್ ಚಾಲಕನನ್ನೇ ಪ್ರೇಮಿಸಿ ವಿವಾಹವಾಗಿದ್ದಳು. ಇದರಿಂದ ವ್ಯಾಕುಲಗೊಂಡಿದ್ದ ತಂದೆ, ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿ, 'ನನ್ನ ಮಗಳಿಗೆ ಸ್ವಂತ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವಿಲ್ಲ. ವ್ಯಾನ್ ಚಾಲಕ ಆಕೆಯನ್ನು ಪುಸಲಾಯಿಸಿ ಮದುವೆಯಾಗಿದ್ದಾನೆ. ಹಾಗಾಗಿ, ಅಕ್ರಮ ಬಂಧನದಲ್ಲಿರುವ ಮಗಳನ್ನು ನಮ್ಮ ವಶಕ್ಕೆ ಒಪ್ಪಿಸಲು ಆದೇಶಿಸಬೇಕು' ಎಂದು ಕೋರಿದ್ದರು.

ರಕ್ತದಾನ ಆರೋಗ್ಯ ಇಲಾಖೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಂಗಳವಾರ ಹಮ್ಮಿಕೊಂಡ ವಿಶ್ವ ರಕ್ತದಾನಿಗಳ ದಿನ ಕಾರ್ಯಕ್ರಮದಲ್ಲಿ ಸಾರ್ವಜನಿಕರು ರಕ್ತದಾನ ಮಾಡಿದರು –ಪ್ರಜಾವಾಣಿ ಚಿತ್ರ

ಬಾಲಿವುಡ್ ನಟ ಸಿದ್ಧಾಂತ್ ಕಪೂರ್ ಬಿಡುಗಡೆ

'ನಾಲ್ಕು ಗಂಟೆ ಪಾರ್ಟಿಗೆ ₹ 1.50 ಲಕ್ಷ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ಪಾರ್ಕ್' ಪಂಚತಾರಾ ಹೋಟೆಲ್‌ನ ಪಾರ್ಟಿಯಲ್ಲಿ ಡ್ರಗ್ಸ್ ಸೇವಿಸಿದ್ದ ಆರೋಪದಡಿ ಬಂಧಿಸಲಾಗಿದ್ದ ಬಾಲಿವುಡ್ ನಟ ಶಕ್ತಿ ಕಪೂರ್ ಅವರ ಮಗ ಸಿದ್ಧಾಂತ್ ಸೇರಿದಂತೆ ಐವರನ್ನು ಠಾಣೆ ಜಾಮೀನು ಮೇಲೆ ಪೊಲೀಸರು ಸೋಮವಾರ ರಾತ್ರಿ ಬಿಡುಗಡೆ ಮಾಡಿದ್ದಾರೆ.

ಟ್ರಿನಿಟಿ ವೃತ್ತದಲ್ಲಿರುವ ಹೋಟೆಲ್‌ನ ಬಾರ್ ಮೇಲೆ ಭಾನುವಾರ ರಾತ್ರಿ ದಾಳಿ ಮಾಡಿದ್ದ ಹಲಸೂರು ಪೊಲೀಸರು, 35 ಮಂದಿಯನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆ ಮಾಡಿಸಿದ್ದರು. ಈ ಪೈಕಿ ಸಿದ್ಧಾಂತ್ ಕಪೂರ್, ಅಖಿಲ್ ಸೋನಿ (28), ಹರ್ಜೋತ್ ಸಿಂಗ್ (28), ಹನಿ (25) ಹಾಗೂ ಅಖಿಲ್ (23) ಅವರು ಡ್ರಗ್ಸ್ ಸೇವಿಸಿದ್ದು ದೃಢಪಟ್ಟಿತ್ತು. ಇವರೆಲ್ಲರನ್ನೂ ಪೊಲೀಸರು ಬಂಧಿಸಿದ್ದರು.

'ಪಾರ್ಟಿ ವೇಳೆ ಡ್ರಗ್ಸ್ ಪತ್ತೆಯಾಗಿದ್ದು, ಅದು ಯಾರಿಗೆ ಸೇರಿದ್ದು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ತನಿಖೆ ಮುಂದುವರಿದಿದೆ. ಎನ್‌ಡಿಪಿಎಸ್ ಕಾಯ್ದೆಯನ್ವಯ ಬಂಧಿತ ಐವರು ಆರೋಪಿಗಳನ್ನು ಠಾಣೆ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದ್ದು, ವಿಚಾರಣೆ ಅಗತ್ಯವಿದ್ದರೆ ಠಾಣೆಗೆ ಬರಬೇಕೆಂದು ಸೂಚನೆ ನೀಡಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ತಿಳಿಸಿದರು.

ಪಾರ್ಟಿ ಆಯೋಜಿಸಿದ್ದ ಎಲ್.ಎ ಪ್ರೊಡಕ್ಷನ್: ಪಾರ್ಟಿಯಲ್ಲಿ ಡ್ರಗ್ಸ್ ಪೂರೈಕೆ ಹೇಗಾಯಿತು ಎಂಬುದನ್ನು ತಿಳಿಯಲು ಹಲಸೂರು ಪೊಲೀಸರು ತನಿಖೆ ಮುಂದುವರಿಸಿದ್ದು, ಪಾರ್ಟಿ ಆಯೋಜಕರ ಬಗ್ಗೆಯೂ ಮಾಹಿತಿ ಕಲೆಹಾಕಿದ್ದಾರೆ.

'ಎಲ್.ಎ ಪ್ರೊಡಕ್ಷನ್' ಕಂಪನಿ ಹಾಗೂ 'ಹಿಂದಿ ವೈಬ್' ಹೆಸರಿನ ತಂಡ ಜಂಟಿಯಾಗಿ ಪಾರ್ಟಿ ಆಯೋಜಿಸಿದ್ದ ಮಾಹಿತಿ ಲಭ್ಯವಾಗಿದೆ. ಪಾರ್ಟಿ ಬಗ್ಗೆ ಜಾಹೀರಾತು ನೀಡಿ ಯುವಜನತೆಯನ್ನು ಆಕರ್ಷಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಟ ಸಿದ್ಧಾಂತ್ ಅವರನ್ನು ಪಾರ್ಟಿಯಲ್ಲಿ ಡಿ.ಜೆ (ಡಿಸ್ಕ್ ಜಾಕಿ) ನಿರ್ವಹಣೆಗಾಗಿ ಕರೆಸಿಕೊಳ್ಳಲಾಗಿತ್ತು. ನಾಲ್ಕು ಗಂಟೆಗಳ ಪಾರ್ಟಿಗಾಗಿ ಅವರಿಗೆ ₹ 1.50 ಲಕ್ಷ ಪಾವತಿಸಲಾಗಿತ್ತು. ಇದೇ ರೀತಿಯಲ್ಲೇ ಸಿದ್ಧಾಂತ್, ಗೋವಾ, ಮುಂಬೈ ಸೇರಿದಂತೆ ಹಲವು ನಗರಗಳಲ್ಲಿ ನಡೆಯುತ್ತಿದ್ದ ಪಾರ್ಟಿಗಳಲ್ಲಿ ಪಾಲ್ಗೊಂಡು ಹಣ ಸಂಪಾದನೆ ಮಾಡುತ್ತಿದ್ದರು. ಇದುವೇ ಅವರ ಸದ್ಯದ ಉದ್ಯೋಗವಾಗಿತ್ತು' ಎಂದೂ ಮೂಲಗಳು ತಿಳಿಸಿವೆ.

'ಪಾರ್ಟಿಗೆ ಅನುಮತಿ ಪಡೆದಿದ್ದವರ ಬಗ್ಗೆ ಹೋಟೆಲ್ ಮಾಲೀಕರಿಂದ ಮಾಹಿತಿ ಕೇಳಲಾಗಿದೆ. ಅವರು ನೀಡಿದ ನಂತರ, ಆಯೋಜಕರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದೂ ಮೂಲಗಳು ಹೇಳಿವೆ.

'ಸ್ನೇಹಿತ ನೀಡಿದ್ದ ಸಿಗರೇಟ್ ಸೇದಿದ್ದೆ'

ಸೋಮವಾರ ರಾತ್ರಿ ಬಿಡುಗಡೆ ಮಾಡಲಾಗಿದ್ದ ಸಿದ್ಧಾಂತ್ ಅವರನ್ನು ಮಂಗಳವಾರ ಪುನಃ ಠಾಣೆಗೆ ಕರೆಸಿದ್ದ ಪೊಲೀಸರು, ಸಂಜೆಯವರೆಗೂ ವಿಚಾರಣೆ ನಡೆಸಿದರು.

'ಪಾರ್ಟಿಯಲ್ಲಿ ಡ್ರಗ್ಸ್ ಹೇಗೆ ಬಂತು ಎಂಬುದು ಗೊತ್ತಿಲ್ಲ. ಡಿ.ಜೆ ಆರಂಭಕ್ಕೂ ಮುನ್ನ ಸ್ನೇಹಿತ ನೀಡಿದ್ದ ಸಿಗರೇಟ್ ಮಾತ್ರ ಸೇದಿದ್ದೆ. ಅದರಲ್ಲಿ ಡ್ರಗ್ಸ್ ಇದ್ದ ಮಾಹಿತಿಯೂ ತಿಳಿದಿರಲಿಲ್ಲ. ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ, ನಿಮ್ಮ ತನಿಖೆಗೆ ಸಹಕಾರ ನೀಡುತ್ತೇನೆ' ಎಂದು ಸಿದ್ಧಾಂತ್ ಕಪೂರ್ ಹೇಳಿಕೆ ನೀಡಿರುವುದಾಗಿ ತಿಳಿದುಬಂದಿದೆ.

ಕಾವೇರಿ ಪ್ರಾಧಿಕಾರದ ಸಭೆಯಲ್ಲಿ ಮೇಕೆದಾಟು ಡಿಪಿಆರ್ ಪ್ರಸ್ತಾಪಿಸದಿರಲು ಆಗ್ರಹ

ಪ್ರಧಾನಿಗೆ ಸ್ಟಾಲಿನ್ ಪತ್ರ: ಬೊಮ್ಮಾಯಿ ತಿರುಗೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿ ಮೇಲ್ವಿಚಾರಣಾ ಪ್ರಾಧಿಕಾರದ ಸಭೆಯಲ್ಲಿ ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ವಿಷಯವನ್ನು ಪ್ರಸ್ತಾಪಿಸಲು ಅವಕಾಶ ನೀಡಬಾರದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪ್ರಧಾನಿಯವರಿಗೆ ಪತ್ರ ಬರೆದಿರುವುದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಟುವಾಗಿ ಟೀಕಿಸಿದ್ದಾರೆ.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮೇಕೆದಾಟು ಯೋಜನೆಯ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಪ್ರಧಾನಿಯವರಿಗೆ ಪತ್ರ ಬರೆದಿರುವುದು ಅಪ್ಪಟ ರಾಜಕೀಯ ಸ್ಟಂಟ್' ಎಂದು ವ್ಯಾಖ್ಯಾನಿಸಿದರು.

ಕಾವೇರಿ ನದಿ ಮೇಲ್ವಿಚಾರಣಾ ಪ್ರಾಧಿಕಾರ ಮೇಕೆದಾಟು ಯೋಜನೆಯ ಡಿಪಿಆರ್ ಅನುಮೋದನೆ ಮಾಡಬೇಕೆಂದು ಕೇಂದ್ರ ಜಲ ಆಯೋಗವೇ ಈ ಹಿಂದೆಯೇ ಷರತ್ತು ವಿಧಿಸಿತ್ತು. ಪ್ರಾಧಿಕಾರವು ಈಗಾಗಲೇ ಹಲವು ಸಭೆಗಳನ್ನು ನಡೆಸಿದ್ದು, ಇದೇ 23ರಂದು ಅಂತಿಮ ಸಭೆ ನಡೆಸಲಿದೆ. ಕಾವೇರಿ ನದಿ ನೀರಿನ ವಿಷಯವಾಗಿ ತಮಿಳುನಾಡು ಹಲವು ವರ್ಷಗಳಿಂದ ತಕರಾರು ತೆಗೆಯುತ್ತಲೇ ಬಂದಿದೆ. ಈಗ ಬರೆದಿರುವ ಪತ್ರ ಅದರ ಭಾಗ. ಈ ಪತ್ರ ಕಾನೂನಿನ ಚೌಕಟ್ಟಿನಲ್ಲಿ ನಿಲ್ಲುವುದೂ ಇಲ್ಲ. ಕಾನೂನು ಬಾಹಿರ ಪತ್ರವನ್ನು ಕೇಂದ್ರ ಸರ್ಕಾರವೂ ಪರಿಗಣಿಸುವುದಿಲ್ಲ. ರಾಜ್ಯಕ್ಕೆ ನ್ಯಾಯ ಸಿಗುವ ವಿಶ್ವಾಸವಿದೆ ಎಂದೂ ಬೊಮ್ಮಾಯಿ ಹೇಳಿದರು.

ಜೂನ್ 23ರಂದು ನಡೆಯುವ ಸಭೆಯಲ್ಲಿ ಕರ್ನಾಟಕ, ತಮಿಳುನಾಡು, ಪುದುಚೇರಿ ಮತ್ತು ಕೇರಳ ರಾಜ್ಯಗಳು ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳು ಭಾಗವಹಿಸುತ್ತಾರೆ. ಸಭೆಯನ್ನು ಈ ಮೊದಲು ಇದೇ 16ಕ್ಕೆ ನಿಗದಿ ಮಾಡಲಾಗಿತ್ತು. ಅದನ್ನು 23ಕ್ಕೆ ಮುಂದೂಡಲಾಗಿದೆ.

ಕುಡಿಯುವ ನೀರಿಗೆ ಆಕ್ಷೇಪವೇಕೆ?: 'ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಕಾವೇರಿ ನದಿ ನೀರಿನ ನಮ್ಮ ಪಾಲಿನ 4.75 ಟಿಎಂಸಿ ಅಡಿ ನೀರು ಬಳಕೆ ಮಾಡಿಕೊಳ್ಳಲು ಡಿಪಿಆರ್ ಮಾಡಿದ್ದೇವೆ. ಈ ನೀರನ್ನು ಬೆಂಗಳೂರಿನ ಜನರಿಗೆ ಕುಡಿಯುವ ಉದ್ದೇಶಕ್ಕೆ ಬಳಸಲಾಗುವುದು. ಅದಕ್ಕೆ ತಮಿಳುನಾಡು ಆಕ್ಷೇಪಿಸುವುದು ಸರಿಯಲ್ಲ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

'ನಾವು ತಮಿಳುನಾಡಿನ ನೀರು ಬಳಸಿಕೊಳ್ಳುತ್ತಿಲ್ಲ. ಅವರಿಗೆ ಕೊಡಬೇಕಾದ ನೀರನ್ನು ಕೊಡುತ್ತಿದ್ದೇವೆ. ಅವರಿಗೆ ಅಡ್ಡಿ ಮಾಡಿಲ್ಲ. ಆದರೆ, ನಮ್ಮ ಪಾಲಿನ ನೀರು ಬಳಸಿಕೊಳ್ಳಲು ಅವರು ಅಡ್ಡಿ ಮಾಡುತ್ತಿರುವುದು ಸರಿಯಲ್ಲ. ಬೆಂಗಳೂರಿನಲ್ಲಿ 30 ರಾಜ್ಯಗಳ ಜನರುಮತ್ತು ವಿದೇಶಿ ಪ್ರಜೆಗಳು ನೆಲೆಸಿದ್ದಾರೆ. ಸುಮಾರು 1.50 ಕೋಟಿ ಜನ ವಾಸವಿದ್ದಾರೆ. ಇವರಿಗೆ ನೀರು ಪೂರೈಕೆ ಮಾಡುವ ಯೋಜನೆಗೆ ಆಕ್ಷೇಪ ಸರಿಯಲ್ಲ' ಎಂದೂ ತಿಳಿಸಿದರು.

ಸರ್ವಪಕ್ಷ ನಿಯೋಗ ಕರೆದೊಯ್ಯಲಿ: ಡಿಕೆಶಿ

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ತ್ವರಿತವಾಗಿ ಅನುಮತಿ ಪಡೆಯಲು ಕೇಂದ್ರ ಸರ್ಕಾರವನ್ನು ಮನವೊಲಿಸಲು ರಾಜ್ಯ ಸರ್ಕಾರವು ಸರ್ವಪಕ್ಷಗಳ ಮುಖಂಡರ ನಿಯೋಗವನ್ನು ದೆಹಲಿಗೆ ಕರೆದೊಯ್ಯಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ತಮಿಳುನಾಡಿನ ಆಕ್ಷೇಪ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಮೇಕೆದಾಟು ಯೋಜನೆ ಅನುಷ್ಠಾನ ಮಾಡದಂತೆ ಸುಪ್ರೀಂ ಕೋರ್ಟ್ ಹೇಳಿಲ್ಲ. ಕೇಂದ್ರ ಸಚಿವರನ್ನು ಮನವೊಲಿಸಲು ನಿಮಗೆ ಸಾಧ್ಯವಾಗದಿದ್ದರೆ ನಾವು ಆ ಕೆಲಸವನ್ನು ಮಾಡುತ್ತೇವೆ. ಪ್ರಧಾನಿ ಬಳಿಗೆ ನಿಯೋಗ ಕರೆದೊಯ್ಯುವ ಕೆಲಸ ಮಾಡಿ' ಎಂದರು.

'ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಲಿ'

ಬೆಂಗಳೂರು: ಮೇಕೆದಾಟು ಯೋಜನೆಯನ್ನು ವಿರೋಧಿಸಲು ತಮಿಳುನಾಡು ಸರ್ಕಾರಕ್ಕೆ ಅವಕಾಶಗಳೇ ಇಲ್ಲ. ಈಗ ರಾಜ್ಯ ಸರ್ಕಾರ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿ ಯೋಜನೆಗೆ ಅಗತ್ಯವಿರುವ ಅನುಮತಿಗಳನ್ನು ಪಡೆಯುವ ಕೆಲಸ ಮಾಡಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಈಗಾಗಲೇ ಇತ್ಯರ್ಥವಾಗಿದೆ. ತಮಿಳುನಾಡು ಸರ್ಕಾರ ರಾಜಕೀಯ ಕಾರಣಕ್ಕಾಗಿ ಪತ್ರ ಬರೆಯುತ್ತಲೇ ಇರುತ್ತದೆ. ಅದನ್ನೇ ನೆಪ ಮಾಡಿಕೊಂಡು ನಮ್ಮ ಸರ್ಕಾರ ಕೈಕಟ್ಟಿ ಕುಳಿತುಕೊಳ್ಳಬಾರದು' ಎಂದರು.

ಬುಧವಾರ, ಜೂನ್ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 165 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
2024ರ ವೇಳೆಗೆ ಎಲ್ಲ ಸ್ಮಾರ್ಟ್‌ಫೋನ್‌ಗಳು, ಟ್ಯಾಬ್ಲೆಟ್‌ಗಳು, ಕ್ಯಾಮೆರಾಗಳಂಥವು ಯುಎಸ್‌ಬಿ ಸಿ ಟೈಪ್ ಚಾರ್ಜಿಂಗ್ ಪೋರ್ಟ್ ಅನ್ನೇ ಬಳಸಬೇಕೆಂಬ ಒಮ್ಮತಕ್ಕೆ ಉತ್ಪಾದನಾ ಕಂಪನಿಗಳು ಬಂದಿವೆ



ಸಾಲ, ಠೇವಣಿಗೆ ಬಡ್ಡಿ ಹೆಚ್ಚಿಸಿದ ಎಸ್‌ಬಿಐ 10
ಆಳ-ಅಗಲ ಅಣ್ವಸ್ತ್ರ ಪೈಪೋಟಿಯ ಆತಂಕ
ಇಂದೂ ವಿಚಾರಣೆಗೆ ಹಾಜರಾಗಲು ರಾಹುಲ್‌ಗೆ ಸೂಚನೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,693	15,732	₹52,450 (ಬೆಂಗಳೂರು)	₹61,800 (ಬೆಂಗಳೂರು)	78.04

ಸೇನಾ ನೇಮಕಾತಿ ನೀತಿ ಬದಲು • 4 ವರ್ಷಕ್ಕೆ ಗುತ್ತಿಗೆ ನೇಮಕ • ಯೋಜನೆಗೆ ಕೇಂದ್ರ ಒಪ್ಪಿಗೆ

ಸೇನೆಯ ತಾರುಣ್ಯಕ್ಕೆ ‘ಅಗ್ನಿಪಥ’

ನವದೆಹಲಿ (ಪಿಟಿಐ): ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಗೆ ಸೈನಿಕರ ನೇಮಕಕ್ಕಾಗಿ ‘ಅಗ್ನಿಪಥ’ ಎಂಬ ಯೋಜನೆಯನ್ನು ಸರ್ಕಾರ ಪ್ರಕಟಿಸಿದೆ. ಇದರೊಂದಿಗೆ ಸೈನಿಕರ ನೇಮಕಾತಿಯಲ್ಲಿ ಆಮೂಲಾಗ್ರ ಬದಲಾವಣೆ ಉಂಟಾಗಲಿದೆ. ಸೈನಿಕರ ಸಂಬಳ ಮತ್ತು ಪಿಂಚಣಿಯಿಂದಾಗಿ ಸರ್ಕಾರದ ಮೇಲೆ ಬಿದ್ದಿರುವ ಹೊರೆ ಕಡಿಮೆ ಮಾಡಿಕೊಳ್ಳುವುದು ಹಾಗೂ ಸಶಸ್ತ್ರ ಪಡೆಗಳು ಹೆಚ್ಚು ತಾರುಣ್ಯಯುತ-ವಾಗಿ ಇರುವಂತೆ ನೋಡಿಕೊಳ್ಳುವುದು ಹೊಸ ಯೋಜನೆಯ ಉದ್ದೇಶ ಎಂದು ಹೇಳಲಾಗಿದೆ.

ಪ್ರಧಾನಿ ನೇತೃತ್ವದ ಸಂಪುಟದ ಭದ್ರತಾ ಸಮಿತಿಯು ‘ಅಗ್ನಿಪಥ’ ಯೋಜನೆಗೆ ಮಂಗಳವಾರ ಅನುಮೋದನೆ ನೀಡಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಈ ಸಮಿತಿಯ ಸಭೆಯ ಬಳಿಕ ಮಾಧ್ಯಮಕ್ಕೆ ಮಾಹಿತಿ ನೀಡಿದರು. ದೇಶದಲ್ಲಿರುವ ‘ದೇಶಭಕ್ತ ಮತ್ತು ಸ್ಫೂರ್ತಿದಾಯಕ’ ಯುವ ಜನರಿಗೆ ದೇಶಕ್ಕಾಗಿ ನಾಲ್ಕು ವರ್ಷ ಸೇವೆ ಸಲ್ಲಿಸುವ ಅವಕಾಶವನ್ನು ಈ ಯೋಜನೆಯು ಒದಗಿಸಲಿದೆ ಎಂದು ರಾಜನಾಥ್ ಹೇಳಿದರು.

ಸೈನಿಕರ ನೇಮಕಾತಿಗೆ ಈ ವರೆಗೆ ಅನುಸರಿಸಿಕೊಂಡು ಬಂದ ವಿಧಾನವು ಇನ್ನು ಮುಂದೆ ಇರುವುದಿಲ್ಲ. ಹೊಸ ನೀತಿಯು 90 ದಿನಗಳೊಳಗೆ ಜಾರಿಗೆ ಬರಲಿದೆ. ಮೊದಲ ವರ್ಷದಲ್ಲಿ 46 ಸಾವಿರ ಯುವಜನರನ್ನು ನೇಮಕ ಮಾಡಿಕೊಳ್ಳಲಾಗುವುದು. 2023ರ ಜುಲೈ ಹೊತ್ತಿಗೆ ಮೊದಲ ತಂಡವು ಕರ್ತವ್ಯಕ್ಕೆ ಸೇರ್ಪಡೆಯಾಗಲಿದೆ.

ಅಗ್ನಿಪಥ ಯೋಜನೆ ಅಡಿಯಲ್ಲಿ ಸೇನೆಗೆ ಸೇರುವವರನ್ನು ‘ಅಗ್ನಿವೀರ’ ಎಂದು ಕರೆಯಲಾಗುವುದು. ನಾಲ್ಕು ವರ್ಷಗಳ ಸೇವೆಯ ಬಳಿಕ ಶಿಸ್ತುಬದ್ಧ, ಸ್ಫೂರ್ತಿದಾಯಕ ಮತ್ತು ಕುಶಲ ‘ಅಗ್ನಿ-ವೀರ’ರನ್ನು ಮರಳಿ ಸಮಾಜಕ್ಕೆ ಕಳು-ಹಿಸಲಾಗುವುದು. ಇವರು ಸಮಾಜದ ಆಸ್ತಿಯಾಗಿ ರೂಪುಗೊಳ್ಳಲಿದ್ದಾರೆ ಎಂದು ರಾಜನಾಥ್ ಹೇಳಿದ್ದಾರೆ.

ಮೂರೂ ಸೇನೆಯ ಮುಖ್ಯಸ್ಥರು ಮಾಧ್ಯಮಗೋಷ್ಠಿಯಲ್ಲಿ ಇದ್ದರು.

ನಾಲ್ಕು ವರ್ಷಗಳ ಕರ್ತವ್ಯದ ಬಳಿಕ, ಸೇನೆಯ ಅಗತ್ಯ ಮತ್ತು ಆಯಾ ಕಾಲಕ್ಕೆ ರೂಪಿಸಿಕೊಂಡ ನೀತಿಗಳಿಗೆ ಅನುಗುಣವಾಗಿ ಕಾಯಂ ನೇಮಕಾತಿಯಲ್ಲಿ ಭಾಗವಹಿಸುವ ಅವಕಾಶವನ್ನು ‘ಅಗ್ನಿವೀರ’ರಿಗೆ ನೀಡಲಾಗುವುದು. ನಾಲ್ಕು ವರ್ಷಗಳ ಕರ್ತವ್ಯ ನಿರ್ವಹಿಸಿದ ‘ಅಗ್ನಿವೀರ’ರಿಗೆ ವಿವಿಧ ರಾಜ್ಯಗಳ ಇಲಾಖೆಗಳು ಮತ್ತು ಖಾಸಗಿ ಕ್ಷೇತ್ರದಲ್ಲಿ ಅತ್ಯುತ್ತಮ ಉದ್ಯೋಗ ಅವಕಾಶಗಳು ತೆರೆದುಕೊ-ಳ್ಳಲಿವೆ ಎಂದು ರಾಜನಾಥ್ ಹೇಳಿದ್ದಾರೆ.

5ನೇ ಪುಟ ನೋಡಿ

ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಮಂಗಳವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದರು. ವಾಯುಪಡೆ ಮುಖ್ಯಸ್ಥ ವಿವೇಕ್ ರಾಮ್ ಚೌಧರಿ ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇದ್ದರು – ಎಎಫ್‌ಪಿ ಚಿತ್ರ

ಅರ್ಹತೆ ಏನು?

- ಹದಿನೇಳೂವರೆ ವರ್ಷದಿಂದ 21 ವರ್ಷದೊಳಗಿನವರು ಅರ್ಹರು
- ಸೈನಿಕರ ನೇಮಕಾತಿಗೆ ಇದ್ದ ದೈಹಿಕ, ವೈದ್ಯಕೀಯ ಮತ್ತು ವೃತ್ತಿಪರ ಮಾನದಂಡಗಳು ಅಗ್ನಿಪಥ ಯೋಜನೆಗೂ ಅನ್ವಯ

ವೇತನ

- ಮೊದಲ ವರ್ಷದಲ್ಲಿ ಪ್ರತೀ ತಿಂಗಳು ₹30 ಸಾವಿರ ವೇತನ. ಇದರಲ್ಲಿ ₹21 ಸಾವಿರ ಅಗ್ನಿವೀರರಿಗೆ ದೊರೆಯಲಿದೆ. ಉಳಿದ ₹9 ಸಾವಿರ ಸಂಚಿತ ನಿಧಿಗೆ ಹೋಗಲಿದೆ. ಇಷ್ಟೇ ಮೊತ್ತವನ್ನು ಸರ್ಕಾರವು ಸಂಚಿತ ನಿಧಿಗೆ ಸೇರಿಸಲಿದೆ
- ಎರಡನೇ ವರ್ಷ ₹33 ಸಾವಿರ, ಮೂರನೇ ವರ್ಷ ₹36,500 ಮತ್ತು ನಾಲ್ಕನೇ ವರ್ಷ ₹40 ಸಾವಿರ ವೇತನ
- ನಾಲ್ಕು ವರ್ಷಗಳ ಕರ್ತವ್ಯದ ಬಳಿಕ ₹11.71 ಲಕ್ಷದ ನಿಧಿಯು ಪ್ರತಿ ಅಗ್ನಿವೀರನಿಗೆ ದೊರೆಯಲಿದೆ. ಇದಕ್ಕೆ ಆದಾಯ ತೆರಿಗೆ ವಿನಾಯಿತಿ ಇದೆ
- ಗ್ರ್ಯಾಚ್ಯುಟಿ ಮತ್ತು ಪಿಂಚಣಿ ಸೌಲಭ್ಯಗಳು ಇಲ್ಲ
- ಸೇನೆಯಲ್ಲಿ ಇರುವ ಅವಧಿಗೆ ₹48 ಲಕ್ಷದ ವಿಮೆ ನೀಡಲಾಗುವುದು

10 ಲಕ್ಷ ಉದ್ಯೋಗ

ದೇಶದಲ್ಲಿ ಮುಂದಿನ ಒಂದೂವರೆ ವರ್ಷಗಳಲ್ಲಿ 10 ಲಕ್ಷ ಜನರಿಗೆ ತ್ವರಿತವಾಗಿ ಉದ್ಯೋಗ ಒದಗಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಇಲಾಖೆಗಳು ಮತ್ತು ಸಚಿವಾಲಯಗಳಿಗೆ ಸೂಚಿಸಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ವಿವರ 11

ಖಾಲಿ ಹುದ್ದೆಗಳ ಭರ್ತಿಗೆ ಕ್ರಮ

ಉನ್ನತ ಶಿಕ್ಷಣ ಸಂಸ್ಥೆಗಳು, ಕೇಂದ್ರೀಯ ವಿದ್ಯಾಲಯಗಳು ಮತ್ತು ಜವಾಹರ್ ನವೋದಯ ವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಮುಂದಿನ ಒಂದೂವರೆ ವರ್ಷಗಳಲ್ಲಿ ಭರ್ತಿ ಮಾಡುವುದಾಗಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಂಗಳವಾರ ತಿಳಿಸಿದ್ದಾರೆ.

ರೈಲ್ವೆ ಇಲಾಖೆ ಕೂಡ ಮುಂದಿನ ಒಂದು ವರ್ಷದಲ್ಲಿ 1,48,463 ಜನರನ್ನು ನೇಮಕ ಮಾಡಿಕೊಳ್ಳುವುದಾಗಿ ಪ್ರಕಟಿಸಿದೆ. ಎಂಟು ವರ್ಷಗಳಲ್ಲಿ ವಾರ್ಷಿಕ ಸರಾಸರಿ 43,678 ಜನರ ನೇಮಕ ಆಗಿದೆ. ಪ್ರಧಾನಿ ಸೂಚನೆಯಂತೆ ಹೆಚ್ಚಿನ ಹುದ್ದೆಗಳ ಭರ್ತಿ ಮಾಡಲಾಗುತ್ತಿದೆ ಎಂದು ಇಲಾಖೆ ಹೇಳಿದೆ.

ಮನೆಗಳ ನೆಲಸಮ ವಿರುದ್ಧ ಕ್ರಮಕ್ಕೆ ಸಿಜೆಐಗೆ ಪತ್ರ

ನವದೆಹಲಿ (ಪಿಟಿಐ): ಬಿಜೆಪಿಯ ಮಾಜಿ ವಕ್ತಾರರು ಪ್ರವಾದಿ ಬಗ್ಗೆ ನೀಡಿದ್ದ ‘ಅವಹೇಳನಕಾರಿ’ ಹೇಳಿಕೆ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಕ್ರಮ ಜರುಗಿಸಿರುವುದಕ್ಕೆ ಸಂಬಂಧಿಸಿ ಸ್ವಯಂ ಪ್ರೇರಣೆಯಿಂದ ದೂರು ದಾಖಲಿಸಿಕೊಂಡು ವಿಚಾರಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್. ವಿ. ರಮಣ ಅವರಿಗೆ ನಿವೃತ್ತ ನ್ಯಾಯಮೂರ್ತಿಗಳು ಮತ್ತು ಹಿರಿಯ ವಕೀಲರು ಪತ್ರ ಬರೆದಿದ್ದಾರೆ. ಅಕ್ರಮ ಬಂಧನ ಮತ್ತು ಮನೆಗಳ ನೆಲಸಮದ ವಿಚಾರವನ್ನೂ ಪತ್ರದಲ್ಲಿ ಉಲ್ಲೇಖಿಸ-ಲಾಗಿದೆ.

‘ಸರ್ಕಾರದ ಪ್ರಾಧಿಕಾರಗ-ಳಿಂದ ಉತ್ತರ ಪ್ರದೇಶದ ಜನರ ಮೇಲೆ ನಡೆದ ಹಿಂಸೆ ಮತ್ತು ದಮನದ ಬಗ್ಗೆ ಸುಪ್ರೀಂ ಕೋರ್ಟ್ ತನಿಖೆ ನಡೆಸಬೇಕು ಎಂಬುದು ನಮ್ಮ ತುರ್ತು ಮನವಿಯಾಗಿದೆ’ ಎಂದು ಪತ್ರದಲ್ಲಿ ಹೇಳಲಾಗಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ಬಿ.ಸುದರ್ಶನ ರೆಡ್ಡಿ, ವಿ. ಗೋಪಾಲಗೌಡ ಮತ್ತು ಎ.ಕೆ. ಗಂಗೂಲಿ, ದೆಹಲಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎ.ಪಿ. ಶಾ, ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ಚಂದ್ರು, ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮಹಮ್ಮದ್ ಅನ್ವರ್ ಅವರು ಪತ್ರಕ್ಕೆ ಸಹಿ ಹಾಕಿದ್ದಾರೆ.

7ನೇ ಪುಟ ನೋಡಿ

ಪರಿಷತ್: ಇಂದು ಮತ ಎಣಿಕೆ

ಬೆಂಗಳೂರು: ವಿಧಾನ ಪರಿಷತ್‌ನ ವಾಯವ್ಯ ಮತ್ತು ದಕ್ಷಿಣ ಪದವೀಧರರ ಕ್ಷೇತ್ರಗಳು ಹಾಗೂ ವಾಯವ್ಯ ಮತ್ತು ಪಶ್ಚಿಮ ಶಿಕ್ಷಕರ ಕ್ಷೇತ್ರಗಳಿಗೆ ಸೋಮವಾರ ನಡೆದ ಚುನಾವಣೆಯ ಮತಗಳ ಎಣಿಕೆ ಬುಧವಾರ ಬೆಳಿಗ್ಗೆ 8ಕ್ಕೆ ಆರಂಭವಾಗಲಿದೆ.

ಇದಕ್ಕಾಗಿ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಚುನಾವಣಾ ಆಯೋಗ ಮಾಡಿಕೊಂಡಿದೆ.

ಎಣಿಕೆ ಕೇಂದ್ರಗಳ ಸುತ್ತಮುತ್ತ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಮತಪತ್ರದಲ್ಲಿ ಚುನಾವಣೆ ನಡೆದಿದೆ. ಜತೆಗೆ ಪ್ರಾಶಸ್ತ್ಯದ ಮತಗಳನ್ನೂ ಎಣಿಕೆ ಮಾಡಬೇಕಾಗಿರುವುದರಿಂದ ಬುಧವಾರ ತಡರಾತ್ರಿ ಹೊತ್ತಿಗೆ ಪೂರ್ಣ ಫಲಿತಾಂಶ ಪ್ರಕಟವಾಗುವ ಸಾಧ್ಯತೆ ಇದೆ.

ಒಳ ಪುಟಗಳು

- ಪಠ್ಯ ಪರಿಷ್ಕರಣೆ: ಇಲಾಖೆಗೆ ಲೇಖಕರ ಪತ್ರ 7
- ರಾಷ್ಟ್ರಪತಿ ಚುನಾವಣೆ: ಇಂದು ಪ್ರತಿಪಕ್ಷಗಳ ಸಭೆ 11

ಲೋಕಾಯುಕ್ತರಾಗಿ ನ್ಯಾ.ಬಿ.ಎಸ್.ಪಾಟೀಲ

ಬೆಂಗಳೂರು: ಹಾಲಿ ಉಪ ಲೋಕಾ-ಯುಕ್ತರಾಗಿರುವ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರನ್ನು ರಾಜ್ಯದ ನೂತನ ಲೋಕಾಯುಕ್ತರ-ನ್ನಾಗಿ ನೇಮಕ ಮಾಡಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ 2022ರ ಜನವರಿ 27ರಂದು ನಿವೃತ್ತರಾ-ಗಿದ್ದರು. ಅಂದಿನಿಂದ ಈ ಹುದ್ದೆ ಖಾಲಿ ಇತ್ತು. ಈ ಹುದ್ದೆಗೆ ಬಿ.ಎಸ್. ಪಾಟೀಲ ಅವರನ್ನು ನೇಮಕ ಮಾಡಲಾಗಿದೆ. ಪಾಟೀಲ 2019ರ ನವೆಂಬರ್‌ನಿಂದ ಉಪ ಲೋಕಾಯುಕ್ತರಾಗಿ ಕಾರ್ಯನಿ-ರ್ವಹಿಸುತ್ತಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ, ವಿಧಾನಸಭೆ ಮತ್ತು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರ ಜತೆ ಸಮಾಲೋಚಿಸಿದ ಬಳಿಕ ಬಿ.ಎಸ್. ಪಾಟೀಲ ಅವರ ಹೆಸರನ್ನು ಲೋಕಾಯುಕ್ತರ ಹುದ್ದೆಗೆ ಶಿಫಾರಸು ಮಾಡಿದ್ದರು. ಅದರಂತೆ ರಾಜ್ಯಪಾಲರು ನೇಮಕಾತಿ ಆದೇಶ ಹೊರಡಿಸಿದ್ದಾರೆ.

ರಾಜಭವನದ ಗಾಜಿನ ಮನೆಯಲ್ಲಿ ಬುಧವಾರ ಬೆಳಿಗ್ಗೆ 9.45ಕ್ಕೆ ನಡೆಯುವ ಸಮಾರಂಭದಲ್ಲಿ ರಾಜ್ಯಪಾಲರು ನೂತನ ಲೋಕಾಯುಕ್ತರಿಗೆ ಪ್ರಮಾಣವಚನ ಬೋಧಿಸುವರು.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆ • ಕಬ್ಬನ್ ಪಾರ್ಕ್ ಮಾದರಿಯಲ್ಲಿ ಉದ್ಯಾನ ಅಭಿವೃದ್ಧಿಗೆ ಸಲಹೆ

ರೇಸ್ ಕೋರ್ಸ್, ಗಾಲ್ಫ್ ಕ್ಲಬ್ ಸ್ಥಳಾಂತರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ರೇಸ್ ಕೋರ್ಸ್ ಮತ್ತು ಗಾಲ್ಫ್ ಕ್ಲಬ್‌ಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಬೇಕು ರೇಸ್‌ಕೋರ್ಸ್ ಜಾಗದಲ್ಲಿ ಕಬ್ಬನ್‌ಪಾರ್ಕ್ ಮಾದರಿಯ ಉದ್ಯಾನವನ ಹಾಗೂ ಗಾಲ್ಫ್ ಕ್ಲಬ್ ಪ್ರದೇಶದಲ್ಲಿ ಮರಗಳ ಉದ್ಯಾನ ಅಭಿವೃದ್ಧಿಪಡಿಸಬೇಕು ಎಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸರ್ಕಾರಕ್ಕೆ ಸೂಚಿಸಿದೆ.

ಸಮಿತಿಯ ಅಧ್ಯಕ್ಷ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ, 'ಸರ್ಕಾರವು ಸಾರ್ವಜನಿಕರ ಹಿತಾಸಕ್ತಿಯಿಂದ ಆದಷ್ಟು ಬೇಗ ಸ್ಥಳಾಂತರದ ನಿರ್ಣಯ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಲಾಯಿತು.

ಬೆಂಗಳೂರು ಟರ್ಫ್ ಕ್ಲಬ್‌ಗೆ ಕುದುರೆ ರೇಸ್ ನಡೆಸಲು ನೀಡಿದ್ದ ಲೀಸ್ ಅವಧಿ ಮುಗಿದ ತಕ್ಷಣ ನಗರದ ಹೊರ ವಲಯಕ್ಕೆ ಸ್ಥಳಾಂತರಿಸುವಂತೆ 2009ರಲ್ಲಿ ರಾಜ್ಯ ಸರ್ಕಾರ ನೋಟಿಸ್ ನೀಡಿತ್ತು. ಟರ್ಫ್ ಕ್ಲಬ್ ನೋಟಿಸ್ ವಿರುದ್ಧ ಹೈಕೋರ್ಟ್‌ಗೆ ಮೊರೆ ಹೋಯಿತು. ಅಲ್ಲಿ ಸರ್ಕಾರದ ಪರವಾಗಿ ತೀರ್ಪು ಬಂದಿತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಹೋದಾಗ ಅಂದಿನ ಅಡ್ವೊಕೇಟ್ ಜನರಲ್ ಅವರು ಅಂತಿಮ ತೀರ್ಮಾನ ಆಗುವವರೆಗೆ ಯಥಾಸ್ಥಿತಿ ಕಾಪಾಡಲು ಮನವಿ ಮಾಡಿದರು. ಕೋರ್ಟ್ ಕೂಡಾ ಅಂತಿಮ ತೀರ್ಮಾನ ಆಗುವವರೆಗೆ ಯಥಾಸ್ಥಿತಿ ಕಾಪಾಡಲು ಆದೇಶ ನೀಡಿತು.

ಇದೆಲ್ಲಾ ಆಗಿ ಬಹಳ ವರ್ಷ ಕಳೆದರೂ ಸರ್ಕಾರ ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ. ಅಲ್ಲದೆ, ಸರ್ಕಾರಕ್ಕೆ ಪಾವತಿಸುತ್ತಿರುವ ಬಾಡಿಗೆ ವರ್ಷಕ್ಕೆ ₹24 ಲಕ್ಷ ಮಾತ್ರ. ಇದು ಅತಿ ಕಡಿಮೆ ಬಾಡಿಗೆಯಾಗಿದ್ದು, ಈಗಿನ ದಿನಮಾನಕ್ಕೆ ಅನುಗುಣವಾಗಿ ಬಾಡಿಗೆ ಪಡೆದರೆ ಕಳೆದ 10 ವರ್ಷಗಳಿಗೆ ₹85 ಕೋಟಿ ನೀಡಬೇಕಾಗುತ್ತದೆ. ಸರ್ಕಾರಕ್ಕೆ ನೂರಾರು ಕೋಟಿ ನಷ್ಟವಾಗಿದೆ ಎಂಬ ಅಭಿಪ್ರಾಯವೂ ಸಭೆಯಲ್ಲಿ ವ್ಯಕ್ತವಾಯಿತು ಎಂದು ಮೂಲಗಳು ತಿಳಿಸಿವೆ.

ಕುದುರೆ ರೇಸ್ ಕ್ರೀಡೆ ಅಲ್ಲ, ಜೂಜು ಆಗಿರುವುದರಿಂದ, ಈಗಿರುವ ಸ್ಥಳದಲ್ಲಿ ಮುಂದುವರಿಸಲು ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು. ಜೂಜಿಗೆ ಸರ್ಕಾರ ಪ್ರೋತ್ಸಾಹ ನೀಡಬಾರದು. ಇದನ್ನು ರದ್ದು ಮಾಡಬೇಕು ಎನ್ನುವುದು ಸರಿಯಲ್ಲ. ನಗರದ ಹೊರ ವಲಯದಲ್ಲಿ ನಡೆಸುವುದು ಸೂಕ್ತ. ಅವರಿಗೆ ಎಲ್ಲಿ ಜಾಗ ಕೊಡಬೇಕು ಎಂಬುದು ಸರ್ಕಾರದ ವಿವೇಚನೆಗೆ ಬಿಟ್ಟಿದ್ದು. ಹೃದಯ ಭಾಗದಲ್ಲಿರುವ ಈ ಜಾಗದಲ್ಲಿ ಕಬ್ಬನ್ ಪಾರ್ಕ್ ಅಥವಾ ಲಾಲ್‌ಬಾಗ್ ಮಾದರಿಯಲ್ಲಿ ಉದ್ಯಾನವನವನ್ನು ಅಭಿವೃದ್ಧಿಪಡಿಸಬೇಕು ಎಂಬ ಒಮ್ಮತದ ಅಭಿಪ್ರಾಯ ವ್ಯಕ್ತವಾಯಿತು.

ಗಾಲ್ಫ್ ಕ್ಲಬ್ ಜಾಗದಲ್ಲಿ 'ಟ್ರೀ ಪಾರ್ಕ್'

ಗಾಲ್ಫ್ ಕ್ಲಬ್ ಲೀಸ್ ಅವಧಿ 2021ರಲ್ಲೇ ಮುಗಿದಿದ್ದು, ಅದನ್ನು ಸ್ಥಳಾಂತರ ಮಾಡಬೇಕು. ಬೆರಳೆಣಿಕೆಯ ರಾಜಕಾರಣಿಗಳು, ಅಧಿಕಾರಿಗಳ ಮನರಂಜನೆಯ ಆಟಕ್ಕಾಗಿ ಇಷ್ಟು ದೊಡ್ಡ ಜಾಗ ಬಿಟ್ಟುಕೊಡುವುದು ಸರಿಯಲ್ಲ. ಇಲ್ಲಿ ಟ್ರೀ ಪಾರ್ಕ್ (ಮರಗಳ ಉದ್ಯಾನ) ಅಭಿವೃದ್ಧಿಪಡಿಸಬೇಕು ಎಂಬ ಸಲಹೆಯನ್ನು ಅಧಿಕಾರಿಗಳಿಗೆ ನೀಡಲಾಯಿತು.

ಗಾಲ್ಫ್ ಕ್ಲಬ್‌ಗೆ ಬರುತ್ತಿರುವ ಬಾಡಿಗೆ ಅತಿ ಕಡಿಮೆ ಇದ್ದು, ಸೂಕ್ತ ಬಾಡಿಗೆಯನ್ನು ಪಡೆಯುತ್ತಿದ್ದರೆ ₹302 ಕೋಟಿ ಬಾಡಿಗೆ ವಸೂಲಿ ಮಾಡಬೇಕಾಗಿತ್ತು. ಸರ್ಕಾರಕ್ಕೆ ಆದಾಯದಲ್ಲೂ ನಷ್ಟವಾಗಿದೆ ಆದ್ದರಿಂದ ಗುತ್ತಿಗೆಯನ್ನು ನವೀಕರಿಸದೇ ಸ್ಥಳಾಂತರ ಮಾಡಬೇಕು ಎಂದೂ ಅಧಿಕಾರಿಗಳಿಗೆ ಸೂಚಿಸಲಾಯಿತು.

'ಸ್ಥಳೀಯರಿಗೆ ಟಿಕೆಟ್ ಕೊಡಿ'

ಕೆ.ಆರ್.ಪುರ: ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಸ್ಥಳೀಯರಿಗೆ ಕಾಂಗ್ರೆಸ್ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಎಪಿಎಂಸಿ ಸದಸ್ಯ ವೆಂಕಟರಾಮಯ್ಯ ಒತ್ತಾಯಿಸಿದರು.

ಬೆಳತೂರಿನಲ್ಲಿ ನಡೆದ ಮಹದೇವಪುರ ವಿಧಾನಸಭಾ ಕ್ಷೇತ್ರದ ಎಸ್ಸಿ, ಎಸ್ಟಿ ಪಂಗಡದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

'ಹಿಂದಿನ ವಿಧಾನಸಭಾ ಚುನಾವಣೆಗಳಲ್ಲಿ ಸ್ಥಳೀಯರನ್ನು ಕಡೆಗಣಿಸಿ ಹೊರಗಿನವರಿಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಗೆಲ್ಲಲು ಸಾಧ್ಯವಾಗಿಲ್ಲ. ಬೇರೆ ಕ್ಷೇತ್ರದಿಂದ ಬಂದ ಅಭ್ಯರ್ಥಿಗಳಿಗೆ ಮಣೆ ಹಾಕಿದ್ದರಿಂದ ಮೂರು ಬಾರಿ ಸೋಲು ಅನುಭವಿಸಿದ್ದೇವೆ' ಎಂದರು.

ಮನು ಸಂಸ್ಕೃತಿ ಜಾರಿಯ ಮುನ್ಸೂಚನೆ • ರಾಜೀನಾಮೆಗೆ ಒತ್ತಾಯ

ಸಚಿವ ನಾಗೇಶ್ ವಿರುದ್ಧ ದೋಷಾರೋಪ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಕ್ಕಳ ಭವಿಷ್ಯವನ್ನು ಅತಂತ್ರಗೊಳಿಸಿದ್ದಾರೆ ಎಂದು ಆರೋಪಿಸಿರುವ 'ಬಹುತ್ವ ಕರ್ನಾಟಕ' ಸಂಘಟನೆಯು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಿರುದ್ಧ ಜನರ ದೋಷಾರೋಪ ಪಟ್ಟಿ ಬಿಡುಗಡೆಗೊಳಿಸಿ, ಅವರ ರಾಜೀನಾಮೆಗೆ ಒತ್ತಾಯಿಸಿದೆ.

'ಅವೈಜ್ಞಾನಿಕ ಜಾತಿವಾದಿ ಪಠ್ಯ ಪುಸ್ತಕ ಪರಿಷ್ಕರಣೆ, ಶಿಕ್ಷಣ ಹಕ್ಕು ಕಾಯ್ದೆ ಸೆಕ್ಷನ್ 29 ಉಲ್ಲಂಘನೆ, ಸಾಂವಿಧಾನಿಕ ಮೌಲ್ಯಗಳಿಗೆ ಅನುಗುಣವಾಗಿ ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ಕಾಯ್ದೆಯನ್ನು ಪಾಲಿಸದೇ ಪಠ್ಯವನ್ನು ಪರಿಷ್ಕರಣೆ ಮಾಡಿರುವುದು ಖಂಡನೀಯ' ಎಂದು ಅಭಿವೃದ್ಧಿ ಶಿಕ್ಷಣ ತಜ್ಞ ಡಾ.ನಿರಂಜನಾರಾಧ್ಯ ವಿ.ಪಿ. ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಬಹುತ್ವ ಕರ್ನಾಟಕ'ದ ಪ್ರಮುಖರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಸಚಿವ ನಾಗೇಶ್ ವಿರುದ್ಧದ ಜನ ದೋಷಾರೋಪ ಪಟ್ಟಿ ಬಿಡುಗಡೆಗೊಳಿಸಿದರು.

'ಪಠ್ಯಕ್ರಮ ಚೌಕಟ್ಟು ಅಡಿಯಲ್ಲಿ ಭಾರತವು ಹಲವಾರು ಪ್ರಾದೇಶಿಕ ಮತ್ತು ಸ್ಥಳೀಯ ಸಂಸ್ಕೃತಿಗಳಿಂದ ಬೆಸೆಯಲಾದ ಬಹು ಸಂಸ್ಕೃತಿ ಸಮಾಜವಾಗಿದೆ. ಶಿಕ್ಷಣ ವ್ಯವಸ್ಥೆಯು ಸಾಂಸ್ಕೃತಿಕ ಬಹುತ್ವಕ್ಕೆ ತಕ್ಕನಾಗಿರಬೇಕು ಎಂದು ಆ ಚೌಕಟ್ಟು ಸ್ಪಷ್ಟವಾಗಿ ಹೇಳಿದೆ' ಎಂದರು.

'ಪಿ.ಲಂಕೇಶ್, ಸಾ.ರಾ. ಅಬೂಬಕರ್ ಅವರ ಪಠ್ಯಗಳನ್ನು ಕೈಬಿಟ್ಟಿರುವುದು ಸರಿಯಲ್ಲ. ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಬಸವಣ್ಣ ಅವರಿಗೆ ಸಂಬಂಧಿಸಿದ ಐತಿಹಾಸಿಕ ಸಂಗತಿಗಳನ್ನು ತಿರುಚುವ ಮೂಲಕ ಪಠ್ಯ ಪರಿಷ್ಕರಣೆ ಪ್ರಕ್ರಿಯೆ ಎನ್‌ಸಿಎಫ್ ಮತ್ತು ಆರ್‌ಟಿಇ ಕಾಯ್ದೆಗಳ ಉಲ್ಲಂಘನೆಯಾಗಿದೆ. ಯಾವುದೇ ಆದೇಶವಿಲ್ಲದೇ ಪಠ್ಯ ಪರಿಷ್ಕರಣೆ ಮಾಡಿರುವುದು 'ಮನು ಸಂಸ್ಕೃತಿ ಜಾರಿಯ ಮುನ್ಸೂಚನೆ' ಮತ್ತು ಸಂವಿಧಾನಕ್ಕೆ ಎಸಗಿದ ಅಪಚಾರ' ಎಂದು ಯೋಗಾನಂದ ಆರೋಪಿಸಿದರು.

ಪರಿಷ್ಕೃತ ಪಠ್ಯ ಪುಸ್ತಕಗಳನ್ನು ಹಿಂಪಡೆದುಕೊಂಡು ಬರಗೂರು ರಾಮಚಂದ್ರಪ್ಪ ಪರಿಷ್ಕರಿಸಿದ ಪಠ್ಯ ಪುಸ್ತಕಗಳನ್ನು ವಿತರಣೆ ಮಾಡಬೇಕು. ಕೂಡಲೇ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ ಶಾಸಕ ಸ್ಥಾನದಿಂದ ಅಮಾನ್ಯಗೊಳಿಸಬೇಕು ಎಂದು ಆಗ್ರಹಿಸಿದರು.

ಬರಗೂರು ರಾಮಚಂದ್ರಪ್ಪ ನೇತೃತ್ವದ ಪಠ್ಯ ಪರಿಷ್ಕರಣೆ ಸಮಿತಿಯ ಸದಸ್ಯೆ ಡಾ.ಪ್ರಜ್ವಲ್ ಶಾಸ್ತ್ರಿ ಇದ್ದರು.

ಸುದ್ದಿ 2 ನಿಮಿಷ

ಸಂಸ್ಕೃತ ವಿವಿಯಲ್ಲಿ ಅಕ್ರಮ, ನಿಯಮ ಉಲ್ಲಂಘನೆ: ಅಭ್ಯರ್ಥಿ ಆರೋಪ

ಬೆಂಗಳೂರು: 'ಉನ್ನತ ಶಿಕ್ಷಣ ಇಲಾಖೆ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಗಾಳಿಗೆ ತೂರುತ್ತಿದ್ದು, ಈ ವಿಶ್ವವಿದ್ಯಾಲಯದಲ್ಲಿ ಭಾರಿ ಅಕ್ರಮಗಳು ನಡೆಯುತ್ತಿವೆ' ಎಂದು ವಿಶ್ವವಿದ್ಯಾಲಯದ ಎಂಎ ವ್ಯಾಕರಣ ವಿಭಾಗದ ಅಭ್ಯರ್ಥಿ ಪಿ.ಆರ್. ಅನಂತ ಖಾಜಾಲ್ ದೂರಿದ್ದಾರೆ. 'ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರಿಗೆ ದಾಖಲೆ, ಸಾಕ್ಷ್ಯಗಳ ಸಹಿತ ದೂರು ನೀಡಿದರೂ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ' ಎಂದು ಅವರು ಆರೋಪಿಸಿದ್ದಾರೆ.

'ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ 2019ರ ಡಿಸೆಂಬರ್‌ನಿಂದಲೂ ದೂರುಗಳನ್ನು ನೀಡುತ್ತಲೇ ಬಂದಿದ್ದೇನೆ. ವಿಶ್ವವಿದ್ಯಾಲಯ ತೆಗೆದುಕೊಂಡ ಕ್ರಮದ ಪ್ರತಿಯನ್ನು ಕೋರಿ ಸಲ್ಲಿಸಿದ್ದ ಆರ್‌ಟಿಐ ಅರ್ಜಿಯ ಮೇಲ್ಮನವಿಗೆ ಯಾವುದೇ ಉತ್ತರವನ್ನು ಈವರೆಗೆ ಕೊಟ್ಟಿಲ್ಲ. ನಿಯಮ ಉಲ್ಲಂಘನೆ, ಅಕ್ರಮ ನಡೆಯುತ್ತಿರುವುದು ನಿಜ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಒಪ್ಪಿಕೊಂಡರೂ, ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ವಿಶ್ವವಿದ್ಯಾಲಯದ ಕುಲಪತಿ ಅವರನ್ನು ಸಂಪರ್ಕಿಸಿದರೆ ಅವರು ಕರೆ ಸ್ವೀಕರಿಸಲಿಲ್ಲ.

'ಕೆಎಸ್‌ಟಿಡಿಸಿ ಗುತ್ತಿಗೆ ಕಾರ್ಮಿಕರ ಕಾಯಂಗೆ ಪ್ರಯತ್ನ'

ಬೆಂಗಳೂರು: 'ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ (ಕೆ.ಎಸ್.ಟಿ.ಡಿ.ಸಿ) ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಲು ಪ್ರಯತ್ನಿಸಲಾಗುವುದು' ಎಂದು ನಿಗಮದ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ ಭರವಸೆ ನೀಡಿದರು.

ಯಶವಂತಪುರದಲ್ಲಿರುವ ನಿಗಮದ ಕಚೇರಿಯಲ್ಲಿ ಮಂಗಳವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ 131ನೇ ಜಯಂತ್ಯುತ್ಸವದಲ್ಲಿ ಮಾತನಾಡಿ, 'ನಿಗಮದ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಈ ಸಂಬಂಧ ಚರ್ಚಿಸಿ ಬೇಡಿಕೆ ಈಡೇರಿಸಲು ಪ್ರಯತ್ನಿಸುತ್ತೇನೆ. 'ಶ್ರದ್ಧೆಯಿಂದ ಕೆಲಸ ನಿರ್ವಹಿಸಿದರೆ, ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಲಿದೆ' ಎಂದರು.

ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸ್, ನಿಗಮದ ನಿವೃತ್ತ ಹಿರಿಯ ವ್ಯವಸ್ಥಾಪಕ ಎಚ್. ಲಕ್ಷ್ಮೀಪತಿ, ನಿವೃತ್ತ ವ್ಯವಸ್ಥಾಪಕ ಅರೆ ತಿಮ್ಮಯ್ಯ, ನಿವೃತ್ತ ನೌಕರ ಎಸ್. ಜಿ.ಮಾಣಿ ಅವರನ್ನು ಸನ್ಮಾನಿಸಲಾಯಿತು. ಯಶ್ವಂತ್‌ರಾಜ್ ಶಿವಕೆರೆ ಹಾಜರಿದ್ದರು.

ಬೈಕ್ ಟ್ಯಾಕ್ಸಿ: ರ‍್ಯಾಪಿಡೊ ಆರೋಪ ನಿರಾಕರಿಸಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಟ್ಯಾಕ್ಸಿಗಳಿಗೆ ಪರವಾನಗಿ ನೀಡುವ ಕುರಿತಂತೆ ಯಾವುದೇ ಬಲವಂತದ ಕ್ರಮ ಕೈಗೊಳ್ಳುವಂತಿಲ್ಲ ಎಂಬ ಹೈಕೋರ್ಟ್ ಮಧ್ಯಂತರ ಆದೇಶ ಉಲ್ಲಂಘನೆ ಮಾಡಲಾಗಿದೆ ಎಂಬ ಖಾಸಗಿ ಕಂಪನಿಯ ಆರೋಪವನ್ನು ಸರ್ಕಾರ ಹೈಕೋರ್ಟ್‌ನಲ್ಲಿ ಬಲವಾಗಿ ತಳ್ಳಿಹಾಕಿದೆ.

ಬೈಕ್ ಟ್ಯಾಕ್ಸಿ ನಿರ್ವಹಣೆಯ 'ರ‍್ಯಾಪಿಡೊ' (ರೊಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವಿಸಸ್ ಪ್ರೈವೆಟ್ ಲಿಮಿಟೆಡ್) ಕಂಪನಿ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಕಂಪನಿ ಪರ ವಕೀಲರು, 'ಏಕಸದಸ್ಯ ನ್ಯಾಯಪೀಠವು 2021ರ ಆಗಸ್ಟ್‌ನಲ್ಲಿ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ನೀಡಿದ್ದ ಮಧ್ಯಂತರ ಆದೇಶವನ್ನು ಉಲ್ಲಂಘಿಸಿ ಸರ್ಕಾರಿ ಅಧಿಕಾರಿಗಳು ರ‍್ಯಾಪಿಡೊ ಕಂಪನಿಯ ವಾಹನಗಳನ್ನು ವಶಪಡಿಸಿಕೊಳ್ಳುತ್ತಿದ್ದಾರೆ' ಎಂದು ಆರೋಪಿಸಿದರು.

ಇದನ್ನು ಬಲವಾಗಿ ತಳ್ಳಿಹಾಕಿದ ಸರ್ಕಾರಿ ವಕೀಲರು, 'ಸರ್ಕಾರ ಇನ್ನೂ ಬೈಕ್ ಟ್ಯಾಕ್ಸಿ ಓಡಿಸುವ ಕುರಿತಂತೆ ಪರವಾನಗಿ ನಿಯಮಗಳನ್ನು ರೂಪಿಸಿಲ್ಲ. ಹೀಗಾಗಿ, ಕಂಪನಿಯು ಏಕಸದಸ್ಯ ನ್ಯಾಯಪೀಠದ ಮಧ್ಯಂತರ ಆದೇಶವನ್ನೇ ಪರವಾನಗಿ ಎಂದು ಪರಿಗಣಿಸಿ ಕಾರ್ಯ ನಿರ್ವಹಿಸುತ್ತಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡುವುದಾಗಿ ತಿಳಿಸಿ ಅಷ್ಟರೊಳಗೆ ಸರ್ಕಾರ ತನ್ನ ಲಿಖಿತ ಆಕ್ಷೇಪಣೆ ಸಲ್ಲಿಸಬೇಕು ಎಂದು ಸೂಚಿಸಿತು.

ಪ್ರಕರಣವೇನು?: ಕಳೆದ ವರ್ಷ ಕಂಪನಿಯು ಕರ್ನಾಟಕ ಎಲೆಕ್ಟ್ರಿಸಿಟಿ ಬೈಕ್ ಟ್ಯಾಕ್ಸಿ (ಕೆಇಬಿಟಿ) ಯೋಜನೆ–2021ರ ಅಡಿಯಲ್ಲಿ ಬೈಕ್ ಟ್ಯಾಕ್ಸಿಗೆ ಅನುಮತಿ ಕೋರಿದ್ದಾಗ ಅದನ್ನು ಸಾರಿಗೆ ಆಯುಕ್ತರು ತಿರಸ್ಕರಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ್ದ ನ್ಯಾಯಪೀಠ, 'ಕಂಪನಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಮಧ್ಯಂತರ ಆದೇಶ ಹೊರಡಿಸಿತ್ತು.

ಜಿಗಣಿಯಲ್ಲಿ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: 'ಶಾಂತಿಯುತ ಪ್ರತಿಭಟನೆ ಮಾಡುತ್ತಿದ್ದ ರಾಜ್ಯ ಕಾಂಗ್ರೆಸ್ ನಾಯಕರನ್ನು ಬಂಧಿಸಿರುವ ಕ್ರಮ ಸರಿಯಲ್ಲ' ಎಂದು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಆಕ್ರೋಶ ವ್ಯಕ್ತಪಡಿಸಿದರು.

ಜಿಗಣಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಪ್ರತಿಭಟನೆಯಲ್ಲಿ, 'ಹೋರಾಟಗಳನ್ನು ಹತ್ತಿಕ್ಕುವ ಮೂಲಕ ವಿರೋಧ ಪಕ್ಷಗಳನ್ನು ತನಿಖಾ ಸಂಸ್ಥೆಗಳ ಮೂಲಕ ಮಣಿಸಲು ಬಿಜೆಪಿ ಹೊರಟಿದೆ' ಎಂದರು. ಕಾಂಗ್ರೆಸ್ ಮುಖಂಡ ರಾಜಗೋಪಾಲ ರೆಡ್ಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಮುಖಂಡರಾದ ಪ್ರಸನ್ನಕುಮಾರ್, ಅಚ್ಯುತ್‌ರಾಜ್, ನರೇಂದ್ರ ಬಾಬು, ನವೀನ್, ನಟರಾಜ್, ಎಸ್.ಎಲ್.ವಿ. ಪ್ರಭಾಕರ್, ಪುರಸಭಾ ಸದಸ್ಯ ಆನಂದ್‌ಗೌಡ ಇದ್ದರು.

ರಾಜ್ಯದಲ್ಲಿ ಡೆಂಗಿ ಪ್ರಕರಣ ಏರಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಈ ತಿಂಗಳು 2,866 ಡೆಂಗಿ ಶಂಕಿತರ ಗುರುತು
- 27 ಜಿಲ್ಲೆಗಳಲ್ಲಿ ಚಿಕೂನ್ ಗುನ್ಯಾ ಪ್ರಕರಣ ಪತ್ತೆ

ಬೆಂಗಳೂರು: ಅಕಾಲಿಕ ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಜ್ವರಕ್ಕೆ ಒಳಪಡುವವರ ಸಂಖ್ಯೆ ಏರಿಕೆ ಕಂಡಿದ್ದು, ಈ ತಿಂಗಳು 2,886 ಡೆಂಗಿ ಶಂಕಿತರನ್ನು ಗುರುತಿಸಲಾಗಿದೆ. ಅವರಲ್ಲಿ 146 ಮಂದಿ ಡೆಂಗಿ ಪೀಡಿತರಾಗಿರುವುದು ದೃಢಪಟ್ಟಿದೆ.

ಈವರೆಗೆ ಡೆಂಗಿ ಜ್ವರಕ್ಕೆ ಒಳಗಾದವರ ಸಂಖ್ಯೆ 1,860ಕ್ಕೆ ತಲುಪಿದೆ. ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 36 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 15,284 ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 15,502 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 388 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಪ್ರಕರಣಗಳ ಸಂಖ್ಯೆ ನಾಲ್ಕು ಜಿಲ್ಲೆಗಳಲ್ಲಿ ಮೂರಂಕಿ, 25 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಉಡುಪಿಯಲ್ಲಿ 217, ಮೈಸೂರಿನಲ್ಲಿ 171, ಚಿತ್ರದುರ್ಗದಲ್ಲಿ 105, ಕೊಪ್ಪಳದಲ್ಲಿ 94, ಬಳ್ಳಾರಿಯಲ್ಲಿ 89, ವಿಜಯಪುರದಲ್ಲಿ 85, ದಕ್ಷಿಣ ಕನ್ನಡದಲ್ಲಿ 81, ಶಿವಮೊಗ್ಗದಲ್ಲಿ 76 ಹಾಗೂ ದಾವಣಗೆರೆಯಲ್ಲಿ 60 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆ ಇವೆ.

27 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 10 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 6 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 447 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ವಿಜಯಪುರದಲ್ಲಿ 96, ಕೋಲಾರದಲ್ಲಿ 76, ಬೆಂಗಳೂರು ಗ್ರಾಮಾಂತರದಲ್ಲಿ 38, ತುಮಕೂರಿನಲ್ಲಿ 36, ಚಿತ್ರದುರ್ಗದಲ್ಲಿ 26, ದಾವಣಗೆರೆಯಲ್ಲಿ 19, ಹಾಸನದಲ್ಲಿ 15, ರಾಮನಗರದಲ್ಲಿ 14, ಬಾಗಲಕೋಟೆಯಲ್ಲಿ 11 ಹಾಗೂ ಶಿವಮೊಗ್ಗದಲ್ಲಿ 10 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆ ಇವೆ.

'ಹವಾಮಾನ ಬದಲಾವಣೆ ಹಾಗೂ ಅಕಾಲಿಕ ಮಳೆಯಿಂದಾಗಿ ಸೊಳ್ಳೆಗಳ ಕಡಿತದಿಂದ ಉಂಟಾಗುವ ಡೆಂಗಿ, ಚಿಕೂನ್‌ಗುನ್ಯಾ ಪ್ರಕರಣಗಳು ಕಾಣಿಸಿಕೊಳ್ಳುತ್ತಿವೆ. ಸ್ವಚ್ಛತೆ ಸೇರಿದಂತೆ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸೌಂದರ್ಯ ಲಹರಿ ಸ್ತೋತ್ರ ಪಾರಾಯಣ ಮಾಡಿದ ಮಹಿಳೆಯರು

ಸೌಂದರ್ಯ ಲಹರಿ ಪ್ರಸ್ತುತಿ

ಬೆಂಗಳೂರು: ವೇದಾಂತ ಭಾರತಿ ಸಂಸ್ಥೆಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ 'ಸೂಕ್ತಿ ಲಹರಿ' ಕಾರ್ಯಕ್ರಮದಲ್ಲಿ ಹತ್ತು ಸಾವಿರ ಮಹಿಳೆಯರು ಏಕಕಂಠದಲ್ಲಿ ಸೌಂದರ್ಯ ಲಹರಿ ಸ್ತೋತ್ರ ಪಾರಾಯಣ ಮಾಡಿದರು.

ಕೋವಿಡ್‌ನಿಂದಾಗಿ ಎರಡು ವರ್ಷಗಳಿಂದ ಈ ಕಾರ್ಯಕ್ರಮ ಆನ್‌ಲೈನ್‌ಗೆ ಸೀಮಿತವಾಗಿತ್ತು. ಶೃಂಗೇರಿ ಶಾರದಾ ಪೀಠದ ವಿಧು ಶೇಖರಭಾರತಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಈ ಬಾರಿ ಭೌತಿಕವಾಗಿ ಕಾರ್ಯಕ್ರಮ ನಡೆಸಲಾಯಿತು.

'ಧರ್ಮ ಆಚರಣೆಯಿಂದ ಮಾತ್ರ ಅಧರ್ಮ ತೊಡೆದುಹಾಕಲು ಸಾಧ್ಯ. ಇಂತಹ ಚಟುವಟಿಕೆಯಲ್ಲಿ ತೊಡಗಿದರೆ ಉತ್ತಮ ಫಲ ಪಡೆಯಲು ಸಾಧ್ಯವಿಲ್ಲ' ಎಂದು ವಿಧುಶೇಖರಭಾರತಿ ಸ್ವಾಮೀಜಿ ತಿಳಿಸಿದರು. ಯಡತೊರೆ ಯೋಗಾನಂದೇಶ್ವರ ಸರಸ್ವತಿ ಮಠದ ಶಂಕರಭಾರತಿ ಸ್ವಾಮೀಜಿ ಸೌಂದರ್ಯ ಲಹರಿಯ ಮಹತ್ವದ ಬಗ್ಗೆ ತಿಳಿಸಿದರು.

ನಗರದಲ್ಲಿ ಇಂದು

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಕ್ರೀಡಾಕೂಟಕ್ಕೆ ಚಾಲನೆ: ಉದ್ಘಾಟನೆ: ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತಿ: ತಾರಾ ಅನುರಾಧ, ರಾಧಾದೇವಿ.ಎ, ಆಯೋಜಕರು: ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ: 10

ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಬ್ರಹ್ಮಕುಂಭ ಅಭಿಷೇಕ ಹಾಗೂ ನವಗ್ರಹ ಪ್ರತಿಷ್ಠಾನ ಮಹೋತ್ಸವ: ಸಂಜೆ: ಉಗ್ರಾಣ ತುಂಬಿಸುವುದು, 4.30: ಭಜನಾ ಕಾರ್ಯಕ್ರಮ, 5.30: ಸಭಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, 6: ಕುಮಾರ ಸಂಭವ ಹರಿಕಥೆ–ಎನ್.ಕೆ. ಮೋಹನ್‌ಕುಮಾರ್, ಆಯೋಜಕರು: ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಸ್ಥಳ: ಜ್ಞಾನಶಕ್ತಿನಗರ, ಅಂಚೆ ಕೊಡಿಗೆಹಳ್ಳಿ

ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ: ಅತಿಥಿಗಳು: ಡಾ.ಎಸ್.ಡಿ.ಶರಣಪ್ಪ, ಅಧ್ಯಕ್ಷತೆ: ಕೆ.ಎಸ್.ಲತಾಕುಮಾರಿ, ಡಾ.ಸಿ. ಆರ್.ಚಂದ್ರಶೇಖರ್, ಆಯೋಜಕರು: ಬೆಂಗಳೂರು ನಗರ ಪೊಲೀಸ್, ನೈಟಿಂಗೇಲ್ಸ್ ವೈದ್ಯಕೀಯ ಟ್ರಸ್ಟ್, ಸ್ಥಳ: ಸಮ್ಮೇಳನ ಸಭಾಂಗಣ, ಪೊಲೀಸ್ ಆಯುಕ್ತರ ಕಚೇರಿ, ಇನ್ಫೆಂಟ್ರಿ ರಸ್ತೆ, ಬೆಳಿಗ್ಗೆ: 11.30

ಪರಿಸರಸ್ನೇಹಿ ನವೋದ್ಯಮ ಸಮಾವೇಶ: ಅಧ್ಯಕ್ಷತೆ: ರಿಕ್ಕಿ ಕೇಜ್, ಉಪಸ್ಥಿತಿ: ನಿಕಿಲ್ ಕಾಮತ್, ಆಯೋಜಕರು: ಇಕೊ ಯೂಥ್ ಸ್ಟಾರ್ಟ್ ಅಪ್ ಸಮಿತ್, ಸ್ಥಳ: ಗೋ ನೇಟಿವ್, ಲ್ಯಾವೆಲ್ಲೆ ರಸ್ತೆ, ಸಂಜೆ: 4

ಡಾ.ದೀಪ್ತಿ ಗಣಪತಿಯವರ ಮೀಡಿಯಾ ಆ್ಯಂಡ್ ಕ್ಲೈಮ್ಯಾಟ್ ಚೇಂಜ್ ಪುಸ್ತಕ ಲೋಕಾರ್ಪಣೆ: ರಿಕ್ಕಿ ಕೇಜ್, ಋಷಿಕೇಶ. ಟಿ, ಚೇತನ್ ಸುಬ್ರಹ್ಮಣ್ಯನ್, ಡಾ.ದೀಪ್ತಿ ಗಣಪತಿ, ಆಯೋಜಕರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಐಐಎಂಬಿ ಸಭಾಂಗಣ, ಸಂಜೆ: 5

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆರೋಗ್ಯಾಧಿಕಾರಿಯವರ ಕಚೇರಿ, ಯಲಹಂಕ ವಲಯ, ಬೆಂಗಳೂರು – 560 092.
ಸಂಖ್ಯೆ: ಬೃಬೆಂಮಪಾ/ಯಲ/ಆ/ತಿದ್ದುಪಡಿ/02/2022–23 ದಿನಾಂಕ: 10.06.2022

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆ ಸಂ: ಬೃಬೆಂಮಪಾ/ಯಲ/ಆ/ಟೆಂಡರ್/01/2022–23, ದಿನಾಂಕ: 26.05.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ಎಲ್ಲಾ ಸಂಬಂಧಿತ ಸಮಾಲೋಚಕರು/ಗುತ್ತಿಗೆದಾರರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಟೆಂಡರ್ ಕಾಮಗಾರಿಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ: 26.05.2022 ರಂದು ಪ್ರಕಟಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರನ್ನು ರದ್ದುಗೊಳಿಸಲಾಗಿದೆ.

ಸಹಿ/– ಆರೋಗ್ಯಾಧಿಕಾರಿ, ಯಲಹಂಕ ವಲಯ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ,
ಎ.ಪಿ.ಎಂ.ಸಿ. ಬಿಲ್ಡಿಂಗ್ಸ್ ಒಳಾವರಣ, ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ಮೈನ್ ರೋಡ್, ದೊಡ್ಡಬಳ್ಳಾಪುರ–561203.
ಸಂಖ್ಯೆ: ಶಿಅಯೋ/ದೊಪುರ/ಡಿವಿಆಕ್ಟ್/ಸಿಬ್ಬಂದಿ/ಟೆಂಪ್ರ/2022-23 ದಿನಾಂಕ: 10.06.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನಾ ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು 2022–23ನೇ ಸಾಲಿಗೆ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005ರಡಿ ಕಂಪ್ಯೂಟರ್ ಆಪರೇಟರ್ ಒಂದು ಹುದ್ದೆ ಹಾಗೂ ಮೆಸ್ಸೆಂಜರ್ ಒಂದು ಹುದ್ದೆಯನ್ನು ಬಾಹ್ಯ ಮೂಲದಿಂದ ಒದಗಿಸಲು ಇಚ್ಛೆ ಇರುವ ನೋಂದಾಯಿತ ಏಜೆನ್ಸಿದಾರರನ್ನು ಆಯ್ಕೆ ಮಾಡಲು ಸೇವಾ ಶುಲ್ಕದ ಇ–ಪ್ರೊಕ್ಯೂರ್‌ಮೆಂಟ್ ಕರೆಯಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು/ಏಜೆನ್ಸಿದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮ 2000 ರಡಿಯಲ್ಲಿ ಸೇವಾ ಶುಲ್ಕದ ದರಪಟ್ಟಿಗಳನ್ನು ಸಲ್ಲಿಸಲು ಇ–ಪ್ರೊಕ್ಯೂರ್‌ಮೆಂಟ್‌ನ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು. (1) ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ: 13.06.2022. (2) ತಾಂತ್ರಿಕ ಮತ್ತು ಆರ್ಥಿಕ ಬಿಡ್ ಸಲ್ಲಿಸಲು ಅಂತಿಮ ದಿನಾಂಕ: 12.07.2022. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13.07.2022. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.07.2022. ಹೆಚ್ಚಿನ ವಿವರಗಳಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ದೂರವಾಣಿ ಸಂಖ್ಯೆ: 080–27625228 ಇವರನ್ನು ಸಂಪರ್ಕಿಸಲು ಕೋರಿದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ದೊಡ್ಡಬಳ್ಳಾಪುರ
ವಾಸಾಸಂಇ/ಉನಿ-ಸಿ.ಪಿ/891/ಎಂಸಿಎ/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯೋಜನಾ ವಿಭಾಗ, ಆರ್.ಆರ್. ನಗರ ವಲಯ, ಬಿಬಿಎಂಪಿ ಕಛೇರಿ ಕಟ್ಟಡ, 2ನೇ ಮಹಡಿ, ನೆಹರು ರಸ್ತೆ, ಬಿಇಎಂಎಲ್ ಲೇಔಟ್, ಬೆಂಗಳೂರು – 560098.
ಸಂ.: ಬಿಬಿಎಂಪಿ/ಕಾಪಾಅ/ಯೋ/ರಾರಾನ/ಟೆಂಡರ್/05/2022–23 ದಿನಾಂಕ: 14.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಏಕ ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನಾ ವಿಭಾಗ) ಇವರು ಆಯುಕ್ತರು ಬಿಬಿಎಂಪಿ ಇವರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ನಿಯಮಗಳು 2000ರ ಅಡಿಯಲ್ಲಿ ಕೆಳಗೆ ತಿಳಿಸಲಾದ ಕೆಲಸಕ್ಕಾಗಿ ನಿಗದಿತ ನಮೂನೆಯಲ್ಲಿ ಸೇವಾ ಪೂರೈಕೆದಾರರು / ಬಿಬಿಎಂಪಿ ಗುತ್ತಿಗೆದಾರರು ಅಥವಾ ಅದಕ್ಕೆ ಸರಿಸಮಾನವಾದ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಜೊತೆಗೆ ನೋಂದಾಯಿತ ಅಥವಾ ಯಾವುದೇ ರಾಜ್ಯ ಸರ್ಕಾರ ಸಂಸ್ಥೆಗಳಿಂದ ಐಟಂ ದರದ ಆಧಾರ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ವಹಣೆ ಮತ್ತು ದುರಸ್ತಿ.	50.00	1,00,000/–
2	ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇತರೆ ಕಾಮಗಾರಿಗಳು ಮತ್ತು ಖಾಲಿ ಇರುವ ಬಿಬಿಎಂಪಿ ಜಮೀನಿಗೆ ತಂತಿ ಬೇಲಿಯನ್ನು (ಚೈನ್ ಲಿಂಕ್ ಫೆನ್ಸಿಂಗ್) ಒದಗಿಸುವುದು.	50.00	1,00,000/–
3	ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇತರೆ ಕಾಮಗಾರಿಗಳು ಮತ್ತು ತಂತಿ ಬೇಲಿಯನ್ನು (ಚೈನ್ ಲಿಂಕ್ ಫೆನ್ಸಿಂಗ್) ಒದಗಿಸುವುದು.	50.00	1,00,000/–
	ಕೆಲಸವನ್ನು ಪೂರ್ಣಗೊಳಿಸುವ ಅವಧಿ: 6 ತಿಂಗಳುಗಳು		

ವೇಳಾಪಟ್ಟಿ: (1) ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: 20.06.2022 ರಿಂದ ಡೌನ್‌ಲೋಡ್ ಮಾಡಬಹುದು. (2) ಟೆಂಡರ್‌ನ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.06.2022 ರಿಂದ ಸಂಜೆ 4.00 ಗಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 29.06.2022ರ ಸಂಜೆ 4.30 ಗಂಟೆಗೆ. (4) ಟೆಂಡರ್ ನಮೂನೆಯ ವೆಚ್ಚ ರೂ.: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಾರಾ ನಗರ ವಿಭಾಗ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE

The General Public are hereby informed that my client proposes to purchase Schedule Property described herein below for a valuable sale consideration from its present Owners (1) Smt.Vasanta Singhvi, W/o. Sri. Rikab Chand Singhvi and (2) Sri.Ritesh Kumar Singhvi, S/o Sri.Rikab Chand Singhvi, residents of No.14, Flat No.103, 2nd Floor, Arihanth Swarg Apartments, 1st Cross, South Park Road, Behind Sheshadripuram Police Station, Nehru Nagar, Bengaluru-560020. Any person/s having any claims/ objections for the said sale transaction or any person/s claiming to have any matter of right, title, interest, claim or demand in relation to the said property or any part thereof, may lodge their claims/objections in writing along with documentary evidence in support thereof, with the undersigned within Fifteen (15) days from the date of publication of this Notice. In the absence of any genuine and rightful objections and/or claims, my client will proceed to finalize the transaction as if no such claims exists and/or that they have been consciously waived and abandoned.

SCHEDULE PROPERTY

All that part and parcel of the Residential Property bearing No.9, situated at 1st Main, 1st Cross, Chakravarthy Layout, Palace Cross Road, BBMP Ward No.78 of Vasanthanagar, having PID No.78-120-9, Bengaluru – 560 020, measuring East to West 40 feet and North to South 60 feet, in all measuring 2400 sq.ft, along with residential unit comprising of Ground and First Floor measuring 1500 sq.ft each i.e. 3000 sq.ft of construction and bounded on the East by: Site No.8; West by: Site No.10, North by: 1st Cross Road; and South by: Site Nos. 17 and 18.

Sd/-
Sri. MADHU, Advocate,
No.1/1, 1st Floor, 1st Cross, (Maramma Temple Street), R.T. Street, Bengaluru – 560053.
Mobile No.9342825875
Email:madhurampura@hotmail.com

PUBLIC NOTICE

My client is desirous of purchasing all that piece and parcel of residential property having Municipal No.43/11, BBMP PID No.91-75-43/11, measuring 3330 Sq.Ft along with a building comprising of Ground and First Floor, situated at Promenade Road, Frazer Town, Bangalore – 560 005, more fully described in the schedule below and hereinafter referred to as 'Schedule Property', from (1) Mrs. Shanthi Rampersad, residing at 43949, Amazon Street, Hemet CA 92544, USA; (2) Mrs. Asha Sagar, residing at D-1102, Crystal Garden, Baner Pashan Link Road, Backside Star Market, Pashan, PO: Armament, Sub District: Haveli, Pune; (3) Mrs. Shammi Sahni, residing at Flat No.303, Floor 3, NCC Urban, Gardenia BTI Towers, Hitech City, Diamond Hills, Gachibowli, K.V.Rangareddy, Telangana – 500 032; (4) Mrs. Aarti Gohil, residing at C-19, Samay Vihar Apartment, Rohini Sector – 13, Rohini, North West Delhi, Delhi – 110 085 ("Owners");

Any person or persons having any claim or objection of whatsoever kind, with regard to the schedule property or any portion thereof or against the transaction, may write to the undersigned within fifteen (15) days from the date of issuance of this notice with documentary evidence on which they are basing their claims or objections with regard to the schedule property or any part thereof in any manner whatsoever, failing which may client shall proceed on that basis that there are no claims of whatsoever nature.

SCHEDULE PROPERTY

All that piece and parcel of immovable property bearing Municipal No.43/11, (PID No.91-75-43/11) located at Ward No.78 (Pulikeshi Nagar), 1st Cross, Promenade Road, Bangalore 560 005 measuring East 45 feet, West 45 feet, North 70 feet and South 78 feet in all measuring 3330 sq. ft. consisting of ground and first floor dwelling house, having a built-up area of approximately 1491 sq. ft. and bounded on the:

East by : 30 feet Road
West by : House property bearing Municipal No.43/36.
North by : House property bearing Municipa No.43/12
South by : House property bearing Municipal No.43/10.

SANDEEP M G
No.130/1, Ulsoor Road, Bangalore – 560 042
Ph: 9611268269;
Email: vijayadeep@gmail.com

ಚನ್ನಪಟ್ಟಣ ನಗರಸಭೆ
ರಾಮನಗರ ಜಿಲ್ಲೆ
Web: www.channapatnacity.mrc.gov.in | E-mail:itstaff_ulb_channapatna@yahoo.com
Janahitha (Helpline): 080-23108108 | Ph.No: 080-27251235
ನಸಚ/ಕಾವಿ/ಟೆಂಡರ್/ಸಿಆರ್/02/2022-23 ದಿನಾಂಕ: 10.06.2022

ಇ-ಪ್ರೊಕ್ಯುರ್‌ಮೆಂಟ್ ಟೆಂಡರ್ ಪ್ರಕಟಣೆ

2022-23ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಚನ್ನಪಟ್ಟಣ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999 ಮತ್ತು ನಿಯಮಗಳು 2000ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ, ಮತ್ತು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಗುತ್ತಿಗೆದಾರರು ಹಾಗೂ ಅರ್ಹ ಸರಬರಾಜುದಾರರಿಂದ ಇ–ಪೋರ್ಟಲ್ https://eproc.karnataka.gov.in/ ಮೂಲಕ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ಐಟಂವಾರು ಟೆಂಡರ್ ಗಳನ್ನು KW-1 ಪ್ರಮಾಣಿತ ಟೆಂಡರ್ ದಸ್ತಾವೇಜಿನ ನಿಯಮಗಳಂತೆ ದಿನಾಂಕ 28.06.2022ರ ಸಂಜೆ 5.30 ಗಂಟೆಯೊಳಗೆ [illegible] ಅಂದಾಜು ಮೊತ್ತ 10.00 ಲಕ್ಷ [illegible] ರೂ. 25,000/- [illegible] ದಿನಾಂಕ 30.06.2022 ರಂದು ಬೆಳಿಗ್ಗೆ 11.00 ಗಂಟೆಗೆ [illegible] WORK INDENT NO. DMA/2022-23/EL/ WORK_INDENT132543, [illegible] www.channapatnacity.mrc.gov.in [illegible]

[illegible]

ಇಸ್ಕಾನ್‌ನ ದೇಗುಲ ಲೋಕಾರ್ಪಣೆಗೊಳಿಸಿದ ರಾಷ್ಟ್ರಪತಿ • ಆಗಸ್ಟ್ 1ರಿಂದ ಸಾರ್ವಜನಿಕರಿಗೆ ಮುಕ್ತ

ವೈಕುಂಠ ಗಿರಿಯಲ್ಲಿ 'ರಾಜಾಧಿರಾಜ ಗೋವಿಂದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯ ವಸಂತಪುರದಲ್ಲಿ ಇಸ್ಕಾನ್ ವತಿಯಿಂದ ನಿರ್ಮಿಸಲಾಗಿರುವ 'ರಾಜಾಧಿರಾಜ ಗೋವಿಂದ' ದೇವಾಲಯವನ್ನು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಮಂಗಳವಾರ ಉದ್ಘಾಟಿಸಿದರು.

'ವೈಕುಂಠ ಗಿರಿ' ಎಂದು ಹೆಸರಿಟ್ಟಿರುವ 24 ಎಕರೆ ಬೆಟ್ಟದ ಪರಿಸರದಲ್ಲಿ ದೇವಾಲಯ ಹಾಗೂ ಸಾಂಸ್ಕೃತಿಕ ಕಟ್ಟಡ ನಿರ್ಮಿಸಲಾಗಿದ್ದು, ತಿರುಪತಿ ತಿರುಮಲ ವೆಂಕಟೇಶ್ವರ ದೇವಾಲಯದ ವಾಸ್ತುಶೈಲಿಯಲ್ಲೇ ಈ ನೂತನ ದೇವಾಲಯ ರೂಪುಗೊಂಡಿದೆ.

ತಿರುಮಲದ ಮೂಲ ವಿಗ್ರಹಕ್ಕೆ ಹೋಲಿಕೆಯಾಗುವ ರೀತಿಯಲ್ಲಿ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ಆದರೆ, ಇಲ್ಲಿಯ ವಿಗ್ರಹದ ಎತ್ತರವನ್ನು 1 ಸೆಂ.ಮೀ. ಕಡಿಮೆ ಮಾಡಲಾಗಿದೆ. ಇಸ್ಕಾನ್ ಸಂಸ್ಥಾಪಕ ಶ್ರೀಲ ಪ್ರಭುಪಾದರ 125ನೇ ಜನ್ಮ ವಾರ್ಷಿಕೋತ್ಸವ ಸ್ಮರಣಾರ್ಥ ಈ ದೇವಸ್ಥಾನ ನಿರ್ಮಿಸಲಾಗಿದೆ. ಸೋಮವಾರ ವಿಗ್ರಹ ಪ್ರತಿಷ್ಠಾಪನೆಯಾಗಿದ್ದು, ಮಂಡಲ ಪೂಜೆ ಹಾಗೂ ವಿಧಿ-ವಿಧಾನಗಳು ಆರಂಭಗೊಂಡಿವೆ. ಆಗಸ್ಟ್ 1ರಿಂದ ಬೆಳಿಗ್ಗೆ 7 ಗಂಟೆಯಿಂದ ಮಧ್ಯಾಹ್ನ 1ರವರೆಗೆ, ಮಧ್ಯಾಹ್ನ 4 ಗಂಟೆಯಿಂದ ರಾತ್ರಿ 8.30ರವರೆಗೆ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಲಿದೆ.

ಕನಕಪುರ ರಸ್ತೆಯ ವಸಂತಪುರದಲ್ಲಿ ನಿರ್ಮಾಣವಾಗಿರುವ ರಾಜಾಧಿರಾಜ ಗೋವಿಂದ ದೇವಾಲಯದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಂಗಳವಾರ ಪಾಲ್ಗೊಂಡಿದ್ದ ಭಕ್ತರು, ದೇವರ ದರ್ಶನ ಪಡೆದರು – ಪ್ರಜಾವಾಣಿ ಚಿತ್ರ

ದಂಪತಿ ಸಮೇತ ಪೂಜೆ: ರಾಷ್ಟ್ರಪತಿ ರಾಮನಾಥ ಕೋವಿಂದ್ ಹಾಗೂ ಅವರ ಪತ್ನಿ ಸವಿತಾ ದೇವಸ್ಥಾನವನ್ನು ಉದ್ಘಾಟಿಸಿ ಪೂಜೆ ಸಲ್ಲಿಸಿದರು. ಬಳಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ, ಇಸ್ಕಾನ್ ಅಧ್ಯಕ್ಷ ಮಧುಪಂಡಿತ ದಾಸ, ಹಿರಿಯ ಉಪಾಧ್ಯಕ್ಷ ಚಂಚಲಪತಿ ದಾಸ ಇದ್ದರು.

'ಇದೊಂದು ಸುಂದರ ಆಧ್ಯಾತ್ಮಿಕ ತಾಣ. ಇಲ್ಲಿಯ ವಿಗ್ರಹ, ತಿರುಪತಿ ಬಾಲಾಜಿ ದೇವರ ಪ್ರತಿರೂಪದಂತಿದೆ. ಇದು ಮಾದರಿ ದೇವಾಲಯ ಆಗಲಿದೆ' ಎಂದು ರಾಷ್ಟ್ರಪತಿ ಪ್ರತಿಕ್ರಿಯಿಸಿದರು.

'ರಾಜಾಜಿನಗರದ ಇಸ್ಕಾನ್ ಕೃಷ್ಣ ದೇವಾಲಯಕ್ಕೆ ಹೋಗಿದ್ದಾಗ ವಿಗ್ರಹ ನೋಡಿ ಆಕರ್ಷಿತನಾದೆ. ಅನ್ನ ದಾಸೋಹ ಹಾಗೂ ಆಧ್ಯಾತ್ಮಿಕ ವಿಚಾರ ಪಸರಿಸುವ ಇಸ್ಕಾನ್ ಕೆಲಸ ಅಭೂತಪೂರ್ವ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಭಕ್ತಿ ಚೈತನ್ಯದ ದಿನವಿದು. ದೇವಾಲಯ ಲೋಕಾರ್ಪಣೆಗೊಂಡು, ಶ್ರೀಲ ಪ್ರಭುಪಾದರ ಲೋಕ ಕಲ್ಯಾಣದ ಸಂಕಲ್ಪ ಈಡೇರಿದೆ' ಎಂದರು.

₹ 105 ಕೋಟಿ ವೆಚ್ಚದಲ್ಲಿ ನಿರ್ಮಾಣ

'ಎಂಟು ವರ್ಷ ಶ್ರಮದಿಂದ 24 ಎಕರೆ ಜಾಗವನ್ನು ಅಭಿವೃದ್ಧಿಪಡಿಸಲಾಗಿದ್ದು, ಇದಕ್ಕಾಗಿ ₹ 105 ಕೋಟಿ ವೆಚ್ಚ ಮಾಡಲಾಗಿದೆ. ಜಾಗ ಖರೀದಿಗೆ ಸರ್ಕಾರ ರಿಯಾಯಿತಿ ನೀಡಿದೆ. 5,000 ಮಂದಿ ಸರದಿಯಲ್ಲಿ ನಿಲ್ಲಲು ಅವಕಾಶವಿದ್ದು, ಭಕ್ತರಿಗೆ ಉಚಿತ ಪ್ರಸಾದ ವ್ಯವಸ್ಥೆ ಇರಲಿದೆ' ಎಂದು ಚಂಚಲಪತಿ ದಾಸ ಹೇಳಿದರು.

'ಒತ್ತಡಗಳಿಗೆ ಸಿಲುಕಿ ಇಂದಿನ ಯುವಜನತೆ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಅವರಲ್ಲಿ ಜೀವನ ಉತ್ಸಾಹ ತುಂಬಲು ಕೃಷ್ಣಲೀಲಾ ಉದ್ಯಾನ ನಿರ್ಮಿಸಲಾಗುತ್ತಿದ್ದು, ಅದರ ಕೆಲಸ ಪ್ರಗತಿಯಲ್ಲಿದೆ' ಎಂದೂ ತಿಳಿಸಿದರು.

'ತೇಜೋ–ತುಂಗಭದ್ರಾ' ಹತ್ತನೆಯ ಮುದ್ರಣ

ಬೆಂಗಳೂರು: ಬರಹಗಾರ ವಸುಧೇಂದ್ರ ಅವರ 'ತೇಜೋ–ತುಂಗಭದ್ರಾ' ಕಾದಂಬರಿ 10ನೇ ಮುದ್ರಣ ಕಾಣುತ್ತಿದೆ. ಇದನ್ನು ಛಂದ ಪುಸ್ತಕವು 2019ರ ಡಿಸೆಂಬರ್‌ನಲ್ಲಿ ಪ್ರಕಟಿಸಿತ್ತು.

'ಈ ಕಾದಂಬರಿಯ ಸಾವಿರಕ್ಕೂ ಹೆಚ್ಚು ಇ–ಪುಸ್ತಕಗಳು ಮಾರಾಟವಾಗಿವೆ. ಕನ್ನಡದ ಪುಸ್ತಕಗಳಿಗೆ ಓದುಗರು ಕಡಿಮೆ ಎನ್ನುವ ಹೊತ್ತಿನಲ್ಲಿ ಈ ಬೆಳವಣಿಗೆ ಭರವಸೆಯನ್ನು ಹೆಚ್ಚಿಸಿದೆ' ಎಂದು ವಸುಧೇಂದ್ರ ತಿಳಿಸಿದ್ದಾರೆ.

AIR FORCE SCHOOL ASTE, MURUGESHPALYA
NAL Wind Tunnel Road, Murugeshpalya, Bengaluru – 560 017
Contact No.080-25272332/25276920.

Walk-in-interview is scheduled on **02 July 2022** for the posts of
- **Special Educator**
- **Computer Lab Attendant**
- **Junior Librarian**
- **Helpers** (Ayah & Watchman)
- **Special Coaches** (Basketball)

Details can be checked on **www.afsaste.edu.in.** Candidates are to report at **0830 hrs** with their resume/CV, original educational certificates, marksheets, work experience testimonials, passport size photograph and self attested photocopies of the same.

ಮಹಿಳೆಯರ ಆರೈಕೆಯಲ್ಲಿ 'ಲವಣ ತೈಲಂ'

ಆಯುರ್ವೇದಿಕ್ ಫಿಗರ್ ಕೇರ್

1999ರಿಂದಲೂ ಕೇರಳಾದ್ಯಂತ ಆಯುರ್‌ಕೇರ್ ಕೇಂದ್ರಗಳ ಮೂಲಕ ಬಹಳಷ್ಟು ಜನರಲ್ಲಿ ಇದು ಪರಿಣಾಮಕಾರಿ ಎಂದು ಸಾಬೀತಾಗಿದೆ.

ಲವಣ ತೈಲಂನಲ್ಲಿರುವ ಪ್ರಮುಖ ಪದಾರ್ಥವಾದ ಕಲ್ಲುಪ್ಪು, ಹೆಚ್ಚುವರಿ ಹೊರಾಂಗಣ ಜಲಾಂಶವನ್ನು ಹೀರಿ ಸ್ನಾಯುಗಳನ್ನು ಬಲಪಡಿಸುತ್ತದೆ. ಚರ್ಮದ ಕೆಳಗಿರುವ ಕೊಬ್ಬಿನ ಪದರವನ್ನು ತೆಳ್ಳಗಾಗಿಸಿ ಕಳೆದುಹೋದ ಆಕಾರವನ್ನು ಮರುಪಡೆಯಲು ಸಹಾಯ ಮಾಡುತ್ತದೆ. ಇದನ್ನು ನಿಯಮಿತವಾಗಿ ಬಳಸುವುದರಿಂದ ಅಧಿಕ ಮೈಭಾರವನ್ನು ಇಳಿಸಿಕೊಳ್ಳಬಹುದು.

ಅತಿಯಾದ ಹೊಟ್ಟೆಯ ಆಕಾರ ಮತ್ತು ಸೌಂದರ್ಯ ಕಾಪಾಡಿಕೊಳ್ಳಲು ದಿನಾಲೂ ಲವಣ ತೈಲದಿಂದ ಮಸಾಜ್ ಮಾಡಿ. ಹೆರಿಗೆಯ ನಂತರ ಹೊಟ್ಟೆಯನ್ನು ತಗ್ಗಿಸಲು ಇದು ಉತ್ತಮವಾಗಿದೆ.

ಉಪಯೋಗಿಸುವ ಕ್ರಮ : ತೈಲವನ್ನು ಕೈಗೆ ಸುರಿದುಕೊಂಡು ಹೊಟ್ಟೆಯ ಮೇಲೆ ಕೋಮಲವಾಗಿ ತೀಡಿ. ಕನಿಷ್ಠ 15 ನಿಮಿಷಗಳ ಬಳಿಕ ಬೆಚ್ಚಗಿನ ನೀರಿನ ಶಾಖ ಅಥವಾ ಬೆಚ್ಚಗಿನ ನೀರಿನಿಂದ ತೊಳೆಯಿರಿ. ಇದನ್ನು ಪುರುಷರು ಸಹ ಬಳಸಬಹುದು.

ಎಲ್ಲಾ ಆಲೋಪಥಿಕ್–ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್, ಸೂಪರ್ ಮಾರ್ಕೆಟ್ ಹಾಗೂ ಲೇಡೀಸ್ ಸ್ಟೋರ್ಸ್‌ನಲ್ಲಿ ಲಭ್ಯವಿದೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ
A & J Health Care, Bangalore
For a Healthy Society
Ph: 8762226000, 9243112373.

ವಿಮಾನನಿಲ್ದಾಣದಲ್ಲಿ 'ಟ್ಯಾಕ್ಸಿ ಬಾಟ್'

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಎಂಜಿನ್‌ಗಳ ಬಳಕೆಯಿಲ್ಲದೆ ಪ್ರಯಾಣಿಕರೊಂದಿಗೆ ವಿಮಾನವನ್ನು ಬೋರ್ಡಿಂಗ್ ಗೇಟ್‌ನಿಂದ ರನ್‌ವೇಗೆ ಎಳೆದೊಯ್ಯುವ ಅರೆ ರೋಬೋಟಿಕ್ ಟೋಯಿಂಗ್ ಸಾಧನವನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ನಿಯೋಜಿಸಲಾಗಿದೆ. ಕೆಐಎ ಈ ಸೌಲಭ್ಯ ಹೊಂದಿದ ವಿಶ್ವದ ಎರಡನೇ ವಿಮಾನ ನಿಲ್ದಾಣವಾಗಿದೆ.

ಈ ಕ್ರಮವು ಇಂಧನವನ್ನು ಉಳಿಸುತ್ತದೆ ಹಾಗೂ ಪರಿಸರ ಸ್ನೇಹಿಯಾಗಿದೆ. ಬೆಂಗಳೂರಿನಿಂದ ವಿಶಾಖಪಟ್ಟಣಂಗೆ ತೆರಳುತ್ತಿದ್ದ ವಿಮಾನಕ್ಕೆ ಟ್ಯಾಕ್ಸಿಬಾಟ್ ಸೌಲಭ್ಯವನ್ನು ಬಳಸಿ ಈಚೆಗೆ ವಿಮಾನ ಹಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ.

ಭಾರತದಲ್ಲಿ ಟ್ಯಾಕ್ಸಿಬಾಟ್‌ನ ವಿಶೇಷ ನಿರ್ವಾಹಕರಾದ ಕೆಎಸ್ಯು ಏವಿಯೇಷನ್‌ನೊಂದಿಗೆ ಒಪ್ಪಂದ ಮಾಡಿಕೊಂಡಿರುವ ಏರ್ ಇಂಡಿಯಾ, ಇದರ ಬಳಕೆಯಿಂದ ಇಂಧನ ಉಳಿತಾಯದ ಗುರಿ ಹೊಂದಿದೆ.

ದೇವನಹಳ್ಳಿಯ ವಿಮಾನ ನಿಲ್ದಾಣದಲ್ಲಿ ಟ್ಯಾಕ್ಸಿ ಬಾಟ್ ಉಪಯೋಗಿಸಿದ ಮೊದಲ ಏರ್ ಇಂಡಿಯಾ ವಿಮಾನದ ದೃಶ್ಯ

ಕಡಿಮೆ ಪ್ರಮಾಣದಲ್ಲಿ ಇಂಗಾಲ ಹೊರಸೂಸುವಿಕೆ. ಶಬ್ದ ಮಾಲಿನ್ಯವೂ ಕಡಿಮೆ. ಹಾಗೂ ಪಾರ್ಕಿಂಗ್ ಪ್ರದೇಶದಲ್ಲಿ ದಕ್ಷತೆ ಮತ್ತು ಸುರಕ್ಷತೆಯನ್ನು ಹೆಚ್ಚಿಸುವಲ್ಲಿ ಟ್ಯಾಕ್ಸಿ ಬಾಟ್ ಕಾರ್ಯನಿರ್ವಹಿಸುತ್ತದೆ.

ಐದು ವರ್ಷಗಳಲ್ಲಿ ಕೆಂಪೇಗೌಡ ಅಂತಾರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಏಳು ಟ್ಯಾಕ್ಸಿಬಾಟ್ ಘಟಕ ನಿಯೋಜಿಸಲು ಉದ್ದೇಶಿಸಿದ್ದು, ಇದರಿಂದ ವಾರ್ಷಿಕ 35,000 ಟನ್ ಕಾರ್ಬನ್ ಹೊರಸೂಸುವಿಕೆ ಕಡಿಮೆಯಾಗಲಿದೆ ಎಂದು ನಿರ್ದೇಶಕ ಅಶ್ವನಿ ಖಾನ್ನಾ ತಿಳಿಸಿದ್ದಾರೆ.

ಏರ್ ಏಷ್ಯಾ ಇಂಡಿಯಾ ನೆರವಿನಲ್ಲಿ ಈ ಸಾಧನ ಅಳವಡಿಸಲಾಗಿದೆ ಎಂದು ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹರಿ ಮರಾರ್ ಹೇಳಿದರು.

ಟ್ಯಾಕ್ಸಿ ಬಾಟ್ ತಂತ್ರಜ್ಞಾನದಿಂದ ಕಾರ್ಯಾಚರಣೆಯಲ್ಲಿ ವಿಭಿನ್ನತೆ ಹಾಗೂ ದಕ್ಷತೆ ಮೂಡಲಿದ್ದು, ಸ್ವಚ್ಛ ಮತ್ತು ಹಸಿರು ಪರಿಸರ ವ್ಯವಸ್ಥೆಗೆ ಪೂರಕವಾಗಿದೆ ಎಂದು ಏರ್ ಏಷ್ಯಾ ಇಂಡಿಯಾ ಎಂಡಿ ಮತ್ತು ಸಿಇಒ ಸುನೀಲ್ ಭಾಸ್ಕರನ್ ತಿಳಿಸಿದ್ದಾರೆ.

ಖರ್ಗೆ ವಿಚಾರಣೆ ವೇಳೆ ಮೌನ ಏಕೆ: ಬಿಜೆಪಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ವಿಚಾರಣೆಗೆ ಒಳಪಡಿಸಿದಾಗ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ಜಾಣ ಮೌನವಹಿಸಿದ್ದೇಕೆ? ಮುಖ್ಯಮಂತ್ರಿ ಪದವಿಯ ಪ್ರಬಲ ಆಕಾಂಕ್ಷಿಯನ್ನು ತೆರೆಯಮರೆಗೆ ಸರಿಸುವ ಹುನ್ನಾರವಿತ್ತೇ ಎಂದು ಬಿಜೆಪಿ ಪ್ರಶ್ನಿಸಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಬಿಜೆಪಿ, 'ಪ್ರಿಯಾಂಕ್ ಖರ್ಗೆ ಅವರೇ 'ಇಂಡಿಯಾ ವಿತ್ ರಾಹುಲ್‌ಗಾಂಧಿ' ಎಂದು ಹೇಳುವ ಮುನ್ನ ನಿಮ್ಮ ತಂದೆಯನ್ನು ಇ.ಡಿ ತನಿಖೆ ಮಾಡಿದಾಗ ನಿಮ್ಮ ಕುಟುಂಬದ ಪರ ಯಾರೂ ನಿಲ್ಲಲಿಲ್ಲವೇಕೆ ಎಂಬುದನ್ನು ಯೋಚಿಸಿದ್ದೀರಾ? ನಿಮ್ಮ ತಂದೆಯ ಪರವಾಗಿ ಏಕೆ ಧ್ವನಿ ಎತ್ತಲಿಲ್ಲ. ಜನ್ಮದಾತನಿಗಿಂತಲೂ ನಿಮಗೆ ನಕಲಿ ಗಾಂಧಿಗಳೇ ಹೆಚ್ಚಾದರೇ' ಎಂದೂ ಪ್ರಶ್ನಿಸಿದೆ.

ನಕಲಿ ಗಾಂಧಿಗಳ ಮೇಲಿನ ಅಕ್ಕರೆ ಕಾಂಗ್ರೆಸ್‌ನ ಹಿರಿಯ, ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಪರವಾಗಿ ಏಕಿಲ್ಲ? ರಾಜ್ಯದ ಕಾಂಗ್ರೆಸ್ ನಾಯಕರು ಖರ್ಗೆ ಪರವಾಗಿ ಏಕೆ ಧ್ವನಿ ಎತ್ತಲಿಲ್ಲ. ಅವರಿಗಾಗಿ ಏಕೆ ಬೀದಿಗೆ ಇಳಿಯಲಿಲ್ಲ. ಅವರು ದಲಿತ ನಾಯಕ ಎಂಬ ಕಾರಣಕ್ಕೆ ಬೀದಿಗಿಳಿಯಲಿಲ್ಲವೇ? ಇದು ದಲಿತ ವಿರೋಧಿ ಧೋರಣೆ ಅಲ್ಲದೇ ಮತ್ತೇನು ಎಂದೂ ಬಿಜೆಪಿ ಕುಟುಕಿದೆ.

16ರಿಂದ 'ಇಮ್‌ಟೆಕ್ಸ್ ಫಾರ್ಮಿಂಗ್' ಪ್ರದರ್ಶನ

ಬೆಂಗಳೂರು: ಇಂಡಿಯನ್ ಮಷಿನ್ ಟೂಲ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ (ಐಎಂಟಿಎಂಎ) ತನ್ನ ಅಮೃತ ಮಹೋತ್ಸವದ ಅಂಗವಾಗಿ 'ಇಮ್‌ಟೆಕ್ಸ್ ಫಾರ್ಮಿಂಗ್–2022 ಮತ್ತು ಟೂಲ್‌ಟೆಕ್–2022' ಪ್ರದರ್ಶನವನ್ನು ಜೂ.16 ರಿಂದ 21ರ ವರೆಗೆ ಬೆಂಗಳೂರಿನ ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಪ್ರದರ್ಶನದಲ್ಲಿ 16 ದೇಶಗಳ ಪ್ರತಿನಿಧಿಗಳು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಹೀರೊದ ಭರವಸೆ
Hero 100 MILLION | Hero WORLD'S NO.1 20 YEARS IN A ROW | Best Resale Value Powered by Wheels of Trust^ | INDIA'S FIRST 5 YEAR WARRANTY* *Conditions apply | 7000+ SERVICE CENTRES

ಲಾಯಲ್ಟಿ ಅಥವಾ ಎಕ್ಸ್‌ಚೇಂಜ್ ಬೋನಸ್ ₹3000*

LED ಪ್ರೊಜೆಕ್ಟರ್ ಹೆಡ್‌ಲ್ಯಾಂಪ್ಸ್ | ಬ್ಲೂಟೂತ್ ಕನೆಕ್ಟಿವಿಟಿ | i3s ಟೆಕ್ನಾಲಜಿ (i3S TECHNOLOGY) | ಹೀರೊ ಕನೆಕ್ಟ್ (CONNECT)

70116 70116
Explore the World of Hero
Call 8367796950 or Scan QR CODE

HeroMotoCorp.com | TheHeroMotoCorp | HeroMotoCorpLimited | HeroMotoCorp | HeroMotoCorpIndia

Regd. Office: Hero MotoCorp Ltd., The Grand Plaza, Plot No.2, Nelson Mandela Road, Vasant Kunj - Phase -II, New Delhi - 110070, India. CIN: L35911DL1984PLC017354. It is our endeavour to improve our product. This could lead to changes in product specifications without notice. Accessories and features shown may not be a part of the standard fitment. Always wear a helmet while riding a two-wheeler. **As per the cumulative global production volume till 21st January 2021. ***Largest two-wheeler selling company in the world for any particular country for the year 2020. *The offer is valid on select models in select cities only and is subject to change without any prior notice. ^Based on offers from empanelled dealers on Wheels of Trust platform. All features may not be part of all products. T&C apply. For further information, contact nearest Hero MotoCorp authorised outlet (s) or call Toll Free No. 1800-266-0018 or visit website www.heromotocorp.com

Authorized Dealers: Bengaluru: Magadi Road: Poorna Hero, Ph: 9289923212, **Marathalli:** Vaayuratha Hero, Ph: 9289923811, **Banashankari:** Sai Hero, Ph: 9289922476, **Banaswadi:** Bhagath Hero, Ph: 9289922738, **Byatarayanapura:** Bimal Hero, Ph: 9289922863, **Hosur Road:** RT Krishna Hero, Ph: 9289923177, **Lalbagh Road:** Prakash Hero, Ph: 9289922117, **Peenya:** Sai Hero, Ph: 9289922830, **Rajaji Nagar:** Max Hero, Ph: 9289923023, **Hoskote:** Bhagath Hero, Ph: 8884600051, **K R Puram:** Bhagath Hero, Ph: 9513353807, **Tumkur:** Sai Hero, Ph: 9289922830, **Tiptur:** Sai Hero, Ph. 9164840456, **Kunigal:** Sai Hero, Ph: 7022752858, **Shimoga:** Sree Karthik Hero, Ph: 9289922509, Mythri Hero, Ph: 9289922635, **Chickmagalur:** Nayana Hero, Ph: 9289922120, **Sagar:** Prajwal Hero, Ph: 9289922399, **Mangalore:** West Coast Hero, Ph: 9289922606, Tribhuvan Hero, Ph: 9289923203, **Chitradurga:** Mahesh Hero, Ph: 9289922126, **Davanagere:** Rutvii Hero, Ph: 9289923174, Prakasha Hero, Ph: 9289922501, **Mysore:** Dyuthi Mysore Hero, (B.M.Hospital), Ph: 9289922475, Shah Mysore Hero (Nazarbad City), Ph: 9289922518, Rasik Hero (Laxmipuram), Ph: 9513353882, **Mandya:** Dayanand Hero, Ph: 9289922123, **Chamarajnagar:** Yepiyes Hero, Ph: 9289922828, **Hassan:** Venkateshwara Hero, Ph: 9289922121, **Belgaum:** Nagshanti Hero, Ph: 9513353821, Nagshanti - 2 Unit, Ph: 9289923173, **Chikodi:** Shree Renuka Motors, Ph: 9289922884, **Gokak:** Chinmay Hero, Ph: 9289922673, **Gulbarga:** Sri Venkatesh Hero, Ph: 9289922118, **Bidar:** Kailash Hero, Ph: 9289922124, **Yadgir:** Sri Venkatesh Hero, Ph: 9289922875 **Bellary:** Annapoorna Hero, Ph: 9289922125, **Koppal:** Vijaya Hero, Ph: 9289922985, **Sindhanur:** Anand Hero, Ph: 9289922943, **Raichur:** Sri Venkkateshwara Hero, Ph: 9289922944, **Hospet:** Annapooorna Automotives, Ph: 9289923165, **Hubli:** Chadha Hero, Ph: 9289922119, **Gadag:** Chadha Hero, Ph: 8050041033, Bellad Hero, Ph: 9289922565, **Dharwad:** Bellad Hero, Ph: 9686204480, **Haveri:** Bahaddur Desai Hero, Ph: 9289922977, **Sirsi:** Shakti Hero, Ph: 9289922391, **Bijapur:** Vijay Hero, Ph: 9289922122, **Sindagi:** Jogur Motors, Ph: 9289922964, **Mudhol:** Kumar Hero, Ph: 9289922633, **Bagalkot:** Chinmay Hero, Ph: 9289923049,**Tumkur:** Sai Hero, Ph: 9289922986.

ಹಿಂದಿ ಬಲ್ಲವರಿಗೆ ಹೊರರಾಜ್ಯ ಪ್ರವಾಸ: ಆಕ್ಷೇಪ

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 'ಏಕ ಭಾರತ ಶ್ರೇಷ್ಠ ಭಾರತ' ಕಾರ್ಯಕ್ರಮ ದಡಿ ಹಿಂದಿ ಭಾಷೆ ಗೊತ್ತಿರುವ ವಿದ್ಯಾರ್ಥಿಗಳನ್ನಷ್ಟೆ ಹೊರ ರಾಜ್ಯಗಳಿಗೆ ಕರೆದೊಯ್ಯುವ ಪದವಿಪೂರ್ವ ಶಿಕ್ಷಣ ಇಲಾಖೆ ಆದೇಶಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. 'ಹಿಂದಿ ಭಾಷೆಯಲ್ಲಿ ಮಾತನಾಡುವ ಮತ್ತು ತಂತ್ರಜ್ಞಾನದ ತಿಳಿವಳಿಕೆಯುಳ್ಳ, ಸಾಂಸ್ಕೃತಿಕ ಕ್ರೀಡಾ ಸ್ಫೂರ್ತಿ ಹೊಂದಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಹೊರ ರಾಜ್ಯಗಳಿಗೆ ಕಳುಹಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಇದರಿಂದಾಗಿ ಕನ್ನಡ ಬಲ್ಲ ವಿದ್ಯಾರ್ಥಿಗಳು ಅವಕಾಶ ವಂಚಿತರಾಗುತ್ತಾರೆ. ಹಿಂದಿ ಭಾಷೆ ತಿಳಿಯದ, ಕನ್ನಡ ಭಾಷಾ ಜ್ಞಾನ ಹೊಂದಿರುವ ವಿದ್ಯಾರ್ಥಿಗಳಿಗೂ ಅನ್ಯ ರಾಜ್ಯಗಳಿಗೆ ಭೇಟಿ ನೀಡುವ ಅವಕಾಶ ನೀಡಬೇಕು. ಭಾಷೆಯಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಭೇದಭಾವ ಬಿತ್ತುವ ಇಲಾಖೆಯ ನಡೆ ಸರಿಯಲ್ಲ' ಎಂದು ಹೇಳಿದ್ದಾರೆ.

'ಹಿಂದಿ ಭಾಷೆಯಲ್ಲಿ ಮಾತನಾಡುವ ವಿದ್ಯಾರ್ಥಿಗಳಿಗೆ ಅವಕಾಶ ನೀಡಿದರೆ, ಹಿಂದಿ ಭಾಷೆ ತಿಳಿಯದ ಇತರೆ ವಿದ್ಯಾರ್ಥಿಗಳಲ್ಲಿ ಭಾಷಾ ತಾರತಮ್ಯದ ಮನೋಭಾವ ಬೆಳೆಯುತ್ತದೆ' ಎಂದರು.

ಜೂನ್ 18ರಿಂದ ವಿದ್ಯುತ್ ಅದಾಲತ್

ಬೆಂಗಳೂರು: ರಾಜ್ಯದಾದ್ಯಂತ ಇದೇ ಶನಿವಾರದಿಂದ (ಜೂ. 18) ವಿದ್ಯುತ್ ಅದಾಲತ್ ಆರಂಭ ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದ್ದಾರೆ.

'ಪ್ರತಿ ತಿಂಗಳ 3ನೆ ಶನಿವಾರ ವಿದ್ಯುತ್ ಅದಾಲತ್ ನಡೆಸಿ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ, ಪರಿಹಾರ ಒದಗಿಸುವಂತೆ ಸೂಚಿಸಲಾಗಿತ್ತು. ಈ ಅಭಿಯಾನ ಜೂನ್ 18ರಿಂದ ಆರಂಭವಾಗಲಿದೆ. ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 600 ಸ್ಥಳಗಳಲ್ಲಿ ಅದಾಲತ್ ನಡೆಯಲಿದೆ' ಎಂದು ಅವರು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಅಹವಾಲು, ದೂರುಗಳಿಗೆ ತ್ವರಿತವಾಗಿ ಸ್ಪಂದಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಕೆಳ ಹಂತದಿಂದ ವಿದ್ಯುತ್ ಸರಬರಾಜು ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರವರೆಗೆ ಎಲ್ಲ ಅಧಿಕಾರಿಗಳು ಅದಾಲತ್‌ನಲ್ಲಿ ಪಾಲ್ಗೊಳ್ಳಬೇಕು. ಈ ಕುರಿತು ಸಚಿವಾಲಯಕ್ಕೆ ಮಾಹಿತಿ ಸಲ್ಲಿಸುವುದನ್ನೂ ಕಡ್ಡಾಯಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ವಿಶ್ವ ಹಿರಿಯರ ನಿಂದನೆ ತಡೆ ಜಾಗೃತಿ ದಿನ ಇಂದು • ಸಹಾಯವಾಣಿಗೆ ಬರುವ ಕರೆ ಹೆಚ್ಚಳ

ಹಿರಿಯರ ದೌರ್ಜನ್ಯ ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಹಿರಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಕಿರುಕುಳ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿವೆ. ಸಿಲಿಕಾನ್ ಸಿಟಿಯಲ್ಲಿ ಇಳಿವಯಸ್ಸಿನಲ್ಲಿ ನೆಮ್ಮದಿಯಿಂದ ಜೀವನ ನಡೆಸಲು ಹಿರಿಜೀವಗಳಿಗೆ ಸಾಧ್ಯವಾಗುತ್ತಿಲ್ಲ ಎಂಬುದು ಸಹಾಯವಾಣಿಗೆ ಬಂದ ಕರೆಗಳ ಅಂಕಿಅಂಶಗಳೇ ದೃಢಪಡಿಸುತ್ತಿವೆ.

ನಗರದಲ್ಲಿ ನೈಟಿಂಗೇಲ್ಸ್ ಟ್ರಸ್ಟ್ ಹಾಗೂ ರಾಜ್ಯ ಸರ್ಕಾರದ ಸಹಯೋಗದಲ್ಲಿ ಹಿರಿಯರ ಸಮಸ್ಯೆ ಪರಿಹರಿಸಲು 'ಸಹಾಯವಾಣಿ' ಆರಂಭಿಸಲಾಗಿತ್ತು. 20 ವರ್ಷಗಳಲ್ಲಿ ಸಹಾಯ ಕೋರಿ 2.35 ಲಕ್ಷ ಮಂದಿ ಹಿರಿಯರು ಸಹಾಯವಾಣಿ ಸಂಪರ್ಕಿಸಿದ್ದಾರೆ. ಅದರಲ್ಲಿ 10,591 ಗಂಭೀರ ಸ್ವರೂಪದ ದೂರುಗಳಾಗಿವೆ. 'ವಿಶ್ವ ಹಿರಿಯರ ನಿಂದನೆ ತಡೆ ಜಾಗೃತಿ ದಿನಾಚರಣೆ'ಯು ಬುಧವಾರ ನಡೆಯುತ್ತಿದ್ದು, ಅವರ ಸುರಕ್ಷತೆ ವಿಚಾರವು ಆಲೋಚಿಸುವಂತೆ ಮಾಡಿದೆ.

ಹಿರಿಯರೊಂದಿಗೆ ಆಪ್ತ ಸಮಾಲೋಚನೆ

'ಇತ್ತೀಚಿನ ಒತ್ತಡದ ಜೀವನ ಶೈಲಿಯು ಹಿರಿಯರ ಮೇಲೆ ಗಂಭೀರ ಪರಿಣಾಮ ಬೀರಿದೆ. ಸಹಾಯವಾಣಿಗೆ ಬಂದಿರುವ ಕರೆಗಳಲ್ಲಿ ಶೇ 40ರಷ್ಟು ಕರೆಗಳು ಕುಟುಂಬದವರು ಹಾಗೂ ಮಕ್ಕಳಿಂದಲೇ ನಿಂದನೆಗೆ ಒಳಗಾಗಿರುವ ಪ್ರಕರಣಗಳಾಗಿವೆ' ಎಂದು ನೈಟಿಂಗೇಲ್ಸ್ ಟ್ರಸ್ಟ್‌ನ ಟ್ರಸ್ಟಿ ಡಾ.ರಾಧಾ ಎಸ್. ಮೂರ್ತಿ ತಿಳಿಸುತ್ತಾರೆ.

'ದೇಶದಲ್ಲಿ ಹಿರಿಯರ ಸಂಖ್ಯೆ ಹೆಚ್ಚುತ್ತಿದೆ. ಕೊನೆ ಕಾಲದಲ್ಲಿ ತಂದೆ, ತಾಯಿಯನ್ನೇ ಪ್ರೀತಿಯಿಂದ ಕಾಣಬೇಕಾದವರೇ ನಿರ್ಲಕ್ಷ್ಯ ವಹಿಸುತ್ತಿರುವ ಪ್ರಕರಣಗಳು ಹೆಚ್ಚಾಗಿ ಬೆಳಕಿಗೆ ಬರುತ್ತಿವೆ. ಬೆಂಗಳೂರಿನಲ್ಲಿ ಸಹಾಯವಾಣಿಗೆ ಬಂದಿರುವ ದೂರುಗಳಲ್ಲಿ ಶೇ 80ರಷ್ಟು ದೂರುಗಳು ಕಿರುಕುಳ, ನಿರ್ಲಕ್ಷ್ಯ, ದೌರ್ಜನ್ಯ, ಹಣ ಅಥವಾ ಆಸ್ತಿಗಾಗಿ ಬೇಡಿಕೆಯ ದೂರುಗಳಾಗಿವೆ.

ದಾಖಲಾದ ದೂರುಗಳಲ್ಲಿ ಶೇ 69ರಷ್ಟು ದೂರುಗಳನ್ನು ಆಪ್ತ ಸಮಾಲೋಚನೆ ಮೂಲಕವೇ ಪರಿಹರಿಸಲಾಗಿದೆ' ಎಂದು ರಾಧಾ ಮಾಹಿತಿ ನೀಡುತ್ತಾರೆ.

'ಕೌಟುಂಬಿಕ ವಿವಾದದಲ್ಲಿ ಸಮನ್ವಯತೆ ತರಲು ಪ್ರಯತ್ನಿಸಲಾಗುತ್ತಿದೆ. ಸಮಸ್ಯೆ ಹೇಳಿಕೊಂಡು ಕರೆ ಮಾಡಿದ ಕೂಡಲೇ ಮನೆಗೆ ಭೇಟಿ ನೀಡಲಾಗುತ್ತಿದೆ. ಕಾಣೆಯಾದ ಹಿರಿಯರನ್ನು ಪತ್ತೆಹಚ್ಚಿ ಆಶ್ರಯ ಕಲ್ಪಿಸುತ್ತಿದ್ದೇವೆ. ವಿವಾದಗಳನ್ನು ಮಧ್ಯಸ್ಥಿಕೆಯ ಮೂಲಕವೂ ಪರಿಹರಿಸುತ್ತಿದ್ದೇವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ನಗರ ಪ್ರದೇಶದಲ್ಲಿ ಹಿರಿಯರ ನಿಂದನೆ ಪ್ರಕರಣಗಳು ಹೆಚ್ಚುತ್ತಿವೆ. ದೌರ್ಜನ್ಯಕ್ಕೆ ತುತ್ತಾದರೂ ಕೆಲವರು ಮರ್ಯಾದೆಗೆ ಅಂಜಿ ಕರೆ ಮಾಡುತ್ತಿಲ್ಲ

ಡಾ.ರಾಧಾ ಎಸ್. ಮೂರ್ತಿ, ಮ್ಯಾನೇಜಿಂಗ್ ಟ್ರಸ್ಟಿ, ನೈಟಿಂಗೇಲ್ಸ್ ಟ್ರಸ್ಟ್

ಮೂರು ವರ್ಷಗಳಲ್ಲಿ ಸಹಾಯವಾಣಿಗೆ ಬಂದ ಗಂಭೀರ ಸ್ವರೂಪದ ದೂರುಗಳ ಸಂಖ್ಯೆ

ವರ್ಷ	ಪ್ರಕರಣ ಸಂಖ್ಯೆ
2019-20	251
2020-21	262
2021-22	203

ನಗರದ ರಸ್ತೆ ಗುಂಡಿ ವೀಕ್ಷಿಸಿ ಮೋದಿಗೆ ಎಎಪಿ ಆಹ್ವಾನ

ಬೆಂಗಳೂರು: ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ಮೈಸೂರಿಗೆ ಆಗಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರಿಗೆ ಬೆಂಗಳೂರಿನ ರಸ್ತೆ ಗುಂಡಿಗಳನ್ನು ವೀಕ್ಷಿಸುವಂತೆ ಆಮ್ ಆದ್ಮಿ ಪಾರ್ಟಿ ಆಗ್ರಹಿಸಿದ್ದು, ಇದೇ 17ರಂದು 'ಪ್ರಧಾನಿಗಳೇ, ಬೆಂಗಳೂರಿನ ರಸ್ತೆ ಗುಂಡಿಗಳನ್ನು ನೋಡಿ ಬನ್ನಿ' ಎಂಬ ಬೃಹತ್ ಪೋಸ್ಟ್ ಕಾರ್ಡ್ ಚಳವಳಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದೆ.

ಕಳೆದ ಐದು ವರ್ಷಗಳಲ್ಲಿ ಬೆಂಗಳೂರಿನ ರಸ್ತೆ ಅಭಿವೃದ್ಧಿಗೆ ₹20 ಸಾವಿರ ಕೋಟಿ ಹಣವನ್ನು ಬಿಡುಗಡೆಗೊಳಿಸಲಾಗಿದೆ. ಆದರೆ ಬಿಜೆಪಿ ಭ್ರಷ್ಟಾಚಾರದಿಂದ ಹಣವೆಲ್ಲಾ ಜನಪ್ರತಿನಿಧಿಗಳ ಜೇಬಿಗೆ ಸೇರಿದೆ.

ರಸ್ತೆಗಳೆಲ್ಲಾ ಗುಂಡಿಗಳಾಗಿ ಮಾರ್ಪಟ್ಟಿವೆ. ಎಎಪಿ ಇದರ ವಿರುದ್ಧ ನಿರಂತರ ಪ್ರತಿಭಟನೆ ಮತ್ತು ಅಭಿಯಾನಗಳನ್ನು ನಡೆಸಿ 70ಕ್ಕೂ ಹೆಚ್ಚು ದೂರುಗಳನ್ನು ದಾಖಲಿಸಿದೆ. ದುರಸ್ತಿಯಾಗದ ಇಂತಹ ರಸ್ತೆಗಳಲ್ಲಿ ಅಪಘಾತದಿಂದ ಮೃತಪಟ್ಟವರ ಕುಟುಂಬಗಳಿಗೆ ಸೂಕ್ತ ಪರಿಹಾರವನ್ನು ಒದಗಿಸಿಲ್ಲ ಎಂದು ಎಎಪಿ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದ ನಗರವಾಗಿ ಬೆಳೆದಿದೆ. ದೇಶದಲ್ಲಿ ಅತಿ ಹೆಚ್ಚು ತೆರಿಗೆ ಸಂಗ್ರಹವಾಗುವ ಎರಡನೇ ನಗರವಾಗಿದೆ.

ಆದರೆ ಡಬಲ್ ಎಂಜಿನ್ ಸರ್ಕಾರವೆಂದು ಕರೆಸಿಕೊಳ್ಳುವ ಬಿಜೆಪಿ ಸರ್ಕಾರವು ಮೂಲ ಸೌಕರ್ಯ ಅಭಿವೃದ್ಧಿಯನ್ನು ನಿರ್ಲಕ್ಷಿಸಿರುವುದರಿಂದ ಇಲ್ಲಿನ ಬೃಹತ್ ಉದ್ದಿಮೆಗಳು ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿವೆ ಎಂದು ಆರೋಪಿಸಿದರು.

ಕಲುಷಿತ ನೀರು: ಮತ್ತೊಬ್ಬ ಸಾವು

ರಾಯಚೂರು: ಕಲುಷಿತ ನೀರು ಕುಡಿದು ವಾಂತಿ– ಭೇದಿಯಿಂದ ಬಳಲುತ್ತಿದ್ದ ನಯೀಮುದ್ದೀನ್ (50) ಮಂಗಳವಾರ ನಿಧನರಾದರು. ಇದರೊಂದಿಗೆ ಮೃತರ ಸಂಖ್ಯೆ 6ಕ್ಕೇರಿದೆ. ಇನ್ನೂ ಕೆಲವರಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮುಂದುವರಿದಿದೆ.

ಮೀಟರ್ ಬಡ್ಡಿ: ₹ 33 ಲಕ್ಷ ಸಮೇತ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಟರ್ ಬಡ್ಡಿ ದಂಧೆ ನಡೆಸುತ್ತ ಸಾರ್ವಜನಿಕರಿಗೆ ಕಿರುಕುಳ ನೀಡುತ್ತಿದ್ದ ಆರೋಪದಡಿ ಸುದರ್ಶನ್ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಆವಲಹಳ್ಳಿ ನಿವಾಸಿ ಸುದರ್ಶನ್ ಅಕ್ರಮವಾಗಿ ಮೀಟರ್ ಬಡ್ಡಿ ವ್ಯವಹಾರ ನಡೆಸುತ್ತಿದ್ದ. ಈ ಬಗ್ಗೆ ಕೆಲ ಸಾರ್ವಜನಿಕರಿಂದ ದೂರುಗಳು ಬಂದಿದ್ದವು. ಮನೆ ಮೇಲೆ ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'₹ 33 ಲಕ್ಷ ನಗದು, 800 ಗ್ರಾಂ ಚಿನ್ನಾಭರಣ, ಖಾಲಿ ಚೆಕ್‌ಗಳು, ವಾಹನಗಳ ನೋಂದಣಿ ಪತ್ರಗಳು ಹಾಗೂ ಆಸ್ತಿ ದಾಖಲೆಗಳನ್ನು ಆರೋಪಿಯಿಂದ ಜಪ್ತಿ ಮಾಡಲಾಗಿದೆ.'

'ಬೀದಿ–ಬದಿ ಹಾಗೂ ತಳ್ಳುಗಾಡಿ ವ್ಯಾಪಾರಿಗಳು ಸೇರಿದಂತೆ ಹಲವರಿಗೆ ಸಾಲ ನೀಡಿ ಶೇ 6ರಷ್ಟು ಬಡ್ಡಿ ವಸೂಲಿ ಮಾಡುತ್ತಿದ್ದ. ಬಡ್ಡಿ ನೀಡದಿದ್ದಾಗ, ಮೀಟರ್ ಬಡ್ಡಿ ಪಡೆಯುತ್ತಿದ್ದ' ಎಂದು ಅಧಿಕಾರಿ ತಿಳಿಸಿದರು.

ಕಾಂಗ್ರೆಸ್ ಮುಖಂಡರಿಬ್ಬರ ಬಂಧನ

ಬೆಂಗಳೂರು: ಉಪ್ಪಾರಪೇಟೆ ಠಾಣೆ ವ್ಯಾಪ್ತಿಯ ಮಿಂಚು ಬಾರ್‌ನಲ್ಲಿ ವ್ಯಾಪಾರಿಯೊಬ್ಬರ ಜೊತೆ ಜಗಳ ತೆಗೆದು ಅವರ ಕೊಲೆಗೆ ಯತ್ನಿಸಿದ್ದ ಆರೋಪದಡಿ ಕಾಂಗ್ರೆಸ್ ಮುಖಂಡರಿಬ್ಬರನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

'ಯೂತ್ ಕಾಂಗ್ರೆಸ್‌ನ ಬೆಂಗಳೂರು ನಗರ ಘಟಕದ ಮಾಜಿ ಕಾರ್ಯದರ್ಶಿ ಅಜಯ್ (24) ಹಾಗೂ ಕೆ.ಜಿ. ಹಳ್ಳಿ ಘಟಕದ ಕಾಂಗ್ರೆಸ್ ಮುಖಂಡ ಪ್ರಸನ್ನ (40) ಬಂಧಿತರು. ಹಲ್ಲೆಯಿಂದ ಗಾಯಗೊಂಡಿರುವ ಎಂ. ಸುಂದರ್ ದೂರು ಆಧರಿಸಿ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆರೋಪಿ ಅಜಯ್, ಹೊರಮಾವು ಬಳಿಯ ಸರ್ವೀಸ್ ಅಪಾರ್ಟ್‌ಮೆಂಟ್‌ವೊಂದರ ಮಾಲೀಕ. ಇನ್ನೊಬ್ಬ ಆರೋಪಿ ಪ್ರಸನ್ನ, ಕಟ್ಟಡ ನಿರ್ಮಾಣ ಉದ್ಯಮ ನಡೆಸುತ್ತಿದ್ದಾರೆ' ಎಂದೂ ತಿಳಿಸಿದರು.

ಮೊಬೈಲ್ ವಿಚಾರವಾಗಿ ಜಗಳ: 'ದೂರುದಾರ ಸುಂದರ್ ಹಾಗೂ ಸ್ನೇಹಿತರು, ಬಾರ್‌ಗೆ ತೆರಳಿದ್ದಾಗ ಎದುರಿನ ಟೇಬಲ್‌ನಲ್ಲಿದ್ದ ಆರೋಪಿಗಳು, ತಮ್ಮ ಮೊಬೈಲ್ ಕಾಣಿಸುತ್ತಿಲ್ಲವೆಂದು ಹೇಳಿ ರಂಪಾಟ ಮಾಡಿದ್ದರು'

'ಸುಂದರ್ ಬಳಿ ಹೋಗಿದ್ದ ಆರೋಪಿಗಳು, ತಮ್ಮ ಮೊಬೈಲ್ ಎಲ್ಲಿದೆ ಎಂಬುದಾಗಿ ಪ್ರಶ್ನಿಸಿದ್ದರು. ತಮಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಂತೆ ಅವರ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಚಾಕುವಿನಿಂದ ತಲೆಗೆ ಇರಿದು ಕೊಲೆಗೆ ಯತ್ನಿಸಿದ್ದರೆಂಬುದು ಗೊತ್ತಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಶೀಲ ಶಂಕಿಸಿ ಚಾಕು ಇರಿತ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಮಂಜುಳಾ (48) ಎಂಬುವರನ್ನು ಚಾಕುವಿನಿಂದ ಇರಿದು ಕೊಲ್ಲಲು ಯತ್ನಿಸಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪತಿ ರವಿಯನ್ನು (58) ಪೊಲೀಸರು ಬಂಧಿಸಿದ್ದಾರೆ.

'27 ವರ್ಷಗಳ ಹಿಂದೆ ದಂಪತಿ, ವಿನಾಯಕ್ ಬಡಾವಣೆಯಲ್ಲಿ ವಾಸವಿದ್ದರು. ಸೋಮವಾರ ಸಂಜೆ 4.30ರ ಸುಮಾರಿಗೆ ಮಂಜುಳಾ ಅವರಿಗೆ ಆರೋಪಿ ಚಾಕುವಿನಿಂದ ಇರಿದಿದ್ದ. ಮಂಜುಳಾ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಸೇರಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮಂಜುಳಾ ಅವರ ಬೆನ್ನು ಹಾಗೂ ಕೈಗೆ ಗಾಯವಾಗಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಪ್ರಾಣಕ್ಕೆ ಅಪಾಯವಿಲ್ಲವೆಂದು ವೈದ್ಯರು ತಿಳಿಸಿದ್ದಾರೆ.'

'ಆರೋಪಿ ರವಿ ಪತ್ನಿ ಶೀಲದ ಬಗ್ಗೆ ಅನುಮಾನಪಟ್ಟು ಪದೇ ಪದೇ ಜಗಳ ತೆಗೆಯುತ್ತಿದ್ದ. ಸೋಮವಾರವೂ ಜಗಳ ತೆಗೆದು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಪೊಲೀಸರು ತಿಳಿಸಿದರು.

ವಾಹನ ಕಳವು: ಮೂವರ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ, ಮನೆಗಳ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕದಿಯುತ್ತಿದ್ದ ಆರೋಪದಡಿ ಮೂವರನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಂದ್ರಪ್ಪ, ಅಶೋಕ ಹಾಗೂ ಸುದೀಪ್ ಬಂಧಿತರು. ಇವರಿಂದ ₹ 3.50 ಲಕ್ಷ ಮೌಲ್ಯದ 5 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕದ್ದ ವಾಹನದಲ್ಲಿ ಜೂನ್ 12ರಂದು ಆರೋಪಿಗಳು ಹೊರಟಿದ್ದರು. ಅವರ ಬಗ್ಗೆ ಅನುಮಾನಗೊಂಡಿದ್ದ ಸಿಬ್ಬಂದಿ, ತಡೆದು ಪರಿಶೀಲಿಸಿದ್ದರು. ವಾಹನದ ಡಿಕ್ಕಿಯಲ್ಲಿ ಡ್ರ್ಯಾಗರ್ ಸಿಕ್ಕಿತ್ತು. ಆಗಲೇ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ವಾಹನ ಕಳ್ಳತನ ಪ್ರಕರಣಗಳು ಬಯಲಾದವು' ಎಂದೂ ತಿಳಿಸಿದರು.

ಎಣ್ಣೆಗೆ ಎಂಜಲು ಉಗಿದು ಪಾಪ್‌ಕಾರ್ನ್ ತಯಾರಿ: ಬಂಧನ

ಬೆಂಗಳೂರು: ಅಡುಗೆ ಎಣ್ಣೆಗೆ ಎಂಜಲು ಉಗಿದು ಅದರಲ್ಲೇ ಪಾಪ್‌ಕಾರ್ನ್ ತಯಾರಿಸಿ ಮಾರುತ್ತಿದ್ದ ಆರೋಪದಡಿ ನಯಾಜ್ ಪಾಷಾ (21) ಎಂಬಾತನನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

'ಜಯನಗರ ಒಂದನೇ ಹಂತದ ಸೋಮೇಶ್ವರನಗರ ನಿವಾಸಿ ನಯಾಜ್, ಲಾಲ್‌ಬಾಗ್ ಉದ್ಯಾನದಲ್ಲಿ ಗಾಜಿನ ಮನೆ ಹಿಂಭಾಗದಲ್ಲಿ ಪಾಪ್‌ಕಾರ್ನ್ ಮಳಿಗೆ ಇಟ್ಟುಕೊಂಡಿದ್ದ. ಸಾರ್ವಜನಿಕರ ಹೇಳಿಕೆ ಆಧರಿಸಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಜೂನ್ 11ರಂದು ಈತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ನಿತ್ಯವೂ ಉದ್ಯಾನಕ್ಕೆ ಬರುತ್ತಿದ್ದ ಆರೋಪಿ ಪಾಪ್‌ಕಾರ್ನ್ ಮಾರುತ್ತಿದ್ದ. ಉದ್ಯಾನಕ್ಕೆ ಬರುವ ಸಾರ್ವಜನಿಕರು, ಮಕ್ಕಳು ಹಾಗೂ ವೃದ್ಧರು ಈತನ ಬಳಿ ಪಾಪ್‌ಕಾರ್ನ್ ಖರೀದಿಸಿ ತಿನ್ನುತ್ತಿದ್ದರು' ಎಂದು ತಿಳಿಸಿದರು.

ಎಂಜಲು ಉಗಿದು ಕರಿಯುತ್ತಿದ್ದ: 'ಬಾಣಲಿಯಲ್ಲಿ ಎಣ್ಣೆ ಹಾಕುತ್ತಿದ್ದ ಆರೋಪಿ, ಮೂರು–ನಾಲ್ಕು ಬಾರಿ ಎಂಜಲು ಉಗಿಯುತ್ತಿದ್ದ. ನಂತರ, ಸ್ವಲ್ಪ ಬಿಸಿ ಮಾಡಿ ಪಾಪ್‌ಕಾರ್ನ್‌ಗಳನ್ನು ಕರಿಯುತ್ತಿದ್ದ. ಅವುಗಳನ್ನೇ ಸಾರ್ವಜನಿಕರಿಗೆ ಮಾರುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಕೋವಿಡ್ ಹರಡುವಿಕೆ ಭೀತಿ ಇಂದಿಗೂ ಇದೆ. ಸಾರ್ವಜನಿಕರಿಗೆ ಸೋಂಕು ಹರಡಿಸುವ ಉದ್ದೇಶದಿಂದಲೇ ಆರೋಪಿಯು ಎಣ್ಣೆಯಲ್ಲಿ ತನ್ನ ಎಂಜಲು ಉಗಿದು ಆಹಾರ ತಯಾರಿಸುತ್ತಿದ್ದ. ಇದರಿಂದ ಸಾರ್ವಜನಿಕರ ಪ್ರಾಣಕ್ಕೆ ಕುತ್ತು ತರುವ ಉದ್ದೇಶ ಆರೋಪಿಯದ್ದು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿದರು.

ಮೆಟ್ರೊ ಕಾಮಗಾರಿ ಕಾರ್ಮಿಕ ಕೊಲೆ

ಬೆಂಗಳೂರು: ಮೆಟ್ರೊ ಕಾಮಗಾರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಬಿಕಾಸ್ (37) ಅವರನ್ನು ಸೋಮವಾರ ರಾತ್ರಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಪುಲಿಕೇಶಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪಶ್ಚಿಮ ಬಂಗಾಳದ ಬಿಕಾಸ್, ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಕಂಪನಿಯೊಂದರ ಅಡಿಯಲ್ಲಿ ಕಾರ್ಮಿಕರಾಗಿ ಮೆಟ್ರೊ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಿಡಿಮದ್ದು ಸ್ಫೋಟ, ಗೋಡೆಗಳು ಬಿರುಕು

ಆಲೂರು: ಎತ್ತಿನಹೊಳೆ ಯೋಜನೆ ಕಾಮಗಾರಿಯಲ್ಲಿ ಭಾರಿ ಗಾತ್ರದ ಸಿಡಿಮದ್ದುಗಳನ್ನು ಸಿಡಿಸುತ್ತಿರುವುದರಿಂದ ಮನೆಗಳು ಬಿರುಕು ಬಿಟ್ಟು ಕುಸಿಯುವ ಹಂತದಲ್ಲಿವೆ. ಕೂಡಲೇ ಕಾಮಗಾರಿ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಕಾಮತಿ, ಜಿ.ಜಿ. ಕೊಪ್ಪಲು, ಲಕ್ಷ್ಮೀಪುರ ಮತ್ತು ಸುತ್ತಲಿನ ಗ್ರಾಮಸ್ಥರು ಗ್ರಾಮಸ್ಥರು, ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ನಟರಾಜ್ ನಾಕಲಗೂಡು ಮಾತನಾಡಿ, 'ಎತ್ತಿನಹೊಳೆ ಯೋಜನೆ ಕಾಮಗಾರಿಗೆ ರಾತ್ರಿ ವೇಳೆ ಭಾರಿ ಗಾತ್ರದ ಸಿಡಿಮದ್ದನ್ನು ಬಳಸಲಾಗುತ್ತಿದೆ. ಇದರಿಂದ ಮನೆಗಳ ಗೋಡೆಗಳು ಬಿರುಕು ಬಿಡುತ್ತಿವೆ. ಭಾರಿ ಸದ್ದಾಗುವುದರಿಂದ ಗರ್ಭಿಣಿ, ಬಾಣಂತಿಯರು, ಹೃದಯ ಸಂಬಂಧಿ ಕಾಯಿಲೆಯವರು, ವೃದ್ಧರು, ಮಕ್ಕಳು ಭಯದಿಂದ ಬದುಕು ಸಾಗಿಸಬೇಕಾಗಿದೆ. ಈ ಬಗ್ಗೆ ಸಾಕಷ್ಟು ಬಾರಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ' ಎಂದು ದೂರಿದರು.

'ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಸಾಕಷ್ಟು ರೈತರು ತಮ್ಮ ಜಮೀನು ಕಳೆದುಕೊಂಡಿದ್ದಾರೆ. ಇದೀಗ ಮನೆಗಳನ್ನು ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ' ಎಂದು ಅವರು ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಸಹಯೋಗದೊಂದಿಗೆ

ಸನ್ಮಾನ್ಯ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅಡಿಯಲ್ಲಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ

"ವಿವಿಧ ಅಭಿವೃದ್ಧಿ ಕಾಮಗಾರಿಗಳ" ಶಂಕುಸ್ಥಾಪನೆ ಹಾಗೂ ಉದ್ಘಾಟನೆ

ಉದ್ಘಾಟನೆ: ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಸನ್ಮಾನ್ಯ ಮುಖ್ಯಮಂತ್ರಿಗಳು

ದಿನಾಂಕ : 15ನೇ ಜೂನ್2022, ಬುಧವಾರ ಸಮಯ : ಬೆಳಿಗ್ಗೆ 11.00 ಗಂಟೆಗೆ



ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್‌ನ ವ್ಯಾಪ್ತಿಯಲ್ಲಿ ಅಂದಾಜು ರೂ.930 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿರುವ ಬಹುಮಹಡಿ ವಸತಿ ಕಟ್ಟಡದ ಉದ್ಘಾಟನೆ

ಅಂದಾಜು ರೂ.500 ಲಕ್ಷ ವೆಚ್ಚದಲ್ಲಿ ನವೀಕರಣಗೊಂಡಿರುವ "ಬೈರಸಂದ್ರ ಕೆರೆ"ಯ ಉದ್ಘಾಟನೆ

ಅಂದಾಜು ರೂ.1875.56 ಲಕ್ಷ ವೆಚ್ಚದಲ್ಲಿ ಗಾಂಧಿಬಜಾರ್‌ನಲ್ಲಿ ಬಹುಮಹಡಿ ವಾಹನ ನಿಲ್ದಾಣ ಕಟ್ಟಡ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ

ಜ್ಯೋತಿ ಬೆಳಗಿಸುವವರು: ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ; ಶ್ರೀ ಎಂ. ರಾಜೀವ್ ಚಂದ್ರಶೇಖರ್, ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ: ಶ್ರೀ ಉದಯ್.ಬಿ. ಗರುಡಾಚಾರ್, ಮಾನ್ಯ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಘನ ಉಪಸ್ಥಿತಿ: ಶ್ರೀ ತೇಜಸ್ವಿ ಸೂರ್ಯ, ಮಾನ್ಯ ಸಂಸದರು (ಲೋಕಸಭೆ), ಬೆಂಗಳೂರು ದಕ್ಷಿಣ ಕ್ಷೇತ್ರ

ಮುಖ್ಯ ಅತಿಥಿಗಳು: ಶ್ರೀ ಆರ್. ಅಶೋಕ, ಮಾನ್ಯ ಕಂದಾಯ ಸಚಿವರು; ಡಾ|| ಸಿ.ಎನ್. ಅಶ್ವತ್ಥ ನಾರಾಯಣ, ಮಾನ್ಯ ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು; ಶ್ರೀ ವಿ. ಸೋಮಣ್ಣ, ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು; ಶ್ರೀ ಬಿ.ಎ. ಬಸವರಾಜ, ಮಾನ್ಯ ನಗರಾಭಿವೃದ್ಧಿ ಸಚಿವರು; ಶ್ರೀ ಎಸ್.ಟಿ. ಸೋಮಶೇಖರ್, ಮಾನ್ಯ ಸಹಕಾರ ಸಚಿವರು

ಶ್ರೀ ಕೆ. ಗೋಪಾಲಯ್ಯ, ಮಾನ್ಯ ಅಬಕಾರಿ ಸಚಿವರು; ಶ್ರೀ ಎನ್. ನಾಗರಾಜು (ಎಂ.ಟಿ.ಬಿ), ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು; ಶ್ರೀ ಎನ್. ಮುನಿರತ್ನ, ಮಾನ್ಯ ತೋಟಗಾರಿಕೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು; ಶ್ರೀ ಎಸ್.ಆರ್. ವಿಶ್ವನಾಥ್, ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ; ಶ್ರೀ ಎಂ. ಕೃಷ್ಣಪ್ಪ, ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ; ಶ್ರೀ ಎಂ. ಸತೀಶ್ ರೆಡ್ಡಿ, ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ; ಶ್ರೀ ಬಿ.ಕೆ. ಹರಿಪ್ರಸಾದ್, ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ ಹಾಗೂ ಶಾಸಕರು (ವಿಧಾನ ಪರಿಷತ್); ಶ್ರೀ ಕೆ.ಸಿ. ರಾಮಮೂರ್ತಿ, ಮಾನ್ಯ ಸಂಸದರು (ರಾಜ್ಯಸಭೆ)

ಶ್ರೀ ಜೈರಾಮ್ ರಮೇಶ್, ಮಾನ್ಯ ಸಂಸದರು (ರಾಜ್ಯಸಭೆ); ಡಾ|| ಎಲ್. ಹನುಮಂತಯ್ಯ, ಮಾನ್ಯ ಸಂಸದರು (ರಾಜ್ಯಸಭೆ); ಶ್ರೀ ಜಿ.ಸಿ. ಚಂದ್ರಶೇಖರ್, ಮಾನ್ಯ ಸಂಸದರು (ರಾಜ್ಯಸಭೆ); ಶ್ರೀ ನಾರಾಯಣ ಕೊರಗಪ್ಪ, ಮಾನ್ಯ ಸಂಸದರು (ರಾಜ್ಯಸಭೆ); ಶ್ರೀ ಪುಟ್ಟಣ್ಣ, ಮಾನ್ಯ ಶಾಸಕರು (ವಿಧಾನ ಪರಿಷತ್) ಶಿಕ್ಷಕರ ಕ್ಷೇತ್ರ (ಬೆಂಗಳೂರು ನಗರ); ಶ್ರೀ ಕೆ. ಗೋವಿಂದರಾಜ್, ಮಾನ್ಯ ಶಾಸಕರು (ವಿಧಾನ ಪರಿಷತ್); ಶ್ರೀ ಪಿ.ಆರ್. ರಮೇಶ್, ಮಾನ್ಯ ಶಾಸಕರು (ವಿಧಾನ ಪರಿಷತ್); ಶ್ರೀ ಟಿ.ಎ. ಶರವಣ, ಮಾನ್ಯ ಶಾಸಕರು (ವಿಧಾನ ಪರಿಷತ್); ಶ್ರೀ ಅ. ದೇವೇಗೌಡ, ಮಾನ್ಯ ಶಾಸಕರು (ವಿಧಾನ ಪರಿಷತ್) ಪದವೀಧರರ ಕ್ಷೇತ್ರ (ಬೆಂಗಳೂರು ನಗರ)

ಶ್ರೀ ಮುನಿರಾಜು ಗೌಡ .ಪಿ.ಎಂ (ತುಳಸಿ), ಮಾನ್ಯ ಶಾಸಕರು (ವಿಧಾನ ಪರಿಷತ್); ಶ್ರೀ ಹೆಚ್.ಎಸ್. ಗೋಪಿನಾಥ ರೆಡ್ಡಿ, ಮಾನ್ಯ ಶಾಸಕರು (ವಿಧಾನ ಪರಿಷತ್); ಶ್ರೀ ಎಂ. ನಾಗರಾಜು, ಮಾನ್ಯ ಶಾಸಕರು (ವಿಧಾನ ಪರಿಷತ್); ಶ್ರೀ ಎಸ್. ಕೇಶವ ಪ್ರಸಾದ್, ಮಾನ್ಯ ಶಾಸಕರು (ವಿಧಾನ ಪರಿಷತ್)

ನಗರದ ಎಲ್ಲಾ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ವರಿಗೂ ಆದರದ ಸ್ವಾಗತ

ರಾಕೇಶ್ ಸಿಂಗ್, ಭಾ.ಆ.ಸೇ, ಆಡಳಿತಗಾರರು, ಬಿಬಿಎಂಪಿ
ತುಷಾರ್ ಗಿರಿ ನಾಥ್, ಭಾ.ಆ.ಸೇ, ಮುಖ್ಯ ಆಯುಕ್ತರು, ಬಿಬಿಎಂಪಿ
ಪಿ. ರಾಜೇಂದ್ರ ಚೋಳನ್, ಭಾ.ಆ.ಸೇ, ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು"
ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್.ಆರ್. ಚೌಕ, ಬೆಂಗಳೂರು–560002

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ-1, 6ನೇ ಮತ್ತು 7ನೇ ಮಹಡಿ,
ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-560052.
ಸಂ.: ಕವಶಿಸಸ/ಆಡಳಿತ(ಆಹಾರ ಪೂರೈಕೆ)/ಸಿ.ಆರ್.-40/2022-23 ದಿನಾಂಕ: 13.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಡ್ಯ, ಕೊಪ್ಪಳ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿನ ವಸತಿ ಶಾಲೆಗಳು / ಕಾಲೇಜುಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು (**ಕ್ರಮವಾಗಿ ಇಂಡೆಂಟ್ ಸಂಖ್ಯೆ: 285 Call–2, 287 Call–2, 295 Call–2, 297 Call–2, 301 Call–2, 303 Call–2 & 304 Call–2**) ಇ-ಪೋರ್ಟಲ್ ಮುಖಾಂತರ ದಿನಾಂಕ **14.06.2022**ರಂದು ಜಿಲ್ಲಾವಾರು ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **30.06.2022**ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು
ಕ.ವ.ಶಿ.ಸ.ಸಂ.
ವಾಸಾಸಂಇ/ವಾಪ್ರ/ಎಲ್‌ಸಿ/879/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)
ಜಂಟಿ ಕೃಷಿ ನಿರ್ದೇಶಕರಕಾರ್ಯಾಲಯ, ವಿಜಯನಗರ
ಶಂಕರ್‌ಗೌಡ ಲೇಔಟ್, ಸರೋಜಿನಿ ಪುಲ್ಲಾರೆಡ್ಡಿ ನಿಲಯಂ, ಎಂ.ಪಿ.ಪ್ರಕಾಶ ನಗರ, ಹೊಸಪೇಟೆ-583 201.ದೂ.ಸಂ.: 08394-200240
ಇ-ಮೇಲ್:jdavijayanagar@gmail.com.
ಸಂ. ಜಕೃನಿ.ವಿನ/ಸಿ/41/2022-23 ದಿನಾಂಕ: 13.06.2022

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿಜಂಟಿ ಕೃಷಿ ನಿರ್ದೇಶಕರು, ವಿಜಯನಗರ ಮತ್ತು ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆಕೃಷಿ ನಿರ್ದೇಶನಾಲಯ/ರೈತ ಸಂಪರ್ಕ ಕೇಂದ್ರ ದಾಸ್ತಾನು ನಿರ್ವಹಣೆ/ ಕೃಷಿ ಸಂಜೀವಿನಿ ಯೋಜನೆಯಡಿಯಲ್ಲಿ ಬೆರಳಚ್ಚುಗಾರರು/ ದಾಸ್ತಾನು ನಿರ್ವಹಣೆ ಸಹಾಯಕರು/ ಕೃಷಿ ಸಂಜೀವಿನಿ ತಾಂತ್ರಿಕ ಸಾಹಯಕ/ ಕೃಷಿ ಸಂಜೀವಿನಿ ವಾಹನ ಚಾಲಕರು/ ವಾಹನ ಚಾಲಕರು/ ಗ್ರೂಪ್ "ಡಿ" ಹುದ್ದೆಗಳಿಗೆ ಸಿಬ್ಬಂದಿಗಳನ್ನು ಒದಗಿಸಲು ಅರ್ಹ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಸ್ಥೆಯವರಿಂದ ಇ-ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **https://www.eproc.karnataka.gov.in** ವೆಬ್‌ಸೈಟನ್ನು ಸಂಪರ್ಕಿಸಲು ಕೋರಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.06.2022 ರಂದು ಸಂಜೆ: 4.00 ಘಂಟೆಗೆ ನಿಗದಿಪಡಿಸಲಾಗಿದೆ.
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/- ಜಂಟಿ ಕೃಷಿ ನಿರ್ದೇಶಕರು, ವಿಜಯನಗರ.
ಡಿಐಪಿಆರ್/ಹೊಸಪೇಟ್/21/ಎಂಸಿಎ/2022-23

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ
ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ-1,3,4ಟೆಂಡರ್/2022-23/422 ದಿನಾಂಕ14-06-2022

ಅಲ್ಪಾವಧಿ ಇ-ಪ್ರೋಕ್ಯೂರಮೆಂಟ್-ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

1) ಹುನಗುಂದ ತಾಲ್ಲೂಕಿನ ಕಾಮಗಾರಿಯ ವಿವರ
   1) **Krishnapura Indent No-40425 APT- 66.76 lakhs call-4**
2) ಬದಾಮಿ ತಾಲ್ಲೂಕಿನ ಕಾಮಗಾರಿಯ ವಿವರ
   1) **Bankakeri Indent No-41529 APT- 57.03 lakhs**
3) ಮುಧೋಳ ತಾಲ್ಲೂಕಿನ ಕಾಮಗಾರಿಯ ವಿವರ
   1) **H K Vasti Indent No-41675 APT- 20.73 lakhs**
   2) **Bhantanur Indent No-41674 APT- 65.83 lakhs**
4) ಲೆಕ್ಕ ಶೀರ್ಷಿಕೆ: **JJM-2215**
5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್ ಡಿ ಮೊತ್ತ ಇ-ಪ್ರೋಕ್ಯೂರಮೆಂಟ್ ಪ್ರಕಾರ
6) ಟೆಂಡರ್ ಪಾರಂ ಸಲ್ಲಿಸುವ ಅಂತಿಮ ದಿನಾಂಕ: **21-06-2022 ಸಾಯಂಕಾಲ 5.30 ಗಂಟೆಯ ವರೆಗೆ**
7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23-06-2022 ಮಧ್ಯಾಹ್ನ 11.00 ಗಂಟೆಯ ನಂತರ (Two Cover)**
8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **23-06-2022 11.00 ಗಂಟೆಯ ನಂತರ (Single Cover)**
9) ಆರ್ಥಿಕ ಬಿಡ್ ತೆರೆಯುವ ದಿನಾಂಕ: **27-06-2022 11.00 ಗಂಟೆಯ ನಂತರ (Two Cover)**
10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ **ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ**

ಟಿಪ್ಪಣಿ:- 1) ಟೆಂಡರ ಮೊತ್ತಕ್ಕಿಂತ ಕಡಿಮೆ ದರವನ್ನು ನಮೂದಿಸಿದಲ್ಲಿ ಒಟ್ಟು ವ್ಯತ್ಯಾಸ ಮೊತ್ತದ DD/FDRನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ಇವರ ಹೆಸರಿನಲ್ಲಿ ಪಡೆದು ಸ್ಕ್ಯಾನ್ ಮಾಡಿ ಆನ್‌ಲೈನ್ ಮುಖಾಂತರ ಟೆಂಡರ ಜೊತೆಗೆ ಅಪ್‌ಲೋಡ್ ಮಾಡಬೇಕು. ಟೆಂಡರ ಅನುಮೋದನೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
2) ಗುತ್ತಿಗೆ ಮೊತ್ತಕ್ಕೆ **12%** GST ಯನ್ನು ಸೇರಿಸಿ ಕೆಲಸದ ಆದೇಶ ನೀಡಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಕುನೀಮತ್ತುನೈ ವಿಭಾಗ, ಬಾಗಲಕೋಟ
ವಾ.ಸಾ.ಇ/ಬಾಗಲಕೋಟೆ/142/2022-23/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಇಂದಿನಿಂದ ಬೀದರ್– ಬೆಂಗಳೂರು ವಿಮಾನ ಸೇವೆ

ಬೀದರ್: ಬೀದರ್-ಬೆಂಗಳೂರು ನಡುವೆ 'ಸ್ಟಾರ್ ಏರ್' ವಿಮಾನ ಸಂಚಾರ ಬುಧವಾರ (ಜೂನ್15) ಆರಂಭವಾಗಲಿದೆ.

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಅವರು ವಿಮಾನ ಸೇವೆಗೆ ಚಾಲನೆ ನೀಡುವರು.

ವಿಮಾನ ಸೇವೆಯು ಭಾನುವಾರ, ಸೋಮವಾರ, ಬುಧವಾರ ಹಾಗೂ ಶುಕ್ರವಾರ ಲಭ್ಯವಿರಲಿದೆ. ಒಂದು ಬದಿಗೆ ಒಂದು ಮತ್ತು ಇನ್ನೊಂದು ಬದಿಗೆ ಎರಡು ಆಸನಗಳಿರುವ ವಿಮಾನದಲ್ಲಿ ಒಟ್ಟು 50 ಮಂದಿ ಸಂಚರಿಸಬಹುದು. 50 ನಿಮಿಷಗಳಲ್ಲಿ ವಿಮಾನ ಬೀದರ್‌ನಿಂದ ಬೆಂಗಳೂರಿಗೆ ತಲುಪಲಿದ್ದು, ಪ್ರಯಾಣ ದರ ₹ 2,599 ನಿಗದಿ ಪಡಿಸಲಾಗಿದೆ.

ಮಧ್ಯಾಹ್ನ 2.55ಕ್ಕೆ ವಿಮಾನ ಬೆಂಗಳೂರಿನಿಂದ ಹೊರಟು ಸಂಜೆ 4.05ಕ್ಕೆ ಬೀದರ್‌ಗೆ ಬರಲಿದೆ. ವಿಮಾನ ಪುನಃ ಸಂಜೆ 4.35ಕ್ಕೆ ಹೊರಟು ಬೆಂಗಳೂರಿಗೆ 5.45ಕ್ಕೆ ತಲುಪಲಿದೆ.

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಮೈಸೂರು ರಸ್ತೆ, ಬೆಂಗಳೂರು-560 059.
ಸಂಖ್ಯೆ : ಡಿಪಿಎಸ್ 06 ಸಿಎಸ್‌ಟಿ(ಜಿ) 2022-23 ದಿನಾಂಕ: 13.06.2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕದಲ್ಲಿನ ಅರ್ಹ ಸಂಸ್ಥೆಗಳಿಂದ ಸರ್ಕಾರಿ ಭದ್ರತಾ ಮುದ್ರಣಾಲಯ, ಪೀಣ್ಯ, ಬೆಂಗಳೂರು ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಶಕ್ತಿ ಸೇವೆಯನ್ನು ಒದಗಿಸಲು ಕೆ.ಟಿ.ಪಿ.ಪಿ. ನಿಯಮಗಳಡಿ ಎರಡು ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 79.70 ಲಕ್ಷಗಳಾಗಿದ್ದು** ಒಟ್ಟು ಇಎಂಡಿ ಮೊತ್ತ **ರೂ. 4.00 ಲಕ್ಷಗಳಾಗಿರುತ್ತದೆ.** ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.06.2022.** ವಿವರವಾದ ಟೆಂಡರ್ ದಸ್ತಾವೇಜನ್ನು ವೆಬ್‌ಸೈಟ್ **https://eproc.karnataka.gov.in** ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ವಾಸಾಸಂಇ/ಉನಿ-ಸಿ.ಪಿ/869/ಎಂಸಿಎ/2022-23 ಸಹಿ/- ನಿರ್ದೇಶಕರು

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು-572 103,
ದೂರವಾಣಿ : 0816-2254546
Tender Notification No:TUT/Gen/ENGG/B.UPS/2022-23/820/Pc
Dated: 13.06.2022

ಟೆಂಡರ್ ಪ್ರಕಟಣೆ (ಇ-ಪೋರ್ಟಲ್ ಮುಖಾಂತರ)

ತುಮಕೂರು ವಿಶ್ವವಿದ್ಯಾನಿಲಯದ ಸರ್.ಎಂ ವಿಶ್ವೇಶ್ವರಯ್ಯ ಸಭಾಂಗಣ, ನೆಟ್‌ವರ್ಕ್ ಆಪರೇಷನ್ ಸೆಂಟರ್, ಡಾ. ವಿ.ಎಸ್ ಆಚಾರ್ಯ ಬ್ಲಾಕ್, ಡಾ ಸದಾನಂದ ಮಯ್ಯ ಕಟ್ಟಡ, ಆಡಳಿತ ಕಚೇರಿಗಳಿಗೆ UPS Battery ಗಳನ್ನು ಸರಬರಾಜು ಪಡೆಯಲು ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ದಿನಾಂಕಗಳ ವಿವರಗಳು

ಟೆಂಡರ್ ಶೀರ್ಷಿಕೆ	ಪ್ರಾರಂಭದ ದಿನಾಂಕ	ಕೊನೆಯ ದಿನಾಂಕ	ತಾಂತ್ರಿಕ &ಆರ್ಥಿಕ ಬಿಡ್ ತೆರೆಯುವ ದಿನಾಂಕ
"Tender for supply and Installation of Batteries For U.P.S"	15.06.2022	16.07.2022	18.07.2022

ಟೆಂಡರ್ ಮೌಲ್ಯ ಮತ್ತು ಇ.ಎಂ.ಡಿ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ವೀಕ್ಷಿಸಿ, ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಸಂಪರ್ಕಿಸುವುದು.

ಸಹಿ/- ಕುಲಸಚಿವರು,
ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ-6, ಘನ ತ್ಯಾಜ್ಯ ನಿರ್ವಹಣೆ,
ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ಅನೆಕ್ಸ್-3 ಕಟ್ಟಡ, 4ನೇ ಮಹಡಿ,
ನರಸಿಂಹರಾಜ ಚೌಕ, ಬೆಂಗಳೂರು-560 002.
ಸಂಖ್ಯೆ: ಬೃಬೆಂಮಪಾ/ಕಾಪಾಅ-6/ಘತ್ಯಾನಿ/ಟೆಂಡರ್/04/2022-23 ದಿನಾಂಕ: 14.06.2022

ತಿದ್ದುಪಡಿ-1

ವಿಷಯ: ಟೆಂಡರ್ ಪ್ರಕಟಣೆಯ ದಿನಾಂಕಗಳಲ್ಲಿ ತಿದ್ದುಪಡಿ
ಉಲ್ಲೇಖ: ಬೃಬೆಂಮಪಾ/ಕಾಪಾಅ-6/ಘತ್ಯಾನಿ/ಟೆಂಡರ್/04/2022-23, ದಿನಾಂಕ: 06.05.2022

ಈ ಮೂಲಕ ತಿಳಿಯಪಡಿಸುವುದೇನೆಂದರೆ ಟೆಂಡರ್ ಪ್ರಕಟಣೆ ಸಂಖ್ಯೆ: ಬೃಬೆಂಮಪಾ/ಕಾಪಾಅ-6/ಘತ್ಯಾನಿ/ಟೆಂಡರ್/04/2022-23, ದಿನಾಂಕ: 06.05.2022 ಇದರ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಈ ಕೆಳಕಂಡಂತೆ ಬದಲಾವಣೆ ಮಾಡಲಾಗಿದೆ.

	ಪ್ರಕ್ರಿಯೆ		ಓದಿಕೊಳ್ಳಬೇಕಾಗಿರುವುದು
1	ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **14.06.2022**ರ ಸಂಜೆ **4:30** ಗಂಟೆಯೊಳಗೆ.	1	ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **24.06.2022**ರ ಸಂಜೆ **4:30** ಗಂಟೆಯೊಳಗೆ.
2	ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **16.06.2022** ರ ಸಂಜೆ **4:00** ಗಂಟೆಗೆ.	2	ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **27.06.2022** ರ ಸಂಜೆ **4:00** ಗಂಟೆಗೆ.

ಪ್ರಕಟಣೆಯಲ್ಲಿ ಇನ್ನುಳಿದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು-6, ಘನ ತ್ಯಾಜ್ಯ ನಿರ್ವಹಣೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತೃತೀಯ ಲಿಂಗಿಗಳಿಗೂ ಸಾಮಾಜಿಕ ಭದ್ರತೆ

ಕೆಂಗೇರಿ: 'ಮಂಗಳ ಗ್ರಾಮ' ಕಾಮಗಾರಿಗೆ ಭೂಮಿಪೂಜೆ– ಸಚಿವ ಸೋಮಣ್ಣ

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಸಾಮಾನ್ಯ ನಾಗರಿಕರಿಗೆ ಸಿಗುವ ಎಲ್ಲ ಸಾಮಾಜಿಕ ಭದ್ರತೆಗಳು ತೃತೀಯ ಲಿಂಗಿಗಳಿಗೆ ಸಿಗಲೇಬೇಕು' ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ರಾಮೋಹಳ್ಳಿ ಬಳಿಯ ಮಾಳಿಗೊಂಡನಹಳ್ಳಿ ಗ್ರಾಮದಲ್ಲಿ ತೃತೀಯ ಲಿಂಗಿಗಳಿಗೆ ನಿರ್ಮಿಸುತ್ತಿರುವ ವಸತಿ ಸಮುಚ್ಚಯ 'ಮಂಗಳ ಗ್ರಾಮ'ದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

'ದೈಹಿಕ ರಚನೆಯಲ್ಲಿನ ವ್ಯತ್ಯಾಸದಿಂದ ತೃತೀಯ ಲಿಂಗಿಗಳು ಸಾಮಾಜಿಕ ಅವಗಣನೆಗೆ ಒಳಗಾಗಿದ್ದಾರೆ. ಸಂವಿಧಾನದ ಆಶಯದಂತೆ ಎಲ್ಲ ನಾಗರಿಕ ಸೌಲಭ್ಯಗಳನ್ನು ಅವರಿಗೂ ಒದಗಿಸುವುದು ನಮ್ಮೆಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ತೃತೀಯ ಲಿಂಗಿಗಳಿಗೆ ಪ್ರತ್ಯೇಕ ವಸತಿ ಯೋಜನೆಯನ್ನು ರೂಪಿಸುತ್ತಿದ್ದು, ಗ್ರಾಮದ ಸರ್ವೆ ನಂ. 26ರ ಪೈಕಿ ಸುಮಾರು 2 ಎಕರೆ 20 ಗುಂಟೆಯಲ್ಲಿ 160 ಮನೆ ನಿರ್ಮಾಣ ಮಾಡಲಾಗುವುದು' ಎಂದರು.

'ಮಂಗಳ ಗ್ರಾಮ'ದ ಕಾಮಗಾರಿಗೆ ಸಚಿವ ವಿ.ಸೋಮಣ್ಣ ಭೂಮಿಪೂಜೆ ನೆರವೇರಿಸಿದರು. ಡಾ.ಎಂ.ವೆಂಕಟಸ್ವಾಮಿ, ಬಿ.ಸಿ.ವೆಂಕಟೇಶ್, ಕ್ಷಮಾ, ಚಂದ್ರಪ್ಪ ಹಾಜರಿದ್ದರು

ವರ್ಷದ ಅವಧಿಯಲ್ಲಿ ₹ 20 ಕೋಟಿ ವೆಚ್ಚದ ಈ ಕಾಮಗಾರಿ ಪೂರ್ಣಗೊಳ್ಳಬೇಕು. ಯಾವುದೇ ಸಬೂಬು ಹೇಳದೆ ಅಕ್ರಮಕ್ಕೆ ಎಡೆ ಮಾಡಿಕೊಡದೆ ಗುಣಮಟ್ಟದ ಕಾಮಗಾರಿಗೆ ಮುಂದಾಗಬೇಕು ಎಂದು ತಾಕೀತು ಮಾಡಿದರು.

ಸಮತಾ ಸೈನಿಕ ದಳದ ರಾಜ್ಯ ಅಧ್ಯಕ್ಷ ಡಾ.ಎಂ.ವೆಂಕಟಸ್ವಾಮಿ ಮಾತನಾಡಿ, 'ನಗರದ ಹತ್ತು ಭಾಗಗಳಲ್ಲಿ ಮಂಗಳಮುಖಿಯರಿಗಾಗಿಯೇ ಪ್ರತ್ಯೇಕ ವಸತಿ ಕಲ್ಪಿಸುವ ಯೋಜನೆಯಿದೆ. ಸರ್ಕಾರದ ನೆರವಿನೊಂದಿಗೆ ಶೀಘ್ರದಲ್ಲೇ ಈ ಕಾರ್ಯಕ್ಕೆ ಚಾಲನೆ ನೀಡಲಾಗುವುದು' ಎಂದು ತಿಳಿಸಿದರು.

'ಮಾಳಿಗೊಂಡನಹಳ್ಳಿ ಗ್ರಾಮದಲ್ಲಿ 5 ಎಕರೆ ಸರ್ಕಾರಿ ಜಮೀನು ಗುರುತಿಸಲಾಗಿದೆ. ರಾಜಕಾಲುವೆ ಸಮಸ್ಯೆ ಎದುರಿಸುತ್ತಿರುವ ರಾಜರಾಜೇಶ್ವರಿನಗರ ಪೆರಿಯಾರ್ ನಗರದ ಕೊಳೆಗೇರಿ ನಿವಾಸಿಗಳನ್ನು ಸ್ಥಳಾಂತರಿಸಲಾಗುವುದು. ಅವರಿಗೂ 160 ಮನೆಗಳನ್ನು ಕಟ್ಟಿಕೊಡಲಾಗುತ್ತಿದೆ' ಎಂದು ಕೊಳೆಗೇರಿ ಅಭಿವೃದ್ಧಿ ಮಂಡಳಿ ಎಇಇ ಚಂದ್ರಪ್ಪ ಮಾಹಿತಿ ನೀಡಿದರು.

ನಾಳೆಯಿಂದ ಸಿಇಟಿ ಪರೀಕ್ಷೆ

ಬೆಂಗಳೂರು: 2022 ನೇ ಸಾಲಿನ ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಕೆಸಿಇಟಿ) ಗುರುವಾರ, ಶುಕ್ರವಾರ ಮತ್ತು ಶನಿವಾರ ರಾಜ್ಯದ 486 ಕೇಂದ್ರಗಳಲ್ಲಿ ನಡೆಯಲಿದೆ.

ಈ ಪರೀಕ್ಷೆಗಾಗಿ 2,16,525 ಅಭ್ಯರ್ಥಿಗಳು ಹೆಸರನ್ನು ನೋಂದಾಯಿಸಿದ್ದು, ಇದರಲ್ಲಿ 1,04,550 ವಿದ್ಯಾರ್ಥಿಗಳು ಮತ್ತು 1,11,975 ವಿದ್ಯಾರ್ಥಿನಿಯರು ಸೇರಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಭ್ಯರ್ಥಿಗಳಿಗೆ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದ್ದು, ಪರೀಕ್ಷಾ ಕೊಠಡಿಯೊಳಗೆ ಎಲೆಕ್ಟ್ರಾನಿಕ್ ಗ್ಯಾಜೆಟ್, ಕೈಗಡಿಯಾರ, ಬ್ಲೂಟೂತ್ ಮತ್ತು ಮೊಬೈಲ್ ಫೋನ್‌ಗಳನ್ನು ತರುವಂತಿಲ್ಲ. ಅಲ್ಲದೆ, ತಲೆ, ಕಿವಿ ಮುಚ್ಚುವಂತಹ ಬಟ್ಟೆ ಮತ್ತು ಉಡುಪುಗಳಿಗೆ ಅವಕಾಶವಿಲ್ಲ. ಸರ್ಜಿಕಲ್ ಮಾಸ್ಕ್ ತೊಟ್ಟು ಬರಲು ಅವಕಾಶ ನೀಡಲಾಗಿದೆ.

ಶಿರಡಿಗೆ 'ಭಾರತ್ ಗೌರವ್' ಮೊದಲ ರೈಲು

ಕೊಯಮತ್ತೂರು: ಭಾರತೀಯ ರೈಲ್ವೆಯ 'ಭಾರತ್ ಗೌರವ್' ಯೋಜನೆಯ ಅಡಿ, ಕೊಯಮತ್ತೂರು ಮತ್ತು ಶಿರಡಿ ನಡುವೆ ಕಾರ್ಯಾಚರಿಸಲಿರುವ ಮೊದಲ ಖಾಸಗಿ ನಿರ್ವಹಣೆಯ ರೈಲಿಗೆ ಇಲ್ಲಿ ಚಾಲನೆ ನೀಡಲಾಯಿತು.

ತಿರುಪುರ, ಈರೋಡ್, ಸೇಲಂ, ಜೋಳರಪೇಟೆ, ಬೆಂಗಳೂರಿನ ಯಲಹಂಕ, ಧರ್ಮಾವರ, ಮಂತ್ರಾಲಯ ರಸ್ತೆ (ಇಲ್ಲಿ ಐದು ಗಂಟೆ ನಿಲುಗಡೆಗೊಳ್ಳಲಿದೆ) ಮತ್ತು ವಾಡಿಯಲ್ಲಿ ಈ ರೈಲಿಗೆ ನಿಲುಗಡೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊಯಮತ್ತೂರಿನ ನಾರ್ಥ್ ರೈಲು ನಿಲ್ದಾಣದಿಂದ ಮಂಗಳವಾರ ಸಂಜೆ 6ಕ್ಕೆ ಹೊರಟಿರುವ ರೈಲು ಗುರುವಾರ ಬೆಳಿಗ್ಗೆ 7.25ಕ್ಕೆ ಶಿರಡಿಯ ಸಾಯಿನಗರಕ್ಕೆ ತಲುಪಲಿದೆ ಎಂದಿದ್ದಾರೆ. ಒಂದು ದಿನದ ನಿಲುಗಡೆಯ ಬಳಿಕ ಶುಕ್ರವಾರ ಸಾಯಿ ನಗರದಿಂದ ಹೊರಡಲಿರುವ ಈ ರೈಲು ಶನಿವಾರ ಮಧ್ಯಾಹ್ನ 12 ಗಂಟೆಗೆ ಕೊಯಮತ್ತೂರು ನಾರ್ಥ್‌ಗೆ ತಲುಪಲಿದೆ ಎಂದೂ ಹೇಳಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PERSONAL

Change of Name

I, HALAYYANAMATH GEETA GURUSHANTAYYA residing at No. 103, Grandeur Apartment 3rd Cross DNP Layout, Doddakammanahalli, Bannerghatta, Bangalore-560083 have changed my name to GEETA CHANDRASHEKARMATH vide affidavit dated 14.06.2022 before notary K.S. Giridhar Bangalore. Henceforth I shall be known as GEETA CHANDRASHEKARMATH only.

I, CHANDRASEKHARMATH GANAPATAYAA SHIVAYYA residing at Flat No. 103, Grandeur Apartment 3rd Cross DNP Layout Doddakammanahalli Kammanahalli Bangalore-560083 have changed my name to GANESH CHANDRASHEKARMATH vide affidavit dated 14.06.2022 before notary K.S. Giridhar Bangalore. Henceforth I shall be known as GANESH CHANDRASHEKARMATH only.

I, LOURD SIMON A @ A LOURDU SWAMY residing at #20/3, Hongasandra near Gnanabharathi School, Gurumurthy Layout, Bangalore- 560068 declare that both the above mentioned names pertain to me only and henceforth I shall be known as LOURD SIMON A vide affidavit dated 11.05.2022, before notary B.M. Chandrashekar, Bangalore.

WE, B. ZAKIR KHAN (Father) and SADHIKA BEGAM (Mother) R/at No.88, Machohalli Colony, Opp Raghavendra Swamy Temple, Magadi Main Road, Bangalore- 560091, have changed our Son's name from M.D. HUSSAIN to ZAHID KHAN vide affidavit dated:13/6/2022 Before Notary Onkarappa N.R Bangalore.

I, YASHASWINI.A.P w/o. GAJENDRA.S.R residing at Someswara, Someswara post, Chikkaballapur District-562104 have changed my minor son's name from TARAK SAI to AARAV SAI TEJ vide affidavit dated 14.06.2022 sworn before notary L.B. Anasuyamma, Bangalore.

I, ZAKIR HUSSAIN R/at No.88, Machohalli Colony, Opp Raghavendra Swamy Temple, Magadi Main Road, Bangalore- 560091, have changed my name to B. ZAKIR KHAN vide affidavit dated: 13/6/2022 Before Notary Onkarappa N.R Bangalore.

I, SADHIKA, R/at No.88, Machohalli Colony, Opp Raghavendra Swamy Temple, Magadi Main Road, Bangalore- 560091, have changed my name to SADHIKA BEGAM vide affidavit dated:13/6/2022 Before Notary Onkarappa N.R Bangalore.

PANKAJ W/O JC673732W NB/SUB RISHI PAL SINGH R/A PIPLAUTH BAHADURPUR GABHANA ALIGARH UP MY NAME PANKAJ TO PANKAJ DEVI Notary KV MANI Bangalore

JC673528X NB/SUB GANESH MANDAL 2ATC MOTHER Name records PODAWATI MONDAL Instead of PADMABATI MONDAL Notary KV MANI Bangalore

14825670K HAV MAHEEN P 2ATC SON Name records MOHAMED WAZEEM Instead of MOHAMEDWAZEEM M Notary HARISHA G Bangalore

14825670K HAV MAHEEN P 2ATC SON Name records MOHAMED HAZEEM Instead of MOHAMEDHAZEEM M Notary HARISHA G Bangalore

SHAMILA W/O 14825670K HAV MAHEEN P R/A KALIYAL KALAIYAKADAYAR VILAVANCODE KANIYAKUMARI TN MY NAME SHAMILA TO SHAMILA A Notary HARISHA G Bangalore

SAVITARI SINGH W/O JC673478X NB/SUB MALIK BAHADUR SINGH R/A MRPKA PURWA RAMNAGAR AMETHI UP MY NAME SAVITARI SINGH TO SAVITRI SINGH Notary HARISHA G Bangalore

JC673379P NB/SUB MAKHAN SINGH 2ATC DAUGHTER Name records RENU KANWAR Instead of RENU KUMARI Notary KV MANI Bangalore

A DEVI W/O 14843310W NK/MT SUBASH CHANDRA BOSE C R/A #13, KAVIYARASU KANADASANNAGAR VILLUPURAM TN MY NAME A DEVI TO S DEVI Notary HARISHA G Bangalore

I, SWETHA DODDGOWADNA COPPALU SHIVALINGE GOWDA have changed my name to SWETHA DODDEGOWDANAKOPPALU SHIVALINGEGOWDA vide affidavit dated:14/6/2022 Before Notary Shreeshail.B. Gobbani Bangalore.

I YUVARAJ SUBRAMANI, Residing at No.44, 3rd cross, Kadirappa Road, coxtown, Frazertown, Bangalore-05, have changed my name to YUVRAJ. S, vide affidavit dated 14-06-2022, before Notary Y.R.Chandrashekar Bangalore.

NIRMLA DEVI W/O JC674149N NB/SUB HANUMAN PARSAD R/A GARWA PATWAN SIWANI BHIWANI HARYANA MY NAME NIRMLA DEVI TO NIRMALA DEVI Notary HARISHA G Bangalore

JC673528X NB/SUB GANESH MANDAL 2ATC SON Name records SAURAV MANDAL Instead of SOURAV MANDAL Notary KV MANI Bangalore

I, SUDHA RAMESHA have changed my name to SUDHA SWAMY RAO vide affidavit dated:14/6/2022 Before Notary Shreeshail.B. Gobbani Bangalore.

14825670K HAV MAHEEN P 2ATC SON Name records AMEEN Instead of AMEEN M Notary HARISHA G Bangalore

JC673528X NB/SUB GANESH MANDAL 2ATC SON Name records SOUVIK Instead of SOUVIK MANDAL Notary KV MANI Bangalore

Lost

LOST
I, R. Ganesh have lost my Property document vide Registration No. 330080, Survey No. 182/3, 182/4, (1/3 Share) Vettuvanam Village, Tamil Nadu-635809 while travelling.
Finders please Contact :9880571935

EXCELLENT INVESTMENT OPPORTUNITY
Looking For Investors **(Preferably MNC's)** with ready funds of **Rs.6 Crs.** for Construction of Industrial Shed / Warehouse - 'Built to Suit ' as per the Client's requirements in 2 Acres of KIADB Industrial land at Dobbespet with the necessary approvals for Construction of Warehouse or Manufacturing Industry.
Facing Plot on 100ft Double Road & 300 Metres from the NH-4.
Mob: 9035963540

ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ,
ವಾಣಿಜ್ಯ ಸಂಕೀರ್ಣ, 100 ಅಡಿ ರಸ್ತೆ, ವಿನೋಬನಗರ, ಶಿವಮೊಗ್ಗ-577204 ಫೋನ್ ನಂ.: 08182-249867, 249280, 265990
ನಂ.ಶಿಭನಪ್ರಾ/ತಾಂ.ಶಾ/ಟೆಂಡರ್/03/2022-23 ದಿನಾಂಕ:09-06-2022

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-1 ಮತ್ತು 2ರ ಕಲಂಗಳ ಷರತ್ತಿನನ್ವಯ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಲೋಕೋಪಯೋಗಿ ಇಲಾಖೆಯ ಸಿವಿಲ್ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು. ಗುತ್ತಿಗೆದಾರರು ಟೆಂಡರ್ ತಿಳುವಳಿಕೆ ಪತ್ರದ ಕ್ಲಾಸ್-3ರ ಅನ್ವಯ ಅರ್ಹತಾ ವಿವರಗಳನ್ನು ಗಮನಿಸತಕ್ಕದ್ದು.

ಕಾಮಗಾರಿಗಳ ವಿವರ

ಕ್ರ ಸಂ	ಕಾಮಗಾರಿ ಹೆಸರು	ಟೆಂಡರ್‌ಗೆ ಇಡಲಾದ ಮೊತ್ತ ರೂ.ಗಳಲ್ಲಿ	ಇ ಎಂ ಡಿ ಮೊತ್ತ ರೂ. ಗಳಲ್ಲಿ	ಸ್ಟ್ಯಾಂಡರ್ಡ್ ಟೆಂಡರ್ ಬಿಡ್	ಕೆಲಸ ಮುಗಿಸುವ ಅವಧಿ	ಗುತ್ತಿಗೆದಾರರ ದರ್ಜೆ
1	2	3	4	5	6	7
1	ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿ ಸಂಕೀರ್ಣದ ಆವರಣವನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ.	22,04,683.00	44,100.00	ಕೆ.ಡಬ್ಲ್ಯೂ-2	3 ತಿಂಗಳು ಮಳೆಗಾಲ ಸಹಿತ	4ನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು
2	ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ ಅಟಲ್ ಬಿಹಾರಿ ವಾಜಪೇಯಿ ವಸತಿ ಬಡಾವಣೆಯಲ್ಲಿ ಜಂಗಲ್ ತೆರೆವುಗೊಳಿಸಿ ನಿವೇಶನಗಳಿಗೆ ಗಡಿಕಲ್ಲು ಮತ್ತು ನಿವೇಶನ ಸಂಖ್ಯೆ ಕಲ್ಲುಗಳನ್ನು ಅಳವಡಿಸುವ ಕಾಮಗಾರಿ	19,60,399.00	49,100.00	ಕೆ.ಡಬ್ಲ್ಯೂ-1	3 ತಿಂಗಳು ಮಳೆಗಾಲ ಸಹಿತ	4ನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು
3	ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಗಡಿಗಳಲ್ಲಿ ಬರುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಾಮಫಲಕ ಅಳವಡಿಸುವ ಕಾಮಗಾರಿ	17,80,737.00	44,600.00	ಕೆ.ಡಬ್ಲ್ಯೂ-1	3 ತಿಂಗಳು ಮಳೆಗಾಲ ಸಹಿತ	4ನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು

ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿವೆ. ಈ ಕೆಳಗೆ ಪ್ರಕಟಿಸಿರುವ ಯಾವುದಾದರು ದಿನಾಂಕವು ಆಕಸ್ಮಿಕವಾಗಿ ರಜಾ ದಿನವಾದಲ್ಲಿ ನಂತರದ ಕಛೇರಿ ಕೆಲಸದ ದಿನವನ್ನು ಪರಿಗಣಿಸಲಾಗುವುದು.

ವಿವರ	ದಿನಾಂಕ
1. Last date for tender Queries/Clarifications	27-06-2022 Up to 17.00 hrs
2. Last date for receipt of tender	29-06-2022 Up to 17.00 hrs
3. Date of opening of Financial bid	01-07-2022 at 11.00 hrs

ಇ-ಪ್ರಕ್ಯೂರ್‌ಮೆಂಟ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಇ-ಪ್ರಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್ ನಂ. 080-25501216ನ್ನು ಸಂಪರ್ಕಿಸಬಹುದಾಗಿರುತ್ತದೆ. ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳನ್ನು ಕಛೇರಿ ಕೆಲಸದ ದಿನದಂದು ಸಂಜೆ 3.30 ರಿಂದ 5.30 ರ ವೇಳೆಯಲ್ಲಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/- ಕೊಟ್ರೇಶ್.ಹೆಚ್ ಕೆ.ಎ.ಎಸ್
ಆಯುಕ್ತರು, ಶಿವಮೊಗ್ಗ-ಭದ್ರಾವತಿ
ನಗರಾಭಿವೃದ್ಧಿ ಪ್ರಾಧಿಕಾರ ಶಿವಮೊಗ್ಗ

ಸಹಿ/- ಎನ್.ಜಿ ನಾಗರಾಜ್
ಅಧ್ಯಕ್ಷರು, ಶಿವಮೊಗ್ಗ-ಭದ್ರಾವತಿ
ನಗರಾಭಿವೃದ್ಧಿ ಪ್ರಾಧಿಕಾರ ಶಿವಮೊಗ್ಗ

ವಾಸಾಸಂಇ/ಶಿ/ನಂ-81-06
ಝೆಂಕಾರ್/2021-22

ಬೇಡ್ತಿ – ವರದಾ ನದಿ ಜೋಡಣೆ ಜನಜಾಗೃತಿ ಸಮಾವೇಶದಲ್ಲಿ ನಿರ್ಣಯ

ನದಿ ಜೋಡಣೆ ಯೋಜನೆ ಜಾರಿಗೊಳಿಸದಿರಿ

ಪ್ರಜಾವಾಣಿ ವಾರ್ತೆ

ಶಿರಸಿ: ಪಶ್ಚಿಮ ಘಟ್ಟದ ಯಾವುದೇ ನದಿ ತಿರುಗಿಸುವ ಯೋಜನೆ ಕೈಗೊಳ್ಳುವ ನಿರ್ಧಾರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಕೈಗೊಳ್ಳದಂತೆ ಒತ್ತಡ ತರುವ ನಿರ್ಣಯವನ್ನು ಬೇಡ್ತಿ-ವರದಾ ನದಿ ಜೋಡಣೆ ಕುರಿತ ಜನಜಾಗೃತಿ ಸಮಾವೇಶದಲ್ಲಿ ಕೈಗೊಳ್ಳಲಾಯಿತು.

ಬೇಡ್ತಿ ಮತ್ತು ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಯಲ್ಲಾಪುರ ತಾಲ್ಲೂಕಿನ ಮಂಚಿಕೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ ಈ ಸಮಾವೇಶ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಜೈನ ಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ ನೇತೃತ್ವದಲ್ಲಿ ನಡೆಯಿತು. ನೂರಾರು ಜನರು ಪಾಲ್ಗೊಂಡಿದ್ದರು.

ಅವೈಜ್ಞಾನಿಕವಾದ ಬೇಡ್ತಿ-ವರದಾ ನದಿ ಜೋಡಣೆ ಯೋಜನೆ ಕೈಬಿಡುವ ಜತೆಗೆ, ಎತ್ತಿನಹೊಳೆ ನದಿ ತಿರುವು ಬೃಹತ್ ಯೋಜನೆ ವಿಫಲವಾಗಿರುವುದನ್ನು ಗಮನದಲ್ಲಿಟ್ಟು ದಕ್ಷಿಣಭಾರತದ ನೀರಿನ ಸುರಕ್ಷತೆಯ ದೃಷ್ಟಿಯಿಂದ ಸರ್ಕಾರಗಳು ಇಂತಹ ಯೋಜನೆ ಕೈಗೊಳ್ಳಬಾರದು ಎಂಬ ಒತ್ತಾಯ ಸಮಾವೇಶದಲ್ಲಿ ಕೇಳಿಬಂತು.

'ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಪಕ್ಷ ಭೇದ ಮರೆತು ಒಕ್ಕೊರಲಿನಿಂದ ಬೇಡ್ತಿ -ವರದಾ ಯೋಜನೆಯನ್ನು ಅನುಷ್ಠಾನ ಮಾಡದಂತೆ ಸರ್ಕಾರಕ್ಕೆ ಒತ್ತಡ ಹಾಕಬೇಕು. ಕಾಳಿ ನದಿ ತಿರುಗಿಸುವ ಯೋಜನೆಯ ವಿರುದ್ಧದ ಹೋರಾಟಕ್ಕೆ ಬೆಂಬಲ ನೀಡಬೇಕು' ಎಂದು ಸ್ವರ್ಣವಲ್ಲಿ ಸ್ವಾಮೀಜಿ ಹೇಳಿದರು.

ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಮಾತನಾಡಿ, 'ಜನರ ಭಾವನೆಗೆ ಸ್ಪಂದಿಸಿ ಯೋಜನೆ ಪರಾಮರ್ಶೆಗೆ ಜಿಲ್ಲೆಯ ಜನಪ್ರತಿನಿಧಿಗಳ ನಿಯೋಗವನ್ನು ಕರೆದೊಯ್ಯಲಾಗುವುದು. ಯೋಜನೆಯ ಬಾಧಕದ ಕುರಿತು ಮುಖ್ಯಮಂತ್ರಿ ಗಮನಕ್ಕೆ ತರಲಾಗುವುದು' ಎಂದರು.

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಕೇಂದ್ರೀಕರಣ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ, ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ವಿ.ಎಸ್.ಪಾಟೀಲ, ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ಜೆಡಿಎಸ್ ಮುಖಂಡ ಶಶಿಭೂಷಣ ಹೆಗಡೆ, ಪರಿಸರ ಬರಹಗಾರ ಶಿವಾನಂದ ಕಳವೆ, ಸಂರಕ್ಷಣಾ ಜೀವಶಾಸ್ತ್ರಜ್ಞ ಡಾ.ಕೇಶವ ಕೊರ್ಸೆ, ಬಾಲಚಂದ್ರ ಸಾಯಿಮನೆ, ಡಾ.ಜಿ.ವಿ.ಹೆಗಡೆ ಪಾಲ್ಗೊಂಡಿದ್ದರು.

ಬೇಡ್ತಿ–ವರದಾ ನದಿ ಜೋಡಣೆ ಯೋಜನೆ ಕೈಬಿಡಲು ಒತ್ತಾಯಿಸಿ ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನ ಗೋರ್ಸಗದ್ದೆ ಕ್ರಾಸ್‌ನಿಂದ ಮಂಚಿಕೇರಿಯ ಸಮಾಜ ಮಂದಿರದವರೆಗೆ ಅಘನಾಶಿನಿ, ಬೇಡ್ತಿ ಕೊಳ್ಳದ ವಿವಿಧ ಗ್ರಾಮಗಳ ಜನರು ಪಾದಯಾತ್ರೆ ನಡೆಸಿದರು

ಮುಖ್ಯಾಂಶಗಳು

- 'ನೀರಿನ ಸುರಕ್ಷತೆಯ ದೃಷ್ಟಿಯಿಂದ ನದಿ ತಿರುವು ಯೋಜನೆ ಕೈಬಿಡಿ'
- ಪಕ್ಷ ಭೇದ ಮರೆತು ಸರ್ಕಾರದ ಮೇಲೆ ಒತ್ತಡ ಹಾಕಲು ಒತ್ತಾಯ
- ಯಲ್ಲಾಪುರ ತಾಲ್ಲೂಕಿನ ಮಂಚಿಕೇರಿಯಲ್ಲಿ ಸಮಾವೇಶ

ವೃದ್ಧಾಶ್ರಮಕ್ಕೆ ಸೇರಿಸುವಂತೆ ಹಿರಿಯರ ಮನವಿ

ವರ್ಷದಲ್ಲಿ 55 ಸಾವಿರ ಕರೆ!

• ಕೆ.ಓಂಕಾರ ಮೂರ್ತಿ

ಕೋಲಾರ: 'ಮನೆಯಲ್ಲಿ ನಿತ್ಯ ಕಿರುಕುಳ. ಆಸ್ತಿ ದಾಖಲೆ ಪತ್ರಕ್ಕೆ ಸಹಿ ಹಾಕುವಂತೆ ಹಿಂಸೆ, ವಂಚನೆ. ಸರಿಯಾಗಿ ಊಟ ಕೊಡಲ್ಲ. ಮಾತ್ರೆ-ಔಷಧಿ ತಂದು ಕೊಡಲ್ಲ. ಪಿಂಚಣಿ ಹಣವನ್ನೂ ಕಸಿದುಕೊಳ್ಳುತ್ತಾರೆ. ವೃದ್ಧಾಶ್ರಮಕ್ಕೆ ದಾಖಲಿಸಿ ಪ್ಲೀಸ್...'

ಹೀಗೆ, ಹಿರಿಯ ನಾಗರಿಕರಿಂದ ದೂರು ಹೊತ್ತು, ರಾಜ್ಯದಿಂದ ವರ್ಷದಲ್ಲಿ 54,964 ಕರೆಗಳು (2021ರ ಮೇನಿಂದ 2022ರ ಮೇ ವರೆಗೆ) ರಾಷ್ಟ್ರೀಯ ಸಹಾಯವಾಣಿಗೆ (14567) ಬಂದಿವೆ. ಕೋಲಾರ ಜಿಲ್ಲೆಯಲ್ಲಿ ಕಳೆದ ತಿಂಗಳು 93 ದೂರು ಸ್ವೀಕರಿಸಲಾಗಿದೆ.

ಹಿರಿಯ ನಾಗರಿಕರಿಗಾಗಿ ಇರುವ ರಾಷ್ಟ್ರೀಯ ಸಹಾಯವಾಣಿಯನ್ನು ಕೇಂದ್ರ ಸರ್ಕಾರದ ಅನುದಾನದಲ್ಲಿ ರಾಜ್ಯದಲ್ಲಿ 'ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್' ಎಂಬ ಸ್ವಯಂ ಸೇವಾ ಸಂಸ್ಥೆ ನಿರ್ವಹಿಸುತ್ತಿದೆ.

'ಈ ಪೈಕಿ ಪಿಂಚಣಿಗೆ ಸಂಬಂಧಿಸಿ ಅತಿಹೆಚ್ಚು 1,649 ಕರೆಗಳು ಬಂದಿವೆ. ಹೊಡೆಯುವುದು, ಬೈಯ್ಯುವುದು, ಮನೆಯಿಂದ ಹೊರಗೆ ಹಾಕಿರುವ ಸಂಬಂಧ ಸುಮಾರು 400 ದೂರುಗಳು ಈ ಅವಧಿಯಲ್ಲಿ ದಾಖಲಾಗಿವೆ. 186 ಹಿರಿಯ ನಾಗರಿಕರನ್ನು ರಕ್ಷಿಸಿ ವೃದ್ಧಾಶ್ರಮಕ್ಕೆ ಸೇರಿಸಿದ್ದೇವೆ' ಎಂದು ಟ್ರಸ್ಟ್‌ನ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಅಧಿಕಾರಿಗಳ ಜೊತೆ ಮಾತನಾಡಿ ಪಿಂಚಣಿ ಸಮಸ್ಯೆ ಬಗೆಹರಿಸಿದ್ದೇವೆ. ಕಾನೂನು ನೆರವು ಒದಗಿಸಿದ್ದೇವೆ. ಆಪ್ತ ಸಮಾಲೋಚನೆ ಮೂಲಕ ಮತ್ತೆ ಕುಟುಂಬದ ಜೊತೆ ಬಾಳು ಸಾಗಿಸುವಂತೆ ಮಾಡಿದ್ದೇವೆ' ಎಂದರು.

'ಬಂಗಾರಪೇಟೆ ತಾಲ್ಲೂಕಿನಲ್ಲಿ ವ್ಯಕ್ತಿಯೊಬ್ಬರು ಪತ್ನಿ ತೀರಿಕೊಂಡಿದ್ದ ಕಾರಣ ಮತ್ತೊಬ್ಬರನ್ನು ಮದುವೆಯಾಗಿದ್ದರು. ಕೆಲ ವರ್ಷ ಚೆನ್ನಾಗಿಯೇ ಇದ್ದ ಎರಡನೇ ಪತ್ನಿ, ಈಗ ಪತಿಯನ್ನು ಮನೆಯಿಂದ ಹೊರಹಾಕಿದ್ದಾರೆ. ಅವರಿಗೆ ಈಗ ವಯಸ್ಸಾಗಿದ್ದು, ನಮ್ಮ ಸಹಾಯವಾಣಿಗೆ ಕರೆ ಮಾಡಿ ಸಮಸ್ಯೆ ಹೇಳಿಕೊಂಡರು. ಅವರನ್ನು ವೃದ್ಧಾಶ್ರಮಕ್ಕೆ ಸೇರಿಸಿದ್ದು, ಕಾನೂನು ಹೋರಾಟ ನಡೆಯುತ್ತಿದೆ' ಎಂದು ವಿವರಿಸಿದರು.

ಇದಲ್ಲದೇ, ರಾಜ್ಯದ ಸಹಾಯವಾಣಿ (1090) ಕೂಡ ಕಾರ್ಯನಿರ್ವಹಿಸುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಸುಮಾರು 2 ಲಕ್ಷ ಹಿರಿಯ ನಾಗರಿಕರಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಸ್ಥಾಪಿಸಿರುವ ಈ ಸಹಾಯವಾಣಿಗೆ ಐದು ತಿಂಗಳಲ್ಲಿ 700ಕ್ಕೂ ಅಧಿಕ ಕರೆಗಳು ಬಂದಿವೆ. ಜಿಲ್ಲೆಯಲ್ಲಿ 10 ವೃದ್ಧಾಶ್ರಮಗಳಿವೆ.

'ಜಿಲ್ಲೆಯಲ್ಲಿ, ಕಿರುಕುಳ ನೀಡುತ್ತಿರುವ ಬಗ್ಗೆ ಹಿರಿಯ ನಾಗರಿಕರಿಂದ ಈ ಸಹಾಯವಾಣಿಗೆ ನಿತ್ಯ 15ರಿಂದ 20 ಕರೆಗಳು ಬರುತ್ತಿವೆ. ಆಪ್ತ ಸಮಾಲೋಚನೆ ನಡೆಸಿ, ಮಕ್ಕಳನ್ನು ಕರೆಸಿ ಬುದ್ಧಿವಾದ ಹೇಳಿ ವೃದ್ಧರನ್ನು ಕಳುಹಿಸಿದ್ದೇವೆ. ಕುಟುಂಬದ ಮೇಲೆ ಸದಾ ನಿಗಾ ಇರಿಸುತ್ತೇವೆ' ಎಂದು ಜಿಲ್ಲಾ ಅಂಗವಿಕಲ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ ಮುನಿರಾಜಪ್ಪ ತಿಳಿಸಿದರು.

> ಆಸ್ತಿ ವಿಚಾರದಲ್ಲಿ ವಂಚನೆ, ಮಕ್ಕಳು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬ ದೂರುಗಳೇ ಹೆಚ್ಚಿರುತ್ತವೆ. ಹಲವರನ್ನು ವೃದ್ಧಾಶ್ರಮಕ್ಕೆ ಸೇರಿಸಿದ್ದೇವೆ
> **ಮುನಿರಾಜಪ್ಪ,** ಜಿಲ್ಲಾ ಅಂಗವಿಕಲ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ, ಕೋಲಾರ

ವಿಶ್ವ ಹಿರಿಯ ನಾಗರಿಕರ ಮೇಲಿನ ದೌರ್ಜನ್ಯ ತಡೆ ಜಾಗೃತಿ ದಿನ

ಸೇನೆಯ ತಾರುಣ್ಯಕ್ಕೆ 'ಅಗ್ನಿಪಥ'

ಒಂದನೇ ಪುಟದಿಂದ...

'ಅಗ್ನಿಪಥ ಯೋಜನೆಯ ಅನುಷ್ಠಾನ ಮತ್ತು ಅದು ಸ್ಥಿರಗೊಳ್ಳುವ ಅವಧಿಯಲ್ಲಿ ಸೇನೆಯ ಕಾರ್ಯಾಚರಣೆ ಸಾಮರ್ಥ್ಯ, ಗಡಿಯಲ್ಲಿನ ಸನ್ನದ್ಧತೆ ಮತ್ತು ಆಂತರಿಕ ಭದ್ರತಾ ಸವಾಲುಗಳನ್ನು ಎದುರಿಸುವ ಸೇನೆಯ ಶಕ್ತಿಯನ್ನು ಕಾಯ್ದುಕೊಳ್ಳಲಾಗುವುದು ಎಂದು ಭರವಸೆ ಕೊಡುತ್ತೇನೆ' ಎಂದು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಹೇಳಿದ್ದಾರೆ.

'ಮೊದಲ ನಾಲ್ಕು ವರ್ಷಗಳ ಅವಧಿಗೆ ನೇಮಕಾತಿ ಮತ್ತು ನಂತರದ ನೇಮಕಾತಿಗಳಿಗಾಗಿ ನ್ಯಾಯಯುತ, ಪಾರದರ್ಶಕ ಮತ್ತು ವೈಜ್ಞಾನಿಕ ವಿಧಾನವನ್ನು ಅನುಸರಿಸಲಾಗುವುದು' ಎಂದೂ ಅವರು ಹೇಳಿದ್ದಾರೆ.

ಹೊಸ ಯೋಜನೆಯು ಸೇನೆಯಲ್ಲಿ ತಾರುಣ್ಯ ತುಂಬಲಿದೆ. ಈಗ ಸೈನಿಕರ ಸರಾಸರಿ ವಯಸ್ಸು 32 ವರ್ಷ ಇದೆ, ಮುಂದೆ ಇದು 26ಕ್ಕೆ ಇಳಿಯಲಿದೆ ಎಂದು ಅವರು ತಿಳಿಸಿದ್ದಾರೆ.

ಈಗ ಸೇನೆಗೆ ಅಲ್ಪಾವಧಿ ಕರ್ತವ್ಯಕ್ಕಾಗಿ ಯುವಜನರನ್ನು ಸೇರಿಸಿಕೊಳ್ಳಲಾಗುತ್ತದೆ. ಇದು 10 ವರ್ಷದ್ದಾಗಿದ್ದು, 14 ವರ್ಷದವರೆಗೆ ವಿಸ್ತರಿಸಬಹುದಾಗಿದೆ.

2022-23ನೇ ಸಾಲಿನಲ್ಲಿ ರಕ್ಷಣೆಗಾಗಿ ಮೀಸಲಿಟ್ಟ ಮೊತ್ತ ₹5,25,166 ಕೋಟಿ. ಇದರಲ್ಲಿ ₹1,19,696 ಕೋಟಿ ಪಿಂಚಣಿಗಾಗಿ ವ್ಯಯ ಆಗುತ್ತಿದೆ.

ಜೆಡಿಎಸ್ ನಂಬಿ ಸೋತೆ: ಮೊಯಿಲಿ

ದೊಡ್ಡಬಳ್ಳಾಪುರ: '2019ರ ಲೋಕಸಭಾ ಚುನಾವಣೆಯಲ್ಲಿ ಎಚ್.ಡಿ. ಕುಮಾರಸ್ವಾಮಿ ಮನೆಗೆ ಹೋಗಿ ಬೆಂಬಲ ನೀಡುವಂತೆ ಕೇಳಿದ್ದೇ ನನ್ನ ರಾಜಕೀಯ ಜೀವನದಲ್ಲಿ ಮಾಡಿದ ಬಹುದೊಡ್ಡ ತಪ್ಪು. ಆ ಪಕ್ಷದೊಂದಿಗಿನ ಹೊಂದಾಣಿಕೆಯಿಂದ ನಾನೂ ಸೋತೆ. ಜೊತೆಗೆ, ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸೋಲುವಂತಾಯಿತು' ಎಂದು ಮಾಜಿ ಸಂಸದ ಎಂ. ವೀರಪ್ಪ ಮೊಯಿಲಿ ಹೇಳಿದರು.

ನಗರದಲ್ಲಿ ಮಂಗಳವಾರ ಪ್ರಾರಂಭವಾದ ಕಾಂಗ್ರೆಸ್ ನವ ಚಿಂತನಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ದೇವೇಗೌಡರು ದ್ವೇಷದ ರಾಜಕಾರಣ ಮಾಡುವುದರಲ್ಲಿ ಸಿದ್ಧಹಸ್ತರು. ಅವರನ್ನು ಪ್ರಧಾನಿ ಮಾಡಿದ ಪಕ್ಷದ ಮುಖಂಡರ ಮೇಲೆಯೇ ದೂರು ದಾಖಲಿಸಲು ಆರಂಭಿಸಿದರು. ಇದರಿಂದಾಗಿಯೇ ಪ್ರಧಾನಿ ಪಟ್ಟ ಕಳೆದುಕೊಂಡರು. ವಿರೋಧಿಗಳ ವಿರುದ್ಧ ದೂರು ದಾಖಲಿಸುವ ಪ್ರವೃತ್ತಿಯನ್ನು ಇಂದಿಗೂ ಅವರು ಬಿಟ್ಟಿಲ್ಲ' ಎಂದು ಟೀಕಿಸಿದರು.

ರಾಮಸ್ವಾಮಿ ಅಯ್ಯಂಗಾರ್

'ಮೇಲುಕೋಟೆ ಬಾಹುಬಲಿ' ರಾಮಸ್ವಾಮಿ ನಿಧನ

ಮೇಲುಕೋಟೆ (ಮಂಡ್ಯ): ಇಲ್ಲಿನ ಯೋಗನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ನಿತ್ಯ ತೀರ್ಥ ಕೈಂಕರ್ಯ ನೆರವೇರಿಸುತ್ತಿದ್ದ, 'ಮೇಲುಕೋಟೆ ಬಾಹುಬಲಿ' ಎಂದೇ ಪ್ರಸಿದ್ಧಿ ಪಡೆದಿದ್ದ ರಾಮಸ್ವಾಮಿ ಅಯ್ಯಂಗಾರ್ (70) ಸೋಮವಾರ ಸಂಜೆ ನಿಧನರಾದರು.

ನಾಲ್ಕೈದು ದಿನಗಳ ಹಿಂದೆ ಮನೆಯಲ್ಲಿ ಬಿದ್ದು ಗಾಯಗೊಂಡಿದ್ದ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಂತ್ಯಕ್ರಿಯೆ ಮೇಲುಕೋಟೆಯಲ್ಲಿ ಮಂಗಳವಾರ ನಡೆಯಿತು.

ರಾಮಸ್ವಾಮಿ ಅಯ್ಯಂಗಾರ್ ಅವರು ನಿತ್ಯ ತಾಮ್ರ ಪಾತ್ರೆಯಲ್ಲಿ 40 ಲೀಟರ್‌ನಷ್ಟು ನೀರನ್ನು ಕಲ್ಯಾಣಿಯಿಂದ ಯೋಗನರಸಿಂಹ ಸ್ವಾಮಿ ಬೆಟ್ಟದ ದೇವಾಲಯಕ್ಕೆ ಹೊತ್ತು ತಂದು ದೇವರಿಗೆ ಅಭಿಷೇಕ ಹಾಗೂ ಪ್ರಸಾದ ತಯಾರಿಕೆಗೆ ನೀಡುತ್ತಿದ್ದರು.

ಮೈಸೂರು ಭಾಗದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಮಂಡ್ಯ, ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಯಲ್ಲಿ ಮಂಗಳವಾರ ಸಂಜೆ ಬಿರುಗಾಳಿ, ಗುಡುಗು-ಸಿಡಿಲಿನಿಂದ ಕೂಡಿದ ಧಾರಾಕಾರ ಮಳೆ ಸುರಿದಿದೆ.

ಮಂಡ್ಯ ಜಿಲ್ಲೆಯ ಭಾರತೀನಗರ ಪಟ್ಟಣ ಸೇರಿದಂತೆ ಹೋಬಳಿ ವ್ಯಾಪ್ತಿಯ ವಿವಿಧೆಡೆ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಗೆ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದವು. ಅರೆಚಾಕನಹಳ್ಳಿಯಲ್ಲಿ ಮರ ಬಿದ್ದು ಶಾಲಾ ಕಟ್ಟಡದ ಹೆಂಚುಗಳು ಒಡೆದವು. ಗೋಡೆಯಲ್ಲೂ ಬಿರುಕು ಕಾಣಿಸಿಕೊಂಡಿತು. ಬಿರುಗಾಳಿ ಶುರುವಾದ ಕೂಡಲೇ ಶಿಕ್ಷಕರು ಮಕ್ಕಳನ್ನು ಬೇರೊಂದು ಕಟ್ಟಡಕ್ಕೆ ಕರೆದೊಯ್ದಿದ್ದರಿಂದ ಅಪಾಯ ಸಂಭವಿಸಿಲ್ಲ. ಶಂಭುಲಿಂಗೇಶ್ವರ ದೇವಾಲಯದ ಚಾವಣಿಗೆ ಹೊದಿಸಿದ್ದ ಶೀಟುಗಳು ಹಾರಿ ಹೋಗಿವೆ.

ಮೈಸೂರು ಜಿಲ್ಲೆಯ ಹುಣಸೂರು, ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಗುಡುಗು-ಸಿಡಿಲಿನ ಮಳೆಯಾದರೆ, ನಂಜನಗೂಡು ಹಾಗೂ ತಿ.ನರಸೀಪುರದ ಕೆಲಭಾಗ ತುಂತುರು ಮಳೆಯಾಯಿತು. ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಸಮೀಪದ ಬಲ್ಲಮಾವಟಿಯಲ್ಲಿ ಮಧ್ಯಾಹ್ನ ಬಿರುಸಿನ ಮಳೆ ಸುರಿಯಿತು. ನೆಲಜಿ, ಕಕ್ಕಬ್ಬೆ, ಬಲಮುರಿ, ಪಾರಾಣೆ, ಕೈಕಾಡು ಭಾಗದಲ್ಲೂ ಮಳೆಯಾಗಿದೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲೂ ಅರ್ಧ ಗಂಟೆಗೂ ಹೆಚ್ಚು ಕಾಲ ಬಿರುಸಿನ ಮಳೆ ಸುರಿಯಿತು.

ಸಿಡಿಲು ಬಡಿದು ಯುವತಿ ಸಾವು

ಕಲಬುರಗಿ: ಯಾದಗಿರಿ ಜಿಲ್ಲೆಯ ಕೆಂಭಾವಿ ಸಮೀಪದ ಮಲ್ಲಾ ಗ್ರಾಮದಲ್ಲಿ ಮಂಗಳವಾರ ಸಂಜೆ ಹೊಲದಲ್ಲಿ ಕಳೆ ತೆಗೆಯುತ್ತಿದ್ದ ವೇಳೆ ಸಿಡಿಲು ಬಡಿದು ವಿದ್ಯಾ ಸಂಗಪ್ಪ ಕುಂಬಾರ (19) ಎಂಬ ಯುವತಿ ಸಾವನ್ನಪ್ಪಿದ್ದಾರೆ.

ಬೀದರ್ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಮಂಗಳವಾರ ಸಂಜೆ ಒಂದೂವರೆ ಗಂಟೆಗೂ ಹೆಚ್ಚು ಹೊತ್ತು ಮಳೆಯಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಜಾಜಿನಗರ ವಿಭಾಗ,
ಸರ್ ಎಂ. ವಿಶ್ವೇಶ್ವರಯ್ಯ ವಾಣಿಜ್ಯ ಸಂಕೀರ್ಣ, 12ನೇ ಮುಖ್ಯರಸ್ತೆ, 2ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು – 560010.

ಸಂಖ್ಯೆ: ಕಾಅ/ರಾನ/ಇ–ಪ್ರೋ/04/2022–23 ದಿನಾಂಕ: 14–06–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬೃಬೆಂಮಪಾ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೃಬೆಂಮಪಾಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–4)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ರಾಜಾಜಿನಗರ ಮತಕ್ಷೇತ್ರದಲ್ಲಿನ ವಾರ್ಡ್ ಸಂಖ್ಯೆ. 97, 98, 99, 100, 101, 107 ಮತ್ತು 108 ರಲ್ಲಿ ಕೊಳವೆ ಬಾವಿಗಳು, ಪೈಪ್‌ಲೈನುಗಳ ಜಾಲ ಮತ್ತು ಅಂತರ್ಜಲ ರಿಚಾರ್ಜ್ ಸೌಕರ್ಯಗಳ ಮೂಲಕ ನೀರು ಸರಬರಾಜು ವರ್ಧಿಸುವುದು.	110.00	110000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 29–06–2022 ರಂದು 16.00 ಗಂಟೆವರೆಗೆ. 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: 27–06–2022ರಂದು 11.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ರಾಜಾಜಿನಗರ ವಿಭಾಗ) ಇಲ್ಲಿ ನಡೆಯುವುದು. 4) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–07–2022ರಂದು 16.00 ಗಂಟೆಗೆ. 5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: 02–07–2022 ರಂದು 16.00 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

KARNATAKA INDUSTRIAL AREAS DEVELOPMENT BOARD
(A Government of Karnataka Undertaking)
Zonal Office, Lakkamanahalli Industrial area, PB Road,
Dharwad - 573201 Ph : 0836-2467323, 2468697,
E-Mail Id : dodharwad@kiadb.in

No. : KIADB / DWD /EE/688/2022-23 Date : 13-06-2022

ಪ್ರಕಟಣೆ

ಕೆ.ಐ.ಎ.ಡಿ.ಬಿ ಯು ಅಭಿವೃದ್ಧಿ ಪಡಿಸಿದ ಧಾರವಾಡ ಜಿಲ್ಲೆ ಬೇಲೂರ ಕೈಗಾರಿಕಾ ಪ್ರದೇಶದಲ್ಲಿ ಉದ್ದೇಶಿತ ಯೋಜನೆಗಳಿಗಾಗಿ ಈ ಕೆಳಗಿನ ಹಂಚಿಕೆದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಮಂಡಳಿಯ ನಿಯಮಾನುಸಾರ ನಿಗಧಿತ ಅವಧಿಯಲ್ಲಿ ಉದ್ದೇಶಿತ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲರಾಗಿರುತ್ತಾರೆ. ಹಾಗೂ ವಿವಿಧ ದಿನಾಂಕಗಳಂದು ನೋಟಿಸಗಳನ್ನು ಜಾರಿಗೊಳಿಸಿ ನಿವೇಶನದ ಮೂಲ ದಾಖಲಾತಿಗಳನ್ನು ಮಂಡಳಿಗೆ ಹಿಂದಿರುಗಿಸಿ, ಹಣವನ್ನು ಮರುಪಾವತಿ ಪಡೆಯಲು ಸೂಚಿಸಲಾಗಿರುತ್ತದೆ. ಇಲ್ಲಿಯವರೆಗೆ ನಿವೇಶನದ ಮೂಲ ದಾಖಲಾತಿಗಳನ್ನು ಮಂಡಳಿಗೆ ಸಲ್ಲಿಸಿ, ಹಣ ಮರುಪಾವತಿ ಪಡೆದಿರುವುದಿಲ್ಲ. ವಿಫಲರಾದ ಹಂಚಿಕೆದಾರರ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಉದ್ದಿಮೆದಾರರ ಹೆಸರು ವಿಳಾಸ	ನಿವೇಶನ ಸಂಖ್ಯೆ	ಕ್ಷೇತ್ರ (ಚ.ಮೀ)	ಹಂಚಿಕೆ ಪತ್ರ ದಿನಾಂಕ
1	ಮೆ|| ಕಾಂತೇಶ ಇಂಡಸ್ಟ್ರೀಸ್, ಶ್ರೀ. ನೀಲಪ್ಪ ಎಂ ಕರಿಭೀಮಣ್ಣವರ ಹುಬ್ಬಳ್ಳಿ	164(ಎ10) ಹಾಗೂ 164(ಎ11)	881.25	20–05–2011
2	ಮೆ|| ಆರ್.ಪಿ.ಎ ಫೇರೋ ಇಂಡಸ್ಟ್ರೀಸ್ ಪ್ರೈ ಲೀ, ಬೇಲೂರ ಕೈಗಾರಿಕಾ ಪ್ರದೇಶ ಧಾರವಾಡ	569 ರಿಂದ 575 ಮತ್ತು 576(ಪಿ)	64752.00	18–05–2009

ಈ ಪ್ರಕಟಣೆ ದಿನಾಂಕದಿಂದ 07 ದಿವಸದೊಳಗಾಗಿ ಮೂಲ ದಾಖಲಾತಿಗಳನ್ನು ಸಲ್ಲಿಸಿ ಹಣವನ್ನು ಮರುಪಾವತಿ ಪಡೆಯಲು ಸೂಚಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ಮಂಡಳಿಯ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಸಹಿ/–ಕಾರ್ಯಪಾಲಕ ಅಭಿಯಂತರು,
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
ವಲಯ ಕಛೇರಿ, ಧಾರವಾಡ–580004

ವಾಸಾಸಂಇ/ಧಾರವಾಡ/ಎಂಸಿಎ/219/2022–23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

ಟೆಂಡರ್‌ಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆಂಗಳೂರು ಜಲಮಂಡಲಿಯು, ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ. ಮೊತ್ತ
ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.	
ಸಂ: ಬೆಂಜಮಂ/ಪ್ರಮುಅ/ಮುಅ(ಪೂ)/ಅಮುಅ(ಪೂ)-1/ಉಮುಅ(ನಿ)-II/ತಾಂಸ(ನಿ)-III/1044/2022-23	ದಿನಾಂಕ : 13-06-2022
ಸಕಾನಿಅ(ಈಶಾನ್ಯ-1) ಉಪ-ವಿಭಾಗದ ಅಡಿಯಲ್ಲಿ ಸಿ.ವಿ. ರಾಮನ್ ರಸ್ತೆಯ ಉದ್ದಕ್ಕೂ ಹೆಚ್‌ಎಂಟಿ ರಸ್ತೆ ಜಕ್ಷನ್ ವರೆಗೆ 700 ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜಿನ ಫೀಡರ್ ಮಾರ್ಗವನ್ನು ಮತ್ತು ಸಿ.ವಿ. ರಾಮನ್ ರಸ್ತೆಯ ಉದ್ದಕ್ಕೂ ಯಶವಂತಪುರ ಜಕ್ಷನ್‌ವರೆಗೆ 300 ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಹಾಗೂ ಅಳವಡಿಸುವುದು.	ರೂ.2,89,20,073/- / ರೂ.4,33,900/-
ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ: 29-06-2022ರ ಸಂಜೆ 3:00 ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 01-07-2022ರ ಸಂಜೆ 4:00 ಗಂಟೆಯ ನಂತರ. ಸಹಿ/- ಮುಖ್ಯ ಅಭಿಯಂತರರು (ಪೂರ್ವ).	
ಮುಖ್ಯ ಅಭಿಯಂತರರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.	
ಸಂ: ಬೆಂಜಮಂ/ಮುಅ(ತ್ಯಾನೀನಿ)/ಅಮುಅ(ತ್ಯಾನೀನಿ)-1/ತಾಂಸ-I/469/2022-23	ದಿನಾಂಕ : 13-06-2022
ಅಂಬೇಡ್ಕರ್ ನಗರದಿಂದ ಅಟಲ್ ಬಿಹಾರಿ ವಾಜ್‌ಪೇಯಿ ರಸ್ತೆಯ ಉದ್ದಕ್ಕೂ ಕಾಡುಗೋಡಿ ಬಿಬಿಎಂಪಿ ಕಛೇರಿಯವರೆಗೆ 450/600 ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ-3 ದರ್ಜೆಯ ಒಳಚರಂಡಿ ಮಾರ್ಗವನ್ನು ಒದಗಿಸುವುದು ಹಾಗೂ ಅಳವಡಿಸುವುದು.	ರೂ.289.18 ಲಕ್ಷಗಳು / ರೂ.4.34 ಲಕ್ಷಗಳು
ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 30-06-2022ರ ಸಂಜೆ 5:30 ಗಂಟೆಯವರೆಗೆ. ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 02-07-2022ರ ಸಂಜೆ 4:00 ಗಂಟೆಗೆ. ಸಹಿ/- ಮುಖ್ಯ ಅಭಿಯಂತರರು (ತ್ಯಾನೀನಿ).	

ಹೆಚ್ಚಿನ ವಿವರಗಳಿಗಾಗಿ ಮೇಲಿನ ಕಚೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಅಥವಾ ವೆಬ್‌ಸೈಟ್ https://eproc.karnataka.gov.in ಇಲ್ಲಿಗೆ ಲಾಗ್ ಆನ್ ಮಾಡಿ ಪಡೆದುಕೊಳ್ಳಬಹುದು.
DIPR/CP/AAPL/RO885/22-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಸ:ಕಾ.ಇ/ಗ್ರಾ.ನೀ.ಸ & ನೈ.ವಿ.ಚಿ/ /2022–23 ದಿನಾಂಕ :10.6.2022

ಅಧಿಸೂಚನೆ :

ಜಲಜೀವನ ಮಿಷನ್ ಯೋಜನೆಯಡಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕಮಗಳೂರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಉಪವಿಭಾಗಗಳಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು, ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರಸಂ	ಹುದ್ದೆ	ಒಟ್ಟು ಹುದ್ದೆ	ವಿದ್ಯಾರ್ಹತೆ	ವಯಸ್ಸು	ಅನುಭವ	ಮಾಸಿಕ ಸಂಭಾವನೆ	ಷರಾ
1	ಕಿರಿಯ ಸಮಾಲೋಚಕರು (ಸಹಾಯಕ ಇಂಜಿನಿಯರ್)	12	Minimum First class Civil Engineering from a AICTE recognized university. Distance / Diploma holders should not be considered.	30 ವರ್ಷ ಮೀರದಂತಹ	ಕನಿಷ್ಠ 2 ವರ್ಷದ ಅನುಭವ ಹೊಂದಿರಬೇಕು	ರೂ 40000.00	ಸಾರ್ವಜನಿಕರೊಂದಿಗೆ ಕನ್ನಡ ಬಾಷೆಯಲ್ಲಿ ವ್ಯವಹರಿಸಲು ಪೂರಕ ಜ್ಞಾನ ಹೊಂದಿರಬೇಕು
2	ಕಿರಿಯ ಸಮಾಲೋಚಕರು (ಸಹಾಯಕ ಇಂಜಿನಿಯರ್)	06	Minimum First class Dil[ploma holders in Civil Engineering from a AICTE recognized university. Distance / Diploma holders should not be considered.	28 ವರ್ಷ ಮೀರದಂತಹ	ಕನಿಷ್ಠ 2 ವರ್ಷದ ಅನುಭವ ಹೊಂದಿರಬೇಕು	ರೂ 30000.00	

ಸೂಚನೆಗಳು
1. ಅರ್ಜಿಸಲ್ಲಿಸಲು ಪ್ರಾರಂಭದ ದಿನಾಂಕ 13.6.2022 ಮತ್ತು ಕೊನೆಯ ದಿನಾಂಕ: 24.6.2022
2. ಸರ್ಕಾರಿ ಕೆಲಸದ ಅವಧಿಯಲ್ಲಿ ಮಾತ್ರ ಅನ್‌ಲೈನ್ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 05:30 ಗಂಟೆಯವರೆಗೆ (ಸರ್ಕಾರಿ ರಜೆಯ ದಿನ ಆನ್ ಲೈನ್ ಅರ್ಜಿಗಳು ಸ್ವೀಕೃತಿಯಾಗುವುದಿಲ್ಲ.)
3 ಅರ್ಜಿಗಳನ್ನು: https:// chikkamagaluru.nic.in ವೆಬ್ ಸೈಟ್‌ನ ಮುಖಾಂತರ ಅರ್ಜಿ ಸಲ್ಲಿಸುವುದು
ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ವಿಭಾಗ, ಚಿಕ್ಕಮಗಳೂರು ಇವರನ್ನು ಸಂಪರ್ಕಿಸುವುದು. ದೂ ಸಂಖ್ಯೆ : 08262-295795, ಇಮೇಲ್– eerwsckm@gmail.com

ಸಹಿ/–ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು& ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು,



EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಜಿರಾಫೆಗಳ ಕತ್ತು ಏಕೆ ಅಷ್ಟು ಉದ್ದ?

ಜಿರಾಫೆಗಳ ಕತ್ತು ಉದ್ದವಾಗಲು ಆಹಾರವಷ್ಟೇ ಅಲ್ಲದೆ ಲಿಂಗವೂ ಕಾರಣ ಎಂದು ಈಗ ವಿವರಿಸುತ್ತಿದ್ದಾರೆ, ವಿಜ್ಞಾನಿಗಳು...

ಅಮೃತೇಶ್ವರಿ ಬಿ.

ಮೈಸೂರಿನಲ್ಲಿರುವ ಮೃಗಾಲಯದೊಳಕ್ಕೆ ಪ್ರವೇಶವಿಡುತ್ತಿದ್ದಂತೆ ನಮ್ಮ ಕಣ್ಣಿಗೆ ಬೀಳುವುದು ಎತ್ತರೆತ್ತರದ ಬಳುಕುವ ಉದ್ದುದ್ದ ಕತ್ತಿನ ಜಿರಾಫೆಗಳು. ಅವುಗಳ ಗಾತ್ರ ಹಾಗೂ ಎತ್ತರವೇ ಎಲ್ಲರ ಗಮನವನ್ನು ತನ್ನತ್ತ ಸೆಳೆದುಕೊಂಡುಬಿಡುತ್ತದೆ. ಅವನ್ನು ನೋಡಿದ ಕೂಡಲೇ ಎಲ್ಲರಲ್ಲೂ ಮೂಡುವ ಪ್ರಶ್ನೆಯೇ 'ಜಿರಾಫೆಯ ಕತ್ತು ಏಕೆ ಅಷ್ಟು ಉದ್ದ?'

ಹೀಗೆ ಕುತೂಹಲಕಾರಿ ಪ್ರಶ್ನೆಯನ್ನು ಕೇಳುತ್ತಾ ಮೃಗಾಲಯದೊಳಕ್ಕೆ ಹೋದರೆ ಇನ್ನಾವ ಪ್ರಾಣಿಗೂ ಇಷ್ಟುದ್ದದ ಕತ್ತು ಇರುವುದಿಲ್ಲ. ಅದಾಗ್ಯೂ ಎಲ್ಲ ಪ್ರಾಣಿಗಳಿಗೂ ಅವುಗಳದ್ದೇ ಆದ ವೈಶಿಷ್ಟ್ಯ ಇರುತ್ತದೆನ್ನಿ. ಆದರೆ ಕತ್ತು ಎಲ್ಲ ಪ್ರಾಣಿಗಳಿಗೂ ಇರುತ್ತದಾದರೂ ಜಿರಾಫೆಗಳ ಕತ್ತು ಮಾತ್ರ ಬಹಳ ವಿಶಿಷ್ಟ ಮತ್ತು ಆಕರ್ಷಕ!

ಜಿರಾಫೆಗಳ ಕತ್ತು ಏಕೆ ಅಷ್ಟು ಉದ್ದ – ಎನ್ನುವುದು ಎಲ್ಲರಂತೆ ವಿಜ್ಞಾನಿಗಳಿಗೂ ಕೌತುಕದ ವಿಷಯವೇ ಆಗಿತ್ತು. ಹಾಗಾಗಿ ಈ ಪ್ರಶ್ನೆಗೆ ಉತ್ತರ ಹುಡುಕಲು ಅನೇಕ ಜೀವವಿಜ್ಞಾನಿಗಳು ಪ್ರಯತ್ನಿಸಿದ್ದಾರೆ. ಅದಕ್ಕೆ ಸಿಕ್ಕ ಉತ್ತರವೇ ಜೀವವಿಕಾಸ. ಅಂದರೆ ಕಾಲಾನಂತರದಲ್ಲಿ ಅವಶ್ಯಕತೆಗಳಿಗನುಗುಣವಾಗಿ ಜೀವಿಗಳ ಭೌತಿಕ ಹಾಗೂ ಆನುವಂಶಿಕ ಗುಣಲಕ್ಷಣಗಳಲ್ಲಿ ಬದಲಾವಣೆಯಾಗುತ್ತದೆ ಎನ್ನುವುದು. ವಿಕಸನವು ಎಲ್ಲ ಜೀವಿಗಳಲ್ಲೂ ಸಾಮಾನ್ಯವಾಗಿದ್ದರೂ 'ಜೀವವಿಕಾಸ ಎಂದರೇನು? ಅದು ಹೇಗಾಯಿತು?' – ಎಂದು ವಿವರಿಸಲು ಮಾತ್ರ ಜಿರಾಫೆಗಳ ಉದ್ದನೆಯ ಕತ್ತೇ ಪ್ರಮಾಣಿತ ಉದಾಹರಣೆಯಾಗಿಬಿಟ್ಟಿದೆ. ಜೀವಿಗಳ ವಿಕಾಸಕ್ಕೆ ಸಂಬಂಧಿಸಿದಂತೆ ಸಾಕಷ್ಟು ವಾದಗಳಿದ್ದರೂ ಕೆಲವು ಮಾತ್ರವೇ ಒಪ್ಪುವಂಥವು; ಅಷ್ಟೇ ಅಲ್ಲ, ಇಲ್ಲಿ ಒಬ್ಬೊಬ್ಬರ ಸಿದ್ಧಾಂತವೂ ಭಿನ್ನಭಿನ್ನ.

ಜೀವವಿಕಾಸದ ಅಧ್ಯಯನದ ಆರಂಭದಲ್ಲಿ ಜೀನ್ ಬ್ಯಾಪಿಸ್ಟ್ ಲಮಾರ್ಕ್ ಮಂಡಿಸಿದ್ದ ವಾದವೇ 'ಯೂಸ್ ಆ್ಯಂಡ್ ಡಿಸ್‌ಯೂಸ್ ಥಿಯರಿ'. ಅಂದರೆ ನಮ್ಮ ದೇಹದ ಯಾವುದೇ ಅಂಗವೂ ನಮ್ಮ ಅವಶ್ಯಕತೆಗೆ ತಕ್ಕಂತೆ ಬೆಳವಣಿಗೆಯಾಗಿದೆ. ಅದನ್ನು ಬಳಸುತ್ತಿದ್ದಂತೆ ವಿಕಾಸವಾಗುತ್ತದೆ ಇಲ್ಲವಾದಲ್ಲಿ ನಶಿಸಿ ಹೋಗುತ್ತದೆ ಎಂದರ್ಥ. ಅಂತೆಯೇ ಜಿರಾಫೆಗಳೂ ಎತ್ತರೆತ್ತರದ ಗಿಡಗಳನ್ನೂ ಮರದ ಸೊಪ್ಪನ್ನೂ ತಿನ್ನಲು ಕತ್ತನ್ನು ಎತ್ತರಕ್ಕೆ ಚಾಚುತ್ತಿದ್ದುದರಿಂದ ಅವುಗಳ ಪೂರ್ವಜರ ಕತ್ತುಗಳು ಉದ್ದವಾದವು. ವಂಶಪಾರಂಪರಿಕವಾಗಿ ಅದು ಮುಂದುವರೆದು ಉದ್ದ ಕತ್ತಿನ ಜಿರಾಫೆಗಳಷ್ಟೇ ಉಳಿದುಕೊಂಡವು ಎನ್ನುವುದು ಲಮಾರ್ಕರ ವಾದ.

ಮುಂದೆ ಮತ್ತೊಬ್ಬ ಜೀವವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಮತ್ತೊಂದು ಬಗೆಯ ವಾದವನ್ನು ಮುಂದಿಟ್ಟರು. ಅದುವೇ 'ನ್ಯಾಚುರಲ್ ಸೆಲೆಕ್ಷನ್' ಅಥವಾ 'ನೈಸರ್ಗಿಕ ಆಯ್ಕೆ' – ನಿಸರ್ಗದಲ್ಲಿರುವ ಬಲಿಷ್ಠವಾದ, ಉಳಿವಿಗಾಗಿ ಹೋರಾಡಿ ಗೆಲ್ಲುವ ಮತ್ತು ಸಂತಾನೋತ್ಪತ್ತಿಯನ್ನು ಮುಂದುವರೆಸಬಲ್ಲಂತಹ ಶಕ್ತಜೀವಿಗಳನ್ನು ನಿಸರ್ಗವೇ ಆಯ್ದುಕೊಳ್ಳುತ್ತದೆ ಎಂದರು ಡಾರ್ವಿನ್. ಅಂತೆಯೇ ನಿಸರ್ಗದಲ್ಲಿ ವಿವಿಧ ಉದ್ದದ ಕತ್ತಿನ ಜೀವಿಗಳಿದ್ದವು. ಅವುಗಳಲ್ಲಿ ಉದ್ದ ಕತ್ತಿನವು ಗಿಡ-ಮರಗಳು ಎಷ್ಟೇ ಎತ್ತರವಾಗಿದ್ದರೂ ಅವನ್ನು ಎಟುಕಿಸಿಕೊಂಡು ತಿನ್ನಲು ಶಕ್ತವಾಗಿದ್ದರಿಂದ ಅಂತಹವು ಹೆಚ್ಚೆಚ್ಚು ಬದುಕಿದವು. ಹೀಗೆ ಪ್ರಕೃತಿಯೇ ಉದ್ದುದ್ದ ಕತ್ತಿನ ಜಿರಾಫೆಗಳನ್ನು ಬದುಕುಳಿಯುವಂತೆ ಆರಿಸಿಕೊಂಡಿತು ಎಂಬುದು ಡಾರ್ವಿನ್ನರ ವಾದ. ಈ ವಾದವನ್ನೇ ಹೆಚ್ಚು ಜನರು ಒಪ್ಪಿಕೊಂಡಿದ್ದರು.

ಆದರೆ 'ಚೈನೀಸ್ ಅಕಾಡೆಮಿ ಆಫ್ ಸೈನ್ಸಸ್'ನ 'ಇನ್‌ಸ್ಟಿಟ್ಯೂಟ್ ಆಫ್ ಪೇಲಿಯಂಟಾಲಜಿ ಅಂಡ್ ಪೇಲಿಯಾಂಥ್ರೊಪಾಲಜಿ'ಯ ವಿಜ್ಞಾನಿಗಳ ಹೊಸ ಸಂಶೋಧನೆಯೊಂದು ಇವೆರಡೂ ವಾದಗಳು ತಪ್ಪಿರಬಹುದು ಎಂದು ಹೇಳುತ್ತಿದೆ. ಶಿಕೀ ವ್ಯಾಂಗ್ ಮತ್ತು ತಂಡದವರ ಪ್ರಕಾರ 'ಸೆಕ್ಷ್ಯುಯಲ್ ಸೆಲೆಕ್ಷನ್' ಅಥವಾ 'ಲಿಂಗದ ಆಯ್ಕೆ' ಜಿರಾಫೆಗಳ ಉದ್ದ ಕತ್ತಿಗೆ ಕಾರಣವಂತೆ. ಅರ್ಥಾತ್, ಉದ್ದುದ್ದ ಕತ್ತಿರುವ ಗಂಡು ಜಿರಾಫೆಗಳನ್ನು ಹೆಣ್ಣುಗಳು ಮೆಚ್ಚಿಕೊಳ್ಳುತ್ತಿದ್ದವು. ಹಾಗಾಗಿ ಉದ್ದ ಕತ್ತಿರುವ ಜಿರಾಫೆಗಳೇ ಹೆಚ್ಚು ಉಳಿದು ವಿಕಾಸವಾದವು. ಹೀಗೆ ಉದ್ದುದ್ದ ಕತ್ತು ಬೆಳೆಯಲು ಕಾರಣ ಹೆಣ್ಣುಗಳಿಗಾಗಿ ಗಂಡುಗಳ ನಡುವೆ ನಡೆದ ಹೊಡೆದಾಟ ಎನ್ನುತ್ತಾರೆ, ಶಿಕೀ ವ್ಯಾಂಗ್ ಮತ್ತು ತಂಡ.

ಶಿಕಿ ವ್ಯಾಂಗ್ ಮತ್ತು ತಂಡದವರಿಗೆ ಉತ್ತರ ಚೀನಾದಲ್ಲಿ ಇತ್ತೀಚೆಗೆ ಸುಮಾರು ಎರಡೂವರೆ ಕೋಟಿ ವರ್ಷಗಳಿಂದ ಒಂದೂಕಾಲು ಕೋಟಿ ವರ್ಷಗಳಷ್ಟು ಹಿಂದಿನ ಪಳೆಯುಳಿಕೆಯೊಂದು ದೊರೆತಿತ್ತು. 'ಡಿಸ್ಕೋಕೆರಿಕ್ಸ್ ಶಿಯೇಚಿ' ಎನ್ನುವ ಇದನ್ನು ಅವರು ಅಧ್ಯಯನ ಮಾಡಿದಾಗ, ಇದು ಗಂಡು ಜಿರಾಫೆ ಮತ್ತು ಅದರ ಶಿರಭಾಗದಲ್ಲಿ ತಟ್ಟೆಯಂತಹ ಕೊಂಬಿನ ರಚನೆಯಿದೆ ಎನ್ನುವುದು ಕಂಡುಬಂದಿದೆ. ತಲೆ-ಕತ್ತು-ಬೆನ್ನುಮೂಳೆಯ ಈ ವಿಶಿಷ್ಟ ರಚನೆಗಳು ತಲೆ-ತಲೆ ಗುದ್ದಾಟಕ್ಕಾಗಿಯೇ ರೂಪುಗೊಂಡಿರಬೇಕು. 'ಫೈನೈಟ್ ಎಲಿಮೆಂಟಲ್ ಅನಾಲಿಸಿಸ್' ಅರ್ಥಾತ್ 'ಗಣಕೀಕೃತ ಧಾತುಪರೀಕ್ಷೆ'ಯೂ ಡಿಸ್ಕೋಕೆರಿಕ್ಸ್ ಶಿಯೇಚಿಯಲ್ಲಿರುವ ಅಟ್ಲಾಂಟೋ-ಆಕ್ಸಿಪಿಟಾಲಿಸ್ ಹಾಗೂ ಇಂಟರ್ ಸರ್ವಿಕಲ್ ಆರ್ಟಿಕ್ಯುಲೇಷನ್ ರಚನೆ ಗುದ್ದಾಟಕ್ಕೇ ತಕ್ಕುದಾಗಿದೆ ಎನ್ನುತ್ತಿದೆ. ಇದರ ದಂತಕವಚದ ಸಮಸ್ಥಾನಿಗಳ ದತ್ತಾಂಶವೂ ಬೇರೆಲ್ಲಾ ಸಸ್ಯಾಹಾರಿಗಳ ಡೆಲ್ಟಾ 13C ಬೆಲೆಗೆ ಹೋಲಿಸಿದರೆ ಹೆಚ್ಚಾಗಿಯೇ ಇದೆ. ಡೆಲ್ಟಾ 13C ಬೆಲೆಯು ಸಸ್ಯಜನ್ಯ ಎಣ್ಣೆಯ ಮಟ್ಟವನ್ನು ಹೇಳುತ್ತದೆ. ಹಾಗಾಗಿ ಇದೊಂದು ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದ ಜೀವಿ ಎಂದು ಖಚಿತವಾಯಿತು.



ಇದು ಉಳಿದೆಲ್ಲಾ ಸ್ತನಿಗಳ ತಲೆ-ಕತ್ತುಗಳ ನಡುವಿನ ಕೀಲುಗಳಿಗಿಂತ ಸಂಕೀರ್ಣವಾಗಿದೆ. ಅವು ಟಗರುಗಳಂತೆ ತಲೆಯಿಂದ ಗುದ್ದಾಡುತ್ತಿದ್ದಿರಬಹುದು ಎಂದು ಅಂದಾಜಿಸಲಾಗಿದೆ. ಪಳೆಯುಳಿಕೆಯ ದಂತಕವಚ ಸಮಸ್ಥಾನಿಗಳ ದತ್ತಾಂಶಗಳ ಪ್ರಕಾರ ಡಿಸ್ಕೋಕೆರಿಕ್ಸ್ ಶಿಯೇಚಿಯ ದಂತರಚನೆ ಇತರೆ ಸಸ್ಯಾಹಾರಿ ಪ್ರಾಣಿಗಳಿಗಿಂತ ಭಿನ್ನವಾಗಿದೆಯಂತೆ. ಹಾಗಾಗಿ ಈ ಪರೀಕ್ಷೆಗಳು ಹೇಳುವುದಿಷ್ಟೇ, ಅವು ಇಂದಿನ ಜಿರಾಫೆಗಳಂತೆ ಎತ್ತರದಲ್ಲಿರುವ ಎಲೆ-ಸೊಪ್ಪುಗಳನ್ನು ಎಟುಕಿಸಿಕೊಂಡು ತಿನ್ನಬಲ್ಲವಾಗಿದ್ದವು. ಇವುಗಳ ವಿಶಿಷ್ಟವಾದ ತಲೆ-ಕತ್ತಿನ ರಚನೆ ಹಾಗೂ ತಟ್ಟೆಯಾಕಾರದ ಕೊಂಬಿನ ರಚನೆಯು ಅವುಗಳ ವಂಶಸ್ಥರೊಂದಿಗಿನ ಕಾದಾಟವನ್ನು ಸೂಚಿಸುತ್ತದೆ. ಗಂಡುಜಿರಾಫೆಗಳಲ್ಲಿ ಮಾತ್ರ ಇಂತಹ ರಚನೆ ಇದ್ದುದರಿಂದ, ಬಹುಶಃ ಹೆಣ್ಣುಗಳಿಗಾಗಿ ಗಂಡುಗಳು ಗುದ್ದಾಡುತ್ತಿದ್ದಿರಬೇಕು ಮತ್ತು ಹೆಣ್ಣುಗಳಿಗೂ ಉದ್ದ ಕತ್ತಿನ ಗಂಡುಗಳೇ ಹೆಚ್ಚು ಮೆಚ್ಚುಗೆಯಾಗುತ್ತಿದ್ದರಿಂದ ಉದ್ದ ಕತ್ತಿನ ಜಿರಾಫೆಗಳೇ ವಿಜಯೀಗಳಾದವು. ಅಂತಹವುಗಳ ವಂಶಾವಳಿಯೇ ಪ್ರಾಬಲ್ಯವಾಗಿ, ಉಳಿದವು ಅಳಿದು ಹೋಗಿರಬೇಕು ಎಂಬುದು ವಿಜ್ಞಾನಿಗಳ ಅಭಿಪ್ರಾಯ. ಅರ್ಥಾತ್, ಅವುಗಳ ಕತ್ತು ಉದ್ದವಾಗಲು ಆಹಾರವಷ್ಟೇ ಅಲ್ಲದೇ ಲಿಂಗವೂ ಕಾರಣ ಎಂದಾಯಿತು.

ಆದರೆ ಇಂದು ನಾವು ಕಾಣುವ ಜಿರಾಫೆಗಳು ತಲೆಯಿಂದ ಗುದ್ದಾಡದೆ ತಮ್ಮ ಕತ್ತುಗಳಿಂದ ಸೆಣಸಾಡುತ್ತವೆ. ಉದ್ದವಾಗಿರುವುದರಿಂದಲೋ ಏನೋ ಟಗರಿನಂತೆ ಬಲವಾಗಿ ಹೋರಾಡಲು ಸಾಧ್ಯವಾಗದಿರುವುದರಿಂದ ಇವು ಕತ್ತುಗಳನ್ನು ಬಳಸಿಕೊಂಡು ಕಾದಾಡುತ್ತವೆ. ಇದೂ ವಿಕಸನದ ಒಂದು ಹಂತವೇ ಇರಬೇಕು.

ಡಿಸ್ಕೋಕೆರಿಕ್ಸ್ ಶಿಯೇಚಿಯು ಜಿರಾಫೆಗಳ ಕತ್ತು ಹೇಗೆ ಮತ್ತು ಏಕೆ ಅಷ್ಟು ಉದ್ದವಾಯಿತು ಎಂದು ಹೇಳುತ್ತಾ ಜೀವವಿಕಾಸವನ್ನು ಅರ್ಥಮಾಡಿಸುವಂತಹ ಮತ್ತೊಂದು ಸಾಕ್ಷಿಯಾಗಿದೆ. ಡಾರ್ವಿನ್‌ನ ಸಿದ್ಧಾಂತವನ್ನೂ ತಳ್ಳಿಹಾಕಿ ವಿಕಾಸವಾದಕ್ಕೆ ಜೀವಿಗಳ ಲಿಂಗವೂ ಕಾರಣ ಎನ್ನುವುದನ್ನು ಈ ಸಂಶೋಧನೆ ತೋರಿಸಿಕೊಟ್ಟಿದೆ. ಅಂದಿನ ಗಂಡುಜಿರಾಫೆಗಳ ನಡುವೆ ಹೆಣ್ಣುಜಿರಾಫೆಗಳಿಗಾಗಿ ಅದೆಷ್ಟು ಕಾಳಗಗಳು ನಡೆದಿದ್ದುವೋ ತಿಳಿಯದು!

ಇನ್ನು ಒಂದೇ ಚಾರ್ಜಿಂಗ್ ಕೇಬಲ್

2024ರ ವೇಳೆಗೆ ಎಲ್ಲ ಸ್ಮಾರ್ಟ್‌ಫೋನ್‌ಗಳು, ಟ್ಯಾಬ್ಲೆಟ್‌ಗಳು, ಕ್ಯಾಮೆರಾಗಳು ಹಾಗೂ ಸಣ್ಣ ಸಾಧನಗಳೆಲ್ಲವೂ ಯುಎಸ್‌ಬಿ ಸಿ ಟೈಪ್ ಚಾರ್ಜಿಂಗ್ ಪೋರ್ಟ್ ಅನ್ನೇ ಬಳಸಬೇಕು ಎಂಬ ಒಮ್ಮತಕ್ಕೆ ಬಂದಿವೆ.

ಕೃಷ್ಣ ಭಟ್

ಎಮ್ಮೆ ಖರೀದಿ ಮಾಡುವುದಕ್ಕೆ ಹೋದರೆ ಹತ್ತಾರು ಸಾವಿರ ಎಮ್ಮೆ ಖರೀದಿ ಮಾಡಿದ ನಂತರ ಅದಕ್ಕೊಂದು ದಾಬು/ಹಗ್ಗವನ್ನು ಎಮ್ಮೆ ಮಾಲೀಕ ಉಚಿತವಾಗಿ ಕೊಡುವುದು ಅತ್ಯಂತ ಸಾಮಾನ್ಯ. ಕೆಲವು ಕಂಜೂಸು ವ್ಯಾಪಾರಸ್ಥರು ಅದಕ್ಕೂ ಕ್ಯಾತೆ ತೆಗೆದು, ದಾಬು ನೀವೇ ತರಬೇಕು ನಾವು ಎಮ್ಮೆ ಮಾತ್ರ ಕೊಡುವುದು ಎನ್ನುವವರಿದ್ದಾರೆ! ಇದಕ್ಕೆ ನಾವು ಆ ಮನುಷ್ಯನನ್ನು 'ಕಂಜೂಸು ಬುದ್ಧಿಯವ' ಎಂದು ಹೀಗಳೆದು ಸುಮ್ಮನೆ ಬರುತ್ತೇವೆ.

ಆದರೆ, ಹೀಗೆ ದಾಬು ಕೊಡದೇ ಇರುವುದೇ ನಿಜವಾದ ವ್ಯಾಪಾರ ಎಂಬಂತಹ ವಾತಾವರಣ ಸ್ಮಾರ್ಟ್‌ಫೋನ್ ಮಾರ್ಕೆಟ್‌ನಲ್ಲಿ ನಿರ್ಮಾಣವಾಗಿದೆ. ಇಲ್ಲಿ 'ದಾಬು' ಎಂದರೆ ಚಾರ್ಜಿಂಗ್ ಕೇಬಲ್! ಸ್ಮಾರ್ಟ್‌ಫೋನ್ ಮಾರುಕಟ್ಟೆಗೆ ಕಾಲಿಟ್ಟ ಸಮಯದಲ್ಲಿ ಚಾರ್ಜಿಂಗ್ ಕೇಬಲ್ ಮತ್ತು ಅಡಾಪ್ಟರ್ ಅನ್ನು ಸ್ಮಾರ್ಟ್‌ಫೋನ್ ಕಂಪನಿಗಳು ಕೊಡುತ್ತಿದ್ದವು. ಈಗಲೂ ಆಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳನ್ನು ಉತ್ಪಾದಿಸುವ ಕಂಪನಿಗಳು ಚಾರ್ಜಿಂಗ್ ಕೇಬಲ್, ಅದರ ಜೊತೆಗೆ ಅಡಾಪ್ಟರ್ ಕೊಡುತ್ತಿವೆ. ಆದರೆ, ಯುರೋಪಿಯನ್ ಯೂನಿಯನ್ ಇತ್ತೀಚೆಗೆ ಮಾಡಿಕೊಂಡ ಒಪ್ಪಂದ ಈ ನಿಟ್ಟಿನಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗುತ್ತದೆ.

2024ರ ವೇಳೆಗೆ ಎಲ್ಲ ಸ್ಮಾರ್ಟ್‌ಫೋನ್‌ಗಳು, ಟ್ಯಾಬ್ಲೆಟ್‌ಗಳು, ಕ್ಯಾಮೆರಾಗಳು ಹಾಗೂ ಸಣ್ಣ ಸಾಧನಗಳೆಲ್ಲವೂ ಯುಎಸ್‌ಬಿ ಸಿ ಟೈಪ್ ಚಾರ್ಜಿಂಗ್ ಪೋರ್ಟ್ ಅನ್ನೇ ಬಳಸಬೇಕು ಎಂಬ ಒಮ್ಮತಕ್ಕೆ ಬಂದಿದೆ. ಅಂದರೆ, ಎಲ್ಲ ಸ್ಮಾರ್ಟ್‌ಫೋನ್ ಕಂಪನಿಗಳೂ ತಮ್ಮ ಸ್ಮಾರ್ಟ್‌ಫೋನ್‌ಗಳ ಚಾರ್ಜಿಂಗ್‌ಗೆ ಯುಎಸ್‌ಬಿ ಸಿ ಟೈಪ್ ಪೋರ್ಟ್ ಒದಗಿಸಬೇಕು. ಸದ್ಯದ ಮಟ್ಟಿಗೆ ಬಹುತೇಕ ಆಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳು ಇದೇ ವಿಧಾನವನ್ನು ಬಳಸುತ್ತಿವೆ. ಆದರೆ, ಇದರಿಂದ ತೊಂದರೆಯಾಗುವುದು ಆ್ಯಪಲ್‌ಗೆ ಮಾತ್ರ. ಸದ್ಯ ಆ್ಯಪಲ್ ತನ್ನ ಐಫೋನ್‌ಗೆ ಲೈಟನಿಂಗ್ ಚಾರ್ಜಿಂಗ್ ಪೋರ್ಟ್ ಬಳಸುತ್ತಿದೆ. 2024ರ ನಂತರ ಮಾರುಕಟ್ಟೆಗೆ ಬರಲಿರುವ ಐಫೋನ್‌ಗಳು ಲೈಟನಿಂಗ್ ಪೋರ್ಟ್ ಬದಲಿಗೆ ಯುಎಸ್‌ಬಿ ಸಿ ಟೈಪ್ ಪೋರ್ಟ್ ಬಳಸಬೇಕಿದೆ.

ಇದು ಮೇಲ್ನೋಟಕ್ಕೆ ಕೇವಲ ಐಫೋನ್‌ಗೆ ಅನ್ವಯಿಸುವ ನಿಯಮ ಎನ್ನಬಹುದು. ಆದರೆ, ಇದರಿಂದ ಹಲವು ಮಹತ್ವದ ಬದಲಾವಣೆಗಳು ಇನ್ನು ಕೆಲವೇ ವರ್ಷಗಳಲ್ಲಿ ಕಾಣಿಸಿಕೊಳ್ಳಲಿದೆ. ಈ ಬದಲಾವಣೆ ಕೇವಲ ಯುರೋಪಿಯನ್ ಯೂನಿಯನ್ ಮಾರುಕಟ್ಟೆಯಲ್ಲಿ ಆಗುವುದಿಲ್ಲ. ಬದಲಿಗೆ ಇಡೀ ವಿಶ್ವದ ಮಾರುಕಟ್ಟೆಯಲ್ಲಿ ಆಗಲಿದೆ. ಏಕೆಂದರೆ, ಒಂದು ಡಿವೈಸ್‌ಗೆ ಯುರೋಪ್‌ನಲ್ಲಿ ಒಂದು ಚಾರ್ಜಿಂಗ್ ಪೋರ್ಟನ್ನೂ ಇತರ ದೇಶಗಳಲ್ಲಿ ಇನ್ನೊಂದು ಚಾರ್ಜಿಂಗ್ ಪೋರ್ಟನ್ನೂ ಕಂಪನಿ ಕೊಡುವುದು ಪ್ರಾಯೋಗಿಕವಾಗಿ ಅಸಾಧ್ಯ. ಈ ಬದಲಾವಣೆ ಕೇವಲ ಸ್ಮಾರ್ಟ್‌ಫೋನ್‌ಗೆ ಮಾತ್ರವಲ್ಲ. ಇದರಿಂದ ಲ್ಯಾಪ್‌ಟಾಪ್‌ಗಳು, ಇ-ರೀಡರ್‌ಗಳು, ಇಯರ್‌ಬಡ್‌ಗಳು, ಕೀಬೋರ್ಡ್‌ಗಳು, ಮೌಸ್, ಪೋರ್ಟಬಲ್ ನ್ಯಾವಿಗೇಶನ್ ಸಾಧನಗಳು, ಹೆಡ್‌ಫೋನ್‌ಗಳು, ಹೆಡ್‌ಸೆಟ್‌ಗಳು, ವೀಡಿಯೋಗೇಮ್ ಕನ್ಸೋಲ್‌ಗಳು, ಪೋರ್ಟಬಲ್ ಸ್ಪೀಕರ್‌ಗಳು ಸೇರಿದಂತೆ ಬಹುತೇಕ ಎಲ್ಲ ಸ್ಮಾರ್ಟ್ ಸಾಧನಗಳಿಗೂ ಅನ್ವಯಿಸುತ್ತವೆ.

ಚಾರ್ಜರ್‌ಗಳು ಮಾಯ?

ಸದ್ಯ ಐಫೋನ್ ಮಾತ್ರ ಚಾರ್ಜರ್‌ಗಳನ್ನು ಕೊಡುವುದಿಲ್ಲ. ಆದರೆ, ಆಂಡ್ರಾಯ್ಡ್ ಸ್ಮಾರ್ಟ್‌ಫೋನ್ ತಯಾರು ಮಾಡುವ ಎಲ್ಲ ಕಂಪನಿಗಳೂ ಚಾರ್ಜಿಂಗ್ ಕೇಬಲ್ ಮತ್ತು ಅಡಾಪ್ಟರ್ ಕೊಡುತ್ತಿವೆ. ಒಂದೇ ಕೇಬಲ್ ನಿಯಮ ಬಂದ ನಂತರ ಆಂಡ್ರಾಯ್ಡ್ ಸ್ಮಾರ್ಟ್‌ಫೋನ್ ತಯಾರು ಮಾಡುವ ಕಂಪನಿಗಳೂ ಕೇಬಲ್ ಮತ್ತು ಅಡಾಪ್ಟರ್ ಕೊಡದೇ ಇರುವ ನಿಲುವನ್ನು ತಳೆಯಬಹುದು. ಅದಕ್ಕಾಗಿ ಪ್ರತ್ಯೇಕವಾಗಿ ಗ್ರಾಹಕರು ಖರೀದಿ ಮಾಡಬೇಕಾಗಬಹುದು. ಆದರೆ, ಇದರಿಂದ ಒಂದು ಅನುಕೂಲವೆಂದರೆ ಎರಡನೇ ಬಾರಿಗೆ ಸ್ಮಾರ್ಟ್‌ಫೋನ್ ಖರೀದಿ ಮಾಡುವವರಿಗೆ ಹಳೆಯ ಸ್ಮಾರ್ಟ್‌ಫೋನ್‌ನ ಚಾರ್ಜಿಂಗ್ ಕೇಬಲ್ ಮತ್ತು ಅಡಾಪ್ಟರ್ ಇರುವುದರಿಂದ ಆ ವೆಚ್ಚ ಉಳಿತಾಯವಾಗುತ್ತದೆ. ಮೊದಲ ಬಾರಿ ಸ್ಮಾರ್ಟ್‌ಫೋನ್ ಖರೀದಿ ಮಾಡುತ್ತಿದ್ದೀರಿ ಎಂದಾದರೆ ಈ ವೆಚ್ಚ ಹೆಚ್ಚುವರಿಯಾಗುತ್ತದೆ.

ಪ್ರೇಮವೋ ಮೋಹವೋ?

ಮೇಲ್ನೋಟಕ್ಕೆ ಇದು ಕಂಪನಿಗಳು ತಮ್ಮ ಅನುಕೂಲಕ್ಕೆ ಮಾಡಿಕೊಂಡ ಬದಲಾವಣೆ ಎಂಬಂತೆ ಕಾಣಿಸುತ್ತದೆ. ಆದರೆ, ವಾಸ್ತವವಾಗಿ ಇದು ಪರಿಸರಸ್ನೇಹಿ ಕ್ರಮವೂ ಹೌದು. ಬಹುತೇಕ ಮನೆಗಳಲ್ಲಿ ಈಗ ಕನಿಷ್ಠ ಐದಾರು ರೀತಿಯ ಚಾರ್ಜಿಂಗ್ ಕೇಬಲ್‌ಗಳು ಬಿದ್ದಿರುತ್ತವೆ. ಒಂದೊಂದು ಸಾಧನಕ್ಕೂ ಒಂದೊಂದು ರೀತಿಯ ಚಾರ್ಜಿಂಗ್ ಕೇಬಲ್‌ಗಳಿವೆ. ಈಗಲೂ ಕಂಪ್ಯೂಟರ್ ಮೌಸ್‌ಗಳು ಯುಎಸ್‌ಬಿ ಬಿ ಟೈಪ್ ಕೇಬಲ್‌ಗಳನ್ನೇ ಬಳಸುತ್ತವೆ. ಕ್ಯಾಮೆರಾಗಳು ಯುಎಸ್‌ಬಿ ಬಿ ಟೈಪ್ ಬಳಸುತ್ತವೆ. ಇನ್ನು ಶೇವಿಂಗ್ ಸಾಧನಗಳು ಹಾಗೂ ಇತರ ಸಾಧನಗಳ ಚಾರ್ಜಿಂಗ್‌ಗೆ ಒಂದೊಂದು ಕಂಪನಿ ಒಂದೊಂದು ವಿಧದ ಪೋರ್ಟ್ ಬಳಸುತ್ತಿವೆ.

ಒಂದು ವೇಳೆ ಒಂದು ಮನೆಯಲ್ಲಿ ಪತಿ ಪತ್ನಿ ವಾಸಿಸುತ್ತಿದ್ದಾರೆ. ಇಬ್ಬರ ಬಳಿಯೂ ಒಂದೊಂದು ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಇದೆ ಎಂದುಕೊಳ್ಳೋಣ. ಒಂದೊಂದು ಸ್ಮಾರ್ಟ್‌ಫೋನ್ ಕೂಡ ಒಂದೊಂದು ರೀತಿಯ ಚಾರ್ಜರ್ ಬಳಸುತ್ತಿದ್ದರೆ ಆಗ ನಾಲ್ಕು ಚಾರ್ಜರ್ ಬೇಕಾಗುತ್ತದೆ. ಅವರ ಬಳಿ ಕೀಬೋರ್ಡ್, ಮೌಸ್, ಶೇವಿಂಗ್ ಕಿಟ್, ಎರಡು ಇಯರ್‌ಬಡ್ ಇದ್ದರೆ ಅಲ್ಲಿಗೆ ಚಾರ್ಜಿಂಗ್ ಕೇಬಲ್ ಸಂಖ್ಯೆ 12 ಆಗುತ್ತದೆ. ಸದ್ಯದ ಮಟ್ಟಿಗೆ ಬಹುತೇಕ ಮನೆಗಳಲ್ಲಿ ಇದೇ ವ್ಯವಸ್ಥೆ ಜಾರಿಯಲ್ಲಿದೆ. ಆದರೆ, ಒಂದು ವೇಳೆ ಎಲ್ಲ ಸಾಧನಗಳಿಗೂ ಒಂದೇ ಚಾರ್ಜಿಂಗ್ ಕೇಬಲ್ ಬಳಸಬಹುದು ಎಂದಾದರೆ, ಇಡೀ ಮನೆಯಲ್ಲಿ ಎಲ್ಲ ಸಾಧನಗಳಿಗೂ ಒಂದೋ ಎರಡೋ ಕೇಬಲ್ ಇಟ್ಟುಕೊಂಡರೆ ಸಾಕು!

ಇದರಿಂದ ಒಟ್ಟಾರೆಯಾಗಿ ಆಗುವ ಅನುಕೂಲ ಮುಖ್ಯವಾಗಿ ಎರಡು. ವೈಯಕ್ತಿಕವಾಗಿ ಚಾರ್ಜಿಂಗ್ ಕೇಬಲ್‌ಗಾಗಿ ಪರೋಕ್ಷವಾಗಿ ವೆಚ್ಚ ಮಾಡುವ ಹಣ ಕಡಿಮೆಯಾಗುತ್ತದೆ. ಕಂಪನಿಗಳು ತಮ್ಮ ಸಾಧನದ ಜೊತೆಗೆ ಚಾರ್ಜಿಂಗ್ ಕೇಬಲ್ ಅನ್ನು ಉಚಿತವಾಗಿ ಕೊಡುತ್ತವೆ ಎಂದು ಅನಿಸಿದರೂ, ಚಾರ್ಜಿಂಗ್ ಕೇಬಲ್ ತಯಾರಿಕೆಗೆ ಉಂಟಾಗುವ ವೆಚ್ಚವನ್ನು ಸಾಧನದ ವೆಚ್ಚಕ್ಕೇ ಸೇರಿಸಿರುತ್ತಾರೆ. ಚಾರ್ಜಿಂಗ್ ಕೇಬಲ್ ಕೊಡಬೇಕಿಲ್ಲ ಎಂದಾದಾಗ ಅದರ ವೆಚ್ಚವನ್ನು ಕಡಿತಗೊಳಿಸುವುದು ಸಹಜ.

ಇನ್ನೊಂದೇನೆಂದರೆ ಪರಿಸರಕ್ಕೆ ಇದರಿಂದ ಹಾನಿ ಕಡಿಮೆಯಾಗುತ್ತದೆ. ಸಾಧನ ಹಾಳಾದಾಗ ಅದರ ಜೊತೆಗೆ ಬಂದ ಕೇಬಲ್ ಅನಾಥವಾಗಿಬಿಡುತ್ತದೆ. ಆಗ ಅದನ್ನು ನಾವು ಕಸದ ಜೊತೆಗೆ ಎಸೆಯುತ್ತೇವೆ. ಈ ಸಮಸ್ಯೆ ತಪ್ಪಿಸಬಹುದು. ಅಷ್ಟೇ ಅಲ್ಲ, ಒಂದೊಂದು ಸಾಧನಕ್ಕೆ ಒಂದೊಂದು ಕೇಬಲ್ ತಯಾರಿಸುವ ಅಗತ್ಯ ಇಲ್ಲದ್ದರಿಂದ ಅದರಿಂದ ಪ್ಲಾಸ್ಟಿಕ್ ಹಾಗೂ ಇತರ ಲೋಹದ ಬಳಕೆ ಅಷ್ಟರ ಮಟ್ಟಿಗೆ ಕಡಿಮೆಯಾಗುತ್ತದೆ.

ತಂತ್ರಜ್ಞಾನವೂ ಸೈನ್ಸ್ ಫಿಕ್ಷನ್ನೂ...

ಶರತ್ ಭಟ್ ಸೇರಾಜೆ

ಕಲೆ ಜೀವನವನ್ನು ಅನುಕರಿಸುತ್ತದೋ, ಜೀವನ ಕಲೆಯನ್ನು ಅನುಕರಿಸುತ್ತದೋ – ಎಂಬ ಪ್ರಶ್ನೆ ತಾತ್ತ್ವಿಕರನ್ನು ಮೊದಲಿನಿಂದಲೂ ಕಾಡುತ್ತಾ ಬಂದಿದೆ. 'Life doesn't imitate art, it imitates bad television' ಎಂದು ವುಡಿ ಅಲನ್ ತಮಾಷೆ ಮಾಡಿದ್ದೂ ಉಂಟು. 'ಬಂಗಾರದ ಮನುಷ್ಯ' ಸಿನೆಮಾ ನೋಡಿ, ಹಳ್ಳಿಗೆ ಹೋಗಿ ಕೃಷಿ ಮಾಡಿದವರಿದ್ದರಂತೆ. 'ಮಂಕುತಿಮ್ಮನ ಕಗ್ಗ'ವನ್ನು ಓದಿ ಯಾರಾದರೂ ದುಷ್ಟರು ಒಳ್ಳೆಯವರಾಗಿ ಬದಲಾದರೋ ಹೇಳಬರುವಂತಿಲ್ಲ. ಇದೆಲ್ಲ ಏನೇ ಇದ್ದರೂ, ಸಾಹಿತ್ಯಕೃತಿಗಳು ನಿಜಜೀವನದ ಮೇಲೆ ಅಸಾಧಾರಣ ಪ್ರಭಾವ ಬೀರಿರುವುದು ಬಹುಶಃ ನೀವು ಊಹಿಸಿರಿದ ಪ್ರಕಾರವೊಂದರಲ್ಲಿ - ಅದು 'ಸೈನ್ಸ್ ಫಿಕ್ಷನ್ ಅಂತ ಕರೆಸಿಕೊಳ್ಳುವ, ವೈಜ್ಞಾನಿಕ ಕಥೆ ಕಾದಂಬರಿಗಳ ಪ್ರಕಾರದಲ್ಲಿ.

'Ralph 124C 41 + ' ಎಂಬ ವಿಚಿತ್ರ ಹೆಸರಿನ ಕಾದಂಬರಿಯೊಂದು 1914ರಲ್ಲಿ ಬಂದಿತ್ತು, ಅದು ಅಷ್ಟೇನೂ ಜನಪ್ರೀತಿ ಗಳಿಸಿದ ಕೃತಿಯೇನೂ ಅಲ್ಲ; ದೂರ ದೂರ ಇರುವವರು ಒಬ್ಬರ ಮುಖ ಇನ್ನೊಬ್ಬರು ನೋಡಿಕೊಂಡು ಮಾಡುವ ವೀಡಿಯೊ ಕಾಲ್ ಈ ಕೃತಿಯಲ್ಲಿ ಆ ಕಾಲದಲ್ಲೇ ಬಂದಿದೆ, ಸ್ಕೈಪ್ ಅನ್ನೋ ಜೂಮ್ ಅನ್ನೋ ಕಂಡುಹಿಡಿದವರು ಇದನ್ನು ಓದಿರುವುದು ಅನುಮಾನ. ಆಶ್ಚರ್ಯ ಎಂದರೆ ರಾಡಾರ್ ತಂತ್ರಜ್ಞಾನ ಬಂದಮೇಲೆ ಅದು ಯಾವ ತಂತ್ರ ಬಳಸಿ ಕೆಲಸ ಮಾಡುತ್ತಿತ್ತೋ ಆ ತಂತ್ರವನ್ನು ಚೆನ್ನಾಗಿಯೇ ಹೋಲುವ ಯಂತ್ರವೊಂದೂ ಈ ಕಾದಂಬರಿಯಲ್ಲಿ 1914ರಲ್ಲಿಯೇ ಬಂದಿದೆ!

ಇವತ್ತು ಮನೆಮಾತಾಗಿರುವ ಡ್ರೋನುಗಳು 1965ರಲ್ಲಿಯೇ ಬಂದಿದ್ದ 'ಡ್ಯೂನ್' ಎಂಬ ಕಾದಂಬರಿಯಲ್ಲಿ ಬಂದಿದ್ದವು ಎಂದು ಸೈನ್ಸ್ ಫಿಕ್ಷನ್ ಪ್ರಿಯರು ಆಗಾಗ ಹೇಳುತ್ತಿರುತ್ತಾರೆ. ಜಾರ್ಜ್ ಆರ್ವೆಲ್‌ನ '1984' ಕೃತಿಯಲ್ಲಿ ಸರ್ಕಾರ ಜನರ ಮೇಲೆ ನಿಗಾ ಇಡಲು ಬಳಸುವ ಸೆಕ್ಯೂರಿಟಿ ಕ್ಯಾಮೆರಾಗಳು ಹೆಚ್ಚು ಕಮ್ಮಿ ಈಗಿನ ಸಿಸಿಟಿವಿಗಳಂತೆಯೇ ಇವೆ ಎನ್ನುವುದು ಪುಸ್ತಕಪ್ರಿಯರಿಗೆ ಗೊತ್ತಿದ್ದೀತು. 1888ನೇ ಇಸವಿಯಲ್ಲಿ ಬಂದ 'Looking Backward: 2000-1887' ಎಂಬ ಕಾದಂಬರಿಯಲ್ಲಿ ಇವತ್ತಿನ ಎಟಿಎಂ ಕಾರ್ಡುಗಳನ್ನು ತಕ್ಕಮಟ್ಟಿಗೆ ಹೋಲುವ ಕ್ರೆಡಿಟ್ ಕಾರ್ಡ್ ಎಂಬ ಹೆಸರಿನ ಕಾರ್ಡುಗಳ ಕಲ್ಪನೆ ಮಾಡಲಾಗಿತ್ತು. ಈಗ ಯಂತ್ರಮಾನವಗಳಿಗೆ ಇರುವ ಹೆಸರಾದ 'ರೋಬೋಟ್' ಎಂಬುದೂ ಸೈನ್ಸ್ ಫಿಕ್ಷನ್ ಕೃತಿಯೊಂದರಲ್ಲಿ ಬಳಸಲ್ಪಟ್ಟ ಪದವೇ ಎಂಬ ವಿಚಾರ ಭಾಷಾತಜ್ಞರಲ್ಲದವರಿಗೂ ಗೊತ್ತಿದೆ. 'ನೆಟ್ ಫ್ಲಿಕ್ಸ್' ಅನ್ನು ಹೋಲುವ ಕಲ್ಪನೆ 'Infinite Jest' ಎಂಬ ಕಾದಂಬರಿಯಲ್ಲಿ ಬಂದಿದೆ. (ಸಿನೆಮಾವನ್ನು ಥಿಯೇಟರಿನ ಬದಲು ಟಿವಿಯಲ್ಲೇ ಯಾಕೆ ತೆರೆ ಕಾಣಿಸಬಾರದು ಎಂಬ ಚಿಂತನೆಯನ್ನು ರವಿಚಂದ್ರನ್ ಅವರೂ ನೆಟ್ ಫ್ಲಿಕ್ಸಿಗಿಂತ ಮೊದಲೇ ಮಾಡಿದ್ದರು ಅಂತ ನೆನಪು.)

1898ರಲ್ಲಿ ಎಚ್.ಜಿ. ವೆಲ್ಸ್ ಬರೆದ 'War of The Worlds' ಎಂಬ ಕೃತಿ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಬಂದಿತ್ತಂತೆ (ಅದನ್ನು ಆಧರಿಸಿ ಸ್ಟೀವನ್ ಸ್ಪೀಲ್ಬರ್ಗ್ ಸೇರಿದಂತೆ ಹಲವರು ಚಲನಚಿತ್ರಗಳನ್ನು ಮಾಡಿದ್ದಾರೆ). 'ಅದರಲ್ಲಿ ಬರುವ ಅಂತರಗ್ರಹಯಾನದ ಪರಿಕಲ್ಪನೆಯು ನನ್ನ ಕಲ್ಪನೆಯನ್ನು ಭರ್ಜರಿಯಾಗಿಯೇ ಕೆರಳಿಸಿತು' ಎಂದು 1926ರಲ್ಲಿ ದ್ರವ-ಇಂಧನದ ರಾಕೆಟ್ಟು ಕಂಡುಹಿಡಿದ ರಾಬರ್ಟ್ ಗೊಡಾರ್ಡ್ ಹೇಳಿದ್ದಿತ್ತು. ಹಾಗೆಯೇ, ಹೆಲಿಕಾಪ್ಟರ್ ಕಂಡುಹಿಡಿದವರಿಗೆ ಸ್ಫೂರ್ತಿಯ ಸೆಲೆಯಾದದ್ದು ಜೂಲ್ಸ್ ವರ್ನ್ ಬರೆದ 'Clipper of the Clouds' ಎಂಬ ಕೃತಿ. 'ಸ್ಟಾರ್ ಟ್ರೆಕ್' ಎಂಬ ಟಿವಿ ಸರಣಿಯಲ್ಲಿ ಬಂದ, ಗಗನನೌಕೆಗಳಲ್ಲಿ ಸಂವಹನಕ್ಕೆ ಬಳಸುವ ಕಮ್ಯೂನಿಕೇಟರ್ ಎಂಬ ಯಂತ್ರ ಜಾತ್ರೆಯಲ್ಲಿ ಸಿಗಬಹುದಾದ ಮೊಬೈಲ್ ಫೋನ್ ಒಂದರಂತೆ ಕಾಣುತ್ತದೆ! ತನ್ನ ಫೋನಿನ ವಿನ್ಯಾಸಕ್ಕೆ ಇದುವೇ ಸ್ಫೂರ್ತಿ ಅಂತ ಮೊದಲ ಮೊಬೈಲ್ ವಿನ್ಯಾಸ ಮಾಡಿದ ಮಾರ್ಟಿನ್ ಕೂಪರ್ ಹೇಳಿದ್ದರು.

> ವಿಜ್ಞಾನ ಕಲೆ ಮೇಳವಿಸೆ, ಜಸವು ಜನಜೀವನಕೆ ಮಂಕುತಿಮ್ಮ

ಕಂಡು ಕೇಳರಿಯದ ಕ್ರಾಂತಿಯನ್ನು ಕಳೆದೆರಡು ದಶಕಗಳಲ್ಲಿ ಸೃಷ್ಟಿಸಿದ ಅಂತರ್ಜಾಲಕ್ಕೂ ಒಂದು ಮಟ್ಟದ ಪ್ರೇರಣೆ ಸೈನ್ಸ್ ಫಿಕ್ಷನ್‌ನಿಂದ ಸಿಕ್ಕಿತ್ತು. ಸೈನ್ಸ್ ಫಿಕ್ಷನ್‌ನ ದೈತ್ಯಪ್ರತಿಭೆಗಳಲ್ಲಿ ಒಬ್ಬರಾದ ಅರ್ಥರ್ ಸಿ ಕ್ಲಾರ್ಕ್ ಬರೆದಿದ್ದ 'Dial F for Frankenstein'ನಲ್ಲಿ ಒಂದರ ಜೊತೆ ಒಂದು ಮಾತಾಡುವ ಗಣಕಯಂತ್ರಗಳಿದ್ದವು; 'ಅದು ನನ್ನ ಮೇಲೆ ಪ್ರಭಾವ ಬೀರಿತು' ಎಂದು ಅಂತರ್ಜಾಲದ ಮೂಲಪುರುಷ ಟಿಮ್ ಬರ್ನ್ಸ್ ಲೀ ಹೇಳಿದ್ದಾರೆ. ವಿಶೇಷ ಅಂದರೆ ಹಾಸ್ಯಸಾಹಿತ್ಯದ ದಿಗ್ಗಜ ಮಾರ್ಕ್ ಟ್ವೇನ್ ಎಷ್ಟೋ ಮೊದಲು ಬರೆದಿದ್ದ ಕಥೆಯೊಂದರಲ್ಲೂ ಜಾಗತಿಕ ಮಟ್ಟದ ಫೋನುಗಳ ಜಾಲ ಬಂದಿತ್ತು, ಅದರಲ್ಲಿನ ಕೆಲವು ವಿವರಗಳು ಇವತ್ತಿನ ಜಾಲತಾಣಗಳ ಬಗ್ಗೆ ಬರೆದ ಹಾಗೂ ಇವೆ ಎಂದು ಅದನ್ನೋದಿದವರು ಹೇಳುತ್ತಾರೆ.

ಇದೇ ಅರ್ಥರ್ ಸಿ ಕ್ಲಾರ್ಕ್ ಬರೆದಿರುವ '2001: An Odyssey in Space' ಪ್ರಸಿದ್ಧವಾದ ಕೃತಿ, ಸ್ಟಾನ್ಲಿ ಕೂಬ್ರಿಕ್ ನಿರ್ದೇಶಿಸಿದ ಅದರ ಸಿನೆಮಾರೂಪವೂ ಅಷ್ಟೇ ಹೆಸರು ಮಾಡಿತು. ಭೂಮಿ ತಿರುಗಿದ ಹಾಗೇ ತಿರುಗಿ, ಅದರ ಜೊತೆ ಜೊತೆಗೇ ಹೆಜ್ಜೆ ಹಾಕುವುದರಿಂದ ಅವು ಒಂದೇ ಕಡೆ ನಿಶ್ಚಲವಾಗಿ ನಿಂತಿವೆಯೇನೋ ಅನ್ನಿಸುವ ಜಿಯೋ ಸ್ಟೇಷನರಿ ಉಪಗ್ರಹಗಳಿವೆಯಲ್ಲ, ಇವುಗಳ ಸರಿಯಾದ ವಿವರಣೆ ಈ ಕೃತಿಯಲ್ಲಿ ಬಂತು, ನಿಜವಾಗಿಯೂ ಈ ಪರಿಕಲ್ಪನೆಯನ್ನು ಬಳಸಿ ಉಪಗ್ರಹಗಳು ಕಕ್ಷೆಗೆ ಹಾರಿದ್ದು ಈ ಕೃತಿ ಬಂದು ಹದಿನೈದು ವರ್ಷಗಳಾದ ಮೇಲೆ. ಸೂಪರ್ ಕಂಪ್ಯೂಟರೊಂದು ಮನುಷ್ಯರ ಜೊತೆ ಚದುರಂಗದಾಟ ಆಡುವ ಕಲ್ಪನೆಯೂ ಇಲ್ಲಿಯೇ ಇದೆ, ಎಷ್ಟೋ ವರ್ಷಗಳ ಅನಂತರ ಐಬಿಎಮ್ಮಿನವರು ಇದನ್ನು ಮಾಡಿಯೂ ತೋರಿಸಿದರು, ಅದು ಗ್ಯಾರಿ ಕಾಸ್ಪರೋವನನ್ನು ಸೋಲಿಸಿ ಸುದ್ದಿಯೂ ಮಾಡಿತು. ಆ್ಯಪಲ್ ಕಂಪೆನಿಯವರ ಜಗತ್ಪ್ರಸಿದ್ಧ ಉತ್ಪನ್ನಗಳಲ್ಲಿ ಒಂದಾದ ಟ್ಯಾಬ್ಲೆಟ್ ಗಣಕವೂ ಈ ಕೃತಿಯಲ್ಲಿ ಬಂದದ್ದೇ ಅಂದರೆ ನಂಬಲೇಬೇಕು.

ಅಂತೂ, ತಂತ್ರಜ್ಞಾನದಲ್ಲಿ ಕೆಲಸ ಮಾಡುವವರೂ, ಸೈನ್ಸ್ ಫಿಕ್ಷನ್‌ನಲ್ಲಿ ಕೆಲಸ ಮಾಡುವವರೂ ಒಂದೇ ರೀತಿ ಯೋಚನೆ ಮಾಡಿ, 'ವಿಜ್ಞಾನ ಕಲೆ ಮೇಳವಿಸೆ, ಜಸವು ಜನಜೀವನಕೆ ಮಂಕುತಿಮ್ಮ' ಎಂಬಂತಾಗಿಸುವುದು ಒಂದು ವಿಸ್ಮಯವೇ ಸರಿ.

ಹಿಂದುಳಿದ ವರ್ಗಗಳ ಪ್ರವರ್ಗ 2ಎ ಪಟ್ಟಿಗೆ ಲಿಂಗಾಯತ ಪಂಚಮಸಾಲಿ ಸಮುದಾಯ

ಮೀಸಲಾತಿ: ತ್ವರಿತ ವರದಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ನೇತೃತ್ವದ ಪಂಚಮಸಾಲಿ ಸಮುದಾಯದ ಮಠಾಧೀಶರು ಮತ್ತು ಮುಖಂಡರ ನಿಯೋಗ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರಿಗೆ ಮಂಗಳವಾರ ಮನವಿ ಸಲ್ಲಿಸಿತು. ಜಮಖಂಡಿ ಪಂಚಮಸಾಲಿ ಪೀಠದ ಮಹಾದೇವ ಶಿವಾಚಾರ್ಯ ಸ್ವಾಮೀಜಿ, ವಕೀಲ ಬಿ.ಎಸ್. ಪಾಟೀಲ್, ಉದ್ಯಮಿ ಬಿ.ಎಸ್. ಚನ್ನಬಸಪ್ಪ, ಆಯೋಗದ ಸದಸ್ಯರಾದ ರಾಜಶೇಖರ್ ಮತ್ತು ಅರುಣ್ ಕುಮಾರ್ ಇದ್ದರು– ಪ್ರಜಾವಾಣಿ ಚಿತ್ರ

ಬೆಂಗಳೂರು: ಹಿಂದುಳಿದ ವರ್ಗಗಳ ಪ್ರವರ್ಗ-2ಎ ಪಟ್ಟಿಗೆ ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಸೇರಿಸಬೇಕೆಂಬ ಬೇಡಿಕೆ ಕುರಿತು ಅಧ್ಯಯನ ಪೂರ್ಣಗೊಳಿಸಿ ತ್ವರಿತವಾಗಿ ಸರ್ಕಾರಕ್ಕೆ ವರದಿ ನೀಡುವಂತೆ ಆಗ್ರಹಿಸಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರಿಗೆ ಪಂಚಮಸಾಲಿ ಮಠಾಧೀಶರ ನಿಯೋಗ ಮಂಗಳವಾರ ಮನವಿ ಸಲ್ಲಿಸಿತು.

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿದ ನಿಯೋಗ, ಲಿಂಗಾಯತ ಪಂಚಮಸಾಲಿ ಸಮುದಾಯ ಮತ್ತು ಅದರ ಉಪ ಪಂಗಡಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ 2-ಎ ಪಟ್ಟಿಗೆ ಸೇರಿಸುವ ಬೇಡಿಕೆ ಕುರಿತು ಅಧ್ಯಯನ ನಡೆಸಿ ವರದಿ ನೀಡುವಂತೆ ರಾಜ್ಯ ಸರ್ಕಾರ ಆಯೋಗಕ್ಕೆ ಸೂಚಿಸಿದೆ. ಅಧ್ಯಯನ ನಡೆಸಿ ವರದಿ ಸಲ್ಲಿಸುವುದು ವಿಳಂಬವಾಗುತ್ತಿದ್ದು, ಇದರಿಂದ ಸಮುದಾಯಕ್ಕೆ ತೊಂದರೆ ಆಗುತ್ತಿದೆ. ತಕ್ಷಣವೇ ಅಧ್ಯಯನ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು ಎಂದು ಒತ್ತಾಯಿಸಿತು.

ಮೀಸಲಾತಿ ಪಟ್ಟಿ ಪರಿಷ್ಕರಣೆ ವಿಳಂಬ ಆದಷ್ಟೂ ಲಿಂಗಾಯತ ಪಂಚಮಸಾಲಿ ಸಮುದಾಯದ ಜನರಿಗೆ ಶೈಕ್ಷಣಿಕ ಮತ್ತು ಔದ್ಯೋಗಿಕವಾಗಿ ಅನ್ಯಾಯವಾಗುತ್ತದೆ. ಅಂತಹದ್ದಕ್ಕೆ ಆಯೋಗ ಅವಕಾಶ ನೀಡಬಾರದು. ತ್ವರಿತವಾಗಿ ವರದಿ ಸಲ್ಲಿಸುವ ಮೂಲಕ ಸಮುದಾಯದ ಹಿತರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ನಿಯೋಗ ಆಗ್ರಹಿಸಿತು.

ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ಭೇಟಿಮಾಡಿ ಮನವಿ ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವಚನಾನಂದ ಸ್ವಾಮೀಜಿ, 'ಈಗಾಗಲೇ ಹಲವು ಜಿಲ್ಲೆಗಳಲ್ಲಿ ಅಧ್ಯಯನ ಪೂರ್ಣಗೊಂಡಿದ್ದು, ಕೆಲವು ಜಿಲ್ಲೆಗಳಲ್ಲಿ ಬಾಕಿ ಇದೆ ಎಂಬ ಮಾಹಿತಿಯನ್ನು ಅಯೋಗದ ಅಧ್ಯಕ್ಷರು ಹಂಚಿಕೊಂಡಿದ್ದಾರೆ. ಅತಿ ಶೀಘ್ರದಲ್ಲಿ ವರದಿ ಸಲ್ಲಿಸುವುದಾಗಿಯೂ ಭರವಸೆ ನೀಡಿದ್ದಾರೆ' ಎಂದರು.

ಜಮಖಂಡಿ ಪಂಚಮಸಾಲಿ ಪೀಠದ ಮಹಾದೇವ ಶಿವಾಚಾರ್ಯ ಸ್ವಾಮೀಜಿ, ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಕರ್ನಾಟಕ ರಾಜ್ಯ ವೀರಶೈವ ಪಂಚಮಸಾಲಿ ಸಂಘದ ಅಧ್ಯಕ್ಷ ಬಿ. ನಾಗನಗೌಡ, ಕಾರ್ಯಾಧ್ಯಕ್ಷ ಸೋಮನಗೌಡ ಎಂ. ಪಾಟೀಲ, ಕಾನೂನು ಘಟಕದ ಸದಸ್ಯ ಬಿ.ಎಸ್. ಪಾಟೀಲ್, ಬೆಂಗಳೂರು ಘಟಕದ ಅಧ್ಯಕ್ಷ ಜಿ.ವಿ. ಪಾಟೀಲ, ಮಾಜಿ ಅಧ್ಯಕ್ಷ ಬಸವರಾಜ ದಿಂಡೂರ, ಮಾಜಿ ಗೌರವಾಧ್ಯಕ್ಷ ಭಾವಿ ಬೆಟ್ಟಪ್ಪ, ಹರಿಹರ ಪಂಚಮಸಾಲಿ ಪೀಠದ ಧರ್ಮದರ್ಶಿ ಚಂದ್ರಶೇಖರ ಪೂಜಾರ ನಿಯೋಗದಲ್ಲಿದ್ದರು.

'ಬಿಜೆಪಿ ನಾಯಕರ ವಿರುದ್ಧ ಏಕೆ ತನಿಖೆ ನಡೆಯಲ್ಲ?'

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ಬಿಜೆಪಿ ನಾಯಕರ ಮನೆಗಳಲ್ಲಿ ಅಪಾರ ಹಣ ಸಿಕ್ಕರೂ ಜಾರಿ ನಿರ್ದೇಶನಾಲಯ (ಇ.ಡಿ) ಏಕೆ ತನಿಖೆ ನಡೆಸುವುದಿಲ್ಲ? ಕಾಂಗ್ರೆಸ್ ನಾಯಕರುಗೆ ಮಾತ್ರ ತನಿಖೆ ಹೆಸರಿನಲ್ಲಿ ಕಿರುಕುಳ ನೀಡುವುದು ಏಕೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಬಿಜೆಪಿ ನಾಯಕರು ಮತ್ತು ಅವರ ಆಪ್ತರ ಮನೆಗಳಲ್ಲಿ ಎಷ್ಟೊಂದು ಬಾರಿ ದೊಡ್ಡ ಪ್ರಮಾಣದ ಹಣ ಪತ್ತೆಯಾಗಿತ್ತು. ಆ ಬಗ್ಗೆ ಯಾವತ್ತೂ ಇ.ಡಿ ತನಿಖೆಯನ್ನೇ ನಡೆಸದಿರುವುದಕ್ಕೆ ಕಾರಣವೇನು' ಎಂದು ಕೇಳಿದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಯಾವ ಅಕ್ರಮವೂ ನಡೆದಿಲ್ಲ. ಜವಾಹರ ಲಾಲ್ ನೆಹರೂ, ಬಾಲಗಂಗಾಧರ ತಿಲಕ್, ಸರ್ದಾರ್ ವಲ್ಲಭ ಭಾಯ್ ಪಟೇಲ್ ಅವರು ಆರಂಭಿಸಿದ್ದ ಪತ್ರಿಕೆಯನ್ನು ಉಳಿಸಿಕೊಂಡು ಬರಲಾಗಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಟ್ರಸ್ಟಿಗಳಾದ ತಕ್ಷಣ ಪತ್ರಿಕೆಯ ಆಸ್ತಿ ವರ್ಗಾವಣೆ ಮಾಡಿಕೊಳ್ಳುತ್ತಾರೆಯೆ ಎಂದೂ ಪ್ರಶ್ನಿಸಿದರು.

'ಸಂವಿಧಾನ, ಕಾನೂನು ಗೊತ್ತಿಲ್ಲವೆ'

ಬೆಂಗಳೂರು: ಶಾಂತಿಯುತ ಪ್ರತಿಭಟನೆ ಹಕ್ಕನ್ನು ನಿರಾಕರಿಸುತ್ತಿರುವ ಬಿಜೆಪಿ ನಾಯಕರಿಗೆ ಸಂವಿಧಾನ, ಕಾನೂನು, ಮೂಲಭೂತ ಹಕ್ಕುಗಳ ಬಗ್ಗೆ ಅರಿವಿಲ್ಲವೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ದೆಹಲಿಯಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಸದಸ್ಯರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ. ಎಐಸಿಸಿ ಕಚೇರಿಗೆ ಹೊರಟಿದ್ದ ಸಂಸದ ಡಿ.ಕೆ. ಸುರೇಶ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಶಾಸಕ ದಿನೇಶ್ ಗುಂಡೂರಾವ್ ಮತ್ತಿತರರನ್ನು ಬಂಧಿಸಿ, ದೌರ್ಜನ್ಯ ಎಸಗಲಾಗಿದೆ. ಇದನ್ನು ಖಂಡಿಸುತ್ತೇನೆ' ಎಂದರು.

'ಪ್ರತಿಭಟನೆ ನಡೆಸಿದವರು ತಿಹಾರ್ ಜೈಲಿಗೆ ಹೋಗುತ್ತಾರೆ' ಎಂದು ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಹಾಗಿದ್ದರೆ ಇವರೇಕೆ ಹಿಂದೆ ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ್ದರು ಎಂದು ಕೇಳಿದರು.

ನಾಯಕರ ಬಂಧನದ ಭೀತಿಯಿಂದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಗೆ ಇಳಿದಿದ್ದಾರೆ. ಸಾಮಾನ್ಯರ ಮೇಲೂ ಇದೇ ರೀತಿ ತನಿಖೆ ನಡೆಯುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು

ಆರ್.ಅಶೋಕ, ಕಂದಾಯ ಸಚಿವ

ಕಾರ ಹುಣ್ಣಿಮೆ

ಕಲಬುರಗಿಯ ಕುಸನೂರು ಗ್ರಾಮದಲ್ಲಿ ಮಂಗಳವಾರ ಕಾರ ಹುಣ್ಣಿಮೆ ಪ್ರಯುಕ್ತ ಗ್ರಾಮಸ್ಥರು ಸಂಭ್ರಮದಿಂದ ಎತ್ತಿನ ಓಟದಲ್ಲಿ ಪಾಲ್ಗೊಂಡಿದ್ದರು

–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಪಠ್ಯ ಪರಿಷ್ಕರಣೆ: ಇಲಾಖೆ ಮುಖ್ಯಸ್ಥರಿಗೆ ಲೇಖಕರ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯ ಪರಿಷ್ಕರಣೆ ಕುರಿತು ಎದ್ದಿರುವ ವಿವಾದಗಳ ಕುರಿತು ಐದು ಪ್ರಶ್ನೆಗಳನ್ನು ಎತ್ತಿರುವ ನಾಡಿನ ಸಾಹಿತಿಗಳು, ಪ್ರಗತಿಪರ ಹೋರಾಟಗಾರರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಜಾಗೃತ ನಾಗರಿಕರು ಕರ್ನಾಟಕ ವೇದಿಕೆಯ ಪರವಾಗಿ ಪ್ರಶ್ನೆಗಳನ್ನು ಕೇಳಿರುವ ಈ ಪತ್ರಕ್ಕೆ ಕೆ.ಮರುಳಸಿದ್ಧಪ್ಪ, ಜಿ. ರಾಮಕೃಷ್ಣ, ವಿಜಯಾ, ಕುಂ. ವೀರಭದ್ರಪ್ಪ, ಪುರುಷೋತ್ತಮ ಬಿಳಿಮಲೆ, ರಾಜೇಂದ್ರ ಚೆನ್ನಿ, ರಹಮತ್ ತರೀಕೆರೆ, ಕೆ.ಎಸ್. ವಿಮಲಾ, ಇಂದಿರಾ ಕೃಷ್ಣಪ್ಪ, ವಿನಯಾ, ಬಂಜಗೆರೆ ಜಯಪ್ರಕಾಶ್, ವಸುಂಧರಾ ಭೂಪತಿ ಸೇರಿದಂತೆ 52 ಜನ ಸಹಿ ಹಾಕಿದ್ದಾರೆ.

ಎಲ್ಲ ವಿವಾದಗಳೂ ಕೊನೆಗೊಳ್ಳುವವರೆಗೂ ಹಳೆಯ ಪಠ್ಯ ಪುಸ್ತಕಗಳನ್ನೇ ಮುಂದುವರಿಸಬೇಕು ಎಂದೂ ಮನವಿ ಮಾಡಿದ್ದಾರೆ.

ಪ್ರಶ್ನೆಗಳೇನು?

- ಆರನೇ ತರಗತಿಯ ಪಠ್ಯದ ಕುರಿತು ಪರಿಶೀಲಿಸಿ ವರದಿ ಕೊಡಿ ಎಂದು ರೋಹಿತ್ ಚಕ್ರತೀರ್ಥ ಸಮಿತಿ ನೇಮಿಸಲಾಗಿತ್ತು. ಸಮಿತಿಯು ತನ್ನ ವ್ಯಾಪ್ತಿ ಮೀರಿ 1ರಿಂದ 10ನೇ ತರಗತಿಯ ಬರೆಗಿನ ಎಲ್ಲಾ ಪಠ್ಯಗಳನ್ನೂ ಪರಿಷ್ಕರಿಸಿ ವರದಿ ನೀಡಿದೆ ಎಂಬ ಸಂಗತಿ ಚರ್ಚೆಯಲ್ಲಿದೆ. ಸರ್ಕಾರದ ಆದೇಶವೇ ಇಲ್ಲದೇ ಪಠ್ಯ ಪರಿಷ್ಕರಣೆಗೆ ಅವಕಾಶ ಇದೆಯೇ?
- ಪಠ್ಯದಲ್ಲಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡಲಾಗುವುದು ಎಂದು ಸಚಿವರ ಹೇಳಿಕೆ ಬಂದ ಮೇಲೂ ಪರಿಷ್ಕೃತ ಪಠ್ಯ ಪುಸ್ತಕದಲ್ಲಿನ ಪಾಠಗಳನ್ನೇ ಬೋಧಿಸಬೇಕೆಂಬ ಸುತ್ತೋಲೆ ಹರಿದಾಡುತ್ತಿದೆ. ಇದು ದ್ವಂದ್ವ ನೀತಿಯಲ್ಲವೇ?
- ನಿಯಮ ಬಾಹಿರವಾಗಿಯೇ ನಡೆದದ್ದಾದರೂ ಮರು ಪರಿಷ್ಕೃತ ಪಠ್ಯ ಪುಸ್ತಕಗಳಲ್ಲಿರುವ ಲೋಪದೋಷಗಳಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ ಎಂದು ಶಿಕ್ಷಣ ಇಲಾಖೆ ಹೇಳಿದ್ದಾಗಿ ವರದಿಯಾಗಿದೆ. ಆಕ್ಷೇಪಣೆ ಸಲ್ಲಿಸುವ ವಿಧಾನ, ಅಂತಿಮ ದಿನಾಂಕದ ಮಾಹಿತಿ ಲಭ್ಯವಿಲ್ಲ. ಅದು ಯಾವಾಗ ಲಭ್ಯ?
- ಒಂದೆಡೆ ತಿದ್ದುಪಡಿ ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. ಮತ್ತೊಂದೆಡೆ ಪಠ್ಯ ಪುಸ್ತಕ ಗಳನ್ನು ವಿತರಿಸಲಾಗುತ್ತದೆ ಎಂದು ವರದಿಯಾಗಿದೆ. ಈ ಗೊಂದಲ ಏಕೆ?
- ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಾಥಮಿಕ ಶಿಕ್ಷಣಕ್ಕೂ ಅನ್ವಯಿಸಲು ಸಮಿತಿ ರಚಿಸಲಾಗಿದೆ. ಅದರ ಶಿಫಾರಸುಗಳಿಗೆ ಅನುಗುಣವಾಗಿ ಮತ್ತೆ ನೀವು ಹೊಸ ಪಠ್ಯಗಳನ್ನು ರಚಿಸುವವರಿದ್ದೀರಿ. ಹಾಗಿದ್ದೂ ಕೇವಲ ಒಂದು ವರ್ಷಕ್ಕಾಗಿ ಮರು ಪರಿಷ್ಕರಣೆಯ ಅಗತ್ಯವೇನಿತ್ತು?

ಬರಗೂರು ಸಮಿತಿಯಲ್ಲಿ ತುಕಡೆ ಗ್ಯಾಂಗ್: ಸಚಿವ ನಾಗೇಶ್

ದಾವಣಗೆರೆ: 'ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ತುಕಡೆ ಗ್ಯಾಂಗ್, ಬರಗೂರು ರಾಮಚಂದ್ರಪ್ಪ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಹಿಂದೆ ಇದೆ. ಜೆಎನ್‌ಯುನ ಅಧ್ಯಾಪಕರೊಬ್ಬರು ಪತ್ರ ಬರೆದಿರುವುದು ಇದಕ್ಕೆ ಸಾಕ್ಷಿ. ಪಾಕಿಸ್ತಾನದ ಧ್ವಜ ಹಾರಿಸುವ ಜನ ಇದರಲ್ಲೂ ಇದ್ದಾರೆ ಎಂಬುದು ಗೊತ್ತಾಗುತ್ತಿದೆ' ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಆರೋಪಿಸಿದರು.

ತಾಲ್ಲೂಕಿನ ಹಳೇ ಬಿಸಲೇರಿಯಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಿಂದೂ ಸಮಾಜವನ್ನು ಒಡೆಯಲು, ದೇಶ ಇಬ್ಭಾಗ ಮಾಡಲು ತುಕಡೆ ಗ್ಯಾಂಗ್ ಹಿಂದಿನಿಂದಲೂ ಕೆಲಸ ಮಾಡುತ್ತಿತ್ತು. ಅದನ್ನು ನಾವು ಹೇಳುವಾಗ ನಂಬಿರಲಿಲ್ಲ. ಈಗ ಅದು ನಿಜವಾಗಿದೆ' ಎಂದರು.

'ಶೇ 75ರಷ್ಟು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ವಿತರಣೆ ಕಾರ್ಯ ಮುಗಿದಿದೆ. ಸಮವಸ್ತ್ರ ವಿತರಣೆಗೆ ಇನ್ನೂ 90 ದಿನ ಬೇಕಾಗುತ್ತದೆ. ಕೋವಿಡ್ ಪಿಡುಗಿನ ಕಾಲದಲ್ಲಿ ಎಲ್ಲ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. 12 ವರ್ಷ ಮೀರಿದ ಮಕ್ಕಳಿಗೆ ಕೊರೊನಾ ಲಸಿಕೆ ನೀಡಲಾಗಿದೆ. 6ರಿಂದ 12 ವರ್ಷದ ಮಕ್ಕಳಿಗೆ ಲಸಿಕೆ ನೀಡಬೇಕು ಎಂದು ಆರೋಗ್ಯ ಇಲಾಖೆ ತಿಳಿಸಿದರೆ ಆಗ ಲಸಿಕೆ ನೀಡಲು ಕ್ರಮ ಕೈಗೊಳ್ಳುತ್ತೇವೆ' ಎಂದರು.

'ಬಸವಣ್ಣನಿಗೆ ಅವಮಾನಿಸಿಲ್ಲ'

ದಾವಣಗೆರೆ: 'ಪಠ್ಯದಲ್ಲಿ ಬಸವಣ್ಣನಿಗೆ ಯಾವುದೇ ಅವಮಾನ ಮಾಡಿಲ್ಲ. ಬರಗೂರು ಸಮಿತಿಯ ಪಠ್ಯದಲ್ಲಿ ಏನಿದೆಯೋ ಅದೇ ಈಗಲೂ ಇದೆ. ಜನಿವಾರ ಕಿತ್ತು ಹಾಕಿ ಹೋದರು ಎಂದು ಅಲ್ಲಿತ್ತು. ಉಪನಯನ ಆಗಿ ಹೋದರು ಎಂಬುದು ಇಲ್ಲಿದೆ. ಅದರಲ್ಲಿ ಅವಮಾನ ಅಗುವಂಥದ್ದೇನಿದೆ' ಎಂದು ನಾಗೇಶ್ ಪ್ರಶ್ನಿಸಿದರು.

'₹ 150 ಕೋಟಿ ಭರಿಸುವವರು ಯಾರು?'

ಕಲಬುರಗಿ: 'ರೋಹಿತ್ ಚಕ್ರತೀರ್ಥ ಸಮಿತಿ ಮಾಡಿದ ಪಠ್ಯಪುಸ್ತಕ ಪರಿಷ್ಕರಣೆಗೆ ವಿರೋಧ ವ್ಯಕ್ತವಾದ ಕಾರಣ ಕೈಬಿಟ್ಟ ಅಂಶಗಳನ್ನು ಸೇರಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಹೊಸದಾಗಿ ಪುಸ್ತಕ ಮುದ್ರಿಸಲು ಬೇಕಿರುವ ₹ 150 ಕೋಟಿ ವೆಚ್ಚವನ್ನು ಯಾರು ಭರಿಸುವವರು' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದ್ದಾರೆ.

'777 ಚಾರ್ಲಿ' ನೋಡಿ ಕಣ್ಣೀರಿಟ್ಟ ಸಿ.ಎಂ

ಬೆಂಗಳೂರು: '777 ಚಾರ್ಲಿ' ಚಿತ್ರ ನೋಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾವುಕರಾಗಿ ಕಣ್ಣೀರು ಹಾಕಿದರು.

ನಗರದ ಒರಾಯನ್ ಮಾಲ್‌ನಲ್ಲಿ ಸೋಮವಾರ ಈ ಚಿತ್ರ ವೀಕ್ಷಿಸಿ ಮಾತನಾಡಿದ ಬೊಮ್ಮಾಯಿ, 'ಇದು ರಕ್ಷಿತ್ ಶೆಟ್ಟಿ ಅವರ ತುಂಬಾ ಅಚ್ಚುಕಟ್ಟಾದ, ಭಾವ ನಾತ್ಮಕ ಸಿನಿಮಾ. ಚಾರ್ಲಿ ಜೊತೆಗೆ ಅದರ ಭಾವನೆಗಳ ಜೊತೆಗೆ ತಮ್ಮ ಭಾವನೆಗಳನ್ನು ಜೋಡಿಸುವುದು ಸುಲಭವಲ್ಲ. ಪ್ರಾಣಿಗಳನ್ನಿಟ್ಟುಕೊಂಡು ಬಹಳಷ್ಟು ಚಿತ್ರಗಳಾಗಿವೆ. ಅಲ್ಲಿರುವುದು ಯಾವುದೇ ನಿಬಂಧನೆಗಳಿಲ್ಲದ ಪ್ರೀತಿ. ಈ ಚಿತ್ರದಲ್ಲಿ ಪರಿಶುದ್ಧವಾದ ಪ್ರೀತಿಯನ್ನು ತೋರಿಸಿದ್ದಾರೆ' ಎಂದು ತುಂಬಾ ಭಾವುಕರಾಗಿ ನುಡಿದರು.

ಶಾಸಕ ರಘುಪತಿ ಭಟ್, ಸಚಿವರಾದ ಆರ್.ಅಶೋಕ, ಬಿ.ಸಿ.ನಾಗೇಶ್, ಡಾ.ಸುಧಾಕರ್ ಅವರು ಸಾಥ್ ನೀಡಿದರು.



ಭಾವುಕರಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಚಿತ್ರದ ನಿರ್ದೇಶಕ ಕಿರಣ್ ರಾಜ್, ನಟ ರಕ್ಷಿತ್ ಶೆಟ್ಟಿ ಮತ್ತು ನಟಿ ಸಂಗೀತಾ ಶೃಂಗೇರಿ ಇದ್ದರು.

ಬೊಮ್ಮಾಯಿ ಅವರ ಮನೆಯಲ್ಲಿ ಸನ್ನಿ ಹೆಸರಿನ ನಾಯಿ ಕಳೆದ ವರ್ಷ ಜುಲೈಯಲ್ಲಿ ಮೃತಪಟ್ಟಿತ್ತು. ಅದರ ಅಂತಿಮ ದರ್ಶನ ಪಡೆಯುತ್ತಿರುವ ಚಿತ್ರಗಳು ಜಾಲತಾಣಗಳಲ್ಲಿ ಪ್ರಕಟವಾಗಿದ್ದವು. ಶ್ವಾನದ ನೆನಪನ್ನೂ ಕೂಡಾ ಬೊಮ್ಮಾಯಿ ಅವರು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದರು.

'ಬೀದಿನಾಯಿ ದತ್ತು: ವಿಶೇಷ ಯೋಜನೆ'

'ಬೀದಿನಾಯಿಗಳನ್ನು ದತ್ತು ಪಡೆಯಲು ಹಾಗೂ ಅವುಗಳನ್ನು ಸೂಕ್ತ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳಲು ತಜ್ಞರ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದು' ಎಂದು ಬೊಮ್ಮಾಯಿ ತಿಳಿಸಿದರು.

'ನಾಯಿಗಳ ತರಬೇತಿ ನೀಡುವವರಿಗೆ ಪ್ರೋತ್ಸಾಹ ನೀಡುವ ವಿಶೇಷ ಕಾರ್ಯಕ್ರಮ ರೂಪಿಸುವ ಚಿಂತನೆ ಇದೆ. ಬೀದಿನಾಯಿಗಳನ್ನು ದತ್ತು ತೆಗೆದುಕೊಳ್ಳಬೇಕು. ಬೀದಿನಾಯಿಗಳನ್ನು ಹಾಗೂ ಇತರೆ ಪ್ರಾಣಿಗಳನ್ನು ರಕ್ಷಿಸಬೇಕು, ಸಾಧ್ಯವಾದರೆ ದತ್ತು ಪಡೆಯಬೇಕು' ಎಂದರು.

ಲೋಕಾಯುಕ್ತರಾಗಿ ನ್ಯಾ.ಬಿ.ಎಸ್.ಪಾಟೀಲ

ಒಂದನೇ ಪುಟದಿಂದ...

ಬಿ.ಎಸ್. ಪಾಟೀಲ ಅವರು ರಾಜ್ಯದಲ್ಲಿ ಉಪ ಲೋಕಾಯುಕ್ತರ ಹುದ್ದೆಯಿಂದ ಲೋಕಾಯುಕ್ತರಾಗಿ ಪದೋನ್ನತಿ ಪಡೆದ ಮೊದಲಿಗರು. 2015ರವರೆಗೂ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಯನ್ನು ಮಾತ್ರ ಲೋಕಾಯುಕ್ತರ ಹುದ್ದೆಗೆ ನೇಮಿಸಲು ಅವಕಾಶವಿತ್ತು. 2015ರಲ್ಲಿ ಲೋಕಾಯುಕ್ತ ಕಾಯ್ದೆಗೆ ತಿದ್ದುಪಡಿ ತಂದಿದ್ದು, ಹೈಕೋರ್ಟ್ ನ್ಯಾಯಮೂರ್ತಿಯಾಗಿ ಕನಿಷ್ಠ 10 ವರ್ಷ ಕಾಲ ಕಾರ್ಯನಿರ್ವಹಿಸಿದವರನ್ನೂ ಲೋಕಾಯುಕ್ತರನ್ನಾಗಿ ನೇಮಿಸಲು ಅವಕಾಶ ಕಲ್ಪಿಸಲಾಗಿತ್ತು. ತಿದ್ದುಪಡಿಯ ಅನುಸಾರ ಪಾಟೀಲ ಅವರಿಗೆ ಪದೋನ್ನತಿ ದೊರಕಿದೆ.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಪದೆಕಣ್ಣೂರು ಗ್ರಾಮದಲ್ಲಿ 1956ರ ಜೂನ್ 1ರಂದು ಜನಿಸಿದ್ದ ಪಾಟೀಲ, ಧಾರವಾಡದಲ್ಲಿ ಬಿ.ಎ, ಕಾನೂನು ಪದವಿ ಪಡೆದಿದ್ದರು. 1980ರಲ್ಲಿ ವಕೀಲಿ ವೃತ್ತಿ ಆರಂಭಿಸಿದ್ದರು. ಹೈಕೋರ್ಟ್‌ನ ಕಾಯಂ ನ್ಯಾಯಮೂರ್ತಿಯಾಗಿ 2004ರ ಅ. 21ರಂದು ನೇಮಕಗೊಂಡಿದ್ದರು. 13 ವರ್ಷ 7 ತಿಂಗಳ ಕಾಲ ಕಾರ್ಯನಿರ್ವಹಿಸಿ 2018ರ ಮೇ 31ರಂದು ನಿವೃತ್ತರಾಗಿದ್ದರು. 2019ರ ನವೆಂಬರ್ 20ರಂದು ಉಪ ಲೋಕಾಯುಕ್ತರಾಗಿ ನೇಮಕಗೊಂಡಿದ್ದ ಪಾಟೀಲ, ನ.22ರಂದು ಅಧಿಕಾರ ಸ್ವೀಕರಿಸಿದ್ದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣ: ಮಂಗಳವಾರ 8 ತಾಸಿಗೂ ಹೆಚ್ಚು ಕಾಲ ರಾಹುಲ್ ವಿಚಾರಣೆ

ಇಂದೂ ವಿಚಾರಣೆಗೆ ಹಾಜರಾಗಲು ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ.) ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಮಂಗಳವಾರವೂ ವಿಚಾರಣೆಗೆ ಒಳಪಡಿಸಿದೆ. ಈ ಮೂಲಕ, ಎರಡು ದಿನಗಳಲ್ಲಿ ರಾಹುಲ್ ಅವರನ್ನು ಒಟ್ಟು 18 ಗಂಟೆಗೂ ಹೆಚ್ಚು ಕಾಲ ವಿಚಾರಣೆಗೆ ಒಳಪಡಿಸಲಾಗಿದೆ. ಬುಧವಾರ ಮತ್ತೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಲಾಗಿದೆ.

ಸೋಮವಾರ ರಾಹುಲ್ ಅವರನ್ನು 10 ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ರಾಹುಲ್ ಅವರಿಂದ ಎಲ್ಲಾ ಮಾಹಿತಿಗಳನ್ನು ಪಡೆಯಲು ಸಾಧ್ಯವಾಗದೇ ಇದ್ದ ಕಾರಣ, ಮಂಗಳವಾರವೂ ವಿಚಾರಣೆಗೆ ಬರುವಂತೆ ಸೂಚಿಸಲಾಗಿತ್ತು.

ರಾಹುಲ್ ಅವರು ಮಂಗಳವಾರ ಬೆಳಿಗ್ಗೆ 11ರ ಹೊತ್ತಿಗೆ ಇಲ್ಲಿನ ಇ.ಡಿ. ಕಚೇರಿಗೆ ಬಂದರು. ಅವರ ಜತೆಗೆ, ಸೋದರಿ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸಹ ಇದ್ದರು. ರಾಹುಲ್ ಅವರನ್ನು 11.30ರಿಂದ ಮಧ್ಯಾಹ್ನ 3.30ರವರೆಗೆ ವಿಚಾರಣೆಗೆ ಒಳಪಡಿಸಲಾಗಿತ್ತು.

ಆನಂತರ ಅವರು ಸಂಜೆ 4.30ರವರೆಗೆ ಬಿಡುವು ಪಡೆದಿದ್ದರು. ತಮ್ಮ ಮನೆಗೆ ಹೋಗಿ, ವಿಚಾರಣೆಗೆ ವಾಪಸಾದರು.

ರಾಹುಲ್ ಅವರಿಗೆ, ಅವರು ನೀಡಿದ್ದ ಹೇಳಿಕೆಯ ಲಿಖಿತ ಪ್ರತಿಯನ್ನು ನೀಡಲಾಯಿತು. ಅವರು ಅದನ್ನು ಕೂಲಂಕಷವಾಗಿ ಪರಿಶೀಲಿಸಿ, ಸಹಿ ಮಾಡಿದ್ದಾರೆ. ಅವರನ್ನು ವಿಚಾರಣೆಗೆ ಒಳಪಡಿಸಿದ್ದ ಇ.ಡಿ. ಅಧಿಕಾರಿಗಳು ಹಲವು ಬಾರಿ, ಬಿಡುವು ಪಡೆದು ವಿಚಾರಣೆಗೆ ವಾಪಸಾಗುತ್ತಿದ್ದರು ಎಂದು ಮೂಲಗಳು ಮಾಹಿತಿ ನೀಡಿವೆ.

ಬಿಗಿಭದ್ರತೆ, ನಿಷೇಧಾಜ್ಞೆ: ರಾಹುಲ್ ಅವರನ್ನು ವಿಚಾರಣೆಗೆ ಒಳಪಡಿಸಿದ್ದ, ಇ.ಡಿ. ಕಚೇರಿ ಇರುವ ಸ್ಥಳದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ರಾಹುಲ್ ಅವರನ್ನು ವಿಚಾರಣೆಗೆ ಒಳಪಡಿಸುವುದನ್ನು ವಿರೋಧಿಸಿ, ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆಗೆ ಕರೆ ನೀಡಿದ್ದರು.

ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ಇ.ಡಿ. ಕಚೇರಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

ಇ.ಡಿ. ಕಚೇರಿ ಇರುವ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಬಹುತೇಕ ರಸ್ತೆಗಳಲ್ಲಿ ಸಂಚಾರವನ್ನು ಬಂದ್ ಮಾಡಲಾಗಿತ್ತು.

ನಿಲ್ಲದ ಪ್ರತಿಭಟನೆ

ರಾಹುಲ್ ಅವರನ್ನು ಇ.ಡಿ. ವಿಚಾರಣೆಗೆ ಒಳಪಡಿಸುವುದನ್ನು ವಿರೋಧಿಸಿ, ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಮಂಗಳವಾರವೂ ದೇಶದ ಹಲವೆಡೆ ಪ್ರತಿಭಟನೆ ನಡೆಸಿದರು. ದೆಹಲಿಯ ಅಕ್ಬರ್ ರೋಡ್‌ನಲ್ಲಿ ಇರುವ ಕಾಂಗ್ರೆಸ್ ಪ್ರಧಾನ ಕಚೇರಿಯ ಬಳಿ ಮಂಗಳವಾರ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಅಲ್ಲಿ ಪ್ರತಿಭಟನೆ ನಡೆಸಿದವರನ್ನು ಪೊಲೀಸರು ವಶಕ್ಕೆ ಪಡೆದರು.

ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಪಕ್ಷದ ಕಚೇರಿ ಎದುರು ಧರಣಿ ನಡೆಸಿದರು. ಪಕ್ಷದ ನೂರಾರು ಕಾರ್ಯಕರ್ತರು ಧರಣಿ ಕೂತಿದ್ದರು. ಮಂಗಳವಾರ ವಿಚಾರಣೆಗೆ ಹಾಜರಾಗುವುದಕ್ಕೆ ಮೊದಲು, ರಾಹುಲ್ ಧರಣಿಯಲ್ಲಿ ಭಾಗಿಯಾಗಿದ್ದರು.

ಧರಣಿ ನಡೆಸುತ್ತಿದ್ದ ಕಾಂಗ್ರೆಸ್ ಮುಖಂಡರನ್ನು ಪೊಲೀಸರು ಹೊತ್ತೊಯ್ದು, ಪೊಲೀಸ್ ಬಸ್ಸಿಗೆ ಹತ್ತಿಸಿದರು. ಇವರ ಜತೆಯಲ್ಲಿ ಪಕ್ಷದ ಹಲವು ಸಂಸದರು, ನಾಯಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆಯಾಗಿಲ್ಲ. ಇ.ಡಿ.ಯು ಕೇಂದ್ರ ಸರ್ಕಾರದ ಆಣತಿಯಂತೆ ಇದನ್ನೆಲ್ಲಾ ಮಾಡುತ್ತಿದೆ

ಭೂಪೇಶ್ ಬಘೆಲ್, ಛತ್ತೀಸಗಡ ಮುಖ್ಯಮಂತ್ರಿ

ಬಿಜೆಪಿ ದ್ವೇಷ ರಾಜಕಾರಣ ನಡೆಸುತ್ತಿದೆ. ವಿರೋಧ ಪಕ್ಷಗಳ ನಾಯಕರನ್ನು ಹತ್ತಿಕ್ಕುವ ಕಾರ್ಯತಂತ್ರದ ಭಾಗವಾಗಿ ಸೋನಿಯಾ ಮತ್ತು ರಾಹುಲ್ ಅವರನ್ನು ಗುರಿ ಮಾಡಲಾಗುತ್ತಿದೆ

ಹರೀಶ್ ರಾವತ್, ಉತ್ತರಾಖಂಡ ಕಾಂಗ್ರೆಸ್ ನಾಯಕ

ಮನೆಗಳ ನೆಲಸಮ: ಸಿಜೆಐಗೆ ಪತ್ರ

ಒಂದನೇ ಪುಟದಿಂದ...

ಹಿರಿಯ ವಕೀಲರಾದ ಶಾಂತಿ ಭೂಷಣ್, ಇಂದಿರಾ ಜೈಸಿಂಗ್, ಸಿ.ಯು. ಸಿಂಗ್, ಶ್ರೀರಾಮ್ ಪಂಚು, ಪ್ರಶಾಂತ್ ಭೂಷಣ್ ಮತ್ತು ಆನಂದ್ ಗ್ರೋವರ್ ಅವರೂ ಪತ್ರಕ್ಕೆ ಸಹಿ ಮಾಡಿದ್ದಾರೆ.

'ಪ್ರತಿಭಟನಕಾರರು ಹೇಳುವುದನ್ನು ಕೇಳುವ ವ್ಯವಧಾನವನ್ನು ಸರ್ಕಾರ ತೋರಿಲ್ಲ. ಶಾಂತಿಯುತವಾಗಿ ಪ್ರತಿಭಟಿಸಲು ಅವಕಾಶ ನೀಡುವುದನ್ನು ಬಿಟ್ಟು ಪ್ರತಿಭಟನಕಾರರ ಮೇಲೆಯೇ ಹಿಂಸಾತ್ಮಕ ಕ್ರಮಗಳನ್ನು ಕೈಗೊಂಡಿದೆ. ಇಂತಹ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಯೇ ಅಧಿಕಾರಿಗಳಿಗೆ ಪ್ರೇರಣೆ ನೀಡಿದ್ದಾರೆ ಎಂದು ವರದಿಯಾಗಿದೆ' ಎಂದೂ ಪತ್ರದಲ್ಲಿ ಹೇಳಲಾಗಿದೆ.

'ಕಾನೂನು ಬಾಹಿರವಾಗಿ ಪ್ರತಿಭಟನೆ ನಡೆಸಿದವರ ಮೇಲೆ ರಾಷ್ಟ್ರೀಯ ಭದ್ರತೆ ಕಾಯ್ದೆ 1980, ಉತ್ತರ ಪ್ರದೇಶದ ಗೂಂಡಾ ಮತ್ತು ಸಮಾಜವಿರೋಧಿ ಚಟುವಟಿಕೆ (ತಡೆ) ಕಾಯ್ದೆ 1986 ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ಮುಖ್ಯಮಂತ್ರಿಯೇ ನಿರ್ದೇಶನ ನೀಡಿದ್ದಾರೆ. ಪ್ರತಿಭಟನಕಾರರಿಗೆ ಚಿತ್ರಹಿಂಸೆಗೆ ಒಳಪಡಿಸುವ ಧೈರ್ಯವನ್ನು ಈ ನಿರ್ದೇಶನವು ಪೊಲೀಸರಿಗೆ ನೀಡಿದೆ' ಎಂದು ಪತ್ರದಲ್ಲಿ ವಿವರಿಸಲಾಗಿದೆ.

'ಈ ನಿರ್ದೇಶನಕ್ಕೆ ಅನುಗುಣವಾಗಿ 300ಕ್ಕೂ ಹೆಚ್ಚು ಜನರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರತಿಭಟನಕಾರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಯುವಕರಿಗೆ ಪೊಲೀಸ್ ಠಾಣೆಯಲ್ಲಿ ಲಾಠಿಯಲ್ಲಿ ಥಳಿಸುವ ವಿಡಿಯೊಗಳು ಬಹಿರಂಗವಾಗಿವೆ. ಪ್ರತಿಭಟನಕಾರರ ಮನೆಗಳನ್ನು ಯಾವುದೇ ನೋಟಿಸ್ ನೀಡದೆ ನೆಲಸಮ ಮಾಡಲಾಗಿದೆ. ಮುಸ್ಲಿಂ ಸಮುದಾಯದ ಪ್ರತಿಭಟನಕಾರರನ್ನು ಅಟ್ಟಾಡಿಸಿ ಪೊಲೀಸರು ಥಳಿಸಿದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಇವೆ. ಇದು ದೇಶದ ಆತ್ಮಸಾಕ್ಷಿಯನ್ನು ಕೆಣಕಿದೆ' ಎಂದು ಪತ್ರದಲ್ಲಿ ಹೇಳಲಾಗಿದೆ.

'ಆಡಳಿತ ಯಂತ್ರವು ಕಾನೂನನ್ನು ಉಲ್ಲಂಘಿಸಿ ದಮನ ನೀತಿ ಅನುಸರಿಸಿರುವುದು ಸ್ವೀಕಾರಾರ್ಹವಲ್ಲ. ಇದು ಪೌರರ ಹಕ್ಕುಗಳ ಉಲ್ಲಂಘನೆ. ಸಂವಿಧಾನ ಮತ್ತು ಮೂಲಭೂತ ಹಕ್ಕುಗಳ ಅಣಕವಾಗಿದೆ' ಎಂದೂ ಪತ್ರದಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಸ್ಕ್ಯಾನಿಂಗ್: ಅಂಗವಿಕಲ ಮಗುವಿಗೆ ಸಿಗದ ಗಾಲಿ ಕುರ್ಚಿ– ಆಕ್ರೋಶ

ಮಂಡ್ಯ: ಮಿಮ್ಸ್‌ನಲ್ಲಿ ಚಿಕಿತ್ಸೆಗೆಂದು ದಾಖಲಾಗಿದ್ದ ಅಂಗವಿಕಲ ಮಗುವನ್ನು ಸ್ಕ್ಯಾನಿಂಗ್‌ಗೆ ಕರೆದೊಯ್ಯಲು ಗಾಲಿ ಕುರ್ಚಿ ಸಿಗದೆ, ತಂದೆಯು ತೋಳಿನಲ್ಲಿಯೇ ಸೋಮವಾರ ಎತ್ತಿಕೊಂಡು ಹೋಗಿದ್ದಾರೆ. ಗಾಲಿ ಕುರ್ಚಿ ನೀಡದಿರುವುದಕ್ಕೆ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಮನಗರದಿಂದ ಮಗುವನ್ನು ಕರೆತಂದಿದ್ದ ತಂದೆ ತಮ್ಮ ತೋಳಿನಲ್ಲಿಯೇ ಮಗುವನ್ನೆತ್ತಿಕೊಂಡು ಸ್ಕ್ಯಾನಿಂಗ್ ಕೇಂದ್ರಕ್ಕೆ ಹೋದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

'ಎಲ್ಲ ಸೌಲಭ್ಯಗಳೂ ಇವೆ ಎಂದು ಹೇಳಿಕೊಳ್ಳುವ ವೈದ್ಯರು ಒಂದು ವ್ಹೀಲ್ ಚೇರ್ ನೀಡಲಿಲ್ಲ. ಆಸ್ಪತ್ರೆ ಸಿಬ್ಬಂದಿ ಕೂಡ ಮಗುವನ್ನು ಕರೆದುಕೊಂಡು ಹೋಗಲು ಸಹಾಯ ಮಾಡಲಿಲ್ಲ' ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

'ಆಸ್ಪತ್ರೆಯಲ್ಲಿ ಸಾಕಷ್ಟು ವ್ಹೀಲ್‌ಚೇರ್‌ಗಳಿವೆ. ಈ ಬಗ್ಗೆ ಪರಿಶೀಲಿಸಿ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಹೆಸರು ಹೇಳಲು ಇಚ್ಛಿಸದ ವೈದ್ಯರೊಬ್ಬರು ತಿಳಿಸಿದರು.

ಜಮೀನು ಕಿತ್ತುಕೊಳ್ಳಲು ಯತ್ನ: ಶಾಸಕ ಓಲೇಕಾರ ಕುಟುಂಬಸ್ಥರ ವಿರುದ್ಧ ಆರೋಪ

ಒಂದೇ ಕುಟುಂಬದ ನಾಲ್ವರಿಂದ ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬ್ಯಾಡಗಿ (ಹಾವೇರಿ): 'ಉಳುಮೆ ಮಾಡುತ್ತಿರುವ ಜಮೀನನ್ನು ಕಿತ್ತುಕೊಳ್ಳಲು ಹಾವೇರಿ ಶಾಸಕ ನೆಹರು ಓಲೇಕಾರ ಕುಟುಂಬಸ್ಥರು ದಬ್ಬಾಳಿಕೆ ನಡೆಸುತ್ತಿದ್ದಾರೆ' ಎಂದು ಆರೋಪಿಸಿ ತಾಲ್ಲೂಕಿನ ಶಿಡೇನೂರು ಗ್ರಾಮದ ಒಂದೇ ಕುಟುಂಬಕ್ಕೆ ಸೇರಿದ ನಾಲ್ವರು ಮಂಗಳವಾರ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಶಿವಾಜಿನಗರ ಕಂದಾಯ ಗ್ರಾಮದ ಪಾಂಡಪ್ಪ ಕಬ್ಬೂರು (70), ಗುರುಶಾಂತಪ್ಪ ಲಮಾಣಿ (72), ಗಂಗವ್ವ ಲಮಾಣಿ (65) ಹಾಗೂ ಹನುಮಂತಪ್ಪ ಬಡಿಗೇರ (41) ಜಮೀನಿನಲ್ಲಿಯೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದವರು.

ಈ ಪೈಕಿ ಒಬ್ಬರ ಸ್ಥಿತಿ ಗಂಭೀರವಾಗಿದೆ. ಹೆಚ್ಚಿನ ಚಿಕಿತ್ಸೆಗೆ ನಾಲ್ವರನ್ನೂ ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗುತ್ತಿದೆ.

ಹಾವೇರಿ ಎಸ್‌ಪಿ ಹನುಮಂತರಾಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

'ಶಿಡೇನೂರು ಗ್ರಾಮದಲ್ಲಿ 29 ಕುಟುಂಬಗಳು ಅಕ್ರಮ–ಸಕ್ರಮ ಯೋಜನೆಯಡಿ ತಲಾ 1 ಎಕರೆ 15 ಗುಂಟೆ ಜಮೀನು ಪಡೆದುಕೊಂಡು, ಸಾಗುವಳಿ ಮಾಡಿಕೊಂಡಿದ್ದವು. ಈ ಕುಟುಂಬಗಳು ತಲಾ 15 ಗುಂಟೆ ಜಮೀನು ಬಿಟ್ಟುಕೊಡುವಂತೆ ಶಾಸಕ ನೆಹರು ಓಲೇಕಾರ ಹಾಗೂ ಅವರ ಮಗ ಮಂಜುನಾಥ ಓಲೇಕಾರ ಒತ್ತಾಯಿಸುತ್ತಿದ್ದಾರೆ. ಜಮೀನು ಬಿಟ್ಟುಕೊಡಲು ನಿರಾಕರಿಸಿದ್ದಕ್ಕೆ ನಮ್ಮ ಮೇಲೆ ದಬ್ಬಾಳಿಕೆ ನಡೆಸಿದ್ದು, ಬಿತ್ತನೆಗೆ ಯಾರೂ ಬರದಂತೆ ತಾಕೀತು ಮಾಡಿದ್ದಾರೆ' ಎಂದು ಕೆಲ ರೈತರು ಆರೋಪಿಸಿದ್ದಾರೆ.

ಎಸ್‌.ಆರ್‌.ಪಾಟೀಲ ಕೈವಾಡ: ಆರೋಪ

ಬ್ಯಾಡಗಿ(ಹಾವೇರಿ): 'ಈ ಘಟನೆಯ ಹಿಂದೆ ಬ್ಯಾಡಗಿಯ ಕಾಂಗ್ರೆಸ್ ಮುಖಂಡ ಎಸ್.ಆರ್.ಪಾಟೀಲ ಅವರ ಕೈವಾಡವಿದೆ. ರೈತರನ್ನು ಕರೆಸಿಕೊಂಡು ಅವರು ಪ್ರಚೋದನೆ ನೀಡಿದ್ದಾರೆ' ಎಂದು ಶಾಸಕ ನೆಹರು ಓಲೇಕಾರ ಆರೋಪಿಸಿದರು.

ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ನಾನೇ ಶಿಡೇನೂರು ಗ್ರಾಮದ ಕೆಲವು ಕುಟುಂಬಗಳಿಗೆ ಹಿಂದೆ ಜಾಗ ನೀಡಿದ್ದೇನೆ. ನಾನು ಜಮೀನಿನ ಪಟ್ಟಾ ಕೊಟ್ಟಾಗ 18–19 ಕುಟುಂಬಗಳಿದ್ದವು. ಈಗ ಅವರ ಸಂಖ್ಯೆ ಹೆಚ್ಚಿದೆ. ಜತೆಗೆ ಹೆಚ್ಚುವರಿ ಜಾಗ ಒತ್ತುವರಿ ಮಾಡಿದ್ದಾರೆ. ಅದರ ತೆರವಿಗೆ ಗ್ರಾಮಸ್ಥರು ಅವರಿಗೆ ಸೂಚಿಸಿದ್ದಾರೆ' ಎಂದರು.

'ನನ್ನ ಪಾತ್ರವಿಲ್ಲ': 'ಶಾಸಕ ನೆಹರು ಓಲೇಕಾರ ಕುಟುಂಬದ ಸರ್ವಾಧಿಕಾರಿ ಧೋರಣೆಯಿಂದ ನೊಂದ ಬಡವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಕಳೆದ ವಾರ ಅವರೆಲ್ಲ ನನ್ನನ್ನು ಭೇಟಿ ಮಾಡಿದಾಗ ತಹಶೀಲ್ದಾರ್ ಬಳಿ ನ್ಯಾಯ ಕೇಳುವಂತೆ ಸಲಹೆ ನೀಡಿದ್ದೆ. ಆತ್ಮಹತ್ಯೆ ಘಟನೆಗೂ ನನಗೂ ಸಂಬಂಧವಿಲ್ಲ' ಎಂದು ಕಾಂಗ್ರೆಸ್ ಮುಖಂಡ ಎಸ್.ಆರ್.ಪಾಟೀಲ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ನಮ್ಮ ಕುಟುಂಬದವರು ಆಸ್ತಿ ಕೊಡಿ ಅಂತ ಯಾರನ್ನೂ ಕೇಳಿಲ್ಲ. ನನ್ನ ಜೊತೆಗೆ ಯಾರೂ ಈ ಬಗ್ಗೆ ಚರ್ಚೆ ಮಾಡಿಲ್ಲ.

ನೆಹರು ಓಲೇಕಾರ, ಬಿಜೆಪಿ ಶಾಸಕ

ರಾಹುಲ್ ಭೇಟಿಗೆ ಯತ್ನ • ದೆಹಲಿಯಲ್ಲಿ ಪ್ರತಿಭಟನೆ

ಕಾಂಗ್ರೆಸ್‌ನ ರಾಜ್ಯ ನಾಯಕರು ವಶಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲು ಬಂದಿದ್ದ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್, ಶಾಸಕರಾದ ಎಚ್.ಕೆ. ಪಾಟೀಲ, ದಿನೇಶ್ ಗುಂಡೂರಾವ್ ಅವರನ್ನು ದೆಹಲಿ ಪೊಲೀಸರು ಮಂಗಳವಾರ ವಶಕ್ಕೆ ಪಡೆದರು.

ಇ.ಡಿ. ವಿಚಾರಣೆಗೆ ಹಾಜರಾಗುವ ಮುನ್ನ ರಾಹುಲ್ ಗಾಂಧಿ ಅವರು ಅಕ್ಬರ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಗೆ ಬಂದರು. ಈ ವೇಳೆ, ರಾಜ್ಯ ಮುಖಂಡರು ರಾಹುಲ್ ಅವರನ್ನು ಭೇಟಿಯಾಗಲು ಉದ್ದೇಶಿಸಿದ್ದರು. ಅದಕ್ಕಾಗಿ ಕಾಂಗ್ರೆಸ್ ಕಚೇರಿಯತ್ತ ಸಾಗಿದರು. ಇದಕ್ಕೆ ದೆಹಲಿ ಪೊಲೀಸರು ಅವಕಾಶ ನೀಡಲಿಲ್ಲ. 'ನಾವು ಪ್ರತಿಭಟನೆ ನಡೆಸುತ್ತಿಲ್ಲ. ಪಕ್ಷದ ಕಚೇರಿಗೆ ಹೋಗುತ್ತಿದ್ದೇವೆ' ಎಂದು ಡಿ.ಕೆ. ಸುರೇಶ್ ಸಮಜಾಯಿಷಿ ನೀಡಿದರು. ಪೊಲೀಸರು ಅದನ್ನು ಒಪ್ಪಲಿಲ್ಲ. ಇಂತಹ ಧೋರಣೆ ಸರಿಯಲ್ಲ ಎಂದು ಸುರೇಶ್ ಹೇಳಿದರು. ಆ ವೇಳೆ, ಪೊಲೀಸರು ಹಾಗೂ ಸುರೇಶ್ ನಡುವೆ ವಾಗ್ವಾದ ನಡೆಯಿತು.

ಪೊಲೀಸ್ ಅಧಿಕಾರಿಯೊಬ್ಬರು ಹಿಂದಿನಿಂದ ಬಂದು ಸುರೇಶ್ ಅವರನ್ನು ತಳ್ಳಿದರು. ಬಳಿಕ ಪೊಲೀಸರು ವಾಹನದಲ್ಲಿ ಮುಖಂಡರನ್ನು ನರೆಲಾ ಠಾಣೆಗೆ ಕರೆದೊಯ್ದರು. ರಾಹುಲ್ ಗಾಂಧಿ ಅವರ ವಿಚಾರಣೆ ಮುಗಿಯುವವರೆಗೂ ಮೂವರನ್ನು ಠಾಣೆಯಲ್ಲಿ ಕೂರಿಸಿಕೊಂಡರು. ಈ ವೇಳೆ, ಸುರೇಶ್ ಹಾಗೂ ದಿನೇಶ್ ಗುಂಡೂರಾವ್ ಅವರು ರಕ್ತದಾನ ಮಾಡಿದರು.

'ನಮ್ಮ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿ ನೈತಿಕ ಬೆಂಬಲ ನೀಡಲು ಬಂದಿದ್ದೆವು. ನಾವು ತಪ್ಪು ಏನೂ ಮಾಡಿರಲಿಲ್ಲ. ಆದರೂ ಪೊಲೀಸರು ನಮ್ಮನ್ನು ವಶಕ್ಕೆ ಪಡೆದು ಇಡೀ ದಿನ ಠಾಣೆಯಲ್ಲಿ ಕೂರಿಸಿಕೊಂಡರು' ಎಂದು ಎಚ್.ಕೆ.ಪಾಟೀಲ ದೂರಿದರು.

'ಪೊಲೀಸರು ನಮ್ಮ ಮೇಲೆ ದೌರ್ಜನ್ಯ ನಡೆಸಿದರು. ಒಂದು ರೀತಿಯಲ್ಲಿ ಅಪಹರಣ ಮಾಡಿದರು. ಕೇಂದ್ರ ಸರ್ಕಾರದ ಕುಮ್ಮಕ್ಕಿನಿಂದ ಪೊಲೀಸರು ಈ ಕೆಲಸ ಮಾಡಿದ್ದಾರೆ' ಎಂದು ಸುರೇಶ್ ದೂರಿದರು.

'ದೆಹಲಿ ಪೊಲೀಸರು ಜನಪ್ರತಿನಿಧಿಗಳಿಗೆ ಗೌರವ ಕೊಡದೆ ದೌರ್ಜನ್ಯ ನಡೆಸಿದ್ದಾರೆ. ಇದಕ್ಕೆ ಬಿಜೆಪಿ ಚಿತಾವಣೆಯೇ ಕಾರಣ. ಇದಕ್ಕೆಲ್ಲ ನಾವು ಬಗ್ಗುವುದಿಲ್ಲ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಮುಖ್ಯಾಂಶಗಳು

- ಡಿ.ಕೆ. ಸುರೇಶ್, ಎಚ್‌.ಕೆ. ಪಾಟೀಲ, ದಿನೇಶ್ ಗುಂಡೂರಾವ್ ವಶಕ್ಕೆ
- ದೆಹಲಿ ಪೊಲೀಸರು ಮತ್ತು ಡಿ.ಕೆ. ಸುರೇಶ್ ನಡುವೆ ವಾಗ್ವಾದ
- ಕೇಂದ್ರದ ಕುಮ್ಮಕ್ಕಿನಿಂದ ವಶಕ್ಕೆ ಪಡೆದ ಪೊಲೀಸರು ಸಂಸದ ಆರೋಪ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ನಂಬಿ ಅನುಭವಿಸುವುದಕ್ಕಿಂತ ಅನುಭವಿಸಿ ನಂಬುವುದೇ ಶಾಶ್ವತ ಮತ್ತು ಸತ್ಯ.

-ಕುವೆಂಪು

ಪಶ್ಚಿಮಘಟ್ಟ: ಅಧ್ಯಯನಕ್ಕೆ ಸಮಿತಿ ಅಭಿವೃದ್ಧಿಯ ವೇಗಕ್ಕೆ ಹಾಕೀತೇ ಮಿತಿ?

ಕಸ್ತೂರಿ ರಂಗನ್ ಸಮಿತಿಯ ವರದಿಯನ್ನು ಕೇಂದ್ರ ಸರ್ಕಾರ ಕೊನೆಗೂ ತಾನಾಗಿಯೇ ಮೂಲೆಗೊತ್ತಿದೆ. ಪಶ್ಚಿಮಘಟ್ಟಗಳ ಪರಿಸರಸೂಕ್ಷ್ಮ ಪ್ರದೇಶಗಳ ಸಂರಕ್ಷಣೆಗೆ ಸಂಬಂಧಿಸಿದ ಶಿಫಾರಸುಗಳ ಸುತ್ತ ಸೃಷ್ಟಿಯಾಗಿರುವ ವಿವಾದಗಳ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸುವ ಜವಾಬ್ದಾರಿಯನ್ನು ಕೇಂದ್ರ ಅರಣ್ಯ ಸಚಿವಾಲಯದ ನಿಕಟಪೂರ್ವ ಮಹಾನಿರ್ದೇಶಕ ಸಂಜಯ್ ಕುಮಾರ್ ನೇತೃತ್ವದ ಸಮಿತಿಗೆ ಕೇಂದ್ರ ಸರ್ಕಾರವು ವಹಿಸಿದೆ. ಅಲ್ಲಿಗೆ, ಜೀವಸಮೃದ್ಧಿಯ ಈ ಘಟ್ಟ ಪ್ರದೇಶಗಳ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು ಅದೆಷ್ಟು ಸಡಿಲ ಇರಬೇಕು ಎಂಬ ಬಗ್ಗೆ ವರದಿ ನೀಡಲು ಮೂರನೆಯ ಸಮಿತಿ ಅಸ್ತಿತ್ವಕ್ಕೆ ಬಂದಂತಾಯಿತು. ಹನ್ನೆರಡು ವರ್ಷಗಳ ಹಿಂದೆ ಡಾ. ಮಾಧವ ಗಾಡ್ಗೀಳ್ ಅಧ್ಯಕ್ಷತೆಯ ಸಮಿತಿಯೊಂದು ಆರು ರಾಜ್ಯಗಳಲ್ಲಿ ಸಮೀಕ್ಷೆ ನಡೆಸಿ ಪಶ್ಚಿಮಘಟ್ಟಗಳ ದೀರ್ಘ ಭವಿಷ್ಯದ ದೃಷ್ಟಿಯಿಂದ ಕೆಲವೊಂದು ಸಂರಕ್ಷಣಾ ಕ್ರಮಗಳನ್ನು ಸೂಚಿಸಿತ್ತು. ಅವೆಲ್ಲವೂ ತೀರ ಬಿಗಿಯಾದ ಕಟ್ಟುಪಾಡುಗಳೆಂದೂ ಗಾಡ್ಗೀಳ್ ಸಮಿತಿಯ ಶಿಫಾರಸುಗಳ ಅನುಷ್ಠಾನ ಕಷ್ಟಸಾಧ್ಯವೆಂದೂ ರಾಜ್ಯ ಸರ್ಕಾರಗಳು ಹೇಳಿದ್ದರಿಂದ ಅದನ್ನು ಕೈಬಿಟ್ಟು ಬಾಹ್ಯಾಕಾಶ ವಿಜ್ಞಾನಿ ಡಾ. ಕಸ್ತೂರಿ ರಂಗನ್ ಅವರ ನೇತೃತ್ವದ ಎರಡನೇ ಸಮಿತಿಯನ್ನು ನೇಮಕ ಮಾಡಿತ್ತು. ಗಾಡ್ಗೀಳ್ ವರದಿಗೆ ಹೋಲಿಸಿದರೆ ಈ ವರದಿ ಸಾಕಷ್ಟು ದುರ್ಬಲವೆಂದು ಸಂರಕ್ಷಣಾವಾದಿಗಳು ಮತ್ತು ಪರಿಸರಪ್ರೇಮಿಗಳು ವಾದಿಸಿದರೂ ಘಟ್ಟಪ್ರದೇಶಗಳ ಮೇಲಿನ ಒತ್ತಡಗಳನ್ನು ಪ್ರತಿಬಂಧಿಸಲು ಒಂದಿಷ್ಟಾದರೂ ಕ್ರಮಗಳು ಜಾರಿಗೆ ಬಂದಾವೆಂದು ಆಶಿಸಿದ್ದರು. ಆದರೆ ಆಗಿದ್ದೇ ಬೇರೆ. ಕೇರಳ, ಮಹಾರಾಷ್ಟ್ರ ಮತ್ತು ಕರ್ನಾಟಕ ಸರ್ಕಾರಗಳು ಕಸ್ತೂರಿ ರಂಗನ್ ಸಮಿತಿಯ ಶಿಫಾರಸುಗಳನ್ನೂ ಒಪ್ಪಿಕೊಳ್ಳಲು ನಿರಾಕರಿಸಿದವು. ಇಡೀ ಸಮೀಕ್ಷೆಯೇ ಉಪಗ್ರಹ ಚಿತ್ರಗಳನ್ನು ಆಧರಿಸಿದ್ದರಿಂದ ಜನವಸತಿಯ ಪ್ರದೇಶಗಳನ್ನೂ ಅರಣ್ಯವೆಂದೇ ತಪ್ಪಾಗಿ ಗುರುತಿಸಲಾಗಿತ್ತೆಂದು ವಿಶೇಷವಾಗಿ ಕೇರಳ ಸರ್ಕಾರ ಈ ಎರಡನೇ ಸಮೀಕ್ಷೆಯಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಿತ್ತು. ಆದರೆ ಕರ್ನಾಟಕ ಸರ್ಕಾರ ಮಾತ್ರ ಇಡೀ ಸಮೀಕ್ಷೆಯೇ ಅಭಿವೃದ್ಧಿ ವಿರೋಧಿಯೆಂದೂ ಇದನ್ನು ಒಪ್ಪಿಕೊಂಡರೆ ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಜನರು ರಸ್ತೆ, ನೀರು, ವಿದ್ಯುತ್ ಸೌಲಭ್ಯಗಳಿಂದ ವಂಚಿತರಾದಾರೆಂದೂ ವಾದಿಸಿ ಕಸ್ತೂರಿ ರಂಗನ್ ವರದಿಯ ಅನುಷ್ಠಾನಕ್ಕೆ ವಿರೋಧ ವ್ಯಕ್ತಪಡಿಸಿತು. ಕೇಂದ್ರ ಸರ್ಕಾರವೇನೋ ರಾಜ್ಯಗಳ ಮನವೊಲಿಸಿ ವರದಿಯ ಶಿಫಾರಸುಗಳನ್ನು ಜಾರಿಗೆ ತರಲೆಂದು ಅದಕ್ಕೆ ಸಂಬಂಧಿಸಿದ ಅಧಿಸೂಚನೆಗಳನ್ನು ಹೊರಡಿಸುವ ದಿನಾಂಕವನ್ನು ಮತ್ತೆ ಮತ್ತೆ ಮುಂದೂಡುತ್ತಲೇ ಬಂದಿತ್ತು. ಕಳೆದ ಡಿಸೆಂಬರ್‌ನಲ್ಲಿ ಅಂತಿಮ ಗಡುವು ಮುಗಿದರೂ ರಾಜ್ಯ ಸರ್ಕಾರಗಳು ಕಸ್ತೂರಿ ರಂಗನ್ ವರದಿ ಬೇಡವೇ ಬೇಡವೆಂದು ಪಟ್ಟು ಹಿಡಿದಿದ್ದರಿಂದ ಈಗ ಅನಿವಾರ್ಯವಾಗಿ ಮತ್ತೊಂದು ಅಧ್ಯಯನಕ್ಕೆಂದು ಮೂರನೆಯ ಸಮಿತಿಯ ಮೊರೆ ಹೋಗಿದೆ. ಇದು, ಪಶ್ಚಿಮಘಟ್ಟಗಳ ನಿಸರ್ಗ ಸಂಪತ್ತನ್ನು ಭವಿಷ್ಯಕ್ಕಾಗಿ ಕಾಪಾಡಿಕೊಳ್ಳಬೇಕೆಂಬ ಮೂಲ ಉದ್ದೇಶವನ್ನೇ ಇನ್ನಷ್ಟು ದುರ್ಬಲಗೊಳಿಸುವತ್ತ ಇಡುವ ಹೊಸ ಹೆಜ್ಜೆಯಾಗದಿರಲಿ.

ಪಶ್ಚಿಮಘಟ್ಟಗಳ ನಿಸರ್ಗ ಸಂಪತ್ತನ್ನು ಭವಿಷ್ಯಕ್ಕಾಗಿ ಕಾಪಾಡಿಕೊಳ್ಳಬೇಕೆಂಬ ಮೂಲ ಉದ್ದೇಶಕ್ಕೆ ಬಾಧಕ ಆಗದಿರಲಿ

ಪಶ್ಚಿಮಘಟ್ಟಗಳ ಜೀವಪರಿಸರ ಇಡೀ ಜಗತ್ತಿನ ಅಮೂಲ್ಯ ಆಸ್ತಿಯೆಂದೂ ಇಲ್ಲಿನ ದಟ್ಟ ಅರಣ್ಯ ಮತ್ತು ಗುಡ್ಡ ಕಣಿವೆಗಳು ದಕ್ಷಿಣ ಭಾರತದ ಜಲ-ವಾಯು ಸಮತೋಲನದ ಮೂಲಸೆಲೆಯೆಂದೂ ಎಂದೋ ಒಪ್ಪಿಕೊಂಡಾಗಿದೆ. ಈಗೀಗ ಬಂದೆರಗುತ್ತಿರುವ ಹವಾಗುಣ ಸಂಕಟಗಳಿಂದ ದೇಶದ ಈ ಭಾಗದ ಜೀವಸಂಕುಲಗಳನ್ನು ಪಾರುಮಾಡುವಲ್ಲಿ ಈ ಘಟ್ಟ ಪ್ರದೇಶಗಳ ಪಾತ್ರ ದಿನದಿನಕ್ಕೆ ಮಹತ್ವದ್ದಾಗುತ್ತಿದೆಯೆಂಬುದೂ ನಿರ್ವಿವಾದ. ಆದರೆ ಈಚಿನ ದಶಕಗಳಲ್ಲಿ ಇಲ್ಲಿ ಮನುಷ್ಯರ ಹೆಜ್ಜೆಗುರುತುಗಳು ದೊಡ್ಡದಾಗುತ್ತಿವೆ, ದಟ್ಟವಾಗುತ್ತಿವೆ. ಅರಣ್ಯ ಅತಿಕ್ರಮಣ, ಹೆದ್ದಾರಿ ನಿರ್ಮಾಣ, ಕಲ್ಲು-ಮರಳಿನ ಗಣಿಗಾರಿಕೆ, ನದಿತಿರುವು ಕಾಮಗಾರಿ, ಪ್ರವಾಸೋದ್ಯಮದ ವಿಸ್ತರಣೆ ಮತ್ತು ಭೋಗಸೌಲಭ್ಯಗಳ ನಿರ್ಮಾಣ ಎಲ್ಲವೂ ಹೆಚ್ಚುತ್ತಿವೆ. ಅತಿವೃಷ್ಟಿ, ಭೂಕುಸಿತ, ಮಣ್ಣಿನ ಶೀಘ್ರ ಸವಕಳಿ, ತೇವನಾಶವೇ ಮುಂತಾದ ಹವಾಗುಣ ಸಂಬಂಧಿ ಒತ್ತಡಗಳ ಜೊತೆಜೊತೆಗೇ ಬಲಾಢ್ಯರ ಪೆಟ್ಟನ್ನೂ ಸಹಿಸಿಕೊಳ್ಳಬೇಕಾದ ಇಜ್ಜೋಡಿ ಸವಾಲನ್ನು ಪಶ್ಚಿಮಘಟ್ಟಗಳು ಎದುರಿಸುತ್ತಿವೆ. 'ಇದು ನಾಳಿನ ಪೀಳಿಗೆಯ ಆಸ್ತಿ, ನಾವಿದನ್ನು ರಕ್ಷಿಸಿಡಬೇಕು' ಎಂಬ ಮನೋಭೂಮಿಕೆಯ ಬದಲು, 'ಇದು ನಮ್ಮದು, ಇದನ್ನು ಭೋಗಿಸುವ ಹಕ್ಕು ನಮಗಿರಬೇಕು' ಎಂಬ ಮನುಷ್ಯಕೇಂದ್ರಿತ ಧೋರಣೆಯೇ ಇದುವರೆಗೆ ಮೇಲುಗೈ ಪಡೆದಿದೆ. ಹೀಗಾಗಿಯೇ ಹಿಂದಿನ ಎರಡೂ ಸಮಿತಿಗಳ ವರದಿಗಳನ್ನು ಸಾಮಾನ್ಯ ಜನರಿಗೆ ಅರ್ಥವಾಗದ ಇಂಗ್ಲಿಷ್‌ನಲ್ಲೇ ಇಟ್ಟು, ಸ್ಥಳೀಯರಲ್ಲಿ ಅನಗತ್ಯ ಭಯ ಹುಟ್ಟಿಸಿ ವರದಿಗಳನ್ನೇ ಕೈಬಿಡುವಂತೆ ಮಾಡುವಲ್ಲಿ ಹೂಡಿಕೆದಾರರ ಒತ್ತಡವಿತ್ತೆಂದು ಪರಿಸರವಾದಿಗಳು ಹೇಳುತ್ತ ಬಂದಿದ್ದರು. ಆಗಿದ್ದಾಯಿತು. ಈಗ ಈ ಮೂರನೆಯ ಸಮಿತಿಯ ಶಿಫಾರಸುಗಳೂ ಹಾಗೇ ಹಳ್ಳ ಹಿಡಿಯದಂತಾಗಬೇಕು. ಅವು ಇಡೀ ಪಶ್ಚಿಮಘಟ್ಟಗಳ ಸ್ಥಳೀಯರ ಭವಿಷ್ಯದ ಹಾಗೂ ನಿಸರ್ಗದ ಹಿತ ಕಾಯುವಂತಿರಬೇಕು. ಕ್ಷಿಪ್ರ ಸಮಯಮಿತಿಯಲ್ಲಿ ವರದಿ ಅಂತಿಮ ರೂಪ ಪಡೆಯುತ್ತಲೇ ಅದು ಸ್ಥಳೀಯ ಭಾಷೆಗಳಿಗೆ ತರ್ಜುಮೆಯಾಗಿ ಗ್ರಾಮಮಟ್ಟದಲ್ಲಿ ಚರ್ಚೆಗೆ ಸಿಗುವಂತಾಗಬೇಕು. ವರದಿ ಜಾರಿಗೆ ಬರಬೇಕೆಂದು ಸ್ಥಳೀಯರೇ ಒತ್ತಾಯಿಸುವಷ್ಟರಮಟ್ಟಿಗೆ ಅದು ನಾಳಿನ ಪೀಳಿಗೆಯ ಮುಖವಾಣಿಯಾಗಬೇಕು.

ಕ್ಷುಲ್ಲಕ ಉದ್ದೇಶಕ್ಕಾಗಿ ಯಾರದೋ ತಲೆಯ ಕಸವನ್ನು ಮುಗ್ಧ ಮಕ್ಕಳ ತಲೆಗೆ ತುಂಬಬಾರದು

ಎಳೆಯ ಮನ ಅರಳಲು ಬಿಡಿ

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಪಠ್ಯಪುಸ್ತಕಗಳಲ್ಲಿ ಅಸಂಬದ್ಧ ಹಾಗೂ ವಿಕೃತ ಸೇರ್ಪಡೆಗಳು, ವಿಚಿತ್ರ ತಿದ್ದುಪಡಿಗಳ ವರದಿಗಳನ್ನು ನೋಡುತ್ತಾ, ಹಲವು ವರ್ಷ ಪಾಠ ಮಾಡಿರುವ ಮೇಡಂ ಹೇಳಿದರು: 'ಈ ಜನ ಕ್ಲಾಸ್ ರೂಮನ್ನಾಗಲೀ ಟೀಚರುಗಳನ್ನಾಗಲೀ ಮಕ್ಕಳನ್ನಾಗಲೀ ಸರಿಯಾಗಿ ನೋಡಿಯೇ ಇಲ್ಲ! ತರಗತಿಗಳಲ್ಲಿ ಯಾವ ಪಾಠ ಹೇಗೆ ಬೆಳೆಯುತ್ತದೆ, ಹೇಗೆ ತಲುಪುತ್ತದೆ ಎಂಬ ಅಂದಾಜೇ ಪಠ್ಯಪುಸ್ತಕ ರೂಪಿಸುವವರಿಗೆ ಇದ್ದಂತಿಲ್ಲ!'

ಈ ಮಾತು ಕೇಳಿದ ಹಲವು ತಲೆಮಾರುಗಳ ಗೆಳೆಯರು ತಂತಮ್ಮ ಶಾಲಾ ಪಾಠಗಳನ್ನು ನೆನೆಸಿಕೊಳ್ಳತೊಡಗಿದರು. ಕೆಲವು ಕತೆ, ಕವಿತೆಗಳು ವಿದ್ಯಾರ್ಥಿ ದೆಸೆಯಿಂದಲೂ ತಮ್ಮೊಳಗೆ ಬೆಳೆದು, ತಾವು ಬೋಧಕರಾದ ಮೇಲೆ ಇನ್ನಷ್ಟು ಬೆಳೆದಿದ್ದನ್ನು ಕಂಡ ಮೇಷ್ಟ್ರುಗಳು ಎಲ್ಲ ಕಾಲಕ್ಕೂ ಸ್ಫೂರ್ತಿ ನೀಡುವ ಪಾಠಗಳ ಮೆಲುಕು ಹಾಕತೊಡಗಿದರು. ಎಲ್ಲ ತಲೆಮಾರುಗಳಿಗೂ ಗೋವಿನ ಹಾಡಿನ ಲಯ, ನೀತಿ ಸಂದೇಶಗಳು ನೆನಪಿನಲ್ಲಿದ್ದವು. ಗೋವಿನ ಹಾಡಿನ ಕನ್ನಡ ಛಂದಸ್ಸು ಎಳೆಯ ಮನಸ್ಸುಗಳಲ್ಲಿ ಬೆಳೆದು, ಉಳಿದು ಕೋಟಿಗಟ್ಟಲೆ ಮಕ್ಕಳಲ್ಲಿ ಕಾವ್ಯದ ಲಯಗಳು ಮೊಳೆತಿವೆ; ಕವಿತೆ ಬರೆಯುವ ಆಸೆ, ಕಾತರಗಳು ಹುಟ್ಟಿವೆ. 'ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ' ಪದ್ಯ ಇತ್ತೀಚಿನ ಮಗುವಿನಲ್ಲೂ ಪ್ರಾಸದ ಮೋಹ ಹುಟ್ಟಿಸುತ್ತಿರುತ್ತದೆ. ಹುತ್ತರಿ ಹಾಡಿನ 'ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ ಅಲ್ಲೆ ಕೊಡಗರ ನಾಡಲಾ' ಗೇಯತೆ ದಶಕಗಳುದ್ದಕ್ಕೂ ಮರುದನಿಸುತ್ತಲೇ ಬಂದಿದೆ.

ತಾವು ಓದಿದ ಪಠ್ಯಗಳನ್ನು ಮುಂದೊಮ್ಮೆ ತಾವೇ ಪಾಠ ಮಾಡಿದವರಿಗಂತೂ ಕೆಲವು ಪಠ್ಯಗಳ ಎಲ್ಲ ಕಾಲದ ಮಹತ್ವ ಸ್ಪಷ್ಟವಾಗತೊಡಗಿತು. ನಾಲ್ಕನೆಯ ಕ್ಲಾಸಿನಲ್ಲಿ 'ಮೂಡುವನು ರವಿ ಮೂಡುವನು, ಕತ್ತಲೊಡನೆ ಜಗಳಾಡುವನು' ಬಣ್ಣನೆಗೆ ಬೆರಗಾಗಿದ್ದ ವಿದ್ಯಾರ್ಥಿಯೊಬ್ಬ ಮುಂದೆ ಮೇಷ್ಟರಾದಾಗ, ಕತ್ತಲೊಡನೆ ಸೂರ್ಯ ಜಗಳಾಡುವ ಚಿತ್ರ ತನ್ನ ವಿದ್ಯಾರ್ಥಿಗಳಲ್ಲೂ ಅಂಥದೇ ಪುಳಕ ಹುಟ್ಟಿಸಿದ್ದನ್ನು ಕಂಡ. ಅದೇ ಶಾಲೆಯಲ್ಲಿ 'ಸಾಲೊಮನ್ ಗ್ರಂಡಿ, ಬಾರ್ನ್ ಆನ್ ಎ ಮಂಡೇ' ಇಂಗ್ಲಿಷ್ ಶಿಶುಗೀತ ಸಂಡೇ, ಮಂಡೇಗಳನ್ನು ಹೇಳಿಕೊಟ್ಟ ಪರಿಗೆ ಮಕ್ಕಳು ಅರಳಿದ್ದಾರೆ; 'ಮಾಲ್ಗುಡಿ ಡೇಸ್'ನ ಸ್ವಾಮಿಯ ಗೊಂದಲ, ಸಂಭ್ರಮಗಳು ತಮ್ಮವೇ ಎಂಬಂತೆ ಮಿಡಿದಿದ್ದಾರೆ; ಹಿಮಾಲಯ ಕುರಿತ ಪಾಠ ಹಳೆಯ ಕಗ್ಗಗಳನ್ನೆಲ್ಲ ಸರಿಸಿ, ವಾಸ್ತವದ ಹಿಮಾಲಯವನ್ನು ಕಾಣಿಸಿದಾಗ ಹೊಸ ಲೋಕ ಕಂಡಂತೆ ಪುಳಕಗೊಂಡಿದ್ದಾರೆ.

ಹೀಗೆ ಮಕ್ಕಳ ಮನಸ್ಸನ್ನು ಹದಗೊಳಿಸುವ, ಮುದಗೊಳಿಸುವ ಪ್ರಾಥಮಿಕ ಕೆಲಸವನ್ನು ಪಠ್ಯಗಳು ಮಾಡುತ್ತಿರಲೇಬೇಕು. ಆದ್ದರಿಂದಲೇ ಪಠ್ಯಪುಸ್ತಕ ರೂಪಿಸುವವರಿಗೆ ಭಾಷೆ, ಸಾಹಿತ್ಯ ಹಾಗೂ ವಿವಿಧ ಜ್ಞಾನ ಕ್ಷೇತ್ರಗಳ ಆಳವಾದ ಜ್ಞಾನವಿರಲೇಬೇಕು. ಪಠ್ಯಗಳ ಉತ್ತಮ ಪರಿಣಾಮಗಳ ಬಗ್ಗೆ ಮಾತ್ರ ಗಮನವಿರಬೇಕು. ಲವಲವಿಕೆ ತುಂಬುವ ಕತೆ, ಕವಿತೆಗಳು, ಹುಮ್ಮಸ್ಸು ತುಂಬುವ ಚರಿತ್ರೆಯ ಪಾಠಗಳು ಆನಂತರದ ಪೀರಿಯಡ್ಡುಗಳಲ್ಲಿ ಕಠಿಣವಾದ ವಿಜ್ಞಾನ, ಗಣಿತ ಪಾಠಗಳಿಗೆ ಮಕ್ಕಳು ಸಹಜವಾಗಿ ಸಜ್ಜಾಗುವಂತೆ ಮಾಡುತ್ತವೆ.

ಪಠ್ಯಪುಸ್ತಕಗಳು ಮಕ್ಕಳ ಮನಸ್ಸನ್ನು, ಅಭಿರುಚಿಯನ್ನು ಸದಾ ತಿದ್ದುತ್ತಿರಬೇಕು. ಹಿರಿಯರಿಂದಾಗಿಯೂ ಮಕ್ಕಳಲ್ಲಿ ಮೊಳೆಯುವ ಭೇದಭಾವಗಳನ್ನು ತೊಡೆಯುತ್ತಿರಬೇಕು. ಆರನೆಯ ತರಗತಿಯಲ್ಲಿ ಓದಿದ ಭಾರತೀಪ್ರಿಯರ 'ಮೋಚಿ' ಕತೆ ನನ್ನಂಥವರಲ್ಲಿ ಜಾತಿ ಮೀರಿದ ಸಂಬಂಧಗಳ ಬಗ್ಗೆ ಅರಿವು ಮೂಡಿಸಿದ್ದು ನೆನಪಾಗುತ್ತದೆ. 'ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ' ಎಂಬ ಹಳಗನ್ನಡದ ಬಣ್ಣನೆ ಈ ಕಾಲದ ಮಕ್ಕಳಿಗೂ ಪ್ರಿಯವಾಗುತ್ತಿದೆ. ಹತ್ತನೆಯ ತರಗತಿಯಲ್ಲಿ ಕನ್ನಡ ಮೇಷ್ಟ್ರು 'ಕೂಡಲ ಸಂಗಮದೇವಾ, ನಿನ್ನ ಚರಣ ಕಮಲದೊಳಗಾನು ತುಂಬಿ' ಎಂದು ಚಣ ನಿಲ್ಲಿಸಿ, 'ತುಂಬಿ' ಎಂಬ ಪದಕ್ಕೆ 'ದುಂಬಿ' ಹಾಗೂ 'ತುಂಬುವುದು' ಎಂಬ ಎರಡು ಅರ್ಥ ಹೇಳಿ, ನಮ್ಮನ್ನೆಲ್ಲ ಅಚ್ಚರಿಗೊಳಿಸಿದ್ದರು. ಅಂದಿನಿಂದ ಕಾವ್ಯದ ಮಾಂತ್ರಿಕ ಸಾಧ್ಯತೆಗಳು ನಮ್ಮೊಳಗೆ ಬೆಳೆಯತೊಡಗಿದವು. ಹಾಡುವ ಮೇಡಂ, ಮೇಷ್ಟ್ರುಗಳಂತೂ ಕವಿತೆಗಳನ್ನು ಕಾಯಮ್ಮಾಗಿ ಮಕ್ಕಳ ನೆನಪಿನಲ್ಲಿ ಉಳಿಸಿದ್ದಾರೆ. 'ಬಾರಿಸು ಕನ್ನಡ ಡಿಂಡಿಮವ' ಓದಿ, ಹಾಡಿ, ಕುಣಿದ ಮಕ್ಕಳು, ಮೇಷ್ಟ್ರುಗಳಿದ್ದಾರೆ. 'ಡೊಂಕು ಬಾಲದ ನಾಯಕರೇ' ಹಾಡಿಗೆ ಮಕ್ಕಳು ಬಿದ್ದು ಬಿದ್ದು ನಕ್ಕಿದ್ದಾರೆ.

ಹಾಗೆಯೇ, ವಿಜಯನಗರ ಸಾಮ್ರಾಜ್ಯದ ಚರಿತ್ರೆ ಹಾಗೂ ಟಿಪ್ಪು ಸುಲ್ತಾನ್ ಚರಿತ್ರೆ ಎರಡನ್ನೂ ಮಕ್ಕಳು ಹಲವು ದಶಕಗಳಿಂದ ಇಷ್ಟಪಡುತ್ತಾ ಬಂದಿದ್ದಾರೆ. ಚರಿತ್ರೆಯ ಪಠ್ಯದ ಮಾಹಿತಿಗಳಂತೂ ಶ್ರೇಷ್ಠ ಇತಿಹಾಸತಜ್ಞರಿಂದ ಸಾಧಾರವೆಂದು ಸಿದ್ಧವಾಗಿರಬೇಕು; ಅಧಿಕೃತವಾಗಿರಬೇಕು. ಚರಿತ್ರೆಯ ಹೆಸರಿನಲ್ಲಿ ಅಸಂಬದ್ಧವಾದ ಹುಸಿ ಅಂಶಗಳನ್ನು ತುರುಕಿದರೆ ಕರ್ನಾಟಕದ ಮಕ್ಕಳು ಸಾಮಾನ್ಯ ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಹಿಡಿದು ಕೆಎಎಸ್, ಐಎಎಸ್ ಪರೀಕ್ಷೆಗಳವರೆಗೂ ಅಂಕಗಳನ್ನು ಕಳೆದುಕೊಳ್ಳುತ್ತಾರೆ. ವಿಜ್ಞಾನ ಪಠ್ಯದಂತೆಯೇ ಯಾವುದೇ ಪಠ್ಯದಲ್ಲಿ ಸೇರಿಸಬೇಕಾದ ಹೊಸ ವಿವರಗಳು ಅಧಿಕೃತ ಸಂಶೋಧನೆಗಳನ್ನಷ್ಟೇ ಆಧರಿಸಿರಬೇಕು.

ಪ್ರತಿವರ್ಷ ಪಠ್ಯಗಳನ್ನು ಕುರಿತು ಬೋಧಕ, ಬೋಧಕಿಯರ, ಮಕ್ಕಳ, ಪೋಷಕರ ಸ್ವತಂತ್ರ ಅಭಿಪ್ರಾಯಗಳನ್ನು ತಪ್ಪದೇ ದಾಖಲಿಸುತ್ತಿರಬೇಕು. ಹಿಂದೆಲ್ಲ ಸಾರ್ವಜನಿಕ ಶಿಕ್ಷಣ ಇಲಾಖೆಯ ಹೊಣೆಯರಿತ ಅಧಿಕಾರಿಗಳು ಈ ಕೆಲಸವನ್ನು ಅಪಾರ ಶ್ರದ್ಧೆಯಿಂದ ಮಾಡುತ್ತಿದ್ದರು. ಎಲ್ಲರ ಅಭಿಪ್ರಾಯಗಳನ್ನು ಒಗ್ಗೂಡಿಸಿ ತಜ್ಞರ ಸಮಿತಿಯ ಮುಂದಿಟ್ಟು ಪಠ್ಯಗಳನ್ನು ಮರುಪರಿಶೀಲಿಸಲು ಅನುವು ಮಾಡಿಕೊಡುತ್ತಿದ್ದರು. ಹಿಂದೊಮ್ಮೆ, ಮೊದಲನೆಯ ಪಿಯುಸಿ ಓದುತ್ತಿದ್ದ ಜಾಣ ಹುಡುಗಿಯೊಬ್ಬಳ ಅಭಿಪ್ರಾಯ ಕೇಳಿದ ಮೇಲೆ, ಎರಡನೇ ಪಿಯುಸಿಯ ಇಂಗ್ಲಿಷ್ ಪಠ್ಯಕ್ಕೆ ಷೇಕ್‌ಸ್ಪಿಯರ್‌ನ ಲವಲವಿಕೆಯ ಪಠ್ಯಭಾಗವನ್ನೂ ಪುಸ್ತಕಗಳ ಮಹತ್ವ ಕುರಿತು ಪ್ರಖ್ಯಾತ ಲೇಖಕ ಬೋರ್ಹೆಸ್ ಸಂದರ್ಶನವನ್ನೂ ಸೇರಿಸಲು ನಾನೇ ಪಠ್ಯಪುಸ್ತಕ ಸಮಿತಿಗೆ ಸಲಹೆ ಕೊಟ್ಟಿದ್ದು ನೆನಪಾಗುತ್ತದೆ. ಪಠ್ಯವೊಂದು ಮಕ್ಕಳ ಮನೋಲೋಕಕ್ಕೆ ಉತ್ತಮವಾದ, ಆರೋಗ್ಯಕರವಾದ ಹೊಸ ಜ್ಞಾನವನ್ನು ಸೇರಿಸುತ್ತಿರಬೇಕು ಎಂಬ ಪ್ರಜ್ಞೆ ತಜ್ಞರಿಗಿರಬೇಕು. ಈ ದೃಷ್ಟಿಯಿಂದ ಪಠ್ಯಪುಸ್ತಕ ರೂಪಿಸುವವರು ಸದಾ ನೆನಪಿಡಬೇಕಾದ ಕೆಲವು ಅಂಶಗಳನ್ನು ಪಟ್ಟಿ ಮಾಡಬಹುದು:

ಪಠ್ಯಗಳು ಪಾಠ ಮಾಡುವವರಲ್ಲೂ ಮಕ್ಕಳಲ್ಲೂ ನವಚೈತನ್ಯ ಹುಟ್ಟಿಸುತ್ತಿರಬೇಕು. ಬೋಧನೆಯ ಸಂದರ್ಭದಲ್ಲಿ ಒಳ್ಳೊಳ್ಳೆಯ ವ್ಯಾಖ್ಯಾನಗಳನ್ನು ಮೂಡಿಸಬಲ್ಲ ಪಠ್ಯಗಳಿರಬೇಕು. ಭಾಷೆಯನ್ನು ದಕ್ಷವಾಗಿ, ಸೃಜನಶೀಲವಾಗಿ ಬಳಸಿರಬೇಕು. ವಿದ್ಯಾರ್ಥಿಗಳಲ್ಲಿ ಓದುವ, ಬರೆಯುವ ಆಸೆ, ಸಾಧ್ಯತೆಗಳನ್ನು ಮೂಡಿಸುವಂತಿರಬೇಕು. ಪದ್ಯ, ಗದ್ಯಗಳ ಅನುಕರಣೆಯನ್ನಾದರೂ ಮಾಡಿ ಮಕ್ಕಳು ಬರವಣಿಗೆ ಕಲಿಯುವಂತಿರಬೇಕು. ಎರಡು, ಮೂರು ಭಾಷೆಗಳನ್ನು ಬಲ್ಲ ಮಕ್ಕಳು ಪಠ್ಯಗಳನ್ನು ಅನುವಾದಿಸಲು ಆಹ್ವಾನಿಸುವಂತಿರಬೇಕು. ಮನೆಮಂದಿಯ ಜೊತೆ ಹಂಚಿಕೊಳ್ಳುವಂಥ ಕುತೂಹಲಕರ, ಆರೋಗ್ಯಕರ ಸಂಗತಿಗಳು ಪಠ್ಯದಲ್ಲಿರಬೇಕು. ಮೈ-ಮನಗಳ ಆರೋಗ್ಯಕ್ಕೆ ಸಂಬಂಧಿಸಿದ ಪಾಠಗಳಿರಬೇಕು. ಮಕ್ಕಳಲ್ಲಿ ವಿಮರ್ಶಾ ಪ್ರಜ್ಞೆಯನ್ನು, ಸಮಾನತೆಯ ಪ್ರಜ್ಞೆಯನ್ನು, ಉದಾರ ಮನೋಭಾವವನ್ನು ಬೆಳೆಸುವಂತಿರಬೇಕು.

ಇಂಥ ಉತ್ತಮ ಗುರಿಗಳನ್ನು ತಲುಪಬೇಕೆಂದರೆ ಆಯಾ ಕ್ಷೇತ್ರಗಳಲ್ಲಿ ಹಲವು ವರ್ಷ ಕೆಲಸ ಮಾಡಿರುವ ಆರೋಗ್ಯಕರ ಮನಸ್ಸಿನ ವಿಷಯತಜ್ಞರು ಪಠ್ಯಪುಸ್ತಕಗಳನ್ನು ರೂಪಿಸಬೇಕು. ಸಮಿತಿಗಳಲ್ಲಿ ವೈವಿಧ್ಯಮಯ ಸಾಮಾಜಿಕ ವರ್ಗಗಳನ್ನು ಪ್ರತಿನಿಧಿಸುವ ವಿಷಯತಜ್ಞ-ತಜ್ಞೆಯರಿರಬೇಕು. ಎಲ್ಲ ಪಠ್ಯಗಳಲ್ಲೂ ಹಿರಿಯರ ಶ್ರೇಷ್ಠ ಕೃತಿಗಳ ಭಾಗಗಳಿರಲೇಬೇಕು; ಹೊಸ ತಲೆಮಾರುಗಳ ಉತ್ತಮ ಬರಹಗಳಿರಬೇಕು. ಕರ್ನಾಟಕದ ಬಹುತೇಕ ಮಕ್ಕಳು, ಅದರಲ್ಲೂ ಬಡ ಮಕ್ಕಳು ಓದುತ್ತಿರುವ ಸರ್ಕಾರಿ, ಅನುದಾನಿತ ಶಾಲೆಗಳ ಪಠ್ಯಗಳಲ್ಲಿ ವಿಷ ಬೆರೆಸಿ ತಲೆಮಾರುಗಳನ್ನು ಕೊಲ್ಲುವುದು ಹೀನ ಕೆಲಸ. ಪಠ್ಯಪುಸ್ತಕಗಳು ವಿಕೃತ ಸಿದ್ಧಾಂತಗಳ ಸಂಕುಚಿತತೆ ಮೀರುವ, ವಿಶಾಲ ಮನಸ್ಸನ್ನು ಬೆಳೆಸುವ ತಾಣಗಳಾಗಬೇಕು.

ಕನ್ನಡ ಮಕ್ಕಳ ಇಂಥ ಜೀವನ್ಮರಣದ ಪ್ರಶ್ನೆಗಳ ಕುರಿತು ಗಂಭೀರವಾಗಿ ಯೋಚಿಸಬೇಕಾಗಿರುವುದು ಯಾವುದೇ ಜವಾಬ್ದಾರಿಯುತ ಸರ್ಕಾರದ ಆದ್ಯ ಕರ್ತವ್ಯ. ಕೊನೇಪಕ್ಷ ಮುಖ್ಯಮಂತ್ರಿ, ಮಂತ್ರಿಗಳು, ಶಾಸಕರು ತಾವು ಶಾಲೆಗಳಲ್ಲಿ ಓದಿರಬಹುದಾದ ಒಳ್ಳೆಯ ಪಠ್ಯಗಳನ್ನಾದರೂ ನೆನೆದು, ಆತ್ಮಾವಲೋಕನ ಮಾಡಿಕೊಂಡು ಮುಂದಿನ ಹೆಜ್ಜೆ ಇಡಬೇಕಾದುದು ಇಂದಿನ ತುರ್ತು ಅಗತ್ಯವಾಗಿದೆ.





ತುಪ್ಪ ಮತ್ತು ನೊಣ

• ಆನಂದ

'ಆತ್ಮಸಾಕ್ಷಿ ಅಂದರೇನು ಸಾ?' ಎಂದು ಕೇಳಿದ ಗೆಳೆಯ. ಅವನಿಗೆ ಡೌಟ್ ಬಂದಾಗಲೆಲ್ಲ ನನ್ನ ಬಳಿ ಬರ್ತಾನೆ. ನಂತರ ಅವನ ಡೌಟು ಬಗೆಹರಿಯುತ್ತೋ ಅಥವಾ ಹೆಚ್ಚಾಗುತ್ತೋ ಗೊತ್ತಿಲ್ಲ.

'ಅದು ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ' ಎಂದೆ.

'ಸರಿಯಾಗಿ ಹೇಳಿ ದೇವ್ರೂ...'

'ನೋಡು, ತುಪ್ಪದ ಜಾಡೀಲಿ ನೊಣ ಬಿದ್ದರೆ ನೊಣ ಎಸೀತಿಯ. ನೀರಿನ ಲೋಟದಲ್ಲಿ ನೊಣ ಬಿದ್ದರೆ ನೀರನ್ನು ಎಸೀತಿಯ, ಹಾಗೇ ಇದು. ಆತ್ಮಸಾಕ್ಷಿ ಸಹ ಪರಿಸ್ಥಿತಿ ನೋಡಿಕೊಂಡು ಚಲಾಯಿಸಬೇಕು'.

'ಅಂದರೆ ನೀವು ಹೇಳೋದು ಮೊನ್ನೆ ನಡೆದ ರಾಜ್ಯಸಭೆ ಚುನಾವಣೇಲಿ ಜೆಡಿಎಸ್‌ನೋರು ಕಾಂಗ್ರೆಸ್ ಪರ ಮತ ಚಲಾಯಿಸಿದ್ದಿದ್ದರೆ ಅದು ಆತ್ಮಸಾಕ್ಷಿ ಮತ ಅಗ್ತಿತ್ತು... ಆದರೆ ಅದು ಯಾರ ಆತ್ಮಸಾಕ್ಷಿ ಸಾರೂ...' ಎಂದಾಗ ನನಗೆ ಗೊಂದಲವಾಯಿತು. ಹೌದು ಅದು ಯಾರ ಆತ್ಮಸಾಕ್ಷಿ? ಕಾಂಗ್ರೆಸ್ ಆತ್ಮಸಾಕ್ಷಿಯೋ ಅಥವಾ ಜೆಡಿಎಸ್ ಆತ್ಮಸಾಕ್ಷಿಯೋ?

'ಅಲ್ಲಾ ದೇವ್ರೂ. ನಾನು ಬೇರೆಯವರ ಮಾತು ಕೇಳಿ ಕೆಲಸ ಮಾಡಿದರೆ ಅದು ನನ್ನ ಆತ್ಮಸಾಕ್ಷಿ ಹೆಂಗಾಗುತ್ತದೆ? ಆಗ ಅವರ ಆತ್ಮಸಾಕ್ಷಿ ಪರ ನಾನು ಮಾಡಿದ ಕೆಲಸವಾಗುತ್ತದೆ ಅಲ್ವೇ?' ನನ್ನದು ನಿರುತ್ತರ.

'ಹೇಳಿ ದೇವ್ರೂ... ನನ್ನ ಆತ್ಮಸಾಕ್ಷಿ ನನ್ನ ಪಕ್ಷದ ಪರವಾಗಿರಬೇಕು. ಅಲ್ವೋ? ಅದು ಬಿಟ್ಟು ಇನ್ನೊಬ್ಬರ ಆತ್ಮಸಾಕ್ಷೀನ ಎರವಲು ತಂದುಕೊಳ್ಳೋಕೆ ಆಗುತ್ತೇನು? ಈಗ ಅದೇ ರೀತಿ ಕಾಂಗ್ರೆಸ್‌ನ ಕೆಲವು ಮಂದಿ ತಮ್ಮ ಆತ್ಮಸಾಕ್ಷಿ ಚಲಾಯಿಸಿ ಜೆಡಿಎಸ್‌ಗೆ ಮತ ಚಲಾಯಿಸಿದಾಗ ಆಕ್ಷೇಪ ಮಾಡಿದ್ದಿದ್ದರೆ ಅದಕ್ಕೇನು ಬೆಲೆ ಇರ್ತಿತ್ತು? ಇಂದಿರಾ ಮೇಡಂ ತಮ್ಮ ಕಾಲದಲ್ಲಿ ವಿ.ವಿ.ಗಿರಿ ಅವರನ್ನು ರಾಷ್ಟ್ರಪತಿ ಮಾಡೋದಿಕ್ಕೆ ಈ ಆತ್ಮಸಾಕ್ಷಿ ಮತ ಚಲಾವಣೆಗೆ ತಂದರು. ಅಂದಿನಿಂದ ಪರಿಸ್ಥಿತಿಗೆ ತಕ್ಕಂತೆ ರಾಜಕಾರಣಿಗಳು ಬಳಸ್ತಿದ್ದಾರೆ ದೇವ್ರೂ' ಎಂದ.

'ಯು ಹ್ಯಾವ್ ಎ ಪಾಯಿಂಟ್' ಎಂದೆ ಸಣ್ಣ ಧ್ವನಿಯಲ್ಲಿ. ತುಪ್ಪ- ನೊಣ ಕತೆ ನೆನಪಿಸಿಕೊಂಡೆ. ಶಿಷ್ಯ ಗುರುವನ್ನು ಓವರ್‌ಟೇಕ್ ಮಾಡಿದ್ದ.

ದಿನದ ಟ್ವೀಟ್

ಡಿಜಿಟಲ್ ಕ್ರಾಂತಿ

ವಿಶ್ವದಲ್ಲಿಯೇ ಎರಡನೇ ಅತಿಹೆಚ್ಚು ಮೌಲ್ಯ ಇರುವ ಕ್ರೀಡಾ ಲೀಗ್ ಆಗಿ ಇಂಡಿಯನ್ ಪ್ರೀಮಿಯರ್ ಲೀಗ್ ಹೊರಹೊಮ್ಮಿದೆ. ವಯಾಕಾಮ್ 18 ಸಂಸ್ಥೆಯು ಡಿಜಿಟಲ್ ಪ್ರಸಾರ ಹಕ್ಕುಗಳನ್ನು ಒಟ್ಟು ₹ 23,758 ಕೋಟಿಗೆ ಗೆದ್ದುಕೊಂಡಿದೆ. ಭಾರತದಲ್ಲಿ ಡಿಜಿಟಲ್ ಕ್ರಾಂತಿ ಆಗಿದೆ. ಈ ಕ್ಷೇತ್ರವು ಅಪರಿಮಿತ ಸಾಮರ್ಥ್ಯ ಹೊಂದಿದೆ.

ಜಯ್ ಶಾ, ಕಾರ್ಯದರ್ಶಿ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ

ಕಿಡಿನುಡಿ

ಜಾರಿ ನಿರ್ದೇಶನಾಲಯವು ರಾಹುಲ್ ಗಾಂಧಿ ಅವರ ವಿಚಾರಣೆಯಲ್ಲಿ ಬ್ಯುಸಿಯಾಗಿದೆ. ಮಮತಾ ಬ್ಯಾನರ್ಜಿ ಅವರ ಸೋದರಳಿಯನಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸಿಬಿಐ ಮುಳುಗಿಹೋಗಿದೆ. ರಾಷ್ಟ್ರಪತಿ ಹುದ್ದೆಗೆ ಶರದ್ ಪವಾರ್ ಅವರ ಪರವಾಗಿ ವಿರೋಧ ಪಕ್ಷಗಳು ಒಗ್ಗೂಡುತ್ತಿರುವಂತೆಯೇ ಎನ್‌ಸಿಪಿ ಸಹ ಅವರ ಕಣ್ಣಿಗೆ ಬಿದ್ದಿದೆ. ಕಾನೂನು ಉಲ್ಲಂಘಿಸುವ ಸಾಮಾನ್ಯ ವ್ಯಕ್ತಿಗಳ ಬಗ್ಗೆ ಗಮನಹರಿಸಲು ಅವರಿಗೆ ಸಮಯವಿದೆಯೇ?

ಕೆ.ಸಿ.ಸಿಂಗ್, ನಿವೃತ್ತ ರಾಜತಾಂತ್ರಿಕ ಅಧಿಕಾರಿ

25 ವರ್ಷಗಳ ಹಿಂದೆ

ಭಾನುವಾರ, 15-6-1997

• **ಪಠ್ಯಪುಸ್ತಕ ಬಿಕ್ಕಟ್ಟು**

ಬೆಂಗಳೂರು, ಜೂನ್ 14– ರಾಜ್ಯದ ಎಲ್ಲೆಡೆ ಪಠ್ಯಪುಸ್ತಕಗಳ ಕೊರತೆ ಕಂಡುಬಂದಿದ್ದು, ಪ್ರಕಾಶಕರು ಮತ್ತು ಚಿಲ್ಲರೆ ಮಾರಾಟಗಾರರ ನಡುವೆ ಉಂಟಾಗಿರುವ 'ಸಾಮರಸ್ಯ'ದ ಕೊರತೆಯೇ ಈ ಸಮಸ್ಯೆಗೆ ಕಾರಣ ಎನ್ನಲಾಗಿದೆ.

ಪ್ರಸಕ್ತ ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಹನ್ನೆರಡು ದಿನಗಳೇ ಕಳೆದಿವೆ. ಶಾಲೆಗಳಲ್ಲಿ ಪಾಠ ಪ್ರವಚನಗಳು ಆರಂಭವಾಗಿವೆ. ಆದರೆ ಪಠ್ಯಪುಸ್ತಕಗಳಿಗಾಗಿ ಪೋಷಕರ, ವಿದ್ಯಾರ್ಥಿಗಳ ಅಲೆದಾಟ ಮಾತ್ರ ಇನ್ನೂ ತಪ್ಪಿಲ್ಲ. ಪಠ್ಯಪುಸ್ತಕಗಳ ಕೊರತೆ ರಾಜ್ಯದಾದ್ಯಂತ ಪೋಷಕರು, ವಿದ್ಯಾರ್ಥಿಗಳನ್ನು ತುದಿಗಾಲಲ್ಲಿ ನಿಲ್ಲಿಸಿದೆ.

• **ಪರಿಶಿಷ್ಟರಿಗೆ ಬಡ್ತಿ ಮೀಸಲು ಮುಂದುವರಿಸಲು ನಿರ್ಧಾರ**

ಚೆನ್ನೈ, ಜೂನ್ 14 (ಪಿಟಿಐ)- ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಕೇಂದ್ರ ಸರ್ಕಾರಿ ಉದ್ಯೋಗಿಗಳಿಗೆ ಬಡ್ತಿಯಲ್ಲಿ ಮೀಸಲು ಒದಗಿಸುವ ನೀತಿಯನ್ನು ಮುಂದುವರಿಸುವಂತೆ ಎಲ್ಲ ಇಲಾಖೆಗಳಿಗೂ ಸರ್ಕಾರವು ಆದೇಶ ನೀಡಿದೆ ಎಂದು ಕೇಂದ್ರ ಸರ್ಕಾರದ ಸಿಬ್ಬಂದಿ ಹಾಗೂ ಸಾರ್ವಜನಿಕ ದೂರು ಖಾತೆಯ ರಾಜ್ಯ ಸಚಿವ ಎಸ್.ಆರ್. ಬಾಲಸುಬ್ರಮಣ್ಯಂ ಇಂದು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 15-6-1972

• **ಭಾರತಕ್ಕೆ ಅಭಿವೃದ್ಧಿಯೇ ಮುಖ್ಯ: ಇಂದಿರಾ ಗಾಂಧಿ**

ಸ್ಟಾಕ್ ಹೋಂ, ಜೂನ್ 14– ವಿಶ್ವದ ಜನಸಂಖ್ಯೆಯಲ್ಲಿ ಆರನೇ ಒಂದು ಭಾಗಕ್ಕೆ ಉತ್ತಮ ಜೀವನ ಒದಗಿಸಬೇಕಾದರೆ ಭಾರತ ತನ್ನ ಕೈಗಾರಿಕೆ ಅಭಿವೃದ್ಧಿಪಡಿಸಿಕೊಳ್ಳುವುದನ್ನು ಮುಂದುವರಿಸಲೇಬೇಕು ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ತಿಳಿಸಿದರು.

ಮಾನವ ಪರಿಸರ ಕುರಿತ ವಿಶ್ವಸಂಸ್ಥೆ ಸಮ್ಮೇಳನದಲ್ಲಿ ಮಾತನಾಡುತ್ತಿದ್ದ ಅವರು, ಅಭಿವೃದ್ಧಿಯು ಪರಿಸರಕ್ಕೆ ಹಾನಿಯುಂಟು ಮಾಡುವಂತಹದು ಎಂದು ಸಿರಿವಂತ ರಾಷ್ಟ್ರಗಳು ಭಾವಿಸಿರಬಹುದು. ಆದರೆ ಭಾರತಕ್ಕೆ ಅಭಿವೃದ್ಧಿಯೇ ಮುಖ್ಯ ಅಗತ್ಯ ಎಂದು ಹೇಳಿದರು.

• **ದೆಹಲಿಯ ಬಳಿ ವಿಮಾನ ದುರಂತ: 83 ಮಂದಿ ಸಾವು**

ನವದೆಹಲಿ, ಜೂನ್ 14– ಜಪಾನಿನ ವಿಮಾನವೊಂದು ಹರಿಯಾಣ ಗಡಿಯ ಬದರಪುರದ ಬಳಿ ಈ ರಾತ್ರಿ ಅಪಘಾತಕ್ಕೀಡಾಗಿ ಅದರಲ್ಲಿದ್ದ 89 ಮಂದಿ ಪ್ರಯಾಣಿಕರ ಪೈಕಿ 83 ಮಂದಿ ಸತ್ತು, ಇತರ 6 ಮಂದಿ ಗಾಯಗೊಂಡಿದ್ದಾರೆ.

ಟೋಕಿಯೊದಿಂದ ಲಂಡನ್ನಿಗೆ ಹೋಗುವ ಮಾರ್ಗದಲ್ಲಿದ್ದ ಈ ವಿಮಾನವು ಇಲ್ಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಇಳಿಯುವ ನಿಮಿಷಗಳ ಮುನ್ನ ಅಪಘಾತಕ್ಕೀಡಾಗಿ ಬೆಂಕಿ ಹೊತ್ತಿಕೊಂಡಿತು.

ಸಂಗತ

ಸಿದ್ಧಿಸಲಿ ಸಲ್ಲುವುದ ಹಂಚುವ ಬುದ್ಧಿ

ಕೆಲವರು ತಮಗೆ ಬೇಡವಾದದ್ದನ್ನು ಹಂಚುವುದರ ಜೊತೆಗೆ ಅದನ್ನೊಂದು ಮಹಾನ್ ದಾನ, ಶ್ರೇಷ್ಠತಮ ಗುಣವೆಂದು ಬಿಂಬಿಸಿಕೊಳ್ಳುವುದು ವಿಪರ್ಯಾಸ

• ಸದಾಶಿವ್ ಸೊರಟೂರು

ಮೊನ್ನೆ ತರಗತಿಯಲ್ಲಿ ಪಾಠ ಹೇಳುತ್ತಿದ್ದಾಗ ಪಾಠದ ನಡುವೆ ಮಕ್ಕಳಿಗೆ ಒಂದು ಪ್ರಶ್ನೆ ಕೇಳಿದೆ: 'ನೀವು ಪರೀಕ್ಷೆ ಬರೆಯುತ್ತಿದ್ದೀರಿ ಎಂದು ಭಾವಿಸಿಕೊಳ್ಳಿ. ನಿಮ್ಮ ಬಳಿ ಎರಡು ಪೆನ್ನುಗಳಿವೆ. ಒಂದರಲ್ಲಿ ಬರೆಯುತ್ತಿದ್ದೀರಿ, ಇನ್ನೊಂದನ್ನು ಸುಮ್ಮನೆ ಹಾಗೇ ಜೊತೆಯಲ್ಲಿ ಇಟ್ಟುಕೊಂಡಿದ್ದೀರಿ. ಪಕ್ಕದಲ್ಲಿನ ನಿಮ್ಮ ಸ್ನೇಹಿತನಿಗೆ ಅವನು ಬರೆಯುತ್ತಿದ್ದ ಪೆನ್ನು ಅಚಾನಕ್ಕಾಗಿ ಕೈಕೊಡುತ್ತದೆ. ಅವನ ಬಳಿ ಮತ್ತೊಂದು ಪೆನ್ನಿಲ್ಲ. ಕಂಗಾಲಾಗಿ ಕೂತಿದ್ದಾನೆ. ನಿಮ್ಮ ಕಡೆ ನೋಡುತ್ತಾನೆ. ಅವನಿಗೆ ಕೇಳಲು ಮುಜುಗರ. ಆಗ ನೀವೇನು ಮಾಡುತ್ತೀರಿ?' ಎಂದು ಕೇಳಿದೆ.

ಎಲ್ಲರೂ ನೀಡಿದ ಉತ್ತರ ಒಂದೇ ಆಗಿತ್ತು. 'ಸರ್, ನನ್ನ ಬಳಿಯಿರುವ ಇನ್ನೊಂದು ಪೆನ್ನನ್ನು ಅವನಿಗೆ ನೀಡುತ್ತೇನೆ' ಅಂದರು. ತಾವು ಒಳ್ಳೆಯ ಉತ್ತರ ಕೊಟ್ಟಿದ್ದೇವೆ ಎಂಬ ಸಮಾಧಾನದಲ್ಲಿದ್ದರು.

'ನೀವ್ಯಾಕೆ ಈಗಾಗಲೇ ಬರೆಯುತ್ತಿರುವ ಪೆನ್ನನ್ನೇ ಗೆಳೆಯನಿಗೆ ನೀಡಿ, ನಿಮ್ಮ ಬಳಿಯಿರುವ ಇನ್ನೊಂದು ಪೆನ್ನಿನಲ್ಲಿ ಬರೆಯಬಾರದು? ನಿಮ್ಮ ಎರಡು ಪೆನ್ನಿನಲ್ಲಿ ಉತ್ತಮವಾದದ್ದರಲ್ಲಿ ಬರೆಯುತ್ತಿದ್ದೀರಿ. ಅದು ಕೈಕೊಟ್ಟರೆ ಮಾತ್ರ ಅನಿವಾರ್ಯಕ್ಕೆ ಅಂತ ಆ ಮತ್ತೊಂದು ಪೆನ್ನಿದೆ. ಪಕ್ಕದವನು ಬೇಕಾದರೆ ಅನಿವಾರ್ಯದ ಪೆನ್ನಿನಲ್ಲಿ ಬರೆದುಕೊಳ್ಳಲಿ ನಾನು ಮಾತ್ರ ಚೆನ್ನಾಗಿರೋ ಪೆನ್ನಿನಲ್ಲಿ ಬರೆಯುವೆ ಅನ್ನುವ ಮನೋಭಾವ ತಾನೇ?' ಎಂದೆ. ಇಡೀ ತರಗತಿ ಮೌನವಾಗಿತ್ತು. ಮಾನವರು ಕಲಿತಿರುವ ಒಂದು ವಿಚಿತ್ರಗುಣದ ಭಾಗವಾಗಿ ಮಕ್ಕಳು ಉತ್ತರಿಸಿದ್ದರು.

ತನಗೆ ಬೇಡವಾದದ್ದನ್ನು, ಬಳಸಿ ಸಾಕಾಗಿದ್ದನ್ನು, ತನ್ನಲ್ಲಿ ಇನ್ನೂ ಹೆಚ್ಚಾಗಿ ಉಳಿದದ್ದನ್ನು ಹಂಚುವುದು ಮಾನವ ಬೆಳೆಸಿಕೊಂಡಿರುವ ವಿಚಿತ್ರ ಗುಣ. ಜೊತೆಗೆ ಅದನ್ನವನು ಮಹಾನ್ ದಾನ ಎಂದುಕೊಳ್ಳುತ್ತಾನೆ. ಇನ್ನೊಬ್ಬರ ಕಷ್ಟಕ್ಕೆ ನೆರವಾದ ಶ್ರೇಷ್ಠತಮ ಗುಣವೆಂದು ಬಿಂಬಿಸಿಕೊಳ್ಳುತ್ತಾನೆ.

'ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು/ ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ' ಎನ್ನುತ್ತದೆ ಬಸವಣ್ಣನವರ ಒಂದು ವಚನ. ಕಾಗೆ ತಾನು ತಿಂದು ಮುಗಿಸಿ ಉಳಿದಿದ್ದರೆ ಮಾತ್ರ ತನ್ನ ಮಿತ್ರರನ್ನು ಕರೆಯುವುದಿಲ್ಲ. 'ಹಂಚಿಕೊಂಡು ತಿನ್ನುವ ಬುದ್ಧಿ ಬಂದಾಗಲೇ ಮಾನವನ ಕಲ್ಯಾಣ ಸಿದ್ಧಿ' ಎಂಬ ಶರಣರ ಮಾತು ಎಷ್ಟು ಸೊಗಸಾಗಿದೆ ನೋಡಿ.

ಮನೆಗೆ ಯಾರೋ ಊಟ ಬೇಡಲು ಬಂದರೆ ಮಿಕ್ಕಿದ ತಂಗಳು ನೆನಪಾಗುತ್ತದೆ. ಬಡವರ ಮಕ್ಕಳನ್ನು ಕಂಡರೆ ತಮ್ಮ ಮಕ್ಕಳು ಉಟ್ಟ, ಬಣ್ಣಗೆಟ್ಟ ಬಟ್ಟೆಗಳು ನೆನಪಾಗುತ್ತವೆ. ಕಾಲಿಲ್ಲದವನು ಕೈಚಾಚಿದರೆ 'ಚಿಲ್ಲರೆ ಇಲ್ಲ' ಎನ್ನುತ್ತೇವೆ, ನೋಟುಗಳಿರುವುದು ಕೊಡುವುದಕ್ಕಲ್ಲ. ಮದುವೆ ಮನೆಯಲ್ಲಿ ಊಟ ಮಿಕ್ಕಿದಾಗ ಅನಾಥರ ನೆನಪಾಗುತ್ತದೆ. ಸೀರೆ ಹಳೆಯದಾದಾಗ ಮನೆಯ ಕೆಲಸದವಳು ನೆನಪಾಗುತ್ತಾಳೆ. ಇಂತಹ ನೂರೆಂಟು ವಿರೋಧಾಭಾಸಗಳು ನಮ್ಮಲ್ಲಿವೆ. ಉಣ್ಣುತ್ತಿರುವ ಅನ್ನದಲ್ಲಿ ಒಂದಷ್ಟು ಎತ್ತಿಕೊಡುವ, ಬಡವರ ಮಕ್ಕಳಿಗೆ ಹೊಸ ಬಟ್ಟೆ ತೆಗೆದುಕೊಡುವ, ಮದುವೆ ಊಟದಲ್ಲಿ ಒಂದು ಪಾಲನ್ನು ಅನಾಥರಿಗೆ ಎತ್ತಿಡುವ ಯೋಚನೆಯನ್ನು ನಾವು ತಪ್ಪಿಯೂ ಮಾಡುವುದಿಲ್ಲ.

ಇತ್ತೀಚೆಗೆ ಕೆಲವು ನಗರಗಳಲ್ಲಿ 'ಕರುಣೆಯ ಗೋಡೆ'ಗಳನ್ನು ನೋಡುತ್ತೇವೆ. ನಮಗೆ ಬೇಡವಾದ ವಸ್ತುವನ್ನು ಅಲ್ಲಿ ಇಡುವುದು ಮತ್ತು ಬೇಕಾದವರು ಅದನ್ನು ತೆಗೆದುಕೊಂಡು ಹೋಗುವ ಈ ವ್ಯವಸ್ಥೆ ಚೆನ್ನಾಗಿದೆ. ಆದರೆ ಇಲ್ಲಿ ಬೇಡವಾದ ವಸ್ತು ಎಂಬ ಪದದ ಬಳಕೆಯೇ ಸರಿಯಲ್ಲ. ಇತ್ತೀಚೆಗೆ ಆ ಕರುಣೆಯ ಗೋಡೆ ಕಸದ ತೊಟ್ಟಿಯಂತೆ ಆಗಿರುವುದು ತಿಳಿಯುತ್ತದೆ.

ಒಂದು ವಸ್ತು ನಮಗೆ ಬಳಸಲು ಯೋಗ್ಯವಲ್ಲದ್ದು ಬೇರೆಯವರಿಗೆ ಅದ್ಹೇಗೆ ಯೋಗ್ಯ ಅನಿಸುತ್ತದೆ. ಮನೆಯಲ್ಲಿದ್ದರೆ ಸುಮ್ಮನೆ ವ್ಯರ್ಥ, ದೂಳಾಗುತ್ತದೆ ಅನ್ನುವ ಕಾರಣಕ್ಕೆ ಕೆಲವರು ಅಲ್ಲಿಟ್ಟು ಬರುತ್ತಾರೆ. ಬರುವಾಗ ಈ ಸಮಾಜಕ್ಕೆ ತಾನೇನೋ ಮಾಡಿದೆ ಎಂಬ ವಿಲಕ್ಷಣ ಧನ್ಯತೆ ಅವರದು. ನಮ್ಮ ಹಳೆಯ ಬಟ್ಟೆ ಬದಲು ಕಡಿಮೆ ಬೆಲೆಯದಾದರೂ ಪರವಾಗಿಲ್ಲ ಹೊಸ ಬಟ್ಟೆ ಖರೀದಿಸಿ ಇಟ್ಟು ಬರಬಹುದಲ್ಲ! ಕೆಲವರು ಸವೆದ ಶೂ ಇಟ್ಟದ್ದನ್ನು ನೋಡಿದೆ. ಅವರ ಮನಃಸ್ಥಿತಿಗೆ ಕೈಮುಗಿದೆ.



ತನ್ನ ದುಡಿಮೆಯ ಒಂದು ಭಾಗವನ್ನು ಹಂಚು ಅನ್ನುತ್ತದೆ ಇಸ್ಲಾಂ ಧರ್ಮ. ಸತ್ಪಾತ್ರರು ಇದ್ದಲ್ಲಿಗೆ ಹೋಗಿ ಅವರನ್ನ ಪ್ರಸನ್ನೀಕರಿಸಿ, ತನ್ನಲ್ಲಿರುವುದನ್ನೇ ಕೊಟ್ಟು ಬಾ ಅನ್ನುತ್ತದೆ ಹಿಂದೂ ಧರ್ಮ. ಯೇಸು ಹಂಚಿಕೊಂಡು ತಿನ್ನುವ ಗುಣದ ದ್ಯೋತಕವಾಗಿದ್ದಾನೆ.

ಜಗತ್ತಿನ ಎಲ್ಲಾ ಧರ್ಮಗಳು ಪರಸ್ಪರ ಹಂಚಿಕೊಂಡು ತಿನ್ನುವ ತತ್ವದಲ್ಲಿ ನಂಬಿಕೆ ಇಟ್ಟಿವೆ. ಆದರೆ ಮನುಷ್ಯ ಧರ್ಮದಲ್ಲಿ ಅದು ದುರ್ಲಭ. ಕೆಲವರು ಇದಕ್ಕೆ ಹೊರತಾಗಿದ್ದಾರೆ. ಅವರಿಂದಾಗಿಯೇ ಮನುಕುಲದ ಸೊಬಗು ಉಳಿದಿದೆ.

ಪ್ರಚಾರಕ್ಕಾಗಿಯೇ ಕೊಡುವ ವರ್ಗವೊಂದಿದೆ. ಒಂದು ರೂಪಾಯಿ ಕೊಟ್ಟು ಹತ್ತು ರೂಪಾಯಿಯಷ್ಟು ಪ್ರಚಾರ. ಕೊರೊನಾ ತೀವ್ರವಾಗಿದ್ದ ಕಾಲದಲ್ಲಿ ಒಂದು ಅನ್ನದ ಪೊಟ್ಟಣ, ಎರಡು ಮಾಸ್ಕ್ ನೀಡಿ ಫೋಟೊ ತೆಗೆಸಿಕೊಂಡವರನ್ನು ಕಂಡು ಹೇವರಿಕೆ ಹುಟ್ಟಿತ್ತು. ಕೊಟ್ಟಿದ್ದಕ್ಕಲ್ಲ, ಫೋಟೊ ತೆಗೆಸಿಕೊಂಡಿದ್ದಕ್ಕೆ. ಕೈಯಲ್ಲಿ ಊಟ ತೆಗೆದುಕೊಳ್ಳುತ್ತಾ ಫೋಟೊಗೆ ಮುಖ ತೋರಿಸುವ ಸಂಕಟ ಯಾರಿಗೂ ಬಾರದಿರಲಿ. 'ಹೊಲಿ ನಿನ್ನ ತುಟಿಗಳನು' ಎಂಬ ಡಿವಿಜಿಯವರ ಕಗ್ಗ ನೆನಪಿಗೆ ಬರಲಿ.

ವಾಚಕರ ವಾಣಿ

ಮರೆತುಹೋಯಿತೇ ರಸ್ತೆ ನಿರ್ವಹಣೆ?

ಬೆಂಗಳೂರಿನಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ದಾವಣಗೆರೆ ಕಡೆ ಹೊರಟರೆ ತುಮಕೂರು ನಗರ ದಾಟುವಾಗ ಬೈಪಾಸ್ ರಸ್ತೆಯಲ್ಲಿ ಪ್ರಯಾಣಿಸಬೇಕಿದೆ. ಬಹಳಷ್ಟು ಗುಂಡಿಗಳಿಂದ ಕೂಡಿರುವ ಈ ರಸ್ತೆಯಲ್ಲಿ ಪ್ರಯಾಣಿಸುವುದು ಬಲು ದುಸ್ತರ. ಸಾವಿರಾರು ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡುವ ಪ್ರಾಧಿಕಾರ ಯಾಕೋ ಈ ರಸ್ತೆಯ ನಿರ್ವಹಣೆಯನ್ನು ಮರೆತಂತಿದೆ. ಸುಮಾರು ಹದಿನೈದು ವರ್ಷಗಳಿಂದಲೂ ರಸ್ತೆ ಇದೇ ದುಃಸ್ಥಿತಿಯಲ್ಲಿದೆ.

ನಿತ್ಯವೂ ಈ ರಸ್ತೆಯಲ್ಲಿ ಮುಖ್ಯಮಂತ್ರಿಯಿಂದ ಹಿಡಿದು ಅನೇಕ ಮಂತ್ರಿಗಳು, ಅಧಿಕಾರಿಗಳು ಪ್ರಯಾಣಿಸುತ್ತಿದ್ದರೂ ದುರಸ್ತಿ ಭಾಗ್ಯ ಮಾತ್ರ ದೊರಕಿಲ್ಲ. ಸಾರ್ವಜನಿಕರಿಂದ ಹೆದ್ದಾರಿ ಟೋಲ್ ಶುಲ್ಕವನ್ನು ತಪ್ಪದೇ ವಸೂಲಿ ಮಾಡಲಾಗುತ್ತಿದೆ. ಜನ ಕೂಡಾ ತುಟಿಪಿಟಿಕ್ ಎನ್ನದೆ ಈ ರಸ್ತೆಯಲ್ಲಿ ನಿತ್ಯ ಶಪಿಸುತ್ತಾ ಪ್ರಯಾಣಿಸುತ್ತಿದ್ದಾರೆ. ಪ್ರಾಧಿಕಾರ ಇನ್ನಾದರೂ ಇದಕ್ಕೆ ಮುಕ್ತಿ ದೊರಕಿಸುವುದೇ?

ವಿ.ತಿಪ್ಪೇಸ್ವಾಮಿ, ಹಿರಿಯೂರು

ಮತದಾನದ ಮಹತ್ವ: ಹುಸಿಯಾಯಿತು ನಿರೀಕ್ಷೆ

ಇತ್ತೀಚೆಗೆ ನಡೆದ ಪದವೀಧರ ಕ್ಷೇತ್ರದ ಚುನಾವಣೆಯ ಕೆಲವು ಬೆಳವಣಿಗೆಗಳನ್ನು ನೋಡಿದ ನನಗೆ ಚುನಾವಣೆ, ಮತದಾನದಂತಹ ಪದಗಳನ್ನು ಅರಗಿಸಿಕೊಳ್ಳಲು ಕಷ್ಟವಾಗುತ್ತಿದೆ. ನಗರದ ಒಂದು ಮೂಲೆಯಲ್ಲಿ ಟೀ ಕ್ಯಾಂಟೀನ್ ಇಟ್ಟುಕೊಂಡು ಸ್ವಾಭಿಮಾನಿ, ಸ್ವಾವಲಂಬಿಯಾಗಿ ಜೀವನ ಸಾಗಿಸುತ್ತಿರುವ ನಾನು, ಮತದಾನದ ಮಹತ್ವದ ಬಗ್ಗೆ ಬಹಳಷ್ಟು ಕನಸು ಮತ್ತು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆ. ಅದರಲ್ಲಿಯೂ ವಿದ್ಯಾವಂತ ಪದವೀಧರರು, ಶಿಕ್ಷಕರ ಬಗ್ಗೆ ಬಹಳ ಅಭಿಮಾನ ಇರಿಸಿಕೊಂಡಿದ್ದೆ. ಆದರೆ ನಡೆದದ್ದೇ ಬೇರೆ.

ಪದವೀಧರರಿಗೆ ಆಮಿಷವೊಡ್ಡಲು ಅಭ್ಯರ್ಥಿಗಳೇ ಭಯಪಡುವ ವಾತಾವರಣ ಇರಬೇಕು. ಆದರೆ ನಾನು ಕಂಡ ಬಹುತೇಕ ಪದವೀಧರರು ಸ್ವತಃ ಆಮಿಷಕ್ಕೆ ಒಳಗಾಗುತ್ತಿದ್ದುದು ದುರಂತವಲ್ಲವೇ? ಲಕ್ಷ ಲಕ್ಷ ಸಂಬಳ ಎಣಿಸುವ ನೌಕರರು ಕೂಡಾ ಚಿಲ್ಲರೆ ಹಣಕ್ಕೆ ಕೈಚಾಚುತ್ತಾರೆಂದರೆ ಅಸಹ್ಯವೇ ಸರಿ.

ಮಂಜುನಾಥ್ ಕೇಶವ, ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ

ಅಗ್ನಿಪಥ್: ಸೇನೆಗೆ ಬಲ

ಕೇಂದ್ರ ಸರ್ಕಾರವು ರೂಪಿಸಿರುವ ಅಗ್ನಿಪಥ್ ಯೋಜನೆ ಸ್ವಾಗತಾರ್ಹವಾಗಿದೆ. ಈ ಯೋಜನೆಯ ಮೂಲಕ ಯುವಜನರಿಗೆ 4 ವರ್ಷದ ಅವಧಿಗೆ ಸೇನೆಯ ತ್ರಿವಿಧ ದಳಗಳಲ್ಲಿ ಸೇವೆ ಮಾಡಲು ಅವಕಾಶ ಸಿಗಲಿದೆ. ಗರಿಷ್ಠ 45 ಸಾವಿರ ಯುವಜನರನ್ನು ಆಯ್ಕೆ ಮಾಡಿಕೊಳ್ಳುತ್ತಿರುವ ಈ ಯೋಜನೆಯು ಉದ್ಯೋಗಾವಕಾಶ ನೀಡುವುದರ ಜೊತೆಗೆ ದೇಶದ ರಕ್ಷಣಾ ಸೇವೆ ಮಾಡಬೇಕೆಂಬ ಯುವಜನರ ಆಸೆಯನ್ನೂ ಈಡೇರಿಸಲಿದೆ.

ರಕ್ಷಣಾ ಇಲಾಖೆಗೆ ತೆಗೆದಿರಿಸಿರುವ ವಾರ್ಷಿಕ ಬಜೆಟ್‌ನ ಅರ್ಧದಷ್ಟು ಹಣ ಪಿಂಚಣಿ ಮತ್ತು ವೇತನ ನೀಡಲು ವ್ಯಯವಾಗುತ್ತಿದೆ. ಅಗ್ನಿಪಥ್ ಯೋಜನೆಯಡಿ ಸೇವೆ ಸಲ್ಲಿಸಿದವರಿಗೆ ಪಿಂಚಣಿ ಸೌಲಭ್ಯ ಇರುವುದಿಲ್ಲವಾದ್ದರಿಂದ ಬೊಕ್ಕಸದ ಮೇಲಿನ ಆರ್ಥಿಕ ಭಾರ ಕಡಿಮೆಯಾಗಲಿದೆ. ಹೀಗೆ ಉಳಿಯುವ ಹಣವನ್ನು ಮೂರೂ ಸೇನೆಗಳ ಆಧುನೀಕರಣಕ್ಕೆ ವ್ಯಯಿಸಿ ಸೇನೆಗಳ ಸಾಮರ್ಥ್ಯ ಹೆಚ್ಚಿಸಬಹುದಾಗಿದೆ.

ಚನ್ನಕೇಶವ ಜಿ.ಕೆ., ತರೀಕೆರೆ

ಸೊಬಗು– ಕೊರಗು

ನಮ್ಮಿಷ್ಟದ ಅಭ್ಯರ್ಥಿಯ
ಆಯ್ಕೆ ಮಾಡುವ
ಮತದಾನದ ಹಕ್ಕಿರುವುದು
ಪ್ರಜಾಪ್ರಭುತ್ವದ ಸೊಬಗು!
ಇಷ್ಟದ ಅಭ್ಯರ್ಥಿ
ಚುನಾವಣಾ ಕಣದಲ್ಲಿಯೇ
ಇಲ್ಲವೆಂಬುದು
ಮತದಾರನ ಕೊರಗು!
ಸೊಬಗು ಸೊರಗಿ ಕೊರಗಲ್ಲಿ
ಕೊನೆಯಾಗದಿರಲು
ಬದಲಾಗಬೇಕಿದೆ
ಚುನಾವಣೆ ಒಳಹೊರಗು!

ರೇವಣ್ಣ ಎಂ.ಜಿ., ಮಂಡ್ಯ

ದಂತಕತೆಯಾಗಲಿದೆ ದಂತದ ಕತೆ!

'ಭೋಗೇಶ್ವರ' ಆಗ ವೀರಪ್ಪನ್‌ನಿಂದ ನಿನ್ನ ಎಂಟು ಅಡಿ ಉದ್ದದ ದಂತಗಳು ಉಳಿದಿದ್ದೇ ಹೆಚ್ಚು! ನಿನಗೆ ಹುಲ್ಲು ತಿನ್ನಲೂ ತ್ರಾಸವಾಗುತ್ತಿದ್ದ ದಂತ, ವನ್ಯಪ್ರೇಮಿಗಳಿಗಾಗಿಯೇ ಬೆಳೆಸಿದ್ದೋ ಬೆಳೆದಿದ್ದೋ?! ಇರಲಿ, ನಿನ್ನ ಗತ್ತು, ಗೈರತ್ತು ವೈಭೋಗದ ದಿನಗಳು ಇನ್ನು ನೆನಪು ಮಾತ್ರ.

ಎರಡೂ ದಂತಗಳನ್ನು ಸಂರಕ್ಷಿಸಿ ಮುಂದಿನವರಿಗೆ ಹೇಳುವ ನಿನ್ನ ನಿಜ 'ದಂತಕತೆ' ಸದಾ ನಿನ್ನ ನೆನಪನ್ನು ಜೀವಂತವಾಗಿ ಇಡುತ್ತದೆ. ಜೀವಂತವಿರುವ ಮನುಜನ ಕೈಲಾಸ ಸಮಾರಾಧನೆ, ಭಾವಪೂರ್ಣ ಶ್ರದ್ಧಾಂಜಲಿ, ತಿಥಿ ಕಾರ್ಡ್ ಸಮರದ ಈ ಹೊತ್ತಿನಲ್ಲಿ, ನಿಜವಾಗಿ ಅಸ್ತಂಗತನಾದ ನಿನಗೆ ವನ್ಯಪ್ರೇಮಿಗಳ ಭಾವಪೂರ್ಣ ಅಶ್ರುತರ್ಪಣ, ಶ್ರದ್ಧಾಂಜಲಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಶಿಕ್ಷಿತ ಶಿಕ್ಷಕರೇ... ಇದೆಂಥ ಪರಿಪಾಟ?

ರಾಜ್ಯ ವಿಧಾನ ಪರಿಷತ್ತಿನ ನಾಲ್ಕು ಕ್ಷೇತ್ರಗಳ ಪ್ರತಿನಿಧಿಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಪದವೀಧರರು, ಶಿಕ್ಷಕರು ಮತ ಚಲಾಯಿಸಿದ್ದಾರೆ. ಈ ಚುನಾವಣೆಯ ನಾಲ್ಕು ಕ್ಷೇತ್ರಗಳಲ್ಲಿ ಸರಾಸರಿ ಶೇ 75ರಷ್ಟು ಮತದಾನ ನಡೆದಿರುವುದು ವರದಿಯಾಗಿದೆ.

ಪದವೀಧರರೂ ಶಿಕ್ಷಕರೂ ಆಗಿರುವ ಉಳಿದ ಶೇಕಡ 25ರಷ್ಟು ಮತದಾರರು ತಮ್ಮ ಮತವನ್ನು ಚಲಾಯಿಸದೇ ಇರುವುದಕ್ಕೆ ಕಾರಣ ಏನು? ಇದರಿಂದ ಅವರು ಸಮಾಜಕ್ಕೆ ನೀಡುವ ಸಂದೇಶವಾದರೂ ಏನು? ಇಂದಿನ ಮಕ್ಕಳನ್ನು ಮುಂದಿನ ಭವ್ಯ ಪ್ರಜೆಗಳನ್ನಾಗಿ ರೂಪಿಸುವ ಶಿಕ್ಷಕರಿಂದ ಇಂತಹ ನಡೆ ಅಕ್ಷಮ್ಯ. ಪ್ರಜಾಪ್ರಭುತ್ವದ ಮೂಲ ಪ್ರಕ್ರಿಯೆಯೇ ಮತದಾನ. ಅದರಿಂದಲೇ ದೂರ ಉಳಿಯುವಂತಹ ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳಬೇಕು. ಇಂತಹವರೇ ಈ ಪರಿಪಾಟ ಬೆಳೆಸಿಕೊಂಡರೆ ಇನ್ನು ಜನಸಾಮಾನ್ಯರನ್ನು ಮತದಾನಕ್ಕೆ ಒಲಿಸುವುದು ಹೇಗೆ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಣ್ವಸ್ತ್ರ ಪೈಪೋಟಿಯ ಆತಂಕ

ಪ್ರಜಾವಾಣಿ ವಾರ್ತೆ

ಎರಡನೇ ಮಹಾಯುದ್ಧದ ನಂತರ ವಿಶ್ವದ ಎಲ್ಲಿಯೂ ಅಣ್ವಸ್ತ್ರವನ್ನು ಬಳಸಿಲ್ಲ. ಆದರೆ, ವಿಶ್ವದ ಅತ್ಯಂತ ಶಕ್ತಿಯುತ ರಾಷ್ಟ್ರಗಳ ಶಸ್ತ್ರಾಗಾರಗಳಲ್ಲಿ ಅಣ್ವಸ್ತ್ರಗಳು ಇವೆ. ಇವುಗಳ ಸಂಖ್ಯೆಯನ್ನು ಹೆಚ್ಚಿಸಲು ಈ ರಾಷ್ಟ್ರಗಳು ಯೋಜನೆ ಹಾಕಿಕೊಂಡಿವೆ. ಈಗ ವಿಶ್ವದಾದ್ಯಂತ ಇರುವ ಒಟ್ಟು ಅಣ್ವಸ್ತ್ರಗಳಲ್ಲಿ ಶೇ 70ಕ್ಕೂ ಹೆಚ್ಚು ಅಣ್ವಸ್ತ್ರಗಳು ಬಳಕೆಗೆ ಯೋಗ್ಯವಾಗಿವೆ ಎನ್ನುತ್ತದೆ ಸ್ಟಾಕ್‌ಹೋಂ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಸೆಂಟರ್ (ಸಿಪ್ರಿ) ವಾರ್ಷಿಕ ವರದಿ.

‘ವಿಶ್ವದ ಒಂಬತ್ತು ರಾಷ್ಟ್ರಗಳ ಬಳಿ ಅಣ್ವಸ್ತ್ರಗಳು ಇವೆ. ಈ ರಾಷ್ಟ್ರಗಳು ತಮ್ಮಲ್ಲಿರುವ ಅಣ್ವಸ್ತ್ರ ಸಿಡಿತಲೆಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಸಿದ್ಧತೆ ನಡೆಸಿವೆ. ಆದರೆ, 2021ರ ಜನವರಿ ವೇಳೆಗೆ ಈ ದೇಶಗಳ ಬಳಿ ಇದ್ದ ಅಣ್ವಸ್ತ್ರ ಸಿಡಿತಲೆಗಳ ಸಂಖ್ಯೆಗೆ ಹೋಲಿಸಿದರೆ, 2022ರ ಜನವರಿ ವೇಳೆಗೆ ಸಿಡಿತಲೆಗಳ ಸಂಖ್ಯೆಯಲ್ಲಿ ತುಸು ಕಡಿಮೆಯಾಗಿದೆ. ಅವಧಿ ಮುಗಿದ ಮತ್ತು ಬಳಸಲು ಯೋಗ್ಯವಲ್ಲದ ಅಣ್ವಸ್ತ್ರ ಸಿಡಿತಲೆಗಳನ್ನು ಈ ದೇಶಗಳು ವಿಲೇವಾರಿ ಮಾಡಲು ಮುಂದಾಗಿರುವ ಕಾರಣ, ಸಂಗ್ರಹದಲ್ಲಿರುವ ಒಟ್ಟು ಸಿಡಿತಲೆಗಳ ಸಂಖ್ಯೆ ಕಡಿಮೆಯಾಗಿದೆ. ಆದರೆ ಕಡಿಮೆಯಾದ ಸಿಡಿತಲೆಗಳಿಗಿಂತಲೂ ಹೆಚ್ಚಿನ ಸಂಖ್ಯೆಯ ಸಿಡಿತಲೆಗಳನ್ನು ನಿರ್ಮಿಸಲು ಈ ದೇಶಗಳು ಮುಂದಾಗಿವೆ’ ಎಂದು ಸಿಪ್ರಿ ವಿವರಿಸಿದೆ.

‘ಕೆಲವು ದೇಶಗಳು, ಕೆಲವೇ ವರ್ಷಗಳಲ್ಲಿ ತಮ್ಮಲ್ಲಿರುವ ಸಿಡಿತಲೆಗಳ ಸಂಖ್ಯೆಯನ್ನು ಹೆಚ್ಚಿಸಲು ಸಿದ್ಧತೆ ನಡೆಸಿವೆ. ಸಿಡಿತಲೆ ನಿರ್ಮಾಣಕ್ಕೆ ಅಗತ್ಯವಿರುವ ಕಚ್ಚಾವಸ್ತುಗಳನ್ನು ಈ ದೇಶಗಳು ಖರೀದಿಸಿವೆ. ಹೀಗೆ ಖರೀದಿಸಿದ ಕಚ್ಚಾವಸ್ತುಗಳ ಲೆಕ್ಕಾಚಾರದಲ್ಲಿ, ಮುಂದಿನ ದಿನಗಳಲ್ಲಿ ಅವು ಎಷ್ಟು ಸಿಡಿತಲೆಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಂಡಿವೆ ಎಂಬುದನ್ನು ಅಂದಾಜಿಸಲಾಗಿದೆ. ಎರಡನೇ ವಿಶ್ವಯುದ್ಧದ ನಂತರ, ವಿಶ್ವದ ಹಲವು ದೇಶಗಳು ಏಕಕಾಲದಲ್ಲಿ ಸಿಡಿತಲೆಗಳ ಸಂಖ್ಯೆಯನ್ನು ಹೆಚ್ಚಿಸಲು ಮುಂದಾಗಿರುವುದು ಇದೇ ಮೊದಲು. ಇದು ಅತ್ಯಂತ ಕಳವಳಕಾರಿ ಬೆಳವಣಿಗೆ’ ಎಂದು ಸಿಪ್ರಿ ಆತಂಕ ವ್ಯಕ್ತಪಡಿಸಿದೆ.

‘ಮೂರನೇ ವಿಶ್ವಯುದ್ಧ ನಡೆಯಬಾರದು ಮತ್ತು ಅಣ್ವಸ್ತ್ರಗಳನ್ನು ಮತ್ತೆ ಬಳಸಲೇಬಾರದು’ ಎಂದು ಅಮೆರಿಕ ಮತ್ತು ರಷ್ಯಾ ಪದೇ ಪದೇ ಹೇಳುತ್ತಲೇ ಇವೆ. ಆದರೆ, ಈ ಎರಡು ದೇಶಗಳೇ ಅಣ್ವಸ್ತ್ರ ಬಳಕೆಯ ಪರೋಕ್ಷ ಬೆದರಿಕೆಯನ್ನು ಒಡ್ಡುತ್ತಿವೆ ಎಂದು ಸಿಪ್ರಿ ಹೇಳಿದೆ. ವಿಶ್ವದಲ್ಲಿ ಈಗ ಇದೆ ಎಂದು ಅಂದಾಜಿಸಲಾಗಿರುವ ಒಟ್ಟು ಅಣ್ವಸ್ತ್ರ ಸಿಡಿತಲೆಗಳಲ್ಲಿ ಶೇ 90ರಷ್ಟು ಸಿಡಿತಲೆಗಳು ರಷ್ಯಾ ಮತ್ತು ಅಮೆರಿಕದ ಬಳಿಯೇ ಇವೆ. ಈ ಎರಡೂ ದೇಶಗಳು ಒಟ್ಟು 8,185 ಅಣ್ವಸ್ತ್ರ ಸಿಡಿತಲೆಗಳನ್ನು ಯುದ್ಧಸನ್ನದ್ಧವಾಗಿ ಇರಿಸಿವೆ. ಇವುಗಳಲ್ಲಿ, 3,000ಕ್ಕೂ ಹೆಚ್ಚು ಅಣ್ವಸ್ತ್ರ ಸಿಡಿತಲೆಗಳನ್ನು ಈ ದೇಶಗಳು ತಮ್ಮ ಗಡಿ ಮತ್ತು ಸೇನಾನೆಲೆಗಳ ಆಯಕಟ್ಟಿನ ಜಾಗಗಳಲ್ಲಿ ಉಡಾಯಿಸಲು ಸಿದ್ಧವಾಗಿ ಇರಿಸಿವೆ. ಉಕ್ರೇನ್ ಮತ್ತು ರಷ್ಯಾ ಯುದ್ಧದಲ್ಲಿ ಅಣ್ವಸ್ತ್ರ ಬಳಸುವ ಬೆದರಿಕೆ ಪದೇ ಪದೇ ಕೇಳಿಬಂದಿದೆ. ಇದರ ಮಧ್ಯದಲ್ಲೇ ಅಣ್ವಸ್ತ್ರ ಸಿಡಿತಲೆಗಳ ಸಂಖ್ಯೆಯನ್ನು ಹೆಚ್ಚಿಸಲು ಹಲವು ದೇಶಗಳು ಮುಂದಾಗಿವೆ ಎಂದು ಸಿಪ್ರಿ ತನ್ನ ವರದಿಯಲ್ಲಿ ವಿವರಿಸಿದೆ.

ಈ ಎಲ್ಲಾ ದೇಶಗಳು ತಮ್ಮಲ್ಲಿರುವ ಅಣ್ವಸ್ತ್ರ ಸಿಡಿತಲೆಗಳ ಬಗ್ಗೆ ಮಾಹಿತಿ ಬಹಿರಂಗಪಡಿಸಿಲ್ಲ. ಆದರೆ ಬೇರೆ ದೇಶಗಳು ಅಣ್ವಸ್ತ್ರ ಹೊಂದಬಾರದು ಎಂದು ಒತ್ತಡ ಹೇರುತ್ತಿವೆ. ಅಣ್ವಸ್ತ್ರ ಹೊಂದುವ ಇರಾನ್‌ನ ಕಾರ್ಯಕ್ರಮದ ಕಾರಣಕ್ಕೇ ಆ ದೇಶದ ಮೇಲೆ ಅಮೆರಿಕ ಆರ್ಥಿಕ ದಿಗ್ಬಂಧನ ಹೇರಿದೆ. ಈವರೆಗೆ ತನ್ನಲ್ಲಿರುವ ಅಣ್ವಸ್ತ್ರಗಳ ಬಗ್ಗೆ ಮಾಹಿತಿ ನೀಡುತ್ತಿದ್ದ ಬ್ರಿಟನ್, ಇನ್ನು ಮುಂದೆ ಇಂತಹ ಮಾಹಿತಿಯನ್ನು ಬಹಿರಂಗಪಡಿಸುವುದಿಲ್ಲ ಎಂದು ಹೇಳಿದೆ. ಉತ್ತರ ಕೊರಿಯಾ ತನ್ನಲ್ಲಿರುವ ಅಣ್ವಸ್ತ್ರ ಸಿಡಿತಲೆಗಳ ಬಗ್ಗೆ ಮಾಹಿತಿ ನೀಡುತ್ತಲೇ ಇಲ್ಲ. ಅಮೆರಿಕ ಮತ್ತು ರಷ್ಯಾ ಸಹ ತಮ್ಮಲ್ಲಿರುವ ಸಿಡಿತಲೆಗಳ ಒಟ್ಟು ಸಂಖ್ಯೆಯನ್ನು ಮುಚ್ಚಿಟ್ಟಿವೆ. ಅಣ್ವಸ್ತ್ರ ಹೊಂದಿರುವ ಬೇರೆ ರಾಷ್ಟ್ರಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

ಜಾಗತಿಕ ಅಣ್ವಸ್ತ್ರ ಬಲ 2022



ಯಾವ ದೇಶದಲ್ಲಿ ಎಷ್ಟು ಅಣ್ವಸ್ತ್ರ?

ರಷ್ಯಾ ಮತ್ತು ಅಮೆರಿಕ

ಜಾಗತಿಕ ಅಣ್ವಸ್ತ್ರ ಸಿಡಿತಲೆಗಳಲ್ಲಿ ರಷ್ಯಾ ಹಾಗೂ ಅಮೆರಿಕ ಶೇ 90ರಷ್ಟು ಪಾಲು ಹೊಂದಿವೆ. ಅಣ್ವಸ್ತ್ರಗಳನ್ನು ಹೊಂದುವ ವಿಚಾರದಲ್ಲಿ ಈ ಎರಡೂ ದೇಶಗಳ ನಡುವೆ ಭಾರಿ ಪೈಪೋಟಿ ಇರುವುದು ದತ್ತಾಂಶಗಳನ್ನು ಪರಿಶೀಲಿಸಿದಾಗ ತಿಳಿಯುತ್ತದೆ. ಸಂಖ್ಯಾದೃಷ್ಟಿಯಿಂದ ನೋಡಿದರೆ, ಅತಿಹೆಚ್ಚು ಅಣ್ವಸ್ತ್ರ ಸಂಗ್ರಹ ಇರುವುದು ರಷ್ಯಾ ಬಳಿ. 2021ರಲ್ಲಿ 6,255ರಷ್ಟಿದ್ದ ಇವುಗಳ ಸಂಖ್ಯೆ 2022ರಲ್ಲಿ 5,977ಕ್ಕೆ ಇಳಿಕೆಯಾಗಿದೆ. ಇವುಗಳ ಸಂಖ್ಯೆಯನ್ನು ರಷ್ಯಾ ಕಡಿತಗೊಳಿಸಿದೆ ಎಂದು ಇದರ ಅರ್ಥವಲ್ಲ. ಕೆಲವು ಅಣ್ವಸ್ತ್ರ ಸಿಡಿತಲೆಗಳು ತೀರಾ ಹಳೆಯವಾಗಿದ್ದು, ಅವುಗಳಿಗೆ ನಿವೃತ್ತಿ ನೀಡಲಾಗಿದೆ ಅಥವಾ ಅವುಗಳನ್ನು ವಿಲೇವಾರಿ ಮಾಡಲಾಗಿದೆ. ರಷ್ಯಾಕ್ಕಿಂತ ಸ್ವಲ್ಪ ಕಡಿಮೆ (5,428) ಅಣ್ವಸ್ತ್ರ ಸಿಡಿತಲೆ ಹೊಂದಿರುವ ಅಮೆರಿಕದಲ್ಲೂ ಕಳೆದ ವರ್ಷಕ್ಕೆ (5,550) ಹೋಲಿಸಿದರೆ, 2022ರಲ್ಲಿ ಇವುಗಳ ಸಂಖ್ಯೆ ಇಳಿಕೆಯಾಗಿದೆ.

ಚೀನಾ

ತನ್ನ ಅಣ್ವಸ್ತ್ರ ಸಾಮರ್ಥ್ಯವನ್ನು ವೇಗವಾಗಿ ಹೆಚ್ಚಿಸಿಕೊಳ್ಳುವ ದೇಶಗಳ ಸಾಲಿನಲ್ಲಿ ಚೀನಾ ಇದೆ. ಸಿಪ್ರಿ ಲೆಕ್ಕಾಚಾರದ ಪ್ರಕಾರ, 350 ಅಣ್ವಸ್ತ್ರ ಸಿಡಿತಲೆಗಳನ್ನು ಚೀನಾ ಹೊಂದಿದೆ. ಆದರೆ, 2021ರಲ್ಲಿ ತನ್ನ ಸಾಮರ್ಥ್ಯವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಲು ಚೀನಾ ಯತ್ನಿಸಿದೆ. ಒಂದು ಅಂದಾಜಿನ ಪ್ರಕಾರ, 300ಕ್ಕೂ ಹೆಚ್ಚು ಹೊಸ ಕ್ಷಿಪಣಿಗಳನ್ನು ಚೀನಾ ನಿರ್ಮಿಸುತ್ತಿದೆ ಎನ್ನಲಾಗಿದೆ. ಅದೇ ವರ್ಷದಲ್ಲಿ ಹಲವು ಅಣ್ವಸ್ತ್ರ ಸಿಡಿತಲೆಗಳನ್ನು ಕಾರ್ಯಾಚರಣೆಗೆ ನಿಯೋಜಿಸಿದೆ ಎಂದು ಅಂದಾಜಿಸಲಾಗಿದೆ. ಮೊಬೈಲ್ ಲಾಂಚರ್‌ಗಳು ಹಾಗೂ ಜಲಾಂತರ್ಗಾಮಿಗಳು ಸಿದ್ಧವಾದಂತೆಲ್ಲಾ, ಶಸ್ತ್ರಾಗಾರವನ್ನು ಸೇರಿಕೊಳ್ಳುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ.

ಭಾರತ ಹಾಗೂ ಪಾಕಿಸ್ತಾನ

ಭಾರತ ಹಾಗೂ ಪಾಕಿಸ್ತಾನ ತಮ್ಮ ಅಣ್ವಸ್ತ್ರ ಸಾಮರ್ಥ್ಯ ಹೆಚ್ಚಿಸಿಕೊಳ್ಳುವಂತೆ ಕಾಣುತ್ತಿದೆ ಎಂದು ಸಿಪ್ರಿ ವರದಿ ಅಭಿಪ್ರಾಯಪಟ್ಟಿದೆ. ಹೊಸ ರೀತಿಯ ಅಣ್ವಸ್ತ್ರ ಉಡಾವಣಾ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವ ಹಾಗೂ ಈಗಿನ ವ್ಯವಸ್ಥೆಗಳನ್ನು ಆಧುನೀಕರಣಗೊಳಿಸುವ ಪ್ರಕ್ರಿಯೆಗಳು 2021ರಲ್ಲಿ ಚುರುಕು ಪಡೆದವು. ಈ ದಿಸೆಯಲ್ಲಿ ಎರಡೂ ದೇಶಗಳಲ್ಲಿ ಹಲವು ಬೆಳವಣಿಗೆಗಳು ಆಗಿವೆ ಎನ್ನಲಾಗಿದೆ. ಸಿಪ್ರಿ ಒದಗಿಸಿರುವ ಭಾರತದ ಅಣ್ವಸ್ತ್ರ ಸಾಮರ್ಥ್ಯದ ಅಂಕಿ-ಅಂಶವನ್ನು ಗಮನಿಸಿದರೆ, 2021 ಹಾಗೂ 2022ರ ಅವಧಿಯಲ್ಲಿ ನಾಲ್ಕು ಹೆಚ್ಚುವರಿ ಅಣ್ವಸ್ತ್ರ ಸಿಡಿತಲೆಗಳು ಭಾರತದ ಬತ್ತಳಿಕೆಯನ್ನು ಸೇರಿವೆ. ಈಗ ಭಾರತದ ಬಳಿ ಅಧಿಕೃತವಾಗಿ 160 ಅಣ್ವಸ್ತ್ರ ಸಿಡಿತಲೆಗಳಿವೆ. ಆದರೆ, ಈ ವಿಚಾರದಲ್ಲಿ ಭಾರತಕ್ಕಿಂತ ಪಾಕಿಸ್ತಾನ ಮುಂದಿದೆ. 165 ಅಣ್ವಸ್ತ್ರ ಸಿಡಿತಲೆಗಳನ್ನು ಹೊಂದಿದೆ ಎಂದು ವರದಿ ಅಭಿಪ್ರಾಯಪಟ್ಟಿದೆ.

ಫ್ರಾನ್ಸ್

ಅಣ್ವಸ್ತ್ರ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಫ್ರಾನ್ಸ್ ಸಹ ಮುಂದಾಗಿದೆ. ಮೂರನೇ ತಲೆಮಾರಿನ ಅಣ್ವಸ್ತ್ರ ಸಾಮರ್ಥ್ಯದ ಬಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ ಅಭಿವೃದ್ಧಿ ಕಾರ್ಯಕ್ರಮವನ್ನು (ಎಸ್‌ಎಸ್‌ಬಿಎನ್) 2021ರಲ್ಲಿ ಫ್ರಾನ್ಸ್ ಪ್ರಕಟಿಸಿತ್ತು. ಫ್ರಾನ್ಸ್ ಬಳಿ ಈಗ 290 ಅಣ್ವಸ್ತ್ರ ಸಿಡಿತಲೆಗಳಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಈ ಸಂಖ್ಯೆಯಲ್ಲಿ ಅಧಿಕೃತವಾಗಿ ಯಾವುದೇ ಬದಲಾವಣೆಯಾಗಿಲ್ಲ. 280 ಸಿಡಿತಲೆಗಳನ್ನು ನಿಯೋಜನೆ ಮಾಡಲಾಗಿದ್ದರೆ, ಉಳಿದ 10 ಅಣ್ವಸ್ತ್ರ ಸಿಡಿತಲೆಗಳನ್ನು ಸಂಗ್ರಹಿಸಿ ಇಡಲಾಗಿದೆ.

ಉತ್ತರ ಕೊರಿಯಾ

ಉತ್ತರ ಕೊರಿಯಾ ದೇಶವು ತನ್ನ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರದ ಮುಖ್ಯ ಭಾಗ ಎಂಬುದಾಗಿ ಅಣ್ವಸ್ತ್ರ ಕಾರ್ಯಕ್ರಮವನ್ನು ಪರಿಗಣಿಸಿದೆ. ಆದಾಗ್ಯೂ, 2021ರಲ್ಲಿ ಯಾವುದೇ ಖಂಡಾಂತರ ಕ್ಷಿಪಣಿ, ಬಲಿಸ್ಟಿಕ್ ಕ್ಷಿಪಣಿ ಪರೀಕ್ಷೆಯನ್ನು ಉತ್ತರ ಕೊರಿಯಾ ನಡೆಸಿಲ್ಲ. ಸಿಪ್ರಿ ವರದಿ ಪ್ರಕಾರ, 20 ಅಣ್ವಸ್ತ್ರ ಸಿಡಿತಲೆಗಳನ್ನು ಉತ್ತರ ಕೊರಿಯಾ ಸಿದ್ಧಪಡಿಸಿದೆ. ಸುಮಾರು 40-50 ಅಣ್ವಸ್ತ್ರಗಳನ್ನು ಸಿದ್ಧಪಡಿಸುತ್ತಿದೆ ಎನ್ನಲಾಗಿದೆ.

ಬ್ರಿಟನ್

ಜಾಗತಿಕವಾಗಿ ವಿವಿಧ ದೇಶಗಳು ತಮ್ಮ ಅಣ್ವಸ್ತ್ರ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವ ವಿದ್ಯಮಾನದ ಮೇಲೆ ಕಣ್ಣಿಟ್ಟಿದ್ದ ಬ್ರಿಟನ್, ಅಣ್ವಸ್ತ್ರ ಸಿಡಿತಲೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಚ್ಚರಿಯ ನಿರ್ಧಾರವನ್ನು 2021ರಲ್ಲಿ ಪ್ರಕಟಿಸಿತು. ಇದು ದಶಕದಷ್ಟು ಹಿಂದೆ ತಾನೇ ಪ್ರಕಟಿಸಿದ್ದ ನಿಶ್ಶಸ್ತ್ರೀಕರಣ ನೀತಿಗೆ ವಿರುದ್ಧವಾಗಿ ತೆಗೆದುಕೊಂಡ ನಿರ್ಧಾರವಾಗಿತ್ತು. ಜಾಗತಿಕ ಶಸ್ತ್ರ ಸಾಮರ್ಥ್ಯದಲ್ಲಿ ದೇಶದ ಬಲ ಕುಗ್ಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಬ್ರಿಟನ್ ಈ ನಿರ್ಧಾರ ತಳೆಯಿತು.

ತಮ್ಮ ತಮ್ಮ ದೇಶಗಳ ಶಸ್ತ್ರಕೋಠಿಯಲ್ಲಿ ಎಷ್ಟು ಸಂಖ್ಯೆಯ ಅಣ್ವಸ್ತ್ರಗಳನ್ನು ದಾಸ್ತಾನು ಇಡಲಾಗಿದೆ ಎಂಬ ಬಗ್ಗೆ ರಷ್ಯಾ ಹಾಗೂ ಚೀನಾ ಪಾರದರ್ಶಕವಾಗಿ ನಡೆದುಕೊಳ್ಳುತ್ತಿಲ್ಲ ಎಂದು ಬ್ರಿಟನ್ ಆರೋಪಿಸಿದೆ. ಈ ದೇಶಗಳು ಹೇಳುವ ಸಾಮರ್ಥ್ಯಕ್ಕೂ, ಅವು ಹೊಂದಿರುವ ಸಾಮರ್ಥ್ಯಕ್ಕೂ ವ್ಯತ್ಯಾಸಗಳಿವೆ ಎಂಬುದು ಬ್ರಿಟನ್ ಅನುಮಾನ. ಹೀಗಾಗಿ ನಿರ್ಧಾರ ಪ್ರಕಟಿಸಿದ ಬ್ರಿಟನ್, ತನ್ನಲ್ಲಿರುವ ಅಣ್ವಸ್ತ್ರ ಸಂಗ್ರಹದ ಮಾಹಿತಿಯನ್ನು ಇನ್ನುಮುಂದೆ ಬಹಿರಂಗಪಡಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

ಇಸ್ರೇಲ್

ಯಾವುದೇ ಹೊಸ ಅಣ್ವಸ್ತ್ರವನ್ನು ಹೊಂದುತ್ತಿರುವ ಬಗ್ಗೆ ಇಸ್ರೇಲ್ ಬಹಿರಂಗವಾಗಿ ಹೇಳಿಲ್ಲ. ಆದರೆ ತನ್ನ ಅಣ್ವಸ್ತ್ರ ಬಲವನ್ನು ಆಧುನೀಕರಣಗೊಳಿಸುತ್ತಿದೆ ಎನ್ನಲಾಗಿದೆ.

ಆಧಾರ: ಸಿಪ್ರಿ ವಾರ್ಷಿಕ ವರದಿ, ರಾಯಿಟರ್ಸ್, ಎಎಫ್‌ಪಿ

9,440 ಸಿಡಿತಲೆಗಳು ದಾಳಿಗೆ ಲಭ್ಯ

12,705 ವಿಶ್ವದ ಒಂಬತ್ತು ರಾಷ್ಟ್ರಗಳ ಬಳಿ ಇರುವ ಒಟ್ಟು ಅಣ್ವಸ್ತ್ರ ಸಿಡಿತಲೆಗಳ ಸಂಖ್ಯೆ



3,265 ಒಂಬತ್ತು ರಾಷ್ಟ್ರಗಳ ಶಸ್ತ್ರಾಗಾರದಲ್ಲಿ ಇರುವ ಉಳಿಕೆ ಸಿಡಿತಲೆಗಳ ಸಂಖ್ಯೆ. ಇವುಗಳಲ್ಲಿ ನಿರ್ಮಾಣದ ಅಂತಿಮ ಹಂತದಲ್ಲಿರುವ, ಜೋಡಣೆ ಹಂತದಲ್ಲಿರುವ ಮತ್ತು ಅವಧಿ ಮುಗಿದಿರುವ ಸಿಡಿತಲೆಗಳು ಸೇರಿವೆ. ಜೊತೆಗೆ ನಿಷ್ಕ್ರಿಯಗೊಳಿಸಬೇಕಾಗಿರುವ ಅಣ್ವಸ್ತ್ರ ಸಿಡಿತಲೆಗಳೂ ಇದರಲ್ಲಿವೆ

3,732 ಗಡಿಗಳಲ್ಲಿ ಮತ್ತು ಸೇನಾ ನೆಲೆಗಳಲ್ಲಿ ದಾಳಿಗೆ ಸಜ್ಜುಗೊಳಿಸಲಾಗಿರುವ ಅಣ್ವಸ್ತ್ರ ಸಿಡಿತಲೆಗಳ ಸಂಖ್ಯೆ. ಇವುಗಳಲ್ಲಿ 3,332 ಸಿಡಿತಲೆಗಳು ಅಮೆರಿಕ ಮತ್ತು ರಷ್ಯಾಗೆ ಸೇರಿವೆ. ರಷ್ಯಾವು ತನ್ನ ಗಡಿಗಳಲ್ಲಿ ಅಣ್ವಸ್ತ್ರ ಸಿಡಿತಲೆಗಳನ್ನು ದಾಳಿ ಸನ್ನದ್ಧವಾಗಿ ಇರಿಸಿದೆ. ಅಮೆರಿಕವು ತನ್ನ ಭೌಗೋಳಿಕ ಗಡಿ ಮಾತ್ರವಲ್ಲದೆ, ತನ್ನ ಮಿತ್ರರಾಷ್ಟ್ರಗಳ ಭೌಗೋಳಿಕ ವ್ಯಾಪ್ತಿಯಲ್ಲಿರುವ ಸೇನಾ ನೆಲೆಗಳಲ್ಲೂ ಅಣ್ವಸ್ತ್ರ ಸಿಡಿತಲೆಗಳನ್ನು ದಾಳಿ ಸನ್ನದ್ಧವಾಗಿ ಇರಿಸಿದೆ

5,708 ಉಡಾವಣಾ ನೆಲೆಗಳ ಬಳಿ, ಸೇನಾ ನೆಲೆಗಳಲ್ಲಿ ಮತ್ತು ಸಾಗಣೆಯಲ್ಲಿ ಇರುವ ಅಣ್ವಸ್ತ್ರ ಸಿಡಿತಲೆಗಳ ಸಂಖ್ಯೆ. ಇವುಗಳಲ್ಲಿ ಅಮೆರಿಕ (1,964) ಮತ್ತು ರಷ್ಯಾದ (2,889) ಸಿಡಿತಲೆಗಳ ಸಂಖ್ಯೆ 4,853. ಇವು ಬಳಕೆಗೆ ಯೋಗ್ಯವಾಗಿರುವ ಮತ್ತು ಇನ್ನೂ ಹಲವು ದಶಕಗಳ ಅವಧಿ ಹೊಂದಿರುವ ಸಿಡಿತಲೆಗಳಾಗಿವೆ. ಇವೆಲ್ಲವನ್ನು ತಕ್ಷಣದ ದಾಳಿಗೆ ಲಭ್ಯವಿರುವ ಅಣ್ವಸ್ತ್ರ ಸಿಡಿತಲೆಗಳು ಎಂದು ಪರಿಗಣಿಸಲಾಗಿದೆ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 147

ರುದ್ರನಿಗಾಗಿ ಉಮೆ ವ್ರತಾಚರಣೆ

ಮನೆಗೆ ಬಂದ ಬ್ರಹ್ಮ ಮತ್ತು ನಾರದನನ್ನು ದಕ್ಷಪ್ರಜಾಪತಿ ಸತ್ಕರಿಸಿ ನಮಸ್ಕರಿಸಿದಂತೆಯೇ, ಸತೀದೇವಿಯೂ ಲೋಕಾಚಾರದಂತೆ ಅವರಿಬ್ಬರಿಗೆ ನಮಸ್ಕರಿಸುತ್ತಾಳೆ. ತಂದೆ-ಮಗಳು ಕೊಟ್ಟ ಆತ್ಮೀಯ ಸ್ವಾಗತದ ನಂತರ ಬ್ರಹ್ಮ ಮತ್ತು ನಾರದ ತಮಗೆ ಕೊಟ್ಟ ಆಸನದಲ್ಲಿ ಕುಳಿತುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಸತೀದೇವಿ ತಾನು ಲೋಕಮಾತೆ ಎಂಬುದನ್ನು ಮರೆತು, ಸಾಮಾನ್ಯ ಹೆಣ್ಣುಮಗಳಂತೆ ವಿನಯದಿಂದ ತಲೆಬಗ್ಗಿಸಿ ನಿಂತಿರುತ್ತಾಳೆ.

ಸತೀದೇವಿ ತೋರಿಸಿದ ನಯವಿನಯ ಮತ್ತು ಆದಾರಾತಿಥ್ಯವನ್ನು ಮೆಚ್ಚಿದ ಬ್ರಹ್ಮ ‘ಎಲೈ ಸತೀದೇವಿ, ನಿನ್ನನ್ನು ಯಾರು ಪ್ರೀತಿಸುವನೋ ಮತ್ತು ನೀನು ಯಾರನ್ನು ಪ್ರೀತಿಸುವೆಯೋ, ಅಂತಹ ಸರ್ವಜ್ಞನೂ ಜಗದೊಡೆಯನೂ ಆದ ದೇವದೇವನನ್ನು ಪತಿಯಾಗಿ ಪಡೆ. ಯಾರು ಇವತ್ತಿನವರೆಗೆ ನಿನ್ನ ಹೊರತು ಯಾವ ಸ್ತ್ರೀಯನ್ನೂ ಮದುವೆಯಾಗಿಲ್ಲವೋ, ಮುಂದೆಯೂ ನಿನ್ನ ಹೊರತು ಮತ್ತೊಬ್ಬರನ್ನು ಮದುವೆಯಾಗುವುದಿಲ್ಲವೋ, ಅಂತಹ ಅನುಪಮನಾದ ಪುರುಷನೇ ನಿನಗೆ ಪತಿಯಾಗಲಿ’ ಎಂದು ಆಶೀರ್ವದಿಸುತ್ತಾನೆ. ಬ್ರಹ್ಮ ಮತ್ತು ನಾರದ ಇಬ್ಬರೂ ಕೆಲವು ಕಾಲ ದಕ್ಷನ ಮನೆಯಲ್ಲಿಯೇ ಇದ್ದು ನಂತರ ದಕ್ಷನಿಂದ ಬೀಳ್ಕೊಂಡು ತೆರಳುತ್ತಾರೆ. ಬ್ರಹ್ಮ ಮತ್ತು ನಾರದರು ತನ್ನ ಮಗಳಿಗೆ ನೀಡಿದ ಆಶೀರ್ವಾದಗಳನ್ನು ಕೇಳಿ ದಕ್ಷನಿಗೆ ತುಂಬಾ ಸಂತೋಷವಾಗುತ್ತದೆ.

ಮನುಷ್ಯಳಾಗಿ ಅವತರಿಸಿದ ದೇವಿಯು ಬಾಲ್ಯದಲ್ಲಿ ಆಯಾಯ ವಿಹಾರಗಳನ್ನು ಪ್ರದರ್ಶಿಸಿ ಕೌಮಾರಾವಸ್ಥೆಯನ್ನು ತ್ಯಜಿಸಿ ಯೌವನವತಿಯಾದಳು. ಸರ್ವಾಂಗ ಸುಂದರಿಯಾಗಿ ಪ್ರಕಾಶಿಸುತ್ತಿದ್ದ ಸತೀದೇವಿಯನ್ನು ಶಂಕರನಿಗೆ ಹೇಗೆ ಮದುವೆ ಮಾಡಿಕೊಡಲಿ ಎಂಬ ಚಿಂತೆ ದಕ್ಷನಿಗೆ ಕಾಡತೊಡಗಿತು. ಆಗ ತಾಯಿಯಿಂದ ತಂದೆಯ ಮನೋಭಿಲಾಷೆ ತಿಳಿದ ಸತೀದೇವಿ ಸಹ ಶಂಕರನನ್ನು ಪತಿಯಾಗಿ ಪಡೆಯಬೇಕೆಂದು ಇಚ್ಛಿಸಿದಳು. ಶಂಕರನನ್ನು ಒಲಿಸಿಕೊಳ್ಳಲು ವ್ರತವನ್ನ ಆಚರಿಸಲು ಅನುಮತಿ ಕೊಡು ಎಂದು ತಾಯಿಯನ್ನು ಕೋರಿದಳು.

ತಾಯಿ ವೀರಿಣಿ ಅನುಮತಿಯನ್ನು ಕೊಟ್ಟ ನಂತರ ಸತೀದೇವಿಯು ಮನೆಯಲ್ಲಿಯೇ ದೃಢವಾದ ನಿಯಮಗಳಿಂದ ಶಿವನನ್ನು ಅರ್ಚಿಸಲು ಪ್ರಾರಂಭಿಸಿದಳು. ಮೊದಲಿಗೆ ಆಶ್ವೀಜಮಾಸದ ನಂದಕಾಷ್ಟಮಿಯಲ್ಲಿ ಲವಣಮಿಶ್ರವಾದ ಬೆಲ್ಲದನ್ನವನ್ನು ನಿವೇದಿಸಿ ಭಕ್ತಿಯಿಂದ ಶಿವನನ್ನರ್ಚಿಸಿ ನಮಸ್ಕರಿಸಿದಳು. ಕಾರ್ತಿಕಮಾಸದ ಚತುರ್ದಶಿಯಲ್ಲಿ ಕರಿಗಡುಬು ಮತ್ತು ಪಾಯಸಗಳನ್ನು ನೈವೇದ್ಯಮಾಡಿ ಶಂಕರನನ್ನು ಅರ್ಚಿಸಿ ಭಕ್ತಿಯಿಂದ ಧ್ಯಾನಿಸಿದಳು. ಮಾರ್ಗಶಿರ ಮಾಸದ ಕೃಷ್ಣಾಷ್ಟಮಿಯಲ್ಲಿ ತಿಲಮಿಶ್ರವಾದ ಯವಾನ್ನ(ಎಳ್ಳನ್ನ)ವನ್ನು ನಿವೇದಿಸಿ ಮತ್ತು ಕನ್ನೇದಿಲೆಯನ್ನರ್ಪಿಸಿ ಶಿವನನ್ನು ಅವಿಚ್ಛಿನ್ನವಾಗಿ ಅರ್ಚಿಸಿದಳು. ಪುಷ್ಯಮಾಸದ ಶುಕ್ಲಸಪ್ತಮಿಯ ರಾತ್ರಿ ಶಿವನನ್ನು ಸ್ಮರಿಸುತ್ತಾ ಜಾಗರಣೆ ಮಾಡಿ, ಮರುದಿನ ಬೆಳಿಗ್ಗೆ ಕೃಸರಾನ್ನ(ಎಳ್ಳನ್ನ)ವನ್ನು ನಿವೇದಿಸಿ ಶಿವನನ್ನರ್ಚಿಸಿದಳು.

ಮಾಘ ಶುಕ್ಲ ಹುಣ್ಣಿಮೆಯ ರಾತ್ರಿ ಜಾಗರಣೆಯಿಂದಿದ್ದು, ಬೆಳಿಗ್ಗೆ ನದಿತೀರದಲ್ಲಿ ಸ್ನಾನಮಾಡಿ ಶಿವನನ್ನು ಭಕ್ತಿಯಿಂದ ಪೂಜಿಸಿದಳು. ಫಾಲ್ಗುಣ ಕೃಷ್ಣಚತುರ್ದಶಿಯಲ್ಲಿ ರಾತ್ರಿ ಜಾಗರಣದಿಂದಿದ್ದು ಪ್ರತಿ ಯಾಮದಲ್ಲೂ ಬಿಲ್ವಪತ್ರಗಳಿಂದ ಶಿವನನ್ನು ಅರ್ಚಿಸಿದಳು. ಚೈತ್ರಶುಕ್ಲ ಚತುದರ್ಶಿಯಲ್ಲಿ ಹಗಲು ಮುತ್ತುಗದ ಹೂವು ಮತ್ತು ದವನಪತ್ರಗಳಿಂದ ಶಿವನನ್ನು ಅರ್ಚಿಸಿ, ರಾತ್ರಿಯಲ್ಲಿ ಶಿವನನ್ನು ಧ್ಯಾನಿಸಿದಳು. ವೈಶಾಖ ಶುದ್ಧ ತದಿಗೆಯಲ್ಲಿ ಎಳ್ಳನ್ನವನ್ನು ನೈವೇದ್ಯ ಮಾಡಿ ರುದ್ರನನ್ನು ಭಕ್ತಿಯಿಂದ ಅರ್ಚಿಸಿ, ಆ ತಿಂಗಳು ಕೇವಲ ಹಾಲು ಮೊಸರುಗಳನ್ನೇ ಸೇವಿಸಿದಳು. ಆಷಾಢ ಶುದ್ಧ ಚತುರ್ದಶಿಯಲ್ಲಿ ಕಪ್ಪುಬಟ್ಟೆಯನ್ನುಟ್ಟು ಬೃಹತೀಕುಸುಮಗಳಿಂದ ಶಿವನನ್ನು ಅರ್ಚಿಸಿದಳು. ಶ್ರಾವಣ ಮಾಸದ ಶುಕ್ಲ ಅಷ್ಟಮಿ ಮತ್ತು ಚತುರ್ದಶಿಯಂದು ಶಿವನಿಗೆ ಪವಿತ್ರವಾದ ಯಜ್ಞೋಪವೀತಗಳನ್ನು ಹಾಗು ವಸ್ತ್ರಗಳನ್ನು ಅರ್ಪಿಸಿ ಭಕ್ತಿಯಿಂದ ಪೂಜಿಸಿದಳು. ಭಾದ್ರಪದ ಕೃಷ್ಣಚರ್ತುದರ್ಶಿಯಲ್ಲಿ ಅನೇಕ ಬಗೆಯ ಹೂವು-ಹಣ್ಣುಗಳಿಂದ ಅರ್ಚಿಸಿ, ಆ ದಿನ ಕೇವಲ ಜಲವನ್ನೇ ಆಹಾರವಾಗಿ ಸೇವಿಸಿದಳು. ಭಾದ್ರಪದಮಾಸದ ಪೂರ್ತಿ ಮಿತವಾದ ಆಹಾರವನ್ನು ಸೇವಿಸುತ್ತಾ ಶಿವನನ್ನು ಭಕ್ತಿಯಿಂದ ಅರ್ಚಿಸಿದಳು. ತನ್ನಿಚ್ಛೆಯಿಂದಲೇ ಮನುಷ್ಯಳಾಗಿ ಅವತರಿಸಿದ ಸತೀದೇವಿಯು ವರ್ಷದ ಎಲ್ಲಾ ತಿಂಗಳುಗಳಲ್ಲೂ ಭಕ್ತಿಯಿಂದ ಶಿವನನ್ನು ಅರ್ಚಿಸುತ್ತಾ ದೃಢವಾದ ನಿಯಮಗಳನ್ನಾಚರಿಸುತ್ತಿದ್ದಳು. ಭಾದ್ರಪದ ಕೃಷ್ಣಪಕ್ಷದಲ್ಲಿ ನಂದಾವ್ರತವನ್ನು ಪೂರ್ಣಗೊಳಿಸಿದ ಸತೀದೇವಿಯು ನಿಶ್ಚಲವಾದ ಮನಸ್ಸಿನಿಂದ ಶಿವನನ್ನು ಪ್ರೇಮಪೂರ್ವಕವಾಗಿ ಧ್ಯಾನಿಸಿದಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ರಾಸಾಯನಿಕಗಳನ್ನು ಬೆರೆಸಿರುವ ಆಹಾರವನ್ನು ಹಿಂದೂಗಳಿಗೆ ಮಾರಾಟ ಮಾಡಿ. ಇಂತಹ ಆಹಾರ ಸೇವಿಸಿದ ಹಿಂದೂಗಳು ಕಾಯಿಲೆ ಬೀಳುತ್ತಾರೆ’ ಎಂಬ ಅರ್ಥದ ಸಂದೇಶವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಸಂದೇಶವನ್ನು ಮುಸ್ಲಿಮರಿಗೆ ನೀಡಲಾಗಿದೆ. ದೇಶದ ಅತಿದೊಡ್ಡ ಮುಸ್ಲಿಂ ಧಾರ್ಮಿಕ ಸಂಸ್ಥೆಯಾದ ದಾರುಲ್ ಉಲೂಂ ದೇವಬಂದ್ ಈ ಕುರಿತಂತೆ ಫತ್ವಾ ಹೊರಡಿಸಿದೆ ಎಂದು ಆರೋಪಿಸಲಾಗಿದೆ.

ಹಿಂದೂಗಳಿಗೆ ರಾಸಾಯನಿಕಯುಕ್ತ ಆಹಾರ ಮಾರಾಟ ಮಾಡುವಂತೆ ಮುಸ್ಲಿಮರಿಗೆ ದಾರುಲ್ ಉಲೂಂ ದೇವಬಂದ್ ಫತ್ವಾ ಹೊರಡಿಸಿಲ್ಲ ಎಂದು ಫ್ಯಾಕ್ಟ್ಲಿ ವೆಬ್‌ತಾಣ ವರದಿ ಮಾಡಿದೆ. 2020ರಲ್ಲೂ ಇದೇ ರೀತಿಯ ಫತ್ವಾ ಹೊರಡಿಸಿರುವ ಬಗ್ಗೆ ಚರ್ಚೆಯಾಗಿತ್ತು. ದಾರುಲ್ ಉಲೂಂ ದೇವಬಂದ್ ಹೆಸರಿನಲ್ಲಿ ನಕಲಿ ಫತ್ವಾ ಹೊರಡಿಸಲಾಗಿದೆ ಎಂದು ಆರೋಪಿಸಿ ಪೊಲೀಸರಿಗೆ ದೂರು ನೀಡಲಾಗಿತ್ತು. ಈ ಬಾರಿ, ಗಾಯುರ್ ಶೇಖ್ ಎಂಬುವರ ಹೆಸರಿನಲ್ಲಿ ಮಾಡಲಾಗಿರುವ ಫತ್ವಾ ಕುರಿತ ಟ್ವೀಟ್ ಅಧಿಕೃತವಲ್ಲ ಎಂದು ಉಲೂಂ ಸ್ಪಷ್ಟಪಡಿಸಿದೆ. ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲೂ ಫತ್ವಾ ಬಗ್ಗೆ ಮಾಹಿತಿ ಇಲ್ಲ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬಾಗದ ಆತ್ಮಗೌರವ

ರಾಗಿಮುದ್ದೆಯ ತಿಂದು ನಲಿದು ಬಾಳ್ವಾತಂಗೆ |
ಕಾಗೆ ಕದ್ದುಣುವ ಭಕ್ಷ್ಯವ ಕಂಡು ಕರುಬೆ ? ||
ನೀಗುವುದು ಹಸಿವನ್ ಉಣಿಸೆಂತಪ್ಪುದಾದೊಡಂ|
ಬಾಗಿಸದಿರಾತ್ಮವನು - ಮಂಕುತಿಮ್ಮ || 650 ||

ಪದ-ಅರ್ಥ: ಬಾಳ್ವಾತಂಗೆ = ಬಾಳುವವನಿಗೆ, ಕದ್ದುಣುವ = ಕದ್ದು + ಉಣುವ, ಕರುಬೆ = ಅಸೂಯೆಯೆ, ಉಣಿಸೆಂತಪ್ಪುದಾದೊಡಂ = ಉಣಿಸು(ಊಟ) + ಎಂತಪ್ಪುದು (ಎಂತಹುದು) + ಆದೊಡಂ, ಬಾಗಿಸದಿರಾತ್ಮವನು = ಬಾಗಿಸದಿರು + ಆತ್ಮವನು

ವಾಚ್ಯಾರ್ಥ: ಹೊಟ್ಟೆ ತುಂಬ ರಾಗಿಮುದ್ದೆಯನ್ನು ತಿಂದು ಸಂತೋಷವಾಗಿ ಬಾಳುವವನಿಗೆ ಕಾಗೆಯೊಂದು ಸಿಹಿತಿಂಡಿಯನ್ನು ಕದ್ದು ತಿನ್ನುವುದನ್ನು ಕಂಡು ಅಸೂಯೆಯೇ? ಆಹಾರ ಯಾವುದಾದರೇನು? ಹಸಿವು ಹಿಂಗಿದರೆ ಸಾಕು. ಅದಕ್ಕಾಗಿ ನಿನ್ನ ಆತ್ಮವನ್ನು ಬಾಗಿಸಬೇಡ.

ವಿವರಣೆ: ಅವನೊಬ್ಬ ಬಹುದೊಡ್ಡ ಶ್ರೀಮಂತ. ಅರಮನೆಯಂಥ ಮನೆ. ಅದರಲ್ಲಿ ಸಕಲ ಭಾಗ್ಯ, ಸೌಭಾಗ್ಯಗಳು ತುಂಬಿವೆ. ಆದರೆ ಯಜಮಾನನಿಗೆ ಸಮಾಧಾನವಿಲ್ಲ. ಅವನದು ಬಹುದೊಡ್ಡ ವ್ಯಾಪಾರ. ಹಗಲು ರಾತ್ರಿ ಹಣ ತರುವ, ಹೊಂದಿಸುವ ಯೋಚನೆ. ಹೇಗೆ ಮಾಡಿದರೆ ಲಾಭ ಹೆಚ್ಚಾದೀತೆಂಬ ಲೆಕ್ಕ. ಊಟದ ರುಚಿಯೇ ತಪ್ಪಿ ಹೋಗಿದೆ. ತಟ್ಟೆಯಲ್ಲಿರುವುದು ಪಂಚಭಕ್ಷ್ಯ ಪರಮಾನ್ನ. ಆದರೆ ಮನಸ್ಸು ಎಲ್ಲಿಯೋ. ರಾತ್ರಿ ನಿದ್ರೆ ಸರಿಯಾಗಿ ಬರದೇ ಒದ್ದಾಡುತ್ತಿದ್ದ. ಆಗ ಕೇಳಿಸಿತು, ಯಾರೋ ಸಂತೋಷದಿಂದ ಹೇಳಿಕೊಳ್ಳುತ್ತಿದ್ದ ಹಾಡು. ಮಹಡಿಯ ಮೇಲೆ ಹೋಗಿ ನೋಡಿದ. ಅವನ ಅರಮನೆಯ ಪಕ್ಕದಲ್ಲೊಂದು ಮುರುಕು ಗುಡಿಸಲು. ಅದರ ಮುಂದೆ ದಿನಗೂಲಿ ಮಾಡುವ ಮನುಷ್ಯ ಮತ್ತು ಅವನ ಹೆಂಡತಿ ಕುಳಿತಿದ್ದಾರೆ. ಅವರು ಸಂತೋಷದಿಂದ ಕೈ-ಕೈ ಹಿಡಿದುಕೊಂಡು ಮನದುಂಬಿ ಹಾಡುತ್ತಿದ್ದಾರೆ. ಅವರ ಊಟವೆಂದರೆ ನೀರು ಗಂಜಿ. ಶ್ರೀಮಂತನಿಗೆ ಆಶ್ಚರ್ಯ! ತಾನು ಅಷ್ಟು ದೊಡ್ಡ ಶ್ರೀಮಂತ. ತನ್ನ ಬಳಿ ಏನಿಲ್ಲ? ಆದರೆ ಆ ಸಂತೋಷವೆಲ್ಲಿ? ಅವನಿಗೆ ಹೊಟ್ಟೆಕಿಚ್ಚಾಯಿತು. ತಾನು ಅಷ್ಟು ಕಷ್ಟಪಟ್ಟು ಹಣ ಸಂಪಾದನೆ ಮಾಡಿದ್ದು ಆನಂದಕ್ಕೋಸ್ಕರ. ಈಗ ಹಣ ಬಂದಿದೆ ಆದರೆ ಆನಂದ ಮಾಯವಾಗಿದೆ. ಅವನು ಆ ಬಡಕೂಲಿಯ ಸಂತೋಷವನ್ನು ಕಂಡು ಕರುಬಿದ.

ಇಂಥದ್ದೇ ಒಂದು ಸನ್ನಿವೇಶವನ್ನು ಕಗ್ಗ ಕಣ್ಣಮುಂದೆ ತರುತ್ತದೆ. ಒಬ್ಬ ಮನುಷ್ಯ ರಾಗಿಮುದ್ದೆಯನ್ನು ತಿಂದು ಸಂತೋಷದಿಂದ ಬಾಳುತ್ತಿದ್ದಾನೆ. ಒಂದು ದಿನ ಅವನ ಕಣ್ಣಿಗೆ ಕಾಗೆಯೊಂದು ಪಕ್ಕದ ಮನೆಯ ಹಿತ್ತಲಿನಿಂದ ಒಂದು ಸಿಹಿತಿಂಡಿಯನ್ನು ಕದ್ದುಕೊಂಡು ಹೋಗುವುದು ಕಂಡಿತು. ಈಗ ಇಲ್ಲಿ ಎರಡು ಪ್ರಶ್ನೆಗಳು. ಮೊದಲಿಗೆ ತನಗಿಲ್ಲದ ಸಿಹಿತಿಂಡಿ ಕಾಗೆಗೆ ದೊರಕಿತಲ್ಲ ಎಂದು ಈತನಿಗೆ ಕಾಗೆಯ ಬಗ್ಗೆ ಅಸೂಯೆಯಾದೀತೇ? ನಂತರ, ಅಸೂಯೆಯಾಗುವುದು ಸರಿಯೆ?

ತನಗೆ ತನ್ನ ಪ್ರಯತ್ನದ ಫಲವಾಗಿ ರಾಗಿಮುದ್ದೆ ದೊರಕಿದೆ. ಅದನ್ನು ತಾನು ಸ್ವಂತ ಪರಿಶ್ರಮದಿಂದ ಗಳಿಸಿದ್ದು, ಕದ್ದದ್ದಲ್ಲ. ಕಾಗೆಗೆ ದೊರೆತದ್ದು ಸಿಹಿತಿಂಡಿಯೇ ಇರಬಹುದು, ತನ್ನ ರಾಗಿಮುದ್ದೆಗಿಂತ ರುಚಿಯಾಗಿದ್ದೇ ಇರಬಹುದು, ಆದರೆ ತನ್ನ ಆಹಾರ ಆತ್ಮಗೌರವದಿಂದ ಗಳಿಸಿದ್ದು. ಊಟ ಯಾವುದಾದರೇನು? ಅದು ಇರುವುದು ಹಸಿವನ್ನು ತಣಿಸುವುದಕ್ಕೆ. ಆತ್ಮಗೌರವದಿಂದ ಗಳಿಸಿದ ರಾಗಿಮುದ್ದೆ ಕದ್ದ ಸಿಹಿತಿಂಡಿಗಿಂತ ಮಿಗಿಲಾದದ್ದು ಎಂಬ ನಂಬಿಕೆ, ಅಭಿಮಾನವನ್ನು ತರುತ್ತದೆ. ಅದು ಆತ್ಮಗೌರವವನ್ನು ಕುಂದಿಸುವುದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಜೂನ್ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಪ್ರತಿಪದ್ ಗಂ. 13-32 ನಕ್ಷತ್ರ: ಮೂಲಾ ಗಂ. 18-33 ಯೋಗ: ಶುಭ ಗಂ. 05-28, ಶುಕ್ಲ ಗಂ. 25-14 ಕರಣ: ಕೌಲವ ಗಂ. 13-32, ವೃಷಭ ಮಾಸದ 31 ನೇ ದಿನ.
ರಾಹುಕಾಲ : ಮಧ್ಯಾಹ್ನ 12:00 - 01:30 ಸೂರ್ಯೋದಯ : 06-08 ಸೂರ್ಯಾಸ್ತ : 06-55 ಮುಸ್ಲಿಂ ದಿನಾಂಕ : 15 ಜುಲ್ಖಾಯದ್ ದಿನ ವಿಶೇಷ : ಗುರು ಹರಗೋವಿಂದರ ಜನ್ಮದಿನ (ಜಮ್ಮು ಮತ್ತು ಕಾಶ್ಮೀರ), ರಜಸ್ ಸಂಕ್ರಾಂತಿ
ಅದೃಷ್ಟ ಸಂಖ್ಯೆ : 3, 8

ಮೇಷ: ಉದ್ಯೋಗದಲ್ಲಿ ಅನಿಶ್ಚಿತತೆ ದೂರಾಗುವುದು. ದಂತವೈದ್ಯ ವೃತ್ತಿಯವರಿಗೆ ಹಾಗು ದಂತ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಅನುಕೂಲವಾದ ದಿನ. ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ಸಮಸ್ಯೆ, ವರಮಾನದ ಹೆಚ್ಚಳ.

ವೃಷಭ: ನೀವು ಎಲ್ಲರೊಂದಿಗೆ ಮುಕ್ತವಾಗಿ ಬೆರೆಯುವುದನ್ನು ಜನ ಬಳಿಕೆ ಮಾಡಿಕೊಳ್ಳುವುದನ್ನು ಅಭ್ಯಾಸಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ವಿಚಾರದಲ್ಲಿ ಎಂದಿಗೂ ಮರೆಯಲಾಗದ ಒಂದು ಕಹಿ ಘಟನೆ ನಡೆಯಬಹುದು.

ಮಿಥುನ: ತಾಂತ್ರಿಕ ಕ್ಷೇತ್ರದಲ್ಲಿ ಗುರಿ ಮುಟ್ಟುವ ಗಣನೀಯ ಸಾಧನೆ ತೋರಿ ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾಗುವಿರಿ. ಸಕಾಲಕ್ಕೆ ಸ್ನೇಹಿತರಿಂದ ಹಣದ ಸಹಾಯ. ನೀವು ಮಾಡುವ ಕೆಲಸದಲ್ಲಿ ಒಳ್ಳೆಯ ಲಾಭವನ್ನು ಪಡೆಯುವಿರಿ.

ಕರ್ಕಾಟಕ: ವಿದೇಶ ಶಿಕ್ಷಣದ ಪ್ರಯತ್ನವನ್ನು ನೆಡೆಸಿದಲ್ಲಿ ಅವಕಾಶಗಳು ಪ್ರಾಪ್ತಿ. ವಕೀಲಿ ವೃತ್ತಿಯನ್ನು ಅಭ್ಯಾಸಿಸುವವರಿಗೆ ಪಾಪ-ಪ್ರಜ್ಞೆ ಕಾಡಲಿದೆ. ಯಾವುದಾದರೂ ಹೊಸ ವಿಚಾರವನ್ನು ಕಲಿಯಲು ಈ ದಿನ ಸರಿಯಲ್ಲ.

ಸಿಂಹ: ಎಲ್ಲಾ ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕುವ ಯೋಚನೆ ಸರಿಯಾದ ಮಾರ್ಗ. ರಾಜಕೀಯದಲ್ಲಿ ಹೆಚ್ಚಿನ ಪ್ರಭಾವ ಹೊಂದಲು ರಾಜಕೀಯ ಧುರೀಣರ ಕೃಪಾಕಟಾಕ್ಷ ಪಡೆದುಕೊಳ್ಳ ಬೇಕಾಗುವುದು.

ಕನ್ಯಾ: ವಿಷಯಗಳನ್ನು ಹಿಡಿತಕ್ಕೆ ತೆಗೆದುಕೊಂಡು ಉತ್ಸಾಹದಿಂದ ಕಾರ್ಯ ಪ್ರವೃತ್ತರಾಗುವಿರಿ. ದೃಷ್ಟಿ ದೋಷ ಸರಿಪಡಿಸಿಕೊಳ್ಳಲು ವೈದ್ಯರನ್ನು ಭೇಟಿಮಾಡಿ. ಕಣ್ಣಿನ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಅನಾಹುತಕ್ಕೆ ನಾಂದಿ.

ತುಲಾ: ಮಗನಿಗೆ ಸಂಸ್ಥೆ ವತಿಯಿಂದ ವಿದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ನೆರವು. ತೆರೆ ಮರೆಯಲ್ಲಿ ನಡೆಯುತ್ತಿರುವ ನಿಮ್ಮ ವಿರುದ್ಧದ ಸಂಚು, ರಾಜಕೀಯ ಚಟುವಟಿಕೆಗಳನ್ನು ಆಪ್ತರೊಬ್ಬರ ಮೂಲಕವಾಗಿ ತಿಳಿದುಕೊಳ್ಳುವಿರಿ.

ವೃಶ್ಚಿಕ: ವೃತ್ತಿ ಜೀವನದಲ್ಲಿ ಉತ್ತಮ ಸುಧಾರಣೆ. ಷೇರು ವ್ಯವಹಾರದಲ್ಲಿ ಹೆಚ್ಚಿನ ಹಣವನ್ನು ಹೂಡಿಕೆ ಮಾಡುವಂತಾಗಲಿದೆ. ಅತಿಯಾದ ಆಲಸ್ಯ ನಿಮ್ಮನ್ನು ಕಾಡಲಿದೆ. ವಿನಾಯಕನ ದರ್ಶನದಿಂದ ಹೆಚ್ಚಿನ ಅನುಕೂಲವಿರುವುದು.

ಧನು: ಸ್ನೇಹಿತರ ಹಾಗೂ ಕುಟುಂಬದವರ ಸಲಹೆ ಮೇರೆಗೆ ಕೆಲವು ಉತ್ತಮ ಬದಲಾವಣೆಗಳನ್ನು ಮಾಡಿಕೊಳ್ಳುವಿರಿ. ನಿಧಾನಗತಿಯಲ್ಲಿ ತಂದೆಯವರ ಆರೋಗ್ಯ ಉತ್ತಮವಾಗಲಿದೆ. ಸಹೋದರನ ವಿದ್ಯಾಭ್ಯಾಸಕ್ಕೆ ನೆರವಾಗುವಿರಿ.

ಮಕರ: ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ. ಕಾರ್ಯ ಕ್ಷೇತ್ರದಲ್ಲಿ ಉತ್ತಮ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಅಗತ್ಯ. ಸ್ವಂತವಾಗಿ ವ್ಯವಹಾರ ಮಾಡುವವರು, ವಿದ್ಯಾರ್ಥಿಗಳು ಪ್ರಗತಿ ಸಾಧಿಸುವರು.

ಕುಂಭ: ಕೌಟುಂಬಿಕವಾಗಿ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವಿರಿ. ಸ್ಥಾನ ಬದಲಾವಣೆಯಿಂದ ಧನ ಲಾಭ. ಚಿಲ್ಲರೆ ವ್ಯಾಪಾರಿಗಳಿಗೆ, ರೈತವರ್ಗದವರಿಗೆ ಅನುಕೂಲಕರ ದಿನಗಳು. ಅಲಂಕಾರಿಕ ವಸ್ತುಗಳ ಮಾರಾಟದಲ್ಲಿ ಹೆಚ್ಚಳ.

ಮೀನ: ಮಾತನಾಡುವ, ಗೆಳೆತನವನ್ನು ಬೆಳೆಸಿಕೊಳ್ಳುವ ನಡುವಳಿಕೆಯನ್ನು ರೂಢಿಸಿಕೊಳ್ಳಿ. ಮನೆಯ ಪತ್ರ ಅಥವಾ ಕಂದಾಯ ಇಲಾಖೆಯ ವ್ಯವಹಾರದಲ್ಲಿ ಸಂಕಷ್ಟ. ಕಾನೂನಾತ್ಮಕವಾದ ನಿಮ್ಮ ಪ್ರಯತ್ನ ಫಲಕಾರಿಯಾಗುವುದು.

ಪದಬಂಧ 4989

- ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಉರಿಯಲ್ಲಿ ಕಾಣುತಿಹನಲ್ಲಾ ಈ ವಾರಸುದಾರ! (6)
4. ಇದು ಚಿಲ್ಲರೆ ಹಣ (4)
5. ಗಮನ ಹರಿಸಿದಾಗ ಕಾಣಿಸಿದ ಆಕಾಶ (3)
7. ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
10. ತಣಿಯಲು ನೀರು ನೀಡಿರುವ ಯುವತಿ (3)
11. ಕಠಿಣವಾದುದು ಇದು (3)
13. ರುಚಿಕಟ್ಟಾದ ಅಡುಗೆಯನ್ನು ಹೀಗೆನ್ನುವರು (4)
15. ಇದು ಚರ್ಚಿಸುವ ವೇದಿಕೆ (6)

ಮೇಲಿಂದ ಕೆಳಕ್ಕೆ

1. ಉರುವಲ ಹತ್ತಿರವೇ ಹಾವು ಬಂದಿದೆಯಲ್ಲಾ? (3)
2. ಪುರಿಯಲ್ಲಿರುವ ಶತ್ರು (2)
3. ಇನ್ನೂ ಬಲಿಯದ ಕಾಯಿ (4)
6. ಅದೇ ತಾನೆ ಕಡೆದು ತೆಗೆದ ಹೊಸಬೆಣ್ಣೆ (4)
7. ಮೆಟ್ಟಿಲುಳ್ಳ ಕೊಳ (3)
8. ಈತ ಲೋಪಗಳನ್ನು ಸರಿಪಡಿಸುವವ (4)
9. ಹೊಸದಾಗಿ ಅಭಿನಯಿಸುತ್ತಿರುವವಳು (4)
12. ಸಿಡುಬಿನ ಹಾಲು (3)
14. ಕವಿತೆ ಬರೆಯುವವನು (2)



4988ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಅರಸ 3. ಹೊಂಬಣ್ಣ 4. ಮತಿಹೀನ 6. ಮಂದಿ 7. ಕೆಲಸ 9. ಸೆರೆಮನೆ 10. ಅನುಮತಿ 11. ಗುಲಾಬಿ 13. ಸಿಪ್ಪೆ 14. ರಥೋತ್ಸವ 16. ಮಡಿಲು 17. ರಜತ

ಮೇಲಿಂದ ಕೆಳಕ್ಕೆ:
1. ಅಣ್ಣ 2. ಸಮ 3. ಹೊಂದಿಕೆ 5. ನಮೂನೆ 8. ಸನ್ಮತಿ 9. ಸೆರಗು 10. ಅಸುರ 12. ಬಿಸಿಲು 15. ವರ 16. ಮತ

ಸುಡೊಕು 5375

4		7		8			2	
								8
6		5		9		4		
	2		6				3	
5		3	2		1	8		
	1				9		4	
	6			2				
		8	9					7
	5			3	4		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5374 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಕೊಬ್ಬರಿ ಧಾರಣೆ

ಬೆಂಗಳೂರು ₹16000-16500

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,744
ಇಂದಿನ ಅಂತ್ಯ	15,732
▼	42
ದಿನದ ಗರಿಷ್ಠ	15858

ವಿನಿಮಯ ದರ

$ ಡಾಲರ್	78.04
£ ಪೌಂಡ್	94.43
€ ಯುರೊ	81.4
¥ ಯೆನ್ (100ಕ್ಕೆ)	58.01

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹520
12 ಮೊಟ್ಟೆಗೆ ₹68
ಮೈಸೂರು
100 ಮೊಟ್ಟೆಗೆ ₹522

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1615)
ಸೋಯಾ (ರಿಫೈನ್ಡ್)	₹1485 (1495)
ಸೂರ್ಯಕಾಂತಿ (ರಿಫೈನ್ಡ್)	₹1765 (1770)
ಪಾಮೋಲಿನ್	₹1435 (1442)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹12000-15000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹233-602
ದ್ವಿತಳಿ (ಬಿ.ವಿ) ₹218-816

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಹದಿಮೂರನೇ ವರ್ಷದ ಸವಿನೆನಪಿಗಾಗಿ



ಶ್ರೀ ಸಿ. ಲೋಕೇಶ್ ರೆಡ್ಡಿ
ಜನನ: 17-01-1978 ಮರಣ: 15-06-2009
ನಂ 5, ಹೆಚ್.ವಿ. ರೆಡ್ಡಿ ಲೇಔಟ್, ಕುಂದಲಹಳ್ಳಿ, ಬೆಂ.
ನೀನು ನಮ್ಮನಗಲಿ ಇಂದಿಗೆ ಹದಿಮೂರು ವರ್ಷಗಳಾದರೂ ನಿನ್ನ ನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ಅನುದಿನವೂ, ಅನುಕ್ಷಣವೂ, ನಿನ್ನ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ. ಭಗವಂತನು ನಿನ್ನ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.
ದುಃಖತಪ್ತರು:
ತಂದೆ-ತಾಯಿ ಮತ್ತು ಕುಟುಂಬ ವರ್ಗದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	470

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000–54500

ಭದ್ರಾವತಿ

ರಾಶಿ	45100-49091

ಚಿತ್ರದುರ್ಗ

ಆಪಿ	49119-49529
ಬೆಟ್ಟೆ	37949-38379
ಕೆಂಪುಗೋಟು	27609-28010
ರಾಶಿ	48639-49069
ಹೊಸತು	40000-45000
ಹಳತು	46000-54500

ಮಂಗಳೂರು

ಕೋಕ	20000-24000

ಸಾಗರ

ಬಿಳಿಗೋಟು	24619-26499
ಚಾಲಿ	36199-36563
ಕೋಕ	16989-29499
ಕೆಂಪುಗೋಟು	16890-34199
ರಾಶಿ	39009-48899
ಸಿಪ್ಪೆಗೋಟು	19610-19610

ಶಿವಮೊಗ್ಗ

ಬೆಟ್ಟೆ	50029-53199
ಗೊರಬಲು	16009–37699
ರಾಶಿ	46001-49069
ಸರಕು	58100-79496

ಸಿದ್ದಾಪುರ

ಬಿಳಿಗೋಟು	23399-29699
ಚಾಲಿ	34099-38399
ಕೋಕ	21099-31182
ಕೆಂಪುಗೋಟು	28681-31980
ರಾಶಿ	45569-48609
ತಟ್ಟಿಬೆಟ್ಟೆ	35699-46399

ಶಿರಸಿ

ಬೆಟ್ಟೆ	26000-43611
ಬಿಳಿಗೋಟು	20199-32009
ಚಾಲಿ	33299-39869
ರಾಶಿ	37009-48098

ಯಲ್ಲಾಪುರ

ಬಿಳಿಗೋಟು	26899-31899
ಚಾಲಿ	34320-39099
ಕೋಕ	18699-30599
ಕೆಂಪುಗೋಟು	27226-34799
ರಾಶಿ	44599-51599
ತಟ್ಟಿಬೆಟ್ಟೆ	37560-43459

ಎನ್.ಆರ್.ಪುರ ರಬ್ಬರ್
ನರಸಿಂಹರಾಜಪುರ

ಆರ್‌ಎಸ್‌ಎಸ್ 4	174
ಆರ್ ಎಸ್‌ಎಸ್ 5	166
ಗುಡ್ ಲಾಟ್	158

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15900	16400	223.35 ಸೆಂಟ್ಸ್
ಎಸಿ	8960	8600	9025	
ಆರ್‌ಪಿ	97500	9050	10,075	
ಆರ್‌ಸಿ	4800	4450	4625	2039 ಡಾಲರ್ಸ್

ಸಾಲ, ಠೇವಣಿಗೆ ಬಡ್ಡಿ ಹೆಚ್ಚಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): ದೇಶದ ಅತಿ ದೊಡ್ಡ ಬ್ಯಾಂಕ್ ಆಗಿರುವ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಠೇವಣಿ ಹಾಗೂ ಸಾಲದ ಬಡ್ಡಿ ದರ ಹೆಚ್ಚಿಸಿದೆ.

₹ 2 ಕೋಟಿಗಿಂತ ಕಡಿಮೆ ಮೊತ್ತದ ಅವಧಿ ಠೇವಣಿಗಳ ಬಡ್ಡಿ ದರವನ್ನು ಗರಿಷ್ಠ ಶೇ 0.20ರಷ್ಟು ಹೆಚ್ಚಿಸಲಾಗಿದೆ. ಇದು ಮಂಗಳವಾರದಿಂದಲೇ ಜಾರಿಗೆ ಬಂದಿದೆ. 211 ದಿನಗಳಿಂದ 1 ವರ್ಷದವರೆಗಿನ ಠೇವಣಿಗೆ ಇನ್ನು ಮುಂದೆ ಶೇ 4.60ರಷ್ಟು (ಈವರೆಗೆ ಶೇ 4.40ರಷ್ಟು) ಬಡ್ಡಿ ಸಿಗಲಿದೆ. 1 ವರ್ಷಕ್ಕಿಂತ ಹೆಚ್ಚು 2 ವರ್ಷದೊಳಗಿನ ಠೇವಣಿಗೆ ಶೇ 5.30 ಬಡ್ಡಿ ನೀಡಲಾಗುತ್ತದೆ. 2 ವರ್ಷಕ್ಕಿಂತ ಹೆಚ್ಚಿನ 3 ವರ್ಷವರೆಗಿನ ಠೇವಣಿಗೆ ಶೇ 5.35ರಷ್ಟು (ಈವರೆಗೆ ಶೇ 5.20) ಬಡ್ಡಿ ಸಿಗಲಿದೆ. ಈ ಎಲ್ಲ ಠೇವಣಿಗಳಿಗೆ ಹಿರಿಯ ನಾಗರಿಕರಿಗೆ ಹೆಚ್ಚುವರಿಯಾಗಿ ಶೇ 0.50ರಷ್ಟು ಬಡ್ಡಿ ಸಿಗಲಿದೆ.

ಎಂಸಿಎಲ್‌ಆರ್ ಆಧಾರಿತ ಸಾಲದ ಬಡ್ಡಿ ದರವನ್ನು ಬುಧವಾರದಿಂದ ಜಾರಿಗೆ ಬರುವಂತೆ ಎಸ್‌ಬಿಐ ಹೆಚ್ಚಿಸಿದೆ. ಒಂದು ವರ್ಷದ ಎಂಸಿಎಲ್‌ಆರ್ ದರವು ಇನ್ನು ಮುಂದೆ ಶೇ 7.40 ಆಗಲಿದೆ (ಈವರೆಗೆ ಶೇ 7.20 ಇತ್ತು). ಬಹುತೇಕ ವಾಹನ, ಗೃಹ ಮತ್ತು ವೈಯಕ್ತಿಕ ಸಾಲಗಳ ಬಡ್ಡಿ ದರವು ಎಂಸಿಎಲ್‌ಆರ್ ದರದ ಜೊತೆ ಬೆಸೆದುಕೊಂಡಿದೆ.

ರೆಪೊ ಆಧಾರಿತ ಸಾಲದ ದರವನ್ನು ಬುಧವಾರದಿಂದ ಅನ್ವಯವಾಗುವಂತೆ ಶೇ 7.15ಕ್ಕೆ (ಇದುವರೆಗೆ ಶೇ 6.65 ಆಗಿತ್ತು) ಏರಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ
14-6-2022

ಜಾವಾ 70/80(ಹೊಸ)	10600-10650
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10300-10350
ದಪ್ಪ ಗುಜರಾತ್(ಹೊಸ)	11100-11150

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1625)
ಒಂದು ವಾರದ ಡೆಲಿವರಿ	1605 (1620)
ಸೋಯಾ ಕಚ್ಚಾ	1420 (1440)
ಪಾಮ್ ವಾರದ ಡೆಲಿವರಿ	1433 (1440)
ಸೂರ್ಯಕಾಂತಿ ಎಣ್ಣೆ ಕಚ್ಚಾ	1740 (1740)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
50,400 (51,100)
ಬೆಳ್ಳಿ ಕೆ.ಜಿ 60,000 (60,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಶಿಕ್ಷಣ

Admission

ಕರ್ನಾಟಕ ಅಂಧರ ಕ್ಷೇಮಾಭ್ಯುದಯ ಸಂಸ್ಥೆಯ ವಸತಿಯುತ ಶಾಲೆಗೆ 5 ರಿಂದ 14 ವರ್ಷದವರೆಗಿನ ಗಂಡು ಮತ್ತು ಹೆಣ್ಣು ಮಕ್ಕಳ ಪ್ರವೇಶಕ್ಕೆ ಅವಕಾಶವಿದೆ ಸಂಪರ್ಕಿಸಿ: 9741122706, 9743708290

ವಾಹನ

Four Wheelers Selling

TATA



ತಕ್ಷಣ ಬೇಕಾಗಿದ್ದಾರೆ: ಹೌಸ್‌ಕೀಪಿಂಗ್, ಆಫೀಸ್‌ಬಾಯ್, ಆಫೀಸ್ ಅಸಿಸ್ಟೆಂಟ್,ಸಿವಿಲ್ ಹೆಲ್ಪರ್, ಐಟಿಐ ಕ್ವಾಲಿಫೈಡ್ ಟೆಕ್ನಿಷಿಯನ್.ಸಂಬಳ: 12,500-15,000/-. ಸಂಪರ್ಕಿಸಿ: 080-26951212 / 9148578592

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

Accounts & Finance

ACCOUNTANT REQD for Seema Traders, APMC Yard, Yeshwantpur. Female candidates only. Contact: 9448077986, raviseema14@gmail.com

Engg/ Production Technical

WANTED ELECTRICIAN - G K Vale Experienced Electrician & Maintenance Engineer. To Maintain all electrical infrastructure of 20 stores across Bangalore-Compressor, AC, UPS, CCTV, etc. Must have 2 Wheeler. Contact: 9663972041

ಬೇಕಾಗಿದ್ದಾರೆ
ನೆಲಮಂಗಲ ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠಕ್ಕೆ ಬ್ರಾಹ್ಮಣ ಅಥವಾ ಲಿಂಗಾಯಿತ ಅಡುಗೆಯವರು ಮತ್ತು ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಪುರೋಹಿತರು (ಪುರುಷರೊಬ್ಬರೇ ಸ್ಥಳದಲ್ಲೇ ವಾಸಿಸಲು) ಬೇಕಾಗಿದ್ದಾರೆ.
ಸಂಪರ್ಕಿಸಿ:
63606 42618, 94802 59762

ವ್ಯಾಪಾರ

Business Offers

General

ಪ್ರತಿತಿಂಗಳು 65,000/ ರಿಂದ 90,000/ ಗಳಿಸಿರಿ. ಪೇಪರ್ ಬ್ಯಾಗ್ಸ್, LEDಬಲ್ಬ್ಸ್, ಟೀಕಪ್ಸ್‌ಗಳ ಉತ್ಪಾದನಾ ಘಟಕವನ್ನು ಮನೆಯಲ್ಲಿಯೇ ಅಳವಡಿಸಿ. ನಾವು ಮರುಖರೀದಿಯ ಒಪ್ಪಂದದ ಜೊತೆಗೆ, ಉಚಿತವಾಗಿ ರಾಮೆಟಿರಿಯಲ್ ಗಳನ್ನು ನೀಡುತ್ತೇವೆ. ವಿವರಗಳಿಗಾಗಿ: 9958628785

ಸಾರ್ವಜನಿಕ ಪ್ರಕಟಣೆ

CENTURY CLUB
1, Seshadri Road, Bangalore — 560 001
Ph.: 22214121/22214122/22214123
Tender Notification
Sealed tenders are invited from the reputed Contractors/Firms for the installation of Sewage Treat Plant as per guidelines of the Pollution Control Board.
Tender forms costing Rs.1,000/- may be obtained from the Club office between 10 am and 6 pm on all working day from 15.06.2022 to 25.06.2022.
The last date for submission of sealed Tender is 10.07.2022 by 5 pm at the Drop Box in the Century Club office. The sealed Tenders will be opened at 6 pm on the same day.
The total project cost is Rs.65,00,000/- for Installation of Sewage Treatment Plant capacity 50 KLD (for Electro-mechanical equipment) & 100 KLD (for Civil Works).
Sd/-
E. G. Jaideep
Hon. Secretary

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 17.06.2022 8ದಿನಗಳು ಡಾರ್ಜಲಿಂಗ್,ಗ್ಯಾಂಗಟಕ್, ನಾಂಚಿ,ಮಿರಿಕ್,ಲಾಚೆನ್, 05.07.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ(ಅಮರಕಂಟಕ, ಮಯ್ಯಾರ್,ಚಿತ್ರಕೂಟ,ಕಳ್ಳೆಂಜರ್ ಸಹಿತ),05.07.2022 13ದಿನಗಳು ಚಂಡೀಗಡ್,ಸಿಮ್ಲಾ,ಮನಾಲಿ, 5ದೇವಿಯರು,ವೈಷ್ಣೋದೇವಿ, ಡಾಲ್‌ಹೌಸಿ,ಜಮ್ಮು, ಅಮೃತಸರ್,ಕುರುಕ್ಷೇತ್ರ, 22.07.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ (ಮುಕ್ತಿನಾಥ ಸಹಿತ). 22.07.2022 10ದಿನಗಳು ಅಖಂಡ ಗುಜರಾತ್ ರಾಜ್ಯಪ್ರವಾಸ.(ವಲ್ಲಭಭಾಯಿ ಪ್ರತಿಮೆ,ನಿಷ್ಕಳಂಕ,ಡಿಯು ಸಹಿತ) 8073824856/ 9206979202/ 6366322639

ಸ್ವಯಂಭೂ ಹಿಮಲಿಂಗ ಅಮರನಾಥ್, ವೈಷ್ಣವಿದೇವಿ ಕಾಶ್ಮೀರ್ ಅಮೃತಸರ್ 26.06.2022 ರಿಂದ 13/17 ದಿನಗಳು. ಚಿತ್ರಕೂಟ, ನೈಮಿಶಾರಣ್ಯ ಕಾಶಿ,ಗಯಾ, ಪ್ರಯಾಗ,ಅಯೋಧ್ಯ 8 ದಿನಗಳು. ಸಿಕ್ಕಿಂ,ಕಾಮಕ್ಯ, ಡಾರ್ಜಲಿಂಗ್, ಪುರಿ,ಭುವನೇಶ್ವರ್ 14 ದಿನಗಳು. 07.08.2022 14.08.2022 ರಿಂದ ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

26.06.2022 07.07.2022 ರಿಂದ 10/13/24 ದಿನಗಳ ಪುರಿಜಗನ್ನಾಥ್ ಕಾಶಿ.,ಗಯಾ, ಅಯೋಧ್ಯ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ, ವೈಷ್ಣೋದೇವಿ ಅಮೃತ್‌ಸರ್ ದೆಹಲಿ/ 07.08.2022 07.09.2022 ರಿಂದ 11/13 ದಿನಗಳ ಮುಕ್ತಿನಾಥ್, ಜನಕಪುರಿ,ನೇಪಾಳ ನೈಮಿಶಾರಣ್ಯ, ಗೋರಕ್‌ಪುರ್ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290 9019301300

9.7.2022 ಗುಜರಾತ್, ಮಧ್ಯಪ್ರದೇಶ್4.9.2022, 3.10.2022ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್4.9.2022, 4.10.2022ದೆಹಲಿ, ಅಮೃತ್‌ಸರ್, ವೈಷ್ಣೋದೇವಿ,ಕಾಶಿ, ಪ್ರಯಾಗ್‌ರಾಜ್, ಗಯಾ,ನೇಪಾಳ, ಮುಕ್ತಿನಾಥ್, ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

13.7.2022 13/7ದಿನಗಳು ವಿಮಾನ,ACಬಸ್, ಊಟ,ರೂಂ ವಸತಿಯೊಂದಿಗೆ ಕಾಶಿ,ಗಯಾ, ಆಗ್ರಾ,ದೆಹಲಿ,ಅಯೋಧ್ಯ, ನೈಮಿಷರಣ್ಯಾ.,04.09.2022 12ದಿನಗಳು ನೇಪಾಳ,ಕಠ್ಮಂಡು, ಮುಕ್ತಿನಾಥ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ).6363416487/ 9902433500

ಉದ್ಯೋಗಾವಕಾಶ

General

✓ ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-. ಆಸಕ್ತರು ಸಂಪರ್ಕಿಸಿ: 9620557000, 9620985000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

ಚಿತ್ರದುರ್ಗ/ ತುಮಕೂರಿನಲ್ಲಿ S3IDFನAgriculture - FPO / Sanitation ಸಂಬಂಧಿತ ಪ್ರಾಜೆಕ್ಟ್ ಕೆಲಸಕ್ಕೆ ಇಬ್ಬರು ಪ್ರಾಜೆಕ್ಟ್‌ಅಸೋಸಿಯೇಟ್ಸ್ ಬೇಕಾಗಿದ್ದಾರೆ. ವಿದ್ಯಾರ್ಹತೆ: ಡಿಗ್ರಿ /ಡಿಪ್ಲೊಮಾ ಹೆಚ್ಚಿನ ಮಾಹಿತಿಗಾಗಿ: www.s3idf.org/get-involved/careers

ಬೇಕಾಗಿದ್ದಾರೆ: ಅಟೆಂಡರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

ಭವಿಷ್ಯ

Astrology

★॥ಶ್ರೀಹುಲಿಗೆಮ್ಮ_ಚೌಡೇಶ್ವರಿ ಜೋತಿಷ್ಯರು॥★ ಸ್ತ್ರೀಪುರುಷ_ವಶೀಕರಣ ಸಂಭೋಗ ವಶೀಕರಣ ಇನ್ನುಯಾವುದೇ ಘೋರ ನಿಗೂಡ ಗುಪ್ತಕಠಿಣ ಸಮಸ್ಯೆಗಳಿಗೆ 11ನಿಮಿಷಗಳಲ್ಲಿ ಶಾಶ್ವತ_ಪರಿಹಾರ ನಂಬಿ_ಕರೆಮಾಡಿ 9606735267

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
ಪ್ರಜಾವಾಣಿ

Classifieds
EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

ದಾಖಲೆ ಮಟ್ಟಕ್ಕೆ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಮೇ ತಿಂಗಳಿನಲ್ಲಿ ಸಗಟು ಹಣದುಬ್ಬರ ಪ್ರಮಾಣವು ದಾಖಲೆಯ ಶೇಕಡ 15.88ಕ್ಕೆ ಏರಿಕೆ ಆಗಿದೆ. ಕಚ್ಚಾ ತೈಲದ ಬೆಲೆ ಹೆಚ್ಚಳ, ಬಿಸಿಗಾಳಿಯ ಪರಿಣಾಮವಾಗಿ ತರಕಾರಿ ಮತ್ತು ಹಣ್ಣುಗಳ ಬೆಲೆ ಜಾಸ್ತಿ ಆಗಿದ್ದು ಈ ಏರಿಕೆಗೆ ಕಾರಣ.



ಸಗಟು ಹಣದುಬ್ಬರದ ಏರಿಕೆಯು, ರೆಪೊ ದರವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮತ್ತೆ ಹೆಚ್ಚಿಸಬಹುದು ಎಂಬ ನಿರೀಕ್ಷೆಯನ್ನು ಇನ್ನಷ್ಟು ಬಲಗೊಳಿಸಿದೆ.

ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರ ಪ್ರಮಾಣವು ಸತತ ಮೂರು ತಿಂಗಳುಗಳಿಂದ ಹೆಚ್ಚಾಗುತ್ತಿದೆ. ಅಲ್ಲದೆ, ಸತತ 14 ತಿಂಗಳುಗಳಿಂದ ಎರಡಂಕಿ ಮಟ್ಟದಲ್ಲಿ ಇದೆ.

'ಖನಿಜ ತೈಲ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಆಹಾರ ವಸ್ತುಗಳು, ಮೂಲ ಲೋಹಗಳು, ಆಹಾರೇತರ ವಸ್ತುಗಳು, ರಾಸಾಯನಿಕಗಳು, ರಾಸಾಯನಿಕ ಉತ್ಪನ್ನಗಳ ಬೆಲೆ ಹೆಚ್ಚಳವು ಹಣದುಬ್ಬರ ಏರಿಕೆಗೆ ಪ್ರಮುಖ ಕಾರಣ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಏಪ್ರಿಲ್‌ನಲ್ಲಿ ಸಗಟು ಹಣದುಬ್ಬರವು ಶೇ 15.08ರಷ್ಟು ಇತ್ತು. ಹಿಂದಿನ ವರ್ಷದ ಮೇ ತಿಂಗಳಲ್ಲಿ ಇದು ಶೇ 13.11ರಷ್ಟಾಗಿತ್ತು. ಹಳೆಯ ಹಣದುಬ್ಬರ ಸರಣಿಯನ್ನೂ ಪರಿಗಣಿಸಿದರೆ, 1991ರ ಆಗಸ್ಟ್ (ಶೇ 16.06) ನಂತರದ ಗರಿಷ್ಠ ಪ್ರಮಾಣದ ಹಣದುಬ್ಬರ ಮೇನಲ್ಲಿ ದಾಖಲಾಗಿದೆ.

ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ನಾಲ್ಕು ತಿಂಗಳ ನಂತರ ಎರಡಂಕಿ ಮಟ್ಟವನ್ನು ದಾಟಿದೆ. ಮೇ ತಿಂಗಳಲ್ಲಿ ಅದು ಶೇ 12.34 ಆಗಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ ಶೇ 7.04ಕ್ಕೆ ಕಡಿಮೆ ಆಗಿದೆ. ಮಿತಿಯನ್ನು ಮೀರಿರುವ ಹಣದುಬ್ಬರ ನಿಯಂತ್ರಣಕ್ಕೆ ಆರ್‌ಬಿಐ 2 ಬಾರಿ ರೆಪೊ ದರ ಹೆಚ್ಚಿಸಿದೆ.

'ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಹೆಚ್ಚಾಗಿರುವ ಕಾರಣ, ಸಗಟು ಹಣದುಬ್ಬರ ಪ್ರಮಾಣವು ಜೂನ್ ತಿಂಗಳಿನಲ್ಲಿಯೂ ಹೆಚ್ಚಿನ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿದಿರುವುದು ಕೂಡ ಹಣದುಬ್ಬರದ ಮೇಲೆ ಒತ್ತಡ ಸೃಷ್ಟಿಸಲಿದೆ. ಇದರಿಂದಾಗಿ ಜೂನ್ ತಿಂಗಳಿನಲ್ಲಿಯೂ ಸಗಟು ಹಣದುಬ್ಬರ ಪ್ರಮಾಣವು ಶೇ 15ರಿಂದ 16ರ ಮಟ್ಟದಲ್ಲಿ ಇರುವ ಸಾಧ್ಯತೆ ಇದೆ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಮುಂದಿನ ಎರಡು ಸಭೆಗಳಲ್ಲಿ ರೆಪೊ ದರವನ್ನು ಒಟ್ಟು ಶೇ 0.60ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ ಎಂದೂ ನಯ್ಯರ್ ಹೇಳಿದ್ದಾರೆ.

ಎಲ್‌ಐಸಿಯಿಂದ ಧನ ಸಂಚಯ ಯೋಜನೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಧನ ಸಂಚಯ ಹೆಸರಿನ ಹೊಸ ಯೋಜನೆಯನ್ನು ರೂಪಿಸಿದೆ. ಕನಿಷ್ಠ ಐದು, ಗರಿಷ್ಠ 15 ವರ್ಷಗಳಿಗೆ ಈ ಯೋಜನೆ ಆಯ್ಕೆ ಮಾಡಿಕೊಳ್ಳಬಹುದು. ವಿಮೆಯನ್ನು ಹೊಂದಿರುವ ವ್ಯಕ್ತಿ, ವಿಮೆ ಅವಧಿಯಲ್ಲಿ ಮೃತಪಟ್ಟರೆ ಕುಟುಂಬದ ಸದಸ್ಯರಿಗೆ ಹಣಕಾಸಿನ ನೆರವು ಸಿಗಲಿದೆ ಎಂದು ತಿಳಿಸಿದೆ.

ರಾಮ್ಕೊ ಸಿಮೆಂಟ್ಸ್‌ಗೆ ಪ್ರಶಸ್ತಿ

ಬೆಂಗಳೂರು: ರಾಮ್ಕೊ ಸಿಮೆಂಟ್ಸ್ ಕಂಪನಿಯ ಅಲತ್ತಿಯೂರ್ ಘಟಕವು ಇಂಧನದ ಅತ್ಯುತ್ತಮ ನಿರ್ವಹಣೆಯಲ್ಲಿ ರಾಷ್ಟ್ರೀಯ ಪುರಸ್ಕಾರ ವಿಭಾಗದಲ್ಲಿ 'ಇಂಧನ ದಕ್ಷ ಘಟಕ' ಪ್ರಶಸ್ತಿ ಗೆದ್ದಿದೆ.

ಭಾರತೀಯ ಕೈಗಾರಿಕಾ ಒಕ್ಕೂಟವು ನಡೆಸಿದ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಈ ಪ್ರಶಸ್ತಿ ಗೆದ್ದುಕೊಂಡಿದೆ.

ಸೆನ್ಸೆಕ್ಸ್ ಮತ್ತಷ್ಟು ಇಳಿಕೆ

ಮುಂಬೈ (ಪಿಟಿಐ): ಜಾಗತಿಕ ಷೇರು ಪೇಟೆಗಳಲ್ಲಿ ಇಳಿಕೆ ಹಾಗೂ ವಿದೇಶಿ ಬಂಡವಾಳ ಹೊರಹರಿವಿನ ಕಾರಣದಿಂದಾಗಿ ಹೂಡಿಕೆದಾರರು ರಿಸ್ಕ್ ಹೆಚ್ಚಿರುವ ಹೂಡಿಕೆಗಳಿಂದ ದೂರ ಉಳಿದರು. ಇದರ ಪರಿಣಾಮವಾಗಿ ಸೆನ್ಸೆಕ್ಸ್, ನಿಫ್ಟಿ ಮಂಗಳವಾರ ಇಳಿಕೆ ಕಂಡವು.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ವಿಚಾರವಾಗಿ ಬುಧವಾರ ತೀರ್ಮಾನ ಕೈಗೊಳ್ಳಲಿದೆ. ಹೂಡಿಕೆದಾರರು ಇದರ ಮೇಲೆ ಗಮನ ಇರಿಸಿದ್ದು, ಕಾದು ನೋಡುವ ತಂತ್ರದ ಮೊರೆ ಹೋಗಿದ್ದಾರೆ ಎಂದು ವರ್ತಕರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.68ರಷ್ಟು ಜಾಸ್ತಿಯಾಗಿ ಪ್ರತಿ ಬ್ಯಾರೆಲ್‌ಗೆ 123.1 ಡಾಲರ್‌ಗೆ ತಲುಪಿದೆ.

ಚಿನ್ನದ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಮಂಗಳವಾರ 10 ಗ್ರಾಂಗೆ ₹ 547ರಂತೆ ಇಳಿಕೆ ಕಂಡು, ₹ 50,471ರಂತೆ ಮಾರಾಟವಾಗಿದೆ. ರೂಪಾಯಿ ಮೌಲ್ಯವು ತುಸು ಬಲಗೊಂಡಿದ್ದು ಚಿನ್ನದ ಬೆಲೆ ಇಳಿಕೆಗೆ ಒಂದು ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿ ಬೆಲೆಯು ಕೆ.ಜಿ.ಗೆ ₹ 864ರಷ್ಟು ಇಳಿಕೆ ಆಗಿ ₹ 60,738ರಂತೆ ಮಾರಾಟವಾಗಿದೆ.

ಆನಂದ ಮಹೀಂದ್ರ, ಶ್ರೀನಿವಾಸನ್ ಆರ್‌ಬಿಐಗೆ ನೇಮಕ

ನವದೆಹಲಿ (ಪಿಟಿಐ): ಉದ್ಯಮಿಗಳಾದ ಆನಂದ ಮಹೀಂದ್ರ, ಪಂಕಜ್ ಆರ್. ಪಟೇಲ್ ಮತ್ತು ವೇಣು ಶ್ರೀನಿವಾಸನ್ ಅವರನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಕೇಂದ್ರ ಮಂಡಳಿಗೆ ಅಧಿಕಾರೇತರ ನಿರ್ದೇಶಕರನ್ನಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ.

ಐಐಎಂ (ಅಹಮದಾಬಾದ್) ನಿವೃತ್ತ ಪ್ರೊಫೆಸರ್ ರವೀಂದ್ರ ಎಚ್. ಧೋಲಾಕಿಯಾ ಅವರನ್ನೂ ಇದೇ ಸ್ಥಾನಕ್ಕೆ ನೇಮಿಸಲಾಗಿದೆ. ಇವರೆಲ್ಲರನ್ನು ನಾಲ್ಕು ವರ್ಷಗಳ ಅವಧಿಗೆ ನೇಮಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ಕೇಂದ್ರ ಮಂಡಳಿಯ ನಿರ್ದೇಶಕರು ಆರ್‌ಬಿಐನ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಈ ಮಂಡಳಿಗೆ ಆರ್‌ಬಿಐ ಗವರ್ನರ್ ಅಧ್ಯಕ್ಷರಾಗಿರುತ್ತಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಎನ್.ಎಸ್. ಭಟ್, ಮೊಗ್ರಾಲ್, ಪುತ್ತೂರು

● **ಪ್ರಶ್ನೆ: ನಾನು ಪ್ರತಿ ವರ್ಷ ತೆರಿಗೆ ವಿವರ ಸಲ್ಲಿಸುತ್ತಿದ್ದೇನೆ. ಕಳೆದ ಸಾಲಿನಲ್ಲಿ (2020-21) ನನಗೆ ಮರುಪಾವತಿ ಬರಬೇಕಿತ್ತು. ಆದರೆ, ಹಳೆಯದೊಂದು ಡಿಮಾಂಡ್ ಬಾಕಿ ಇದೆ ಎಂದು ಇಮೇಲ್, ಎಸ್‌ಎಂಎಸ್ ಬರುತ್ತಿವೆ. ಇವು ನಿಜ ಇರಬಹುದೇ ಅಥವಾ ಮರುಪವಾತಿ ಇಲ್ಲವಾಗಿಸಲು ತಂತ್ರವೇ? ಇದು ಸರಿ ಎಂದಾದಲ್ಲಿ ನಾನು ಏನು ಮಾಡಬೇಕು?**

ಉತ್ತರ: ಇತ್ತೀಚಿನ ಕೆಲವು ವರ್ಷಗಳಿಂದ ಆದಾಯ ತೆರಿಗೆ ವಿವರ ಸಲ್ಲಿಸುವಾಗ ಪ್ರತಿ ತೆರಿಗೆದಾರರ ಇಮೇಲ್ ಹಾಗೂ ಮೊಬೈಲ್ ಸಂಖ್ಯೆಯನ್ನು ಐಟಿಆರ್ ನಮೂನೆಯಲ್ಲಿ ತುಂಬಬೇಕು. ಪತ್ರದ ಮೂಲಕ ನೋಟಿಸ್ ಹಾಗೂ ಪ್ರತ್ಯುತ್ತರ ವಿನಿಮಯ ಇಂದು ತುಂಬಾ ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ ನಿಮ್ಮ ಆದಾಯ ತೆರಿಗೆ ಖಾತೆಗೆ ನಿಮ್ಮ ಪ್ಯಾನ್ ಮೂಲಕ ಲಾಗಿನ್ ಆಗಿ ತೆರಿಗೆ ಬಾಕಿ ಅಥವಾ ನೀವು ಮೇಲೆ ಉಲ್ಲೇಖಿಸಿದ ತೆರಿಗೆ ವಜಾದ ನೋಟಿಸ್ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು.

ಆದಾಯ ತೆರಿಗೆ ನಿಯಮ 245ರ ಪ್ರಕಾರ ಹಿಂದಿನ ವರ್ಷಗಳಲ್ಲಿ ಬಾಕಿ ಇರುವ ತೆರಿಗೆಗೆ ಪ್ರತಿಯಾಗಿ ಯಾವುದೇ ಮೌಲ್ಯಮಾಪನ ವರ್ಷದ ಆದಾಯ ತೆರಿಗೆ ಮರುಪಾವತಿ ಬಾಕಿ ಇದ್ದರೆ ಅದನ್ನು ಸರಿಹೊಂದಿಸಲು ತೆರಿಗೆ ಅಧಿಕಾರಿಗಳಿಗೆ ಆ ಮೊತ್ತವನ್ನು ಹಿಡಿದಿರಿಸುವ ಅಧಿಕಾರ ಇರುತ್ತದೆ. ಆದರೆ ಅದಕ್ಕೂ ಮೊದಲು ತೆರಿಗೆದಾರರಿಗೆ ಅವರು ನೋಟಿಸ್ ನೀಡಬೇಕಾಗುತ್ತದೆ. ಪೂರ್ವ ಮಾಹಿತಿ ನೀಡದೆ ಮರುಪಾವತಿಯನ್ನು ಹಳೆಯ ಬಾಕಿಗೆ ವಜಾ ಮಾಡುವುದು ಅಮಾನ್ಯ. ಹೀಗಾಗಿ ಮೊದಲು ನಿಮ್ಮ ಹಳೆಯ ತೆರಿಗೆ ಬಾಕಿಯ ಬಗೆಗಿನ ಕಾರಣಗಳನ್ನು ಹಾಗೂ ವ್ಯತ್ಯಾಸಗಳನ್ನು ಮೊದಲು ಅರಿಯುವ ಪ್ರಯತ್ನ ಮಾಡಿ. ಅಗತ್ಯವಿದ್ದರೆ ನಿಮ್ಮ ಹತ್ತಿರದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಮರುಪಾವತಿ ಬಗ್ಗೆ ಅನಾಮಧೇಯ ಮಾಹಿತಿ ಇದ್ದಾಗ, ಬ್ಯಾಂಕ್ ಖಾತೆಯ ಅನಗತ್ಯ ಮಾಹಿತಿ ಕೇಳಿದಾಗ ಜಾಗರೂಕರಾಗಿರಿ. ಸಾಮಾನ್ಯವಾಗಿ, ಯಾವುದೇ ತೊಂದರೆಗಳು ಇಲ್ಲದಿದ್ದಲ್ಲಿ, ಕಳೆದ ವರ್ಷ ನಿಮ್ಮ ಐಟಿಆರ್ ನಮೂನೆ ತುಂಬಿದಾಗ ನೀವು ನಮೂದಿಸಿದ ಬ್ಯಾಂಕ್ ಖಾತೆಗೆ ವಿವರ ಸಲ್ಲಿಸಿದ ಒಂದೆರಡು ತಿಂಗಳಲ್ಲಿ ಮರುಪಾವತಿ ಮೊತ್ತವು ನೇರವಾಗಿ ಜಮಾ ಆಗುತ್ತದೆ. ಹೀಗಾಗಿ ಪ್ರತ್ಯೇಕ ಮಾಹಿತಿಯ ಅಗತ್ಯವಿರುವುದಿಲ್ಲ. ಇದಾಗಿಯೂ ಮರುಪಾವತಿ ಆಗದಿದ್ದಲ್ಲಿ, ತಿಂಗಳಲ್ಲಿ ಒಂದೆರಡು ಬಾರಿ ನಿಮ್ಮ ಆದಾಯ ತೆರಿಗೆ ಖಾತೆ ಪರಿಶೀಲಿಸುವ ಮೂಲಕ ಡಿಮಾಂಡ್ ನೋಟಿಸ್ ಜಾರಿ ಮಾಡಲಾಗಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಿ. ಅದಕ್ಕೆ ಸಮರ್ಪಕ ಪ್ರತ್ಯುತ್ತರ ನೀಡಿ.

ಪಾಂಡುರಂಗ ಭಯ್ಯಾ, ಕಲಬುರಗಿ

● **ಪ್ರಶ್ನೆ: ನಾನು ನಿವೃತ್ತ ಸರ್ಕಾರಿ ಅಧಿಕಾರಿ. ವಯಸ್ಸು 78 ವರ್ಷ. ನನ್ನ ವಾರ್ಷಿಕ ನಿವೃತ್ತಿ ವೇತನ ₹ 5,76,000 ಹಾಗೂ ಬ್ಯಾಂಕ್ ಬಡ್ಡಿ ಸುಮಾರು ₹ 1.40 ಲಕ್ಷ. ಬ್ಯಾಂಕಿನವರು ₹ 22,000 ಟಿಡಿಎಸ್ ಮಾಡಿರುತ್ತಾರೆ. ನಾನು ಇನ್ನೂ ಎಷ್ಟು ಆದಾಯ ತೆರಿಗೆ ಪಾವತಿಸಬೇಕಾಗಿರುತ್ತದೆ? ಪೂರ್ಣ ತೆರಿಗೆ ಉಳಿಸಬಹುದೇ?**

ಉತ್ತರ: ನೀವು 60 ವರ್ಷ ವಯಸ್ಸು ಮೀರಿರುವುದರಿಂದ, ಹಿರಿಯ ನಾಗರೀಕರಾಗಿರುತ್ತೀರಿ. ಹೀಗಾಗಿ ನಿಮ್ಮ 'ಒಟ್ಟು ಆದಾಯ'ದಲ್ಲಿ ಮೊದಲ ₹ 3 ಲಕ್ಷಕ್ಕೆ ತೆರಿಗೆ ವಿನಾಯಿತಿ ಇದೆ. ಇದಕ್ಕೂ ಮೊದಲು, ಸೆಕ್ಷನ್ 80ಸಿ ಅಡಿ ಪರಿಗಣಿಸಲ್ಪಡುವ ಯಾವುದೇ ಹೂಡಿಕೆ, ಉಳಿತಾಯವನ್ನು ಆಯಾ ಆರ್ಥಿಕ ವರ್ಷದಲ್ಲಿ ನೀವು ಮಾಡಿದ್ದರೆ ಆ ಮೊತ್ತಕ್ಕೂ ತೆರಿಗೆ ವಿನಾಯಿತಿ ಇದೆ. ನಂತರ ಉಳಿಯುವ ಮೊತ್ತವನ್ನಷ್ಟೇ 'ಒಟ್ಟು ಆದಾಯ'ವೆಂದು ಪರಿಗಣಿಸಿ ತೆರಿಗೆ ಲೆಕ್ಕಹಾಕಲಾಗುತ್ತದೆ. ಮಾತ್ರವಲ್ಲದೆ, ಆದಾಯ ತೆರಿಗೆ ಕಾಯಿದೆಯ ಸೆಕ್ಷನ್ 80 ಟಿಟಿಬಿ ಅಡಿ ಬ್ಯಾಂಕ್, ಅಂಚೆ ಕಚೇರಿ ಅಥವಾ ಸಹಕಾರಿ ಬ್ಯಾಂಕ್‌ಗಳಲ್ಲಿಟ್ಟ ಠೇವಣಿಗಳಿಂದ ಗಳಿಸಿದ ಬಡ್ಡಿಯ ಮೇಲೆ ತೆರಿಗೆ ವಿನಾಯಿತಿ ಇದೆ.

ನೀವು ಕೊಟ್ಟ ಮಾಹಿತಿಯಂತೆ, ಮೊದಲ ₹ 3 ಲಕ್ಷದ ತನಕ ತೆರಿಗೆ ಇರುವುದಿಲ್ಲ. ನಂತರ, ₹ 3 ಲಕ್ಷದಿಂದ ₹ 5 ಲಕ್ಷದ ತನಕ ಶೇ 5ರಷ್ಟು ತೆರಿಗೆ, ಹಾಗೂ 5 ಲಕ್ಷಕ್ಕೂ ಮಿಕ್ಕ, ₹ 10 ಲಕ್ಷದವರೆಗಿನ ಆದಾಯಕ್ಕೆ ಶೇ 20ರಷ್ಟು ತೆರಿಗೆ ಇರುತ್ತದೆ. ನಿಮ್ಮ ವಿಚಾರದಲ್ಲಿ ಯಾವುದೇ ಹೂಡಿಕೆ ಇಲ್ಲದ ಕಾರಣ, ಬಡ್ಡಿಗೆ ಸಂಬಂಧಪಟ್ಟು ₹ 50 ಸಾವಿರಕ್ಕೆ ವಿನಾಯಿತಿ ಇದೆ. ಉಳಿದ ಮೊತ್ತವನ್ನು, ಅಂದರೆ ರೂಪಾಯಿ 6.66 ಲಕ್ಷವನ್ನು 'ಒಟ್ಟು ಆದಾಯ'ವೆಂದು ಪರಿಗಣಿಸಲಾಗುತ್ತದೆ ಹಾಗೂ ಮೂಲ ತೆರಿಗೆ ಮೊತ್ತಕ್ಕೆ ಮೇಲಿನ ದರಗಳ ಅನ್ವಯ ಶೇ 4ರಷ್ಟು ಸೆಸ್ ಸೇರಿಸಿ ಸುಮಾರು ₹ 45 ಸಾವಿರ ತೆರಿಗೆ ಬರುತ್ತದೆ. ಈಗಾಗಲೇ ₹ 22,000 ತೆರಿಗೆ ಕಡಿತ ಆಗಿರುವುದರಿಂದ ಉಳಿದ ಮೊತ್ತವನ್ನಷ್ಟೇ ನೀವು ಪಾವತಿಸಬೇಕಾಗುತ್ತದೆ. ತೆರಿಗೆ ಉಳಿತಾಯ ಮಾಡಲು ಮುಂದಿನ ವರ್ಷಗಳಲ್ಲಿ ನೀವು ಅಂಚೆ ಕಚೇರಿಯಲ್ಲಿ ಅಥವಾ ತೆರಿಗೆ ವಿನಾಯಿತಿ ಸಿಗುವ 5 ವರ್ಷದ ಬ್ಯಾಂಕ್ ಠೇವಣಿಗಳಲ್ಲಿ ₹ 1.50 ಲಕ್ಷದ ತನಕ ಪ್ರತಿ ವರ್ಷ ಹೂಡಿಕೆ ಮಾಡಿ.

ಆದಾಯ ತೆರಿಗೆಯ ಸೆಕ್ಷನ್ 208ರ ಪ್ರಕಾರ, ವರ್ಷಕ್ಕೆ ಅಂದಾಜು ತೆರಿಗೆ ಹೊಣೆಗಾರಿಕೆಯು ₹ 10,000 ಅಥವಾ ಅದಕ್ಕಿಂತ ಹೆಚ್ಚು ಇರುವ ಪ್ರತಿ ವ್ಯಕ್ತಿಯೂ ಮುಂಗಡ ತೆರಿಗೆಯ ರೂಪದಲ್ಲಿ ತನ್ನ ತೆರಿಗೆಯನ್ನು ತ್ರೈಮಾಸಿಕ ಅವಧಿಗೊಮ್ಮೆ ಪಾವತಿಸಬೇಕು. ಆದರೆ, ಸೆಕ್ಷನ್ 207ರ ಪ್ರಕಾರ, ವ್ಯಾಪಾರ ಅಥವಾ ವೃತ್ತಿಯಿಂದ ಯಾವುದೇ ಆದಾಯ ಹೊಂದಿರದ ನಿವಾಸಿ ಹಿರಿಯ ನಾಗರಿಕರಿಗೆ ಮುಂಗಡ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಮಾತ್ರವಲ್ಲ, ಇನ್ನೆರಡು ವರ್ಷಗಳ ನಂತರ, (ವಯಸ್ಸು 80 ಮೀರಿದ ವ್ಯಕ್ತಿಗಳಿಗೆ) ನೀವು ಅತಿ ಹಿರಿಯ ನಾಗರೀಕರಾದಾಗ, ಪ್ರಸ್ತುತ ನಿಯಮದಂತೆ ₹ 5 ಲಕ್ಷದವರೆಗೆ ತೆರಿಗೆ ಇರುವುದಿಲ್ಲ. ಉಳಿದ ಆದಾಯವನ್ನು ಮೇಲೆ ಉಲ್ಲೇಖಿಸಿದಂತೆಯೇ ತೆರಿಗೆಗೆ ಪರಿಗಣಿಸಲಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ಇಶಾನ್, ಋತುರಾಜ್ ಅರ್ಧಶತಕಗಳ ಸೊಬಗು; ಹರ್ಷಲ್ ಪಟೇಲ್–ಚಾಹಲ್ ಮೋಡಿ

ಭಾರತದ ಸರಣಿ ಜಯದ ಆಸೆ ಜೀವಂತ

ವಿಶಾಖಪಟ್ಟಣ(ಪಿಟಿಐ): ಯಜುವೇಂದ್ರ ಚಾಹಲ್ ಸ್ಪಿನ್ ಮೋಡಿ ಮತ್ತು ಹರ್ಷಲ್ ಪಟೇಲ್ ಸ್ವಿಂಗ್ ಮುಂದೆ ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್‌ಗಳ ಆಟ ನಡೆಯಲಿಲ್ಲ.

ಇದರಿಂದಾಗಿ ರಿಷಭ್ ಪಂತ್ ನಾಯಕತ್ವದ ಭಾರತ ತಂಡವು ಇಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ 48 ರನ್‌ಗಳ ಜಯ ಸಾಧಿಸಿತು. ಮೊದಲೆರಡು ಪಂದ್ಯಗಳಲ್ಲಿ ಸೋತಿದ್ದ ಆತಿಥೇಯ ತಂಡವು ಈ ಗೆಲುವಿನೊಂದಿಗೆ ಸರಣಿ ಜಯದ ಕನಸನ್ನೂ ಜೀವಂತವಾಗುಳಿಸಿಕೊಂಡಿತು. ಮೊದಲ ಪಂದ್ಯದಲ್ಲಿ ಬೌಲಿಂಗ್ ಮತ್ತು ಎರಡನೇ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯಕ್ಕೆ ತಂಡವು ದಂಡ ಕಟ್ಟಿತ್ತು. ಆದರೆ ಇಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಮಿಂಚಿತು.

3.1	25
ಓವರ್	ರನ್
4	7.89
ವಿಕೆಟ್	ಎಕಾನಮಿ

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್ ಆರಂಭಿಸಿದ ಋತುರಾಜ್ ಗಾಯಕವಾಡ್ (57; 35ಎಸೆತ, 4X7, 6X2) ಮತ್ತು ಇಶಾನ್ ಕಿಶನ್ (54; 35ಎ, 4X5, 6X2) ಮೊದಲ ವಿಕೆಟ್ ಜತೆಯಾಟದಲ್ಲಿ 97 ರನ್ ಸೇರಿಸಿದರು. ಬರೋಬ್ಬರಿ ಹತ್ತು ಓವರ್ ಆಡಿದ ಈ ಜೋಡಿಯು ಪ್ರವಾಸಿ ತಂಡದ ಬೌಲರ್‌ಗಳ ಬೆವರಿಳಿಯುವಂತೆ ಮಾಡಿದರು. ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 179 ರನ್ ಗಳಿಸಿತು. ಗುರಿ ಬೆನ್ನತ್ತಿದ ಪ್ರವಾಸಿ ತಂಡವು 19.1 ಓವರ್‌ಗಳಲ್ಲಿ 131 ರನ್ ಗಳಿಸಿ ಆಲೌಟ್ ಆಯಿತು. ಚಾಹಲ್ ಮೂರು ಮತ್ತು ಪಟೇಲ್ ನಾಲ್ಕು ವಿಕೆಟ್ ಗಳಿಸಿದರು.

ಯಜುವೇಂದ್ರ ಚಾಹಲ್

ಹರ್ಷಲ್ ಪಟೇಲ್– ಪಿಟಿಐ ಚಿತ್ರ

ಮೊದಲ ಎರಡೂ ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದ ಋತುರಾಜ್ ಇಲ್ಲಿ ಆತ್ಮವಿಶ್ವಾಸಭರಿತ ಆಟವ ಪ್ರದರ್ಶಿಸಿದರು. ಅವರ ಚುರುಕಾದ ಪಾದಚಲನೆ ಮತ್ತು ನಿಖರವಾದ ಡ್ರೈವ್‌ಗಳ ಮುಂದೆ ಕಗಿಸೊ ರಬಾಡ ಮತ್ತುಳಿದ ಬೌಲರ್‌ಗಳ ತಂತ್ರಗಳು ನಡೆಯಲಿಲ್ಲ. ಇನ್ನೊಂದೆಡೆ ಎಡಗೈ ಬ್ಯಾಟರ್ ಇಶಾನ್ ಕೂಡ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಆಕರ್ಷಕವಾದ ರಿವರ್ಸ್ ಸ್ವೀಪ್ ಮತ್ತು ಸ್ಕೂಪ್ ಹೊಡೆತಗಳಿಂದ ಬೌಂಡರಿ ಗಳಿಸಿದರು.

ಹತ್ತನೇ ಓವರ್‌ನ ಕೊನೆಯ ಎಸೆತವನ್ನು ಹೊಡೆಯುವ ಯತ್ನದಲ್ಲಿ ಬೌಲರ್ ಕೇಶವ್ ಮಹಾರಾಜ್ ಅವರಿಗೇ ಕ್ಯಾಚಿತ್ತ ಋತುರಾಜ್ ಇನಿಂಗ್ಸ್‌ಗೆ ತೆರೆ ಬಿತ್ತು. ಶ್ರೇಯಸ್ ಅಯ್ಯರ್ (14 ರನ್) ಬೇಗನೆ ನಿರ್ಗಮಿಸಿದರು. 14ನೇ ಓವರ್‌ನಲ್ಲಿ ಪ್ರಿಟೋರಿಯಸ್ ಹಾಕಿದ ವೈಡ್ ಎಸೆತವನ್ನು ಸಿಕ್ಸರ್‌ಗೆತ್ತುವ ಸಾಹಸಕ್ಕೆ ಕೈಹಾಕಿದ ಇಶಾನ್ ದಂಡ ತೆತ್ತರು. ಹೆನ್ರಿಕ್ಸ್ ಕ್ಯಾಚ್ ಪಡೆದು ಸಂಭ್ರಮಿಸಿದರು.

ನಂತರದ ಇನಿಂಗ್ಸ್‌ನಲ್ಲಿ ಹಾರ್ದಿಕ್ ಪಾಂಡ್ಯ (ಅಜೇಯ 31; 21ಎ) ಬಿಟ್ಟರೆ ಉಳಿದ ಬ್ಯಾಟರ್‌ಗಳು ರನ್ ಗಳಿಕೆ ಹೆಚ್ಚಿಸಲಿಲ್ಲ.

ಸ್ಕೋರ್ ಕಾರ್ಡ್

ಭಾರತ 5ಕ್ಕೆ 179 (20 ಓವರ್)
ಋತುರಾಜ್ ಸಿ ಮತ್ತು ಬಿ ಮಹಾರಾಜ್ 57 (35ಎ, 4X7, 6X2), ಇಶಾನ್ ಸಿ ಹೆಂಡ್ರಿಕ್ಸ್ ಬಿ ಪ್ರಿಟೋರಿಯಸ್ 54 (35ಎ, 4X5, 6X2), ಶ್ರೇಯಸ್ ಸಿ ನಾರ್ಕಿಯಾ ಬಿ ಶಂಸಿ 14 (11ಎ, 6X2), ಪಂತ್ ಸಿ ಬವುಮಾ ಬಿ ಪ್ರಿಟೋರಿಯಸ್ 6 (8ಎ), ಹಾರ್ದಿಕ್ ಔಟಾಗದೆ 31 (21ಎ, 4X4), ಕಾರ್ತಿಕ್ ಸಿ ಪಾರ್ನೆಲ್ ಬಿ ರಬಾಡ 6 (8ಎ), ಅಕ್ಷರ್ ಔಟಾಗದೆ 5 (2ಎ, 4X1)
ಇತರೆ (ಲೆಗ್‌ಬೈ 4, ವೈಡ್ 2) 6
ವಿಕೆಟ್ ಪತನ: 1-97 (ಋತುರಾಜ್ ಗಾಯಕವಾಡ್, 9.6), 2-128 (ಶ್ರೇಯಸ್ ಅಯ್ಯರ್, 12.6), 3-131 (ಇಶಾನ್ ಕಿಶನ್, 13.4), 4-143 (ರಿಷಭ್ ಪಂತ್, 15.5), 5-158 (ದಿನೇಶ್ ಕಾರ್ತಿಕ್, 18.3)
ಬೌಲಿಂಗ್: ಕಗಿಸೊ ರಬಾಡ 4-0-31-1, ವೇಯ್ನ್ ಪಾರ್ನೆಲ್ 4-0-32-0, ಎನ್ರಿಚ್ ನಾರ್ಕಿಯಾ 2-0-23-0, ಡ್ವೇನ್ ಪ್ರಿಟೋರಿಯಸ್ 4-0-29-2, ತಬ್ರೇಜ್ ಶಂಸಿ 4-0-36-1, ಕೇಶವ್ ಮಹಾರಾಜ್ 2-0-24-1

ದಕ್ಷಿಣ ಆಫ್ರಿಕಾ 131 (19.1 ಓವರ್)
ಬವುಮಾ ಸಿ ಆವೇಶ್ ಬಿ ಅಕ್ಷರ್ 8 (10ಎ), ಹೆಂಡ್ರಿಕ್ಸ್ ಸಿ ಚಾಹಲ್ ಬಿ ಹರ್ಷಲ್ 23 (20ಎ, 4X2, 6X1), ಪ್ರಿಟೋರಿಯಸ್ ಸಿ ಪಂತ್ ಬಿ ಚಾಹಲ್ 20 (16ಎ, 4X2, 6X1), ರಸಿ ಸಿ ಪಂತ್ ಬಿ ಚಾಹಲ್ 1 (4ಎ), ಕ್ಲಾಸೆನ್ ಸಿ ಅಕ್ಷರ್ ಬಿ ಚಾಹಲ್ 29 (24ಎ, 4X3, 6X1), ಮಿಲ್ಲರ್ ಸಿ ಗಾಯಕವಾಡ್ ಬಿ ಹರ್ಷಲ್ 3 (5ಎ), ಪಾರ್ನೆಲ್ ಔಟಾಗದೆ 22 (18ಎ, 4X2), ರಬಾಡ ಸಿ ಚಾಹಲ್ ಬಿ ಹರ್ಷಲ್ 9 (8ಎ, 4X1), ಮಹಾರಾಜ್ ಸಿ ಕಾರ್ತಿಕ್ ಬಿ ಭುವನೇಶ್ವರ್ 11 (8ಎ, 6X1), ನಾರ್ಕಿಯಾ ರನೌಟ್ (ಪಂತ್/ಭುವನೇಶ್ವರ್) 0 (1ಎ), ಶಂಸಿ ಸಿ ಆವೇಶ್ ಬಿ ಹರ್ಷಲ್ 0 (1ಎ)
ಇತರೆ (ಬೈ 1, ಲೆಗ್‌ಬೈ 1, ವೈಡ್ 3) 5
ವಿಕೆಟ್ ಪತನ: 1-23 (ತೆಂಬಾ ಬವುಮಾ, 3.6), 2-38 (ರೀಜಾ ಹೆಂಡ್ರಿಕ್ಸ್, 5.6), 3-40 (ರಸಿ ವ್ಯಾನ್ ಡರ್ ಡಸೆ, 6.5), 4-57 (ಡ್ವೇನ್ ಪ್ರಿಟೋರಿಯಸ್, 8.6), 5-71 (ಡೇವಿಡ್ ಮಿಲ್ಲರ್, 10.6), 6-100 (ಹೆನ್ರಿಚ್ ಕ್ಲಾಸೆನ್, 14.5), 7-113 (ಕಗಿಸೊ ರಬಾಡ, 16.4), 8-126 (ಕೇಶವ್ ಮಹಾರಾಜ್, 18.2), 9-131 (ಎನ್ರಿಚ್ ನಾರ್ಕಿಯಾ, 18.5), 10-131 (ತಬ್ರೇಜ್ ಶಂಸಿ, 19.1)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-21-1, ಆವೇಶ್ ಖಾನ್ 4-0-35-0, ಅಕ್ಷರ್ ಪಟೇಲ್ 4-0-28-1, ಯಜುವೇಂದ್ರ ಚಾಹಲ್ 4-0-20-3, ಹರ್ಷಲ್ ಪಟೇಲ್ 3.1-0-25-4

ಫಲಿತಾಂಶ: ಭಾರತ ತಂಡಕ್ಕೆ 48 ರನ್‌ಗಳ ಜಯ

ಮುಂಬೈಗೆ ಯಶಸ್ವಿ ಶತಕದ ಆಸರೆ

ರಣಜಿ: ಹಾರ್ದಿಕ್ ಅರ್ಧಶತಕ; ಯಶ್‌ಗೆ ಎರಡು ವಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ಯಶಸ್ವಿ ಜೈಸ್ವಾಲ್ ಅಮೋಘ ಶತಕ ದಾಖಲಿಸಿ ಮುಂಬೈ ತಂಡದ ಕುಸಿತವನ್ನು ತಡೆದರು.

ಮಂಗಳವಾರ ಆರಂಭವಾದ ಉತ್ತರಪ್ರದೇಶ ಎದುರಿನ ರಣಜಿ ಟ್ರೋಫಿ ಟೂರ್ನಿಯ ಸೆಮಿಫೈನಲ್ ಪಂದ್ಯದ ಮೊದಲ ದಿನದಾಟದಲ್ಲಿ ಮುಂಬೈ ತಂಡವು 87 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 260 ರನ್ ಗಳಿಸಿತು.

ಟಾಸ್ ಗೆದ್ದ ಉತ್ತರಪ್ರದೇಶ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಮೂರನೇ ಎಸೆತದಲ್ಲಿಯೇ ಮುಂಬೈ ತಂಡದ ನಾಯಕ ಪೃಥ್ವಿ ಶಾ ವಿಕೆಟ್ ಗಳಿಸಿದ ಯಶ್ ದಯಾಳ್ ಸಂಭ್ರಮಿಸಿದರು. ಇದರಿಂದಾಗಿ ಇನಿಂಗ್ಸ್ ಕಟ್ಟುವ ಹೊಣೆ ಯುವಬ್ಯಾಟರ್ ಯಶಸ್ವಿ ಮೇಲೆ ಬಿತ್ತು. ಅದನ್ನು ಅವರು ನಿಭಾಯಿಸಿದರು. ಅವರಿಗೆ ಅದೃಷ್ಟವೂ ಜೊತೆ ನೀಡಿತು. 30 ರನ್‌ಗಳಿಸಿದ್ದ ಸಂದರ್ಭದಲ್ಲಿ ಅವರು ಎರಡು ಬಾರಿ ಜೀವದಾನ ಪಡೆದರು.

227 ಎಸೆತಗಳನ್ನು ಎದುರಿಸಿದ ಎಡಗೈ ಬ್ಯಾಟರ್ ಯಶಸ್ವಿ ಶತಕ ಪೂರೈಸಿದರು. ಹೋದವಾರ ಆಲೂರು ಕ್ರೀಡಾಂಗಣದಲ್ಲಿ ಉತ್ತರಾಖಂಡದ ಎದುರಿನ ಕ್ವಾರ್ಟರ್‌ಫೈನಲ್‌ನಲ್ಲಿಯೂ ಯಶಸ್ವಿ ಶತಕ ಗಳಿಸಿದ್ದರು. ಇದು ಅವರಿಗೆ ಮೂರನೇ ಪ್ರಥಮ ದರ್ಜೆ ಪಂದ್ಯವಾಗಿದೆ. ಇಲ್ಲಿ 20 ವರ್ಷದ ಯಶಸ್ವಿ ಮೂರು ಪ್ರಮುಖ ಜೊತೆಯಾಟಗಳಲ್ಲಿ ಭಾಗಿಯಾದರು.

3ನೇ ವಿಕೆಟ್ ಜೊತೆಯಾಟದಲ್ಲಿ ಸುವೇದ್ ಪಾರ್ಕರ್ (32; 98ಎ) ಅವರೊಂದಿಗೆ 63 ರನ್ ಗಳಿಸಿದರು. ನಾಲ್ಕನೇ ವಿಕೆಟ್‌ಗೆ ಸರ್ಫರಾಜ್ ಖಾನ್ (40; 52ಎ) ಜೊತೆಗೆ 83 ರನ್‌ಗಳನ್ನು ಸೇರಿಸಿದರು. 5ನೇ ವಿಕೆಟ್ ಪಾಲುದಾರಿಕೆಯಲ್ಲಿ ಯಶಸ್ವಿ ಮತ್ತು ಹಾರ್ದಿಕ್ ತಮೊರೆ (34; 56ಎ) 63 ರನ್‌ಗಳನ್ನು ಸೇರಿಸಿದರು.

ಇದರಿಂದಾಗಿ ತಂಡವು ಇನ್ನೂರರ ಗಡಿ ದಾಟಲು ಸಾಧ್ಯವಾಯಿತು. ದಿನದಾಟಕ್ಕೆ ಇನ್ನೂ ಕೆಲವೇ ನಿಮಿಷಗಳು ಬಾಕಿಯಿದ್ದಾಗ ಉತ್ತರಪ್ರದೇಶ ತಂಡದ ನಾಯಕ ಕರಣ್ ಶರ್ಮಾ ಬೌಲಿಂಗ್‌ನಲ್ಲಿ ಧ್ರುವಚಂದ್ ಜುರೇಲ್‌ಗೆ ಕ್ಯಾಚಿತ್ತ ಯಶಸ್ವಿ ಆಟಕ್ಕೆ ತೆರೆಬಿತ್ತು. ಅವರು ಒಟ್ಟು 15 ಬೌಂಡರಿಗಳನ್ನು ಗಳಿಸಿದರು.

ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ ವೈಖರಿ– ಪ್ರಜಾವಾಣಿ ಚಿತ್ರ/ಬಿ.ಎಚ್.ಶಿವಕುಮಾರ್

ಅರ್ಧಶತಕ ಗಳಿಸಿರುವ ಹಾರ್ದಿಕ್ (ಬ್ಯಾಟಿಂಗ್ 51; 74ಎ 4X6, 6X1) ಮತ್ತು ಶಮ್ಸ್ ಮುಲಾನಿ (ಬ್ಯಾಟಿಂಗ್ 10) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಜಸ್ಟ್ ಕ್ರಿಕೆಟ್ ಮೈದಾನ; ಮೊದಲ ಇನಿಂಗ್ಸ್– ಮುಂಬೈ: 87 ಓವರ್‌ಗಳಲ್ಲಿ 5ಕ್ಕೆ260 (ಯಶಸ್ವಿ ಜೈಸ್ವಾಲ್ 100, ಸುವೇದ್ ಪಾರ್ಕರ್ 32, ಸರ್ಫರಾಜ್ ಖಾನ್ 40, ಹಾರ್ದಿಕ್ ತಮೊರೆ ಬ್ಯಾಟಿಂಗ್ 51, ಶಮ್ಸ್ ಮುಲಾನಿ ಬ್ಯಾಟಿಂಗ್ 10, ಯಶ್ ದಯಾಳ್ 35ಕ್ಕೆ2, ಶಿವಂ ಮಾವಿ 29ಕ್ಕೆ1, ಕರಣ್ ಶರ್ಮಾ 39ಕ್ಕೆ2).

ಹಿಮಾಂಶು ಮಂತ್ರಿ ಶತಕದ ಸೊಬಗು

ಬೆಂಗಳೂರು: ಹಿಮಾಂಶು ಮಂತ್ರಿ ಶತಕದ ನೆರವಿನಿಂದ ಮಧ್ಯಪ್ರದೇಶ ತಂಡವು ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಆರಂಭವಾದ ಸೆಮಿಫೈನಲ್‌ನಲ್ಲಿ ಬಂಗಾಳ ಎದುರು ಉತ್ತಮ ಮೊತ್ತದತ್ತ ಹೆಜ್ಜೆ ಹಾಕಿದೆ.

ಟಾಸ್ ಗೆದ್ದ ಮಧ್ಯಪ್ರದೇಶ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ದಿನದಾಟದ ಮುಕ್ತಾಯಕ್ಕೆ 86 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 271 ರನ್ ಗಳಿಸಿತು.

ಬಂಗಾಳ ತಂಡದ ಮುಖೇಶ್ ಕುಮಾರ್ ಮಧ್ಯಪ್ರದೇಶಕ್ಕೆ ಆರಂಭದಲ್ಲಿಯೇ ಪೆಟ್ಟುಕೊಟ್ಟರು. ಇದರಿಂದಾಗಿ ತಂಡವು 97 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಆದರೆ ಕ್ರೀಸ್‌ನಲ್ಲಿದ್ದ ಆರಂಭಿಕ ಬ್ಯಾಟರ್ ಹಿಮಾಂಶು (ಬ್ಯಾಟಿಂಗ್ 134; 280ಎಸೆತ, 4X15, 6X1) ಅವರು ಅಕ್ಷತ್ ರಘುವಂಶಿ (63; 81ಎ, 4X8, 6X2) ಅವರೊಂದಿಗೆ ಐದನೇ ವಿಕೆಟ್ ಜೊತೆಯಾಟದಲ್ಲಿ 123 ರನ್ ಸೇರಿಸಿ ತಂಡಕ್ಕೆ ಉತ್ತಮ ಮೊತ್ತ ಗಳಿಸುವ ಭರವಸೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಆಲೂರು ಕ್ರಿಕೆಟ್ ಮೈದಾನ: ಮಧ್ಯಪ್ರದೇಶ (ಮೊದಲ ಇನಿಂಗ್ಸ್)86 ಓವರ್‌ಗಳಲ್ಲಿ 6ಕ್ಕೆ271(ಹಿಮಾಂಶು ಮಂತ್ರಿ ಬ್ಯಾಟಿಂಗ್ 134, ಅಕ್ಷತ್ ರಘುವಂಶಿ 63, ಮುಖೇಶ್ ಕುಮಾರ್ 45ಕ್ಕೆ2, ಆಕಾಶ್ ದೀಪ್ 55ಕ್ಕೆ2, ಶಾಬಾಜ್ 70ಕ್ಕೆ1, ಪ್ರದೀಪ್ತ ಪ್ರಾಮಾಣಿಕ್ 50ಕ್ಕೆ1)

ಸಮೀರ್ ಶುಭಾರಂಭ; ಸಿಂಧು, ಪ್ರಣೀತ್‌ಗೆ ಆಘಾತ

ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್: ಕ್ವಾರ್ಟರ್‌ಫೈನಲ್‌ಗೆ ಅಶ್ವಿನಿ– ಸಿಕ್ಕಿರೆಡ್ಡಿ

ಜಕಾರ್ತ (ಪಿಟಿಐ): ಭಾರತದ ಸಮೀರ್ ವರ್ಮಾ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಆದರೆ ಪಿ.ವಿ. ಸಿಂಧು ಮತ್ತು ಬಿ.ಸಾಯಿ ಪ್ರಣೀತ್ ಅವರು ಮೊದಲ ತಡೆ ದಾಟುವಲ್ಲಿ ವಿಫಲರಾದರು.

ಮಂಗಳವಾರ ಇಲ್ಲಿ ಆರಂಭವಾದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಸಮೀರ್ 21–19, 21–15ರಿಂದ ಫ್ರಾನ್ಸ್‌ನ ಥಾಮಸ್ ರೌಕ್ಸೆಲ್ ವಿರುದ್ಧ ಜಯಿಸಿದರು. 45 ನಿಮಿಷಗಳ ಪಂದ್ಯದಲ್ಲಿ ಭಾರತದ ಆಟಗಾರನಿಗೆ ಸುಲಭ ಜಯ ಒಲಿಯಿತು.

ಸಮೀರ್ ವರ್ಮಾ– ಪಿಟಿಐ ಚಿತ್ರ

ಮುಂದಿನ ಪಂದ್ಯದಲ್ಲಿ ಅವರು ಮಲೇಷ್ಯಾದ ಲೀ ಜಿ ಜಿಯಾ ಅವರನ್ನು ಎದುರಿಸುವರು.

ಕರ್ನಾಟಕದ ಅಶ್ವಿನಿ ಪೊನ್ನಪ್ಪ ಮತ್ತು ಸಿಕ್ಕಿ ರೆಡ್ಡಿ ಜೋಡಿಯು ಮಹಿಳಾ ಡಬಲ್ಸ್‌ನಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು. ಮೊದಲ ಸುತ್ತಿನಲ್ಲಿ ಈ ಜೋಡಿಯು 21–15, 21–8ರಿಂದ ಭಾರತ-ಅಮೆರಿಕ ಜೋಡಿ ಇಶಿಕಾ ಜೈಸ್ವಾಲ್– ಶ್ರೀವೇದ್ಯಾ ಗುರಜಾದಾ ಎದುರು ಗೆದ್ದರು.

ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಏಳನೇ ಶ್ರೇಯಾಂಕದ ಸಿಂಧು 14-21, 18-21ರಿಂದ ಚೀನಾದ ಹೆ ಬಿಂಗ್ ಜಿಯಾವೊ ಎದುರು ಮಣಿದರು. ಈ ಗೆಲುವಿನೊಂದಿಗೆ ಮಾಜಿ ವಿಶ್ವ ಚಾಂಪಿಯನ್ ಸಿಂಧು ವಿರುದ್ಧ ಗೆಲುವಿನ ದಾಖಲೆಯನ್ನು ಬಿಂಗ್ 10-8ಕ್ಕೆ ಹೆಚ್ಚಿಸಿಕೊಂಡರು. ಈ ಸೋಲಿನೊಂದಿಗೆ, ಸಿಂಧು ಅವರ ಕಾಮನ್‌ವೆಲ್ತ್ ಕ್ರೀಡಾಕೂಟದ ಪೂರ್ವಸಿದ್ಧತೆಯ ಮೇಲೆ ಪರಿಣಾಮ ಬೀರಿದೆ.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಸಾಯಿ ಪ್ರಣೀತ್ 16-21, 19-21ರಿಂದ ಡೆನ್ಮಾರ್ಕ್‌ನ ಹಾನ್ಸ್ ಕ್ರಿಸ್ಟಿಯನ್ ಸೋಲ್ಬರ್ಗ್ ವಿಟಿಂಗಸ್ ಎದುರು ಎಡವಿದರು.

ಪುರುಷರ ಡಬಲ್ಸ್‌ನಲ್ಲಿ ಮನು ಅತ್ರಿ-ಸುಮಿತ್ ರೆಡ್ಡಿ ಕೂಡ 8-21, 11-21ರಿಂದ ಜಪಾನ್‌ನ ತಕುರೊ ಹೊಕಿ ಮತ್ತು ಯುಗೊ ಕೊಬಾಯಶಿ ವಿರುದ್ಧ ಸೋತರು.

ಗಾಲ್ಫ್: ಪ್ರಶಸ್ತಿ ಮೇಲೆ ಪ್ರಣವಿ ಕಣ್ಣು

ಪ್ರಣವಿ ಅರಸ್

ಬೆಂಗಳೂರು: ಈ ಋತುವಿನಲ್ಲಿ ನಾಲ್ಕನೇ ಪ್ರಶಸ್ತಿ ಮೇಲೆ ಚಿತ್ತ ನೆಟ್ಟಿರುವ ಮೈಸೂರಿನ ಪ್ರಣವಿ ಅರಸ್, ಬುಧವಾರ ಇಲ್ಲಿ ಆರಂಭವಾಗುವ ಮಹಿಳಾ ಪ್ರೊ ಗಾಲ್ಫ್ ಟೂರ್‌ನ ಎಂಟನೇ ಲೆಗ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಇಲ್ಲಿಯೇ ನಡೆದ ಏಳನೇ ಲೆಗ್‌ನಲ್ಲಿ ಪ್ರಣವಿ ಶುಕ್ರವಾರ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದರು. ಪ್ರಣವಿ ಅವರಿಗೆ ಜಾಹ್ನವಿ ಬಕ್ಷಿ, ರಿಧಿಮಾ ದಿಲಾವರಿ, ಸೆಹರ್ ಅತ್ವಾಲ್, ನೇಹಾ ತ್ರಿಪಾಠಿ, ಅಫ್ಶಾನ್ ಫಾತಿಮಾ, ಆಸ್ಥಾ ಮದನ್ ಪೈಪೋಟಿ ನೀಡುವ ನಿರೀಕ್ಷೆಯಿದೆ.

ಏಕದಿನ ಕ್ರಿಕೆಟ್: ಸ್ಟೀಫನ್ ತ್ರಿಶತಕ

ಮೆಲ್ಬರ್ನ್: ಆಸ್ಟ್ರೇಲಿಯಾದ ಸ್ಟೀಫನ್ ನೀರೊ ಅಂಧರ ಅಂತರ ರಾಷ್ಟ್ರೀಯ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ತ್ರಿಶತಕ ಗಳಿಸಿ ನೂತನ ದಾಖಲೆ ಬರೆದರು.

ಇಲ್ಲಿ ನ್ಯೂಜಿಲೆಂಡ್ ಎದುರು ನಡೆದ ಅಂಧರ ಏಕದಿನ ಪಂದ್ಯದಲ್ಲಿ ಸ್ಟೀಫನ್ ಅಜೇಯ 309 (140 ಎಸೆತ, 49 ಬೌಂಡರಿ, 1ಸಿಕ್ಸರ್) ರನ್ ಗಳಿಸಿದರು. 1998ರಲ್ಲಿ ಪಾಕಿಸ್ತಾನದ ಮಸೂದ್ ಜಾನ್ ಗಳಿಸಿದ್ದ 262 ರನ್‌ಗಳ ದಾಖಲೆಯನ್ನು ಸ್ಟೀಫನ್ ಮುರಿದರು.

ಆಸ್ಟ್ರೇಲಿಯಾ ತಂಡವು 40 ಓವರ ಗಳಲ್ಲಿ 541 ರನ್ ಗಳಿಸಿತು. ಕಿವೀಸ್ ಬಳಗವು 272 ರನ್ ಗಳಿಗೆ ಆಲೌಟ್ ಆಗಿ ಸೋತಿರು. ದಾಖಲೆ ಬರೆದ ಸ್ಟೀಫನ್ ಅವರನ್ನು ಮತ್ತು ತಂಡವನ್ನು ಕ್ರಿಕೆಟ್ ಆಸ್ಟ್ರೇಲಿಯಾ ಮಂಡಳಿಯು ಟ್ವೀಟ್ ಮಾಡಿ ಅಭಿನಂದನೆ ಸಲ್ಲಿಸಿದೆ.

ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ಪ್ರಧಾನಿ ಮೋದಿ ನಿರ್ದೇಶನ

18 ತಿಂಗಳಲ್ಲಿ 10 ಲಕ್ಷ ಜನರಿಗೆ ಉದ್ಯೋಗ

ನವದೆಹಲಿ (ಪಿಟಿಐ): ದೇಶದಲ್ಲಿ ಮುಂದಿನ ಒಂದೂವರೆ ವರ್ಷಗಳಲ್ಲಿ 10 ಲಕ್ಷ ಜನರಿಗೆ ತ್ವರಿತವಾಗಿ ಉದ್ಯೋಗ ಒದಗಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಇಲಾಖೆಗಳು ಮತ್ತು ಸಚಿವಾಲಯಗಳಿಗೆ ಸೂಚಿಸಿದ್ದಾರೆ ಎಂದು ಪ್ರಧಾನಿ ಕಚೇರಿ (ಪಿಎಂಒ) ಮಂಗಳವಾರ ತಿಳಿಸಿದೆ.

ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲ ಕುರಿತು ಪರಿಶೀಲಿಸಿದ ಬಳಿಕ ಪ್ರಧಾನಿ ಮೋದಿ ಅವರು ಈ ಕುರಿತು ನಿರ್ದೇಶನ ನೀಡಿದ್ದಾರೆ ಎಂದು ಪಿಎಂಒ ಹೇಳಿದೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹೆಚ್ಚಿನ ಸಂಖ್ಯೆಯ ಹುದ್ದೆಗಳು ಖಾಲಿ ಇದ್ದು, ದೇಶವನ್ನು ನಿರುದ್ಯೋಗ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ ಎಂದು ವಿರೋಧ ಪಕ್ಷಗಳು ಪದೇ ಪದೇ ಟೀಕೆ ಮಾಡುತ್ತಿರುವ ಸಂದರ್ಭದಲ್ಲಿ ಸರ್ಕಾರದ ಈ ನಿರ್ಧಾರ ಬಂದಿದೆ.

ಮುಂದಿನ 18 ತಿಂಗಳಲ್ಲಿ 10 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂಬ ಸರ್ಕಾರದ ನಿರ್ಧಾರದ ಹಿಂದೆ 2024ರ ಲೋಕಸಭಾ ಚುನಾವಣೆಯ ಗುರಿ ಇದೆ. ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ನಿರುದ್ಯೋಗ ಕುರಿತ ವಿರೋಧ ಪಕ್ಷಗಳ ಟೀಕೆಗಳನ್ನು ಸಮರ್ಥವಾಗಿ ಎದುರಿಸುವ ಉದ್ದೇಶವನ್ನು ಆಡಳಿತಾರೂಢ ಬಿಜೆಪಿ ಹೊಂದಿದೆ ಎನ್ನಲಾಗುತ್ತಿದೆ. ಮುಂದಿನ ಸಾರ್ವತ್ರಿಕ ಚುನಾವಣೆಯು (ಲೋಕಸಭೆ) 2024ರ ಏಪ್ರಿಲ್–ಮೇ ತಿಂಗಳಲ್ಲಿ (18 ತಿಂಗಳ ಅಂತ್ಯದೊಳಗೆ) ನಡೆಯಲಿದೆ ಎಂದು ನಿರೀಕ್ಷಿಸಲಾಗಿದೆ.

ದೇಶದಲ್ಲಿ ಕೇಂದ್ರ ಸರ್ಕಾರದ ನಾಗರಿಕ ಹುದ್ದೆಗಳ ಒಟ್ಟಾರೆ ಮಂಜೂರಾದ ಹುದ್ದೆಗಳ ಸಂಖ್ಯೆ 40.78 ಲಕ್ಷ ಇದ್ದು, 2020ರ ಮಾರ್ಚ್ 1ರ ವೇಳೆಗೆ 31.19 ಲಕ್ಷ ಹುದ್ದೆಗಳು ಭರ್ತಿಯಾಗಿವೆ. ಸುಮಾರು ಶೇ 21.75ರಷ್ಟು ಹುದ್ದೆಗಳು ಖಾಲಿ ಇವೆ ಎಂದು ವೇತನ ಮತ್ತು ಭತ್ಯೆಗಳ ಇಲಾಖೆಯ ಇತ್ತೀಚಿನ ವಾರ್ಷಿಕ ವರದಿ ತಿಳಿಸಿದೆ.

ಒಟ್ಟು ಮಾನವ ಶಕ್ತಿಯ ಪೈಕಿ ಶೇ 92ರಷ್ಟು ರೈಲ್ವೆ, ರಕ್ಷಣಾ, ಗೃಹ ವ್ಯವಹಾರಗಳು, ಅಂಚೆ ಮತ್ತು ಕಂದಾಯ (ಐದು) ಇಲಾಖೆ ವ್ಯಾಪ್ತಿಯಲ್ಲಿವೆ. ಕೇಂದ್ರಾಡಳಿ ಪ್ರದೇಶಗಳನ್ನು ಹೊರತುಪಡಿಸಿದಂತೆ ಇರುವ ಒಟ್ಟು 31.33 ಲಕ್ಷ ಉದ್ಯೋಗಿಗಳ ಪೈಕಿ ರೈಲ್ವೆ (ಶೇ 40.55), ಗೃಹ ವ್ಯವಹಾರ (ಶೇ 30.5), ರಕ್ಷಣಾ (ಶೇ 12.31), ಅಂಚೆ (ಶೇ 12.31), ಕಂದಾಯ (ಶೇ 3.26) ಹಾಗೂ ಇತರ ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿ ಶೇ 7.72 ರಷ್ಟು ಹುದ್ದೆಗಳು ಭರ್ತಿಯಾಗಿವೆ.

ಕೇಂದ್ರ ಸರ್ಕಾರಿ ನೌಕರರಿಗೆ ವೇತನ ಮತ್ತು ಭತ್ಯೆಗಳಿಗಾಗಿ 2018–19ರಲ್ಲಿ ₹ 2,08,960 ಕೋಟಿ ಹಾಗೂ 2019–20ರಲ್ಲಿ ₹ 2,25,744 ಕೋಟಿ ವ್ಯಯಿಸಲಾಗಿದೆ. ವರದಿಯ ಪ್ರಕಾರ ಕೇಂದ್ರ ಪೊಲೀಸ್ ಪಡೆಗಳಲ್ಲಿ ಒಟ್ಟು 10.16 ಲಕ್ಷ ಮಂಜೂರಾದ ಹುದ್ದೆಗಳಿದ್ದು, 2020ರ ಮಾರ್ಚ್ 1ರ ವೇಳೆಗೆ 9.05 ಲಕ್ಷ ಹುದ್ದೆಗಳು ಭರ್ತಿಯಾಗಿವೆ.

ಯುವ ಜನರಲ್ಲಿ ಆತ್ಮವಿಶ್ವಾಸ: ‘ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಯುವ ಜನರ ಸಬಲೀಕರಣಕ್ಕೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಒಂದೂವರೆ ವರ್ಷದಲ್ಲಿ 10 ಲಕ್ಷ ಉದ್ಯೋಗ ಕಲ್ಪಿಸುವ ಅವರ ನಿರ್ಧಾರವು ಯುವ ಜನರಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ’ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

‘ಜನಕೇಂದ್ರಿತ ನಿರ್ಧಾರ’: ಪ್ರಧಾನಿ ನರೇಂದ್ರ ಮೋದಿ ಅವರು ತೆಗೆದುಕೊಂಡಿರುವ ಈ ಮಹತ್ವದ ಜನಕೇಂದ್ರಿತ ನಿರ್ಧಾರವು ದೇಶದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸುವುದರ ಜತೆಗೆ ಯುವಜನರಲ್ಲಿ ಹೊಸ ಆಶಾವಾದವನ್ನು ಮೂಡಿಸಿದೆ ಎಂದು ಸಿಬ್ಬಂದಿ ಖಾತೆಯ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ಇದು ‘ಮಹಾ ಸುಳ್ಳಿನ’ ಸರ್ಕಾರ: ರಾಹುಲ್

ನವದೆಹಲಿ (ಪಿಟಿಐ): ದೇಶದ 10 ಲಕ್ಷ ಜನರಿಗೆ ಒಂದೂವರೆ ವರ್ಷಗಳಲ್ಲಿ ಉದ್ಯೋಗ ಒದಗಿಸುವುದಾಗಿ ಕೇಂದ್ರ ಸರ್ಕಾರ ಮಾಡಿರುವ ಘೋಷಣೆ ಕುರಿತು ಮಂಗಳವಾರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ‘ಇದು ಬರೀ ಸುಳ್ಳಲ್ಲ, ಮಹಾ ಸುಳ್ಳಿನ ಸರ್ಕಾರ’ ಎಂದು ದೂರಿದ್ದಾರೆ.

‘ಎಂಟು ವರ್ಷಗಳ ಹಿಂದೆ ಪ್ರತಿ ವರ್ಷ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಭರವಸೆ ನೀಡಿ ಯುವ ಸಮುದಾಯವನ್ನು ವಂಚಿಸಿದ್ದೀರಿ. ಈಗ ಇದೇ ಸರದಿಯ ಮುಂದುವರಿದ ಭಾಗವಾಗಿ 10 ಲಕ್ಷ ಸರ್ಕಾರಿ ಉದ್ಯೋಗಗಳ ಭರವಸೆ ನೀಡಿದ್ದೀರಿ’ ಎಂದು ರಾಹುಲ್ ಟ್ವೀಟ್ ಮಾಡಿದ್ದಾರೆ.

‘ಪ್ರಧಾನಿಯವರು ಉದ್ಯೋಗ ಸೃಷ್ಟಿಸುವುದರಲ್ಲಿ ಪರಿಣತರಲ್ಲ, ಆದರೆ ಉದ್ಯೋಗಗಳ ಮೇಲಿನ ‘ಸುದ್ದಿ’ ಸೃಷ್ಟಿಸುವುದರಲ್ಲಿ ನಿಪುಣರು’ ಎಂದು ಅವರು ಆರೋಪಿಸಿದ್ದಾರೆ.

ಪ್ರಾಮಾಣಿಕ ಪ್ರಯತ್ನಕ್ಕೆ ವರುಣ್ ಗಾಂಧಿ ಆಗ್ರಹ

ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮತ್ತು ಒಂದು ಕೋಟಿಗೂ ಹೆಚ್ಚು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಥಪೂರ್ಣ ಪ್ರಯತ್ನಗಳನ್ನು ಮಾಡಬೇಕಾಗಿದೆ ಎಂದು ಬಿಜೆಪಿ ಸಂಸದ ವರುಣ್ ಗಾಂಧಿ ಮಂಗಳವಾರ ಆಗ್ರಹಿಸಿದ್ದಾರೆ. ಎರಡು ಕೋಟಿ ಜನರಿಗೆ ಉದ್ಯೋಗ ನೀಡುವ ಭರವಸೆಯನ್ನು ಈಡೇರಿಸಲು ಹೆಚ್ಚಿನ ವೇಗದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ಅವರು ತಿಳಿಸಿದ್ದಾರೆ.

ನಿರುದ್ಯೋಗದ ಸಮಸ್ಯೆ ಕುರಿತು ಆಗಾಗ್ಗೆ ಪ್ರಸ್ತಾಪಿಸುವ ಮೂಲಕ ಸರ್ಕಾರದ ವಿರುದ್ಧ ಟೀಕೆಗಳನ್ನು ಮಾಡುತ್ತಿರುವ ವರುಣ್ ಗಾಂಧಿ ಅವರು, ‘ನಿರುದ್ಯೋಗಿ ಯುವಕರ ನೋವು ಮತ್ತು ವೇದನೆಗಳನ್ನು ಅರ್ಥ ಮಾಡಿಕೊಂಡಿದ್ದಕ್ಕೆ ಪ್ರಧಾನಿ ಅವರಿಗೆ ಧನ್ಯವಾದ ಅರ್ಪಿಸುವುದಾಗಿ’ ಟ್ವೀಟ್ ಮಾಡಿದ್ದಾರೆ.

ವಾಯುಮಾಲಿನ್ಯ: ಆಯಸ್ಸು ಕ್ಷೀಣಿಸುವ ಅಪಾಯ

ನವದೆಹಲಿ (ಪಿಟಿಐ): ‘ಭಾರತದಲ್ಲಿ ವಾಯು ಮಾಲಿನ್ಯ ಜನರ ಆರೋಗ್ಯಕ್ಕೆ ಭಾರಿ ಅಪಾಯವನ್ನೊಡ್ಡಿದೆ. ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಗಳನ್ನು ಅನುಸರಿಸದೇ ಇದ್ದಲ್ಲಿ ಭಾರತೀಯನ ಆಯಸ್ಸಿನಲ್ಲಿ ಸರಾಸರಿ ಐದು ವರ್ಷ ಕಡಿಮೆಯಾಗಲಿದೆ’ ಎಂದು ಅಧ್ಯಯನ ವರದಿಯೊಂದು ಎಚ್ಚರಿಸಿದೆ.

ಅದರಲ್ಲೂ, ವಿಶ್ವದಲ್ಲಿ ಅತಿ ಹೆಚ್ಚು ಮಾಲಿನ್ಯವಿರುವ ನಗರದಲ್ಲೊಂದಾಗಿರುವ ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಇದೇ ರೀತಿ ಮುಂದುವರಿದಲ್ಲಿ, ನಗರದ ನಿವಾಸಿಗಳ ಆಯಸ್ಸಿನಲ್ಲಿ 10 ವರ್ಷ ಕಡಿಮೆಯಾಗುವ ಅಪಾಯ ಇದೆ ಎಂದು ಇದೇ ಅಧ್ಯಯನ ಹೇಳಿದೆ.

ಅಮೆರಿಕದ ಷಿಕಾಗೊ ವಿಶ್ವವಿದ್ಯಾಲಯದ ‘ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್‌’ ಮಂಗಳವಾರ ಬಿಡುಗಡೆ ಮಾಡಿರುವ ‘ವಾಯು ಗುಣಮಟ್ಟ ಜೀವನಶೈಲಿ ಸೂಚ್ಯಂಕ’ದಲ್ಲಿ (ಎಕ್ಯೂಎಲ್‌ಐ) ಈ ಕುರಿತು ವಿವರಿಸಲಾಗಿದೆ.

ದೆಹಲಿಯ ಗಾಳಿಯಲ್ಲಿ, ಮಾಲಿನ್ಯ ಕಾರಕ ‘ಪಿಎಂ 2.5’ನ ಮಟ್ಟ ಪ್ರತಿ ಘನ ಮೀಟರ್‌ಗೆ 107 ಮೈಕ್ರೊಗ್ರಾಮ್‌ಗಳಿಗಿಂತಲೂ ಅಧಿಕ ಇದೆ. ಇದರ ಪ್ರಮಾಣ ಡಬ್ಲ್ಯುಎಚ್‌ಒ ಮಾರ್ಗಸೂಚಿ ನಿಗದಿಪಡಿಸಿರುವ ಮಟ್ಟಕ್ಕಿಂತಲೂ 21 ಪಟ್ಟು ಹೆಚ್ಚಾಗಿದ್ದು, ನಿವಾಸಿಗಳ ಆಯಸ್ಸಿನ ಮೇಲೆ ನೇರ ಪರಿಣಾಮ ಬೀರುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮೋದಿಗೆ ಗೌರವ

ಪ್ರಧಾನಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರದ ದೇಹೂನಲ್ಲಿ ಮಂಗಳವಾರ 17ನೇ ಶತಮಾನದ ಸಂತ ತುಕಾರಾಂ ಅವರ ಶಿಲಾ ದೇವಸ್ಥಾನವನ್ನು ಉದ್ಘಾಟಿಸಿದರು. ಈ ವೇಳೆ ಮೋದಿ ಅವರಿಗೆ ತುಕಾರಾಂ ಪಗಡಿ ತೊಡಿಸಿ ಗೌರವಿಸಲಾಯಿತು. ಬಳಿಕ ಮಾತನಾಡಿದ ಮೋದಿ ಅವರು, ‘ತುಕಾರಾಂ ಅವರು ಭಕ್ತಿ ಚಳವಳಿಯಲ್ಲಿ ಪ್ರಮುಖರಾಗಿದ್ದು, ಛತ್ರಪತಿ ಶಿವಾಜಿ ಮಹಾರಾಜ್ ಅವರಂತಹ ನಾಯಕರ ಜೀವನದಲ್ಲಿ ತುಕಾರಾಂ ಅವರು ಮುಖ್ಯ ಪಾತ್ರ ವಹಿಸಿದ್ದರು’ ಎಂದು ಕೊಂಡಾಡಿದರು.

ರಾಷ್ಟ್ರಪತಿ ಚುನಾವಣೆ: ಇಂದು ಪ್ರತಿಪಕ್ಷಗಳ ನಾಯಕರ ಸಭೆ

ಒಮ್ಮತದ ಅಭ್ಯರ್ಥಿ ಆಯ್ಕೆಗೆ ಕಸರತ್ತು

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ವಿರೋಧ ಪಕ್ಷಗಳಿಂದ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಕುರಿತು ಚರ್ಚಿಸಲು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನವದೆಹಲಿಯಲ್ಲಿ ಬುಧವಾರ (ಜೂನ್ 15) ಬಿಜೆಪಿಯೇತರ ಪಕ್ಷಗಳ ನಾಯಕರ ಸಭೆ ಕರೆದಿದ್ದಾರೆ.

ಸಭೆಯಲ್ಲಿ ಕಾಂಗ್ರೆಸ್ ಭಾಗಿಯಾಗುವ ಸಾಧ್ಯತೆ ಇದ್ದು, ಪಕ್ಷದ ಪರವಾಗಿ ಪಕ್ಷದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಜೈರಾಮ್ ರಮೇಶ್, ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಭಾಗಿಯಾಗುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಈ ನಡುವೆ ಮಂಗಳವಾರ ನವದೆಹಲಿಯಲ್ಲಿ ಮಮತಾ ಬ್ಯಾನರ್ಜಿ ಮತ್ತು ಎಡಪಕ್ಷಗಳ ನಾಯಕರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿ ರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿಯಾಗುವಂತೆ ಮನವೊಲಿಸಲು ಸಭೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು, ‘ಚುನಾವಣೆಗೆ ನಿಲ್ಲಲು ಪವಾರ್ ನಿರಾಕರಿಸಿದರು. ಚುನಾವಣೆಗೆ ಇತರರ ಹೆಸರುಗಳನ್ನು ಪರಿಗಣಿಸಲಾಗುವುದು’ ಎಂದು ತಿಳಿಸಿದ್ದಾರೆ.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ಎನ್‌ಸಿಪಿ ಮುಖಂಡರಾದ ಪ್ರಫುಲ್ ಪಟೇಲ್ ಮತ್ತು ಪಿ.ಸಿ. ಚಾಕೊ ಅವರನ್ನು ಭೇಟಿಯಾದ ಪವಾರ್, ತಾವು ರಾಷ್ಟ್ರಪತಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದರು.

ಭೇಟಿ ಕುರಿತು ಟ್ವೀಟ್: ಮಮತಾ ಜೊತೆಗಿನ ತಮ್ಮ ಭೇಟಿಯ ಕುರಿತು ಟ್ವೀಟ್ ಮಾಡಿರುವ ಶರದ್ ಪವಾರ್, ‘ಮಮತಾ ಅವರು ಮಂಗಳವಾರ ದೆಹಲಿಯ ನನ್ನ ನಿವಾಸದಲ್ಲಿ ನನ್ನನ್ನು ಭೇಟಿ ಮಾಡಿದರು. ದೇಶಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿವರವಾದ ಚರ್ಚೆ ನಡೆಸಿದ್ದೇವೆ’ ಎಂದು ಹೇಳಿದ್ದಾರೆ.

‘ಎಲ್ಲ ಪ್ರಗತಿಪರ ವಿರೋಧಶಕ್ತಿಗಳ ಸಭೆಗೆ ಇಬ್ಬರು ಧೀಮಂತ ನಾಯಕರು ವೇದಿಕೆಯನ್ನು ಸಿದ್ಧಪಡಿಸಿದ್ದಾರೆ. ನವದೆಹಲಿಯ ಕಾನ್‌ಸ್ಟಿಟ್ಯೂಷನಲ್ ಕ್ಲಬ್‌ನಲ್ಲಿ ಬುಧವಾರ ಸಭೆ ನಡೆಯಲಿದೆ. ವಿಭಜಕ ಶಕ್ತಿಗಳ ವಿರುದ್ಧ ಹೋರಾಡುವ ನಮ್ಮ ಸಂಕಲ್ಪ ಬಲಗೊಳ್ಳುತ್ತದೆ!’ ಎಂದು ಟಿಎಂಸಿ ಟ್ವೀಟ್ ಮಾಡಿದೆ.

ಪವಾರ್ ಅವರು ತಮ್ಮ ಈ ಹಂತದಲ್ಲಿ ಸೋಲು ವುದನ್ನು ಬಯಸುವುದಿಲ್ಲ ಎಂದು ವಿರೋಧ ಪಕ್ಷಗಳ ಮೂಲಗಳು ಅಭಿಪ್ರಾಯ ವ್ಯಕ್ತಪಡಿಸಿವೆ.

ಜುಲೈ 18ರಂದು ರಾಷ್ಟ್ರಪತಿ ಚುನಾವಣೆ ನಡೆಯಲಿದೆ.

ಮಮತಾ ಸಭೆ: ಎಡಪಕ್ಷಗಳ ಅಸಮಾಧಾನ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ವಿರೋಧಪಕ್ಷಗಳ ಒಮ್ಮತದ ಅಭ್ಯರ್ಥಿಯ ಕುರಿತು ಚರ್ಚಿಸಲು ಸಭೆ ಕರೆದಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಏಕಪಕ್ಷೀಯ ನಿರ್ಧಾರಕ್ಕೆ ಎಡಪಕ್ಷಗಳಾದ ಸಿಪಿಐ ಮತ್ತು ಸಿಪಿಎಂ ಅಸಮಾಧಾನ ವ್ಯಕ್ತಪಡಿಸಿವೆ.

ಜೂನ್ 15ರಂದು ನಡೆಯಲಿರುವ ಸಭೆಗೆ ನಮ್ಮ ಪಕ್ಷಗಳ ಉನ್ನತ ನಾಯಕರು ಹಾಜರಾಗುವುದಿಲ್ಲ. ಬದಲಿಗೆ ಪಕ್ಷಗಳ ಸಂಸದರು ಹಾಜರಾಗಲಿ ದ್ದಾರೆ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಹೇಳಿದ್ದಾರೆ.

ಯೆಚೂರಿ ಅವರು ಬ್ಯಾನರ್ಜಿ ಅವರಿಗೆ ಪತ್ರ ಬರೆದಿದ್ದು, ಸಭೆ ಕರೆಯುವ ಏಕಪಕ್ಷೀಯ ತೀರ್ಮಾನದ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮಮತಾ ಸಭೆಯಲ್ಲಿ ರಾಜ್ಯಸಭೆಯಲ್ಲಿ ಸಿಪಿಎಂ ಅನ್ನು ಪ್ರತಿನಿಧಿಸುವ ಪಕ್ಷದ ನಾಯಕ ಎಳಮರಮ್ ಕರೀಂ ಪಾಲ್ಗೊಳ್ಳಲಿದ್ದಾರೆ.

ಖಾಸಗಿ ವಿ.ವಿ ತಿದ್ದುಪಡಿ ಮಸೂದೆ ಅಂಗೀಕಾರ

ಕೋಲ್ಕತ್ತ (ಪಿಟಿಐ): ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ರಾಜ್ಯಪಾಲರ ಬದಲಿಗೆ ಶಿಕ್ಷಣ ಸಚಿವರನ್ನು ‘ವಿಸಿಟರ್’ ಅನ್ನಾಗಿಸುವ ಮಸೂದೆಗೆ ಪಶ್ಚಿಮ ಬಂಗಾಳ ವಿಧಾನಸಭೆ ಮಂಗಳವಾರ ಅನುಮೋದನೆ ನೀಡಿದೆ.

ಬಿಜೆಪಿ ಸದಸ್ಯರ ವಿರೋಧ, ಪ್ರತಿಭಟನೆ, ಸಭಾತ್ಯಾಗದ ನಡುವೆಯೂ ‘ಪಶ್ಚಿಮ ಬಂಗಾಳ ಖಾಸಗಿ ವಿಶ್ವವಿದ್ಯಾಲಯದ ಕಾನೂನು (ತಿದ್ದುಪಡಿ) ಮಸೂದೆ 2022’ ಧ್ವನಿಮತದಿಂದ ಅಂಗೀಕಾರವಾಗಿದೆ.

ಈ ಮಸೂದೆಯು ರಾಜ್ಯದ 11 ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಸಚಿವರನ್ನು ‘ವಿಸಿಟರ್’ ಆಗಿಸುವ ಪ್ರಸ್ತಾವ ಹೊಂದಿದೆ.

ರಾಜ್ಯ ಸರ್ಕಾರದ ವಿಶ್ವವಿದ್ಯಾಲಯಗಳಲ್ಲಿನ ಕುಲಾಧಿಪತಿ ಸ್ಥಾನವನ್ನು ರಾಜ್ಯಪಾಲರ ಬದಲಿಗೆ ಮುಖ್ಯಮಂತ್ರಿಗೆ ವಹಿಸುವ ಮಸೂದೆಯನ್ನು ಇಲ್ಲಿನ ವಿಧಾನಸಭೆ ಸೋಮವಾರವಷ್ಟೇ ಅಂಗೀಕರಿಸಿತ್ತು.

ಸಂಕ್ಷಿಪ್ತ ಸುದ್ದಿ

ಜುಲೈನಲ್ಲಿ ಮುಂಗಾರು ಅಧಿವೇಶನ?

ನವದೆಹಲಿ(ಪಿಟಿಐ): ಸಂಸತ್ತಿನ ಮುಂಗಾರು ಅಧಿವೇಶನವು ಜುಲೈ 3ನೇ ವಾರದಲ್ಲಿ ಆರಂಭವಾಗುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ. ಈ ಕುರಿತು ಅಂತಿಮ ನಿರ್ಧಾರ ಇನ್ನಷ್ಟೇ ಕೈಗೊಳ್ಳಬೇಕಿದೆ.

ಜುಲೈ 18ರಿಂದ ಸಂಸತ್ತಿನ ಮುಂಗಾರು ಅಧಿವೇಶನ ಆರಂಭವಾಗುವ ನಿರೀಕ್ಷೆಯಿದೆ. ಆಗಸ್ಟ್ 12ರಂದು ಅಂತ್ಯವಾಗಲಿದೆ. ಸಂಸತ್ತಿನ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿ ಈ ದಿನಾಂಕಗಳನ್ನು ಶಿಫಾರಸು ಮಾಡಿದೆ.

ಜಾಮೀನು ಆದೇಶ ಕಾಯ್ದಿರಿಸಿದ ಕೋರ್ಟ್

ನವದೆಹಲಿ(ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೊಳಗಾದ ದೆಹಲಿ ಆರೋಗ್ಯ ಸಚಿವ ಸತ್ಯೇಂದರ್ ಜೈನ್ ಅವರ ಜಾಮೀನು ಅರ್ಜಿಯ ಆದೇಶವನ್ನು ನ್ಯಾಯಾಲಯ ಕಾಯ್ದಿರಿಸಿದೆ.

ಬುದ್ಧನ ಕುರುಹುಗಳ ಪ್ರದರ್ಶನ ಆರಂಭ

ಉಲನ್‌ಬತಾರ್ (ಮಂಗೋಲಿಯಾ) (ಪಿಟಿಐ): ಮಂಗೋಲಿಯನ್ ಬುದ್ಧ ದಿನದ ಸಂದರ್ಭದಲ್ಲಿ ಭಾರತ ಮತ್ತು ಮಂಗೋಲಿಯಾದಿಂದ ಭಗವಾನ್ ಬುದ್ಧನ ಕುರುಹುಗಳನ್ನು ಇಲ್ಲಿನ ಗಂಧನ್ ವಿಹಾರದಲ್ಲಿ ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಯಿತು.

ಮೂವರು ಉಗ್ರರ ಹತ್ಯೆ

ಶ್ರೀನಗರ: ಅಮರನಾಥ ಯಾತ್ರೆ ವೇಳೆ ದಾಳಿಗೆ ಸಂಚು ರೂಪಿಸಿದ್ದ ಲಷ್ಕರ್–ಎ–ತೈಯಬಾ ಉಗ್ರ ಸಂಘಟನೆಯ ಇಬ್ಬರು ಸೇರಿದಂತೆ ಮೂವರು ಉಗ್ರರನ್ನು ಶ್ರೀನಗರದ ಬೆಮಿನಾದಲ್ಲಿ ಮಂಗಳವಾರ ಬೆಳಿಗ್ಗೆ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಜೂನ್ ಅಂತ್ಯದಿಂದ ಆರಂಭವಾಗಲಿರುವ ವಾರ್ಷಿಕ ಅಮರನಾಥ ಯಾತ್ರೆಯಲ್ಲಿ ದಾಳಿ ನಡೆಸುವ ಉದ್ದೇಶದಿಂದ ಪಾಕಿಸ್ತಾನ ಇವರನ್ನು ಕಳುಹಿಸಿತ್ತು’ ಎಂದು ಐಜಿಪಿ ವಿಜಯ್ ಕುಮಾರ್ ತಿಳಿಸಿದ್ದಾರೆ.

ಹವಾಮಾನ ವೈಪರೀತ್ಯ: ಅಮೆರಿಕನ್ನರು ತತ್ತರ

ವಾಷಿಂಗ್ಟನ್ (ಎಪಿ): ಒಂದೆಡೆ ಅತಿಯಾದ ತಾಪಮಾನ, ತೇವಾಂಶ, ಮತ್ತೊಂದೆಡೆ ಪ್ರವಾಹ, ಇನ್ನೊಂದೆಡೆ ಕಾಳ್ಗಿಚ್ಚಿನ ಪರಿಣಾಮ ಶುಷ್ಕ ಗಾಳಿ... ಹೀಗೆ ವಿಚಿತ್ರ ಹವಾಮಾನ ವೈಪರೀತ್ಯಕ್ಕೆ ಅಮೆರಿಕದ ಬಹುತೇಕ ರಾಜ್ಯಗಳು ತತ್ತರಿಸಿದ್ದು, ಜನಜೀವನ ದುಸ್ತರಗೊಂಡಿದೆ.

ಕ್ಯಾಲಿಫೋರ್ನಿಯಾದಿಂದ ನ್ಯೂ ಮೆಕ್ಸಿಕೊದವರೆಗೆ ಹರಡಿರುವ ಕಾಳ್ಗಿಚ್ಚಿನಿಂದ ಸೋಮವಾರ ಬಿಸಿ ಮತ್ತು ಶುಷ್ಕ ವಾತಾವರಣ ಸೃಷ್ಟಿಯಾಗಿದೆ.

ಬುಚಾ: ಸಾಮೂಹಿಕ ಸಮಾಧಿ ಪತ್ತೆ

ಬುಚಾ (ಎಪಿ): ಕೀವ್‌ನ ಹೊರವಲಯದಲ್ಲಿರುವ ಬುಚಾ ಪಟ್ಟಣದ ಸಮೀಪದಲ್ಲಿರುವ ಮತ್ತೊಂದು ಸಾಮೂಹಿಕ ಸಮಾಧಿಯಿಂದ ಕಾರ್ಮಿಕರು ಮೃತ ದೇಹಗಳನ್ನು ಹೊರತೆಗೆದಿದ್ದಾರೆ.

‘ದೇಹಗಳು ಬಟ್ಟೆ ಮತ್ತು ಹೊಲಸಿನಿಂದ ಮುಚ್ಚಲ್ಪಟ್ಟಿದ್ದವು. ಟೇಪ್‌ನಿಂದ ಬೆನ್ನ ಹಿಂದೆ ಕಟ್ಟಿದ ಕೈಗಳು ಕಂಡುಬಂದಿವೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಸಿಸಿಐ ಖಜಾನೆಗೆ ₹ 48,390 ಕೋಟಿ

ಐಪಿಎಲ್ ಪ್ರಸಾರ ಹಕ್ಕುಗಳಿಗೆ ಜಾಕ್‌ಪಾಟ್; ಕ್ರಿಕೆಟ್ ಕಣದಲ್ಲಿ ಹಣವೋ..ಹಣ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಪ್ರಸಾರ ಹಕ್ಕುಗಳ ಹರಾಜು ಪ್ರಕ್ರಿಯೆಯು ಭಾರತದ ಕ್ರಿಕೆಟ್ ಇತಿಹಾಸದಲ್ಲಿಯೇ ನೂತನ ದಾಖಲೆ ನಿರ್ಮಿಸಿತು.

2023ರಿಂದ 2027ರವರೆಗಿನ ಪ್ರಸಾರ ಹಕ್ಕುಗಳು ಒಟ್ಟು ₹ 48,390 ಕೋಟಿಗೆ ಹರಾಜಾದವು. ಇದರಲ್ಲಿ ಟಿ.ವಿ. ಪ್ರಸಾರ ಹಕ್ಕುಗಳನ್ನು ಡಿಸ್ನಿ ಸ್ಟಾರ್ ₹ 23,575 ಕೋಟಿ ಮತ್ತು ರಿಲಯನ್ಸ್ ಬೆಂಬಲಿತ ವಯಾಕಾಮ್ 18 ಸಂಸ್ಥೆಗೆ ಡಿಜಿಟಲ್ ಹಕ್ಕುಗಳು ₹ 20,500 ಕೋಟಿಗೆ ಮಾರಾಟವಾದವು. ವಯಾಕಾಮ್ 18 ಕಂಪೆನಿಯೇ ₹ 2991 ಕೋಟಿ ನೀಡಿ ಸಿ ಪ್ಯಾಕೇಜ್ (ಋತುವೊಂದರಲ್ಲಿ ಆಯ್ದ 18 ಪಂದ್ಯಗಳಿಗೆ) ಅನ್ನೂ ತನ್ನ ತೆಕ್ಕೆಗೆ ಹಾಕಿಕೊಂಡಿತು. ಮಂಗಳವಾರ ನಡೆದ ಬಿಡ್‌ನಲ್ಲಿ ಡಿ ಪ್ಯಾಕೇಜ್ (ವಿದೇಶದಲ್ಲಿ ಪ್ರಸಾರ ಹಕ್ಕು) ಅದನ್ನು ವಯಾಕಾಮ್ 18 ಮತ್ತು ಟೈಮ್ಸ್ ಇಂಟರ್‌ನೆಟ್ ಜಂಟಿಯಾಗಿ ₹1300 ಕೋಟಿ ಕೊಟ್ಟು ಪಡೆದುಕೊಂಡವು.

'ಸ್ಟಾರ್ ಇಂಡಿಯಾ ಐಪಿಎಲ್ ಟಿವಿ ಪ್ರಸಾರದ ಹಕ್ಕುಗಳನ್ನು ಮತ್ತು ವಯಾಕಾಮ್ 18 ಸಂಸ್ಥೆಯು ಡಿಜಿಟಲ್ ಹಕ್ಕುಗಳನ್ನು ಗೆದ್ದುಕೊಂಡಿವೆಯೆಂದು ಪ್ರಕಟಿಸಲು ಅತೀವ ಸಂತಸವಾಗುತ್ತಿದೆ. ಡಿಜಿಟಲ್ ವೇದಿಕೆಗಳ ಮೂಲಕ ಕ್ರಿಕೆಟ್ ವೀಕ್ಷಿಸುವವರ ಸಂಖ್ಯೆ ಹೆಚ್ಚಳವಾಗಿದ್ದು ಬೇಡಿಕೆ ಕುದುರಲು ಕಾರಣವಾಗಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ಟ್ವೀಟ್ ಮಾಡಿದ್ದಾರೆ.

ಅಮೆರಿಕದ ನ್ಯಾಷನಲ್ ಫುಟ್‌ಬಾಲ್ ಲೀಗ್ (ಎನ್‌ಎಫ್‌ಸಿ), ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಲೀಗ್ (ಎನ್‌ಬಿಎ) ಮತ್ತು ಇಂಗ್ಲೆಂಡ್‌ನ ಇಂಗ್ಲಿಷ್ ಪ್ರೀಮಿಯರ್ ಲೀಗ್ (ಇಪಿಎಲ್) ಲೀಗ್‌ಗಳ ಸಾಲಿನಲ್ಲಿ ಐಪಿಎಲ್ ಕೂಡ ಸೇರಿದೆ. ಮುಂದಿನ ಐದು ವರ್ಷಗಳಲ್ಲಿ ಪ್ರತಿಯೊಂದು ಪಂದ್ಯದ ಮೌಲ್ಯವು ₹114 ಕೋಟಿಯಾಗಲಿದೆ. ಇದು ಹೋದ ಬಾರಿಯದ್ದಕ್ಕಿಂತ ದುಪ್ಪಟ್ಟು ಮೌಲ್ಯವಾಗಿದೆ. ಎನ್‌ಎಫ್‌ಎಲ್‌ನಲ್ಲಿ ಪ್ರತಿ ಪಂದ್ಯದ ಮೌಲ್ಯವು ₹ 134 ಕೋಟಿಯಾಗಿದೆ. ಅದರಿಂದಾಗಿ ಐಪಿಎಲ್ ಎರಡನೇ ಅತಿ ದೊಡ್ಡ ಮೌಲ್ಯಯುತ ಲೀಗ್ ಆಗಿ ಹೊರಹೊಮ್ಮಿದೆ.

ಐಪಿಎಲ್: ಏಕಸ್ವಾಮ್ಯ ಅಂತ್ಯ

2008ರಲ್ಲಿ ಐಪಿಎಲ್ ಆರಂಭವಾದಾಗಿನಿಂದಲೂ ಸಂಪೂರ್ಣ ಪ್ರಸಾರ ಹಕ್ಕುಗಳು ಒಂದೇ ಸಂಸ್ಥೆಯ ಪಾಲಾಗಿದ್ದವು. ಆದರೆ ಈ ಬಾರಿ ನಾಲ್ಕು ಪ್ಯಾಕೇಜ್‌ಗಳಲ್ಲಿ ವಿಂಗಡಿಸಿದ್ದರಿಂದ ಪ್ರತ್ಯೇಕ ಸಂಸ್ಥೆಗಳು ಪೈಪೋಟಿಗಿಳಿದವು. ಹಕ್ಕುಗಳ ಕೂಡ ಪ್ರತ್ಯೇಕ ಕಂಪೆನಿಗಳ ಪಾಲಾಗಿವೆ. ಇದರಿಂದಾಗಿ ಹದಿನೈದು ವರ್ಷಗಳ ಮಾಧ್ಯಮ ಸಂಸ್ಥೆಗಳ ಏಕಸ್ವಾಮ್ಯವು ಕೊನೆಗೊಂಡಿದೆ.

2008 ರಿಂದ 2017ರವರೆಗೆ 10 ವರ್ಷಗಳ ಅವಧಿಗೆ ಸೋನಿ ಸಂಸ್ಥೆಯು ₹ 8200 ಕೋಟಿಗೆ ಹಕ್ಕುಗಳನ್ನು ಪಡೆದಿತ್ತು. 2017ರಲ್ಲಿ ಸ್ಟಾರ್ ಸಮೂಹವು ₹16347.50 ಕೋಟಿಗೆ ಐದು ವರ್ಷಗಳ ಹಕ್ಕುಗಳನ್ನು ಪಡೆದುಕೊಂಡಿತ್ತು. ಈ ಸಲ ಬಿಸಿಸಿಐಗೆ ಮೂರುಪಟ್ಟು ಹಣ ಕೈಸೇರಿದೆ. ವಯಾಕಾಮ್ 18 ಸಂಸ್ಥೆಯಲ್ಲಿ ಸ್ಟಾರ್ ಸಮೂಹದ ಮಾಜಿ ಮುಖ್ಯಸ್ಥ ಉದಯ ಶಂಕರ್ (ಬೋಧಿ ಟ್ರೀ) ಮತ್ತು ಜೇಮ್ಸ್ ಮರ್ಡೋಕ್ (ಲುಪಾ ಸಿಸ್ಟಮ್ಸ್) ಅವರ ತಂತ್ರಗಾರಿಕೆಯು ಫಲ ನೀಡಿತು.

410 ಪಂದ್ಯಗಳ ಪ್ರಸಾರ ಹಕ್ಕು

ಎ ಮತ್ತು ಬಿ ಪ್ಯಾಕೇಜ್‌ಗಳಲ್ಲಿ 410 ಪಂದ್ಯಗಳಿಗೆ ಪ್ರಸಾರ ಹಕ್ಕು ಸಿಗಲಿದೆ. 2023 ಮತ್ತು 2024 ಆವೃತ್ತಿಗಳಲ್ಲಿ ತಲಾ 74 ಪಂದ್ಯಗಳು, 2025 ಮತ್ತು 2026ರಲ್ಲಿ ತಲಾ 84 ಪಂದ್ಯಗಳು ಮತ್ತು 2027ರಲ್ಲಿ 94 ಪಂದ್ಯಗಳು ನಡೆಯಲಿವೆ.

ಮುಖ್ಯಾಂಶಗಳು

- ಪ್ರತಿ ಪಂದ್ಯಕ್ಕೆ ₹114 ಕೋಟಿ ಮೌಲ್ಯ
- ಐದು ವರ್ಷಗಳ ಅವಧಿಗೆ ಪ್ರಸಾರ ಹಕ್ಕುಗಳ ಹರಾಜು
- ಎ,ಬಿ,ಸಿ ಮತ್ತು ಡಿ ಪ್ಯಾಕೇಜ್‌ಗಳಲ್ಲಿ ಹಕ್ಕುಗಳ ಮಾರಾಟ

ಐಪಿಎಲ್ ಗೆ ಮಾಧ್ಯಮ ಹಕ್ಕುಗಳನ್ನು ಖರೀದಿಸಲು!

ಭಾರತ ಫುಟ್‌ಬಾಲ್ ತಂಡಕ್ಕೆ ಏಷ್ಯಾಕಪ್ ಟಿಕೆಟ್

ಕೋಲ್ಕತ್ತ (ಪಿಟಿಐ): ಭಾರತ ಫುಟ್‌ಬಾಲ್ ತಂಡವು ಸತತ ಎರಡನೇ ಬಾರಿ ಏಷ್ಯಾಕಪ್ ಟೂರ್ನಿಗೆ ಅರ್ಹತೆ ಗಳಿಸಿದೆ.

ಮಂಗಳವಾರ ನಡೆದ ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ ಭಾರತ ತಂಡವುಹಾಂಗ್‌ಕಾಂಗ್ ಎದುರು 4–0ಯಿಂದ ಗೆದ್ದಿತು. ತಂಡದ ಪರ ಅನ್ವರ್ ಅಲಿ (2ನೇ ನಿ.), ಸುನಿಲ್ ಚೆಟ್ರಿ (45ನೇ ನಿ.), ಮನ್ವೀರ್ ಸಿಂಗ್ (85ನೇ ನಿ.) ಮತ್ತು ಇಶಾನ್ ಪಂಡಿತ (90 + 3ನೇ ನಿ.) ಗೋಲು ಗಳಿಸಿದರು.

ಗುಂಪಿನ ಮೊದಲ ಪಂದ್ಯ ದಲ್ಲಿ ಭಾರತ 2–0ಯಿಂದ ಕಾಂಬೋಡಿಯಾವನ್ನು ಮತ್ತು 2ನೇ ಪಂದ್ಯದಲ್ಲಿ 2–1ರಿಂದ ಅಫ್ಗಾನಿಸ್ತಾನವನ್ನು ಮಣಿಸಿತ್ತು.

'ಡಿ' ಗುಂಪಿನ ಪಾಯಿಂಟ್ಸ್ ಪಟ್ಟಿಯಲ್ಲಿ ಭಾರತ (9 ಪಾಯಿಂಟ್ಸ್) ಅಗ್ರಸ್ಥಾನ ಗಳಿಸಿತು. ಹಾಂಕ್‌ಕಾಂಗ್ (6) ಎರಡನೇ ಸ್ಥಾನ ಗಳಿಸಿತು. ಭಾರತ ತಂಡವು ಒಟ್ಟಾರೆ ಐದನೇ ಬಾರಿ (1964, 1984, 2011, 2019 ಮತ್ತು 2023) ಏಷ್ಯಾಕಪ್‌ನಲ್ಲಿ ಕಣಕ್ಕಿಳಿಯುವ ಅವಕಾಶ ಪಡೆದಿದೆ.

ಉಲಾನ್‌ಬಾತರ್‌ನಲ್ಲಿ ನಡೆದ 'ಬಿ' ಗುಂಪಿನ ಅರ್ಹತಾ ಸುತ್ತಿನ ಪಂದ್ಯದಲ್ಲಿ ಪ್ಯಾಲೆಸ್ತೀನ್ ತಂಡವು 4–0ಯಿಂದ ಫಿಲಿಪ್ಪೀನ್ಸ್ ವಿರುದ್ಧ ಗೆದ್ದಿತು. ಇದರೊಂದಿಗೆ ಪ್ಯಾಲೆಸ್ತೀನ್, ಗುಂಪಿನಲ್ಲಿ ಅಗ್ರಸ್ಥಾನ ಪಡೆದು 24 ತಂಡಗಳ ಟೂರ್ನಿಗೆ ನೇರ ಅರ್ಹತೆ ಗಳಿಸಿದರೆ, ಎರಡನೇ ಸ್ಥಾನ ಗಳಿಸಿದ ನಡುವೆಯೂ ಫಿಲಿಪ್ಪೀನ್ಸ್ ಟೂರ್ನಿಯಿಂದ ಹೊರಬಿದ್ದಿತು.

ಸುನಿಲ್ ಚೆಟ್ರಿ– ಪಿಟಿಐ ಚಿತ್ರ

ಸುನಿಲ್ ಚೆಟ್ರಿ ನಾಯಕತ್ವದ ಭಾರತ ತಂಡವು ಇದೇ ಮೊದಲ ಸಲ ಸತತ ಎರಡನೇ ಬಾರಿ ಏಷ್ಯಾಕಪ್ ಟೂರ್ನಿಗೆ ಪ್ರವೇಶ ಪಡೆದಿದೆ. 2019ರ ಟೂರ್ನಿಯಲ್ಲಿ ಗುಂಪು ಹಂತದಲ್ಲೇ ನಿರ್ಗಮಿಸಿತ್ತು.

ಅರ್ಹತಾ ಟೂರ್ನಿಯ ಮೂರನೇ ಸುತ್ತಿನಲ್ಲಿ 24 ತಂಡಗಳನ್ನು ತಲಾ ನಾಲ್ಕರಂತೆ ಆರು ಗುಂಪುಗಳಾಗಿ ವಿಂಗಡಿಸಲಾಗಿದೆ. ಪ್ರತಿ ಗುಂಪಿನ ಪಂದ್ಯಗಳು ಬೇರೆ ಬೇರೆ ತಾಣಗಳಲ್ಲಿ ನಡೆಯುತ್ತಿವೆ. ಭಾರತ 'ಡಿ' ಗುಂಪಿನ ಪಂದ್ಯಗಳಿಗೆ ಆತಿಥ್ಯ ವಹಿಸಿತ್ತು.

ಲಾಂಗ್‌ಜಂಪ್: ರಾಜ್ಯದ ಐಶ್ವರ್ಯಗೆ ಮತ್ತೊಂದು ಚಿನ್ನ

ಐಶ್ವರ್ಯ

ಬೆಂಗಳೂರು: ಕರ್ನಾಟಕದ ಐಶ್ವರ್ಯ ಬಾಬು ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮತ್ತೊಂದು ಚಿನ್ನದ ಪದಕಕ್ಕೆ ಮುತ್ತಿಟ್ಟರು.

ಚೆನ್ನೈನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಕೊನೆಗೊಂಡ ಕೂಟದ ಲಾಂಗ್‌ಜಂಪ್‌ನಲ್ಲಿ ಅವರು 6.60 ಮೀಟರ್ಸ್ ಉದ್ದ ಜಿಗಿದು ಅಗ್ರಸ್ಥಾನ ಗಳಿಸಿದರು. ಕಾಮನ್‌ವೆಲ್ತ್ ಗೇಮ್ಸ್‌ಗೆ ಅರ್ಹತೆ ಗಳಿಸಿದರು.

ಅಭಿನ್ ದೇವಾಡಿಗ 200 ಮೀಟರ್ಸ್ ಓಟದಲ್ಲಿ 21.42 ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಜಯಿಸಿದರು. ಅಭಿನ್, ನಿಹಾಲ್ ಜೋಯಲ್, ವಿಶ್ವಾಂಬರ ಕೋಳೆಕರ್ ಮತ್ತು ಮಹಾಂತೇಶ್ ಅವರಿದ್ದ ರಾಜ್ಯ ತಂಡವು 4X400 ಮೀ. ರಿಲೇಯಲ್ಲಿ ಮೂರನೇ ಸ್ಥಾನ ಗಳಿಸಿತು.

ವಿಶ್ವಚಾಂಪಿಯನ್‌ಷಿಪ್‌ಗೆ ಪ್ರವೀಣ್: ತಮಿಳುನಾಡಿನ ಪ್ರವೀಣ್ ಟ್ರಿಪಲ್ ಜಂಪ್‌ನಲ್ಲಿ 17.18 ಮೀ.ಸಾಧನೆಯ ಮೂಲಕ ಕೂಟ ದಾಖಲೆಯೊಂದಿಗೆ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಇದರೊಂದಿಗೆ ವಿಶ್ವ ಚಾಂಪಿಯನ್‌ಷಿಪ್ ಅರ್ಹತಾ ಮಾನದಂಡವನ್ನು (17.14 ಮೀ.) ಮೀರಿದರು.

ಪ್ರವೀಣ್ ಅವರ ಸಾಧನೆಯು ಭಾರತದ ಟ್ರಿಪಲ್ ಜಂಪ್ ಅಥ್ಲೀಟ್‌ಗಳ ಪೈಕಿ ಮೂರನೇ ಶ್ರೇಷ್ಠ ಸಾಧನೆಯಾಗಿದೆ. 2016ರಲ್ಲಿ ರಂಜೀತ್ ಮಹೇಶ್ವರಿ (17.30 ಮೀ.) ಮತ್ತು ಕಳೆದ ತಿಂಗಳು ಕೇರಳದ ಅಬ್ದುಲ್ಲಾ ಅಬೂಬಕ್ಕರ್ (17.19) ಈ ಮೊದಲು ಉತ್ತಮ ಸಾಧನೆ ತೋರಿದವರು.

ಮೈಸೂರು ರೇಸ್

ಮೈ ಒಪಿನಿಯನ್ ಗೆಲ್ಲುವ ನಿರೀಕ್ಷೆ

ಕಾವೇರಿ ಮಿಲಿಯನ್ 2022 ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಅಕರ್ಷಣೆಯಾಗಿದ್ದು, ಪ್ರೈಸ್‌ಲೆಸ್ ಗೋಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೇಂಟ್ ಲೂಸಿಯಾ 5, ಶಿವಾಲಿಕ್ ಸೌಂಡ್ 6, ಸೋ ಫಾರ್ 8
2ನೇ ರೇಸ್: ಡಿ ಲಾರ್ಡ್ 1. ಕನ್ನಯ್ಯಾ 8, ಸಾಂತೋರಿನಿ 2
3ನೇ ರೇಸ್: ಡಿ ದುರ್ಗಾ 5. ಕ್ಯಾಲಿಫೋರ್ನಿಯಾ ಗೋಲ್ಡ್ 12, ಪವರ್ ಆಫ್ ಥಿಯಾ 2
4ನೇ ರೇಸ್: ಮೈ ಒಪಿನಿಯನ್ 1, ಪ್ರೈಸ್‌ಲೆಸ್ ಗೋಲ್ಡ್ 3, ಬೆಲ್ಲಾಟರ್ 2,
5ನೇ ರೇಸ್: ಬ್ಲ್ಯಾಕ್ ಕಾಫಿ 10, ಟ್ರೇಸರ್ ಬುಲೆಟ್ 4, ಟರ್ಫ್ ಲೆಜೆಂಡ್ 2
6ನೇ ರೇಸ್: ಸ್ಟೇರ್ ದಿ ಸರ್ಕಲ್ 1, ಡಿ ಬ್ರದರ್ 8, ಟಿಯಾ ಮೇರಿಯಾ 5

ಉತ್ತಮ ಬೆಟ್: ಸೇಂಟ್ ಲೂಸಿಯಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಫುಟ್‌ಬಾಲ್: ಬಿಟಿಎಂ ಎಫ್‌ಸಿ ಜಯಭೇರಿ

ಬೆಂಗಳೂರು: ಸಂಘಟಿತ ಆಟವಾಡಿದ ಬಿಟಿಎಂ ಎಫ್‌ಸಿ ತಂಡದವರು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬಿಟಿಎಂ 4–0ಯಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ವಿರುದ್ಧ ಗೆದ್ದಿತು. ವಿಜೇತ ತಂಡದ ರೋಹನ್ ಜೊನಾಥನ್ (13ನೇ ನಿಮಿಷ), ಆಶ್ಲಿ ಗ್ರ್ಯಾಂಟ್ (18ನೇ ನಿ.), ಚಿರಾಗ್ (34ನೇ ನಿ.) ಮತ್ತು ಅನಿರುದ್ಧ (35ನೇ ನಿ.) ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಎ. ಎಜೊ (75, 80 + 3ನೇ ನಿ.) ಗಳಿಸಿದ ಎರಡು ಗೋಲುಗಳ ನೆರವಿನಿಂದ ಆರ್‌ಡಬ್ಲ್ಯುಎಫ್ ಎಫ್‌ಸಿ 3–1ರಿಂದ ಬ್ಲಿಟ್ಜ್ ಎದುರು ಜಯಿಸಿತು. ಆರ್‌ಡಬ್ಲ್ಯುಎಫ್ ಪರ ಮತ್ತೊಂದು ಗೋಲನ್ನು ಅಫಿನ್ (9ನೇ ನಿ.) ಗಳಿಸಿದರು. 52ನೇ ನಿಮಿಷದಲ್ಲಿ ನವೀನ್ ಕುಮಾರ್ ಬ್ಲಿಟ್ಜ್ ಪರ ಗೋಲು ದಾಖಲಿಸಿದರು.

ಇನ್ನುಳಿದ ಪಂದ್ಯಗಳಲ್ಲಿ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ 2–0ಯಿಂದ ಎಜಿಒಆರ್‌ಸಿ ವಿರುದ್ಧ ಗೆದ್ದರೆ, ಡಿವೈಇಎಸ್ ಎಫ್‌ಸಿ 1–1ರಿಂದ ಸನ್‌ರೈಸ್ ತಂಡದೊಂದಿಗೆ ಡ್ರಾ ಸಾಧಿಸಿತು.

ಬುಧವಾರ ನಡೆಯುವ ಬಿ ಡಿವಿಷನ್ ಪಂದ್ಯದಲ್ಲಿ ವೆಹಿಕಲ್ಸ್ ಎಫ್‌ಸಿ– ಮೊಹಮ್ಮಡನ್ ಸ್ಪೋರ್ಟಿಂಗ್ ಎಫ್‌ಸಿ ಮುಖಾಮುಖಿಯಾಗಲಿವೆ.

ಸಂಕ್ಷಿಪ್ತ ಸುದ್ದಿ

ಪಿಂಚಣಿ ಹೆಚ್ಚಳ: ಐಸಿಎ ಸ್ವಾಗತ

ನವದೆಹಲಿ (ಪಿಟಿಐ): ನಿವೃತ್ತ ಕ್ರಿಕೆಟಿಗರು ಮತ್ತು ಅಂಪೈರ್‌ಗಳ ಪಿಂಚಣಿಯನ್ನು ಹೆಚ್ಚಳ ಮಾಡಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕ್ರಮವನ್ನು ಭಾರತ ಕ್ರಿಕೆಟಿಗರ ಸಂಸ್ಥೆ (ಐಸಿಎ) ಸ್ವಾಗತಿಸಿದೆ.

ಪ್ರಥಮ ದರ್ಜೆ ಮತ್ತು ಟೆಸ್ಟ್ ಕ್ರಿಕೆಟ್‌ನ ಮಾಜಿ ಆಟಗಾರರಿಗೆ ₹15 ಸಾವಿರದಿಂದ 30ಸಾವಿರಕ್ಕೆ, ₹ 37500 ಪಡೆಯುವವರಿಗೆ ₹ 60 ಸಾವಿರಕ್ಕೆ, ₹ 50 ಸಾವಿರ ಪಡೆಯುತ್ತಿರುವವರಿಗೆ ₹ 70 ಸಾವಿರಕ್ಕೆ ಹೆಚ್ಚಳ ಮಾಡಲಾಗಿದೆ.

'ಬಿಸಿಸಿಐ ಪ್ರಕಟಿಸಿರುವ ಪಿಂಚಣಿ ಹೆಚ್ಚಳ ನಿರ್ಧಾರಕ್ಕೆ ನಮ್ಮ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿವೆ. ವೈದ್ಯಕೀಯ ವೆಚ್ಚಗಳೂ ದುಬಾರಿಯಾಗಿವೆ. ಇಂತಹ ಸಂದರ್ಭದಲ್ಲಿ ಬಿಸಿಸಿಐ ನೀಡುತ್ತಿರುವ ಪಿಂಚಣಿ ಹೆಚ್ಚಳವು ನೆರವಾಗಲಿದೆ' ಎಂದು ಐಸಿಎ ಅಧ್ಯಕ್ಷ ಅಶೋಕ್ ಮಲ್ಹೋತ್ರಾ ಪ್ರಕಟಣೆಯಲ್ಲಿ ಶ್ಲಾಘಿಸಿದ್ದಾರೆ. ಅವರು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಮತ್ತಿತರ ಪದಾಧಿಕಾರಿಗಳನ್ನು ಅಭಿನಂದಿಸಿದ್ದಾರೆ.

ದೇಶ ಪ್ರತಿನಿಧಿಸುವೆ; ಧರ್ಮವನ್ನಲ್ಲ: ನಿಖತ್ ಜರೀನ್

ನಿಖತ್ ಜರೀನ್

ನವದೆಹಲಿ (ಪಿಟಿಐ): ತಾವು ಯಾವುದೇ ಜಾತಿ, ಧರ್ಮ ಅಥವಾ ಸಮುದಾಯವನ್ನು ಪ್ರತಿನಿಧಿಸುತ್ತಿಲ್ಲ. ದೇಶವನ್ನು ಪ್ರತಿನಿಧಿಸುತ್ತಿರುವುದಾಗಿ ವಿಶ್ವ ಚಾಂಪಿಯನ್ ಬಾಕ್ಸರ್ ನಿಖತ್ ಜರೀನ್ ಹೇಳಿದ್ದಾರೆ.

'ಹಿಂದು–ಮುಸ್ಲಿಂ ಇತ್ಯಾದಿ ನನಗೆ ಮುಖ್ಯವೇ ಅಲ್ಲ. ಕ್ರೀಡೆಯಲ್ಲಿ ದೇಶವನ್ನು ಪ್ರತಿನಿಧಿಸಿ ಪದಕವನ್ನು ಗೆದ್ದು ಬರುವುದಷ್ಟೇ ಗುರಿ. ಭಾರತದ ಬಾಕ್ಸಿಂಗ್ ಪಟುಗಳು ಬೇರೆಲ್ಲ ದೇಶಗಳ ಸ್ಪರ್ಧಿಗಳಷ್ಟೇ ಪ್ರತಿಭಾನ್ವಿತರು. ಯಾವುದೇ ಹಂತದಲ್ಲಿಯೂ ಗೆದ್ದು ಬರುವ ಸಮರ್ಥರು' ಎಂದು ಇಲ್ಲಿ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

ತೆಲಂಗಾಣದ ನಿಖತ್ ಅವರು ಈಚೆಗೆ ನಡೆದ ಮಹಿಳಾ ವಿಶ್ವ ಬಾಕ್ಸಿಂಗ್ ನಲ್ಲಿ ಪದಕ ಜಯಿಸಿದರು. ಸಾಮಾಜಿಕ ಜಾಲತಾಣಗಳಲ್ಲಿ ಅವರ ಧರ್ಮದ ಕುರಿತ ಸಂದೇಶಗಳಿಗೆ ಉತ್ತರಿಸಿದ್ದಾರೆ.

ಬಿಎಫ್‌ಸಿ: ಲಾರಾ ಒಪ್ಪಂದ ವಿಸ್ತರಣೆ

ಬೆಂಗಳೂರು (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫ್ರಾಂಚೈಸ್ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಗೋಲ್‌ಕೀಪರ್ ಲಾರಾ ಶರ್ಮಾ ಮತ್ತು ಡಿಫೆಂಡರ್ ವುಂಗ್‌ಗಯಮ್ ಮೈರಂಗ್ ಅವರ ಒಪ್ಪಂದವನ್ನು ಮಂಗಳವಾರ ವಿಸ್ತರಿಸಿದೆ.

ಮಂಗಳವಾರ ಕ್ಲಬ್ ಈ ವಿಷಯ ತಿಳಿಸಿದೆ. ಮೈರಂಗ್ 2024–25ರ ಋತುವಿನವರೆಗೆ ತಂಡದಲ್ಲಿದ್ದಾರೆ.